
ಡಿಸೆಂಬರ್ 1999 ರೂ. 10

ಬಿಸಿಲ



ಬೂದಿ, ಬಂಗಾರ ಮತ್ತು ಬಾಬಾ!

ಅಡ್ಡಬಿದ್ದ ಹೈಟೆಕ್ ಕೃಷ್ಣ




ಸತ್ಯ ಸಾಯಿಬಾಬಾನ ಸುಳ್ಳು ಸೃಷ್ಟಿ

ವಿಚಾರವಾದಿಯ ಬಹಿರಂಗ ಸವಾಲು

ನಾನು ಕೇಳಿದ ವಸ್ತುವನ್ನು 30 ಸೆಕೆಂಡುಗಳಲ್ಲಿ ಶೂನ್ಯದಿಂದ ಸೃಷ್ಟಿ ಮಾಡಿಕೊಟ್ಟರೆ ನಾನು ಸಾಯುವ ತನಕ ಅವರ ಗುಲಾಮನಾಗುವೆ

– ನರೇಂದ್ರ ನಾಯಕ್

ಮನೆ! ಮನೆ!! ಮನೆ!!!



ಯಾರಿಗೆ ಬೇಕಿಲ್ಲ ಮನೆ?


ಹೌದು 'ಮನೆ' ಎಲ್ಲರ ತುರ್ತು ಅವಶ್ಯಕತೆಗಳಲ್ಲೊಂದು.

ಆದರೆ....

ಮನೆಯ ನಿರ್ಮಾಣದ ಬಗೆಗಿನ ಮಾಹಿತಿಯ ಕೊರತೆ ಮನೆ ಕಟ್ಟಿಸುವ ಮಾಲೀಕರಿಗಿದೆ.


ಏನಿದು ಮಾಹಿತಿ?

ಅದಕ್ಕಾಗಿ ಮನೆ ನಿರ್ಮಾಣದ ಹಿಂದೆ ಇರುವ ನೈಜ ವಸ್ತು-ಸ್ಥಿತಿಯನ್ನು ತೆರೆದಿಡುವ ಒಂದು ವಿನೂತನ ಪ್ರಯತ್ನಕ್ಕಾಗಿ ನಿಮ್ಮ 'ಬಿಸಿಲ ಬದುಕು' ಇದೀಗ ಮುಂದಾಗಿದೆ.



ಅದಕ್ಕಾಗಿ ಮನೆ ನಿರ್ಮಾಣಕ್ಕೆ....

- ನಿವೇಶನ ಆಯ್ಕೆ
- ಬ್ಯಾಂಕ್ ಸಾಲ ಸೌಲಭ್ಯ
- ಮನೆ ಅಂದ ಹೆಚ್ಚಿಸುವ ಸರಳ ಉಪಾಯಗಳು
- ನೋಂದಾವಣಿ
- ಕಂಟ್ರಾಕ್ಟರ್ ಮೂಲಕ ಮನೆ ನಿರ್ಮಾಣ ಹೇಗೆ?
- ಸಾಮಗ್ರಿಗಳ ಹಾಗೂ ಕಟ್ಟಡದ ಸರಳ ಗುಣಪರೀಕ್ಷೆ ಹೇಗೆ?
- ಕಡಿಮೆ ವೆಚ್ಚದ ಮನೆ ನಿರ್ಮಾಣ.



.... ಹೀಗೆ ಇನ್ನು ಹತ್ತಾರು ವಿಷಯಗಳ ಸಮಗ್ರ ಮಾಹಿತಿ–ಆಕರ್ಷಕ ಚಿತ್ರಗಳ ಸಮೇತ! ಇದಲ್ಲದೆ ಸಾಮಾನ್ಯರು ತಿಳಿದುಕೊಂಡಿರಬೇಕಾದ ತಾಂತ್ರಿಕ ವಿಷಯಗಳ ಸುಲಭ ವಿಶ್ಲೇಷಣೆಯ ಲೇಖನಮಾಲೆ.

ಜೊತೆಗೆ....

ಮನೆ–ಮನವರಿಕೆ ಬಿಸಿಲ ಬದುಕು ಓದುಗರಿಗಾಗಿ ವಿಶಿಷ್ಟ ಲೇಖನ ಮಾಲೆಯ ಜೊತೆ–ಜೊತೆಗೆ ಮನೆ ನಿರ್ಮಾಣದ ಬಗೆಗಿನ ಸಂದೇಹ–ಸಮಸ್ಯೆಗಳಿಗೆ ಆಯಾ ವಿಭಾಗದ ಪರಿಣತರಿಂದ ಪರಿಹಾರ. ಯಾಕಿನ್ನು ತಡ? 'ಸ್ವಂತ ಮನೆ' ಮಾಡುವ ಬಗೆಗಿನ,ನಿಮ್ಮ ಅನುಮಾನ ನಿಮ್ಮ ಪ್ರಶ್ನೆಗಳನ್ನು ಈ ಕೆಳಗಿನ ವಿಳಾಸಕ್ಕೆ ಕೂಡಲೇ ಬರೆಯಿರಿ :

'ಬದುಕು' ಮಾಸಪತ್ರಿಕೆ, ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ 7951, ಬಸವೇಶ್ವರನ ನಗರ, ಬೆಂಗಳೂರು–79.

ಪ್ರಕಟಣೆ ದಿನಾಂಕ ನಿರೀಕ್ಷಿಸಿ!

ಬಿದುಕು

ಡಿಸೆಂಬರ್ 1999 ಸಂಪುಟ 3 ಸಂಚಿಕೆ 6

■ ಶಾಂತ ಕಡಲೆಂದೂ ನುರಿತ ನಾವಿಕನನ್ನು ಹುಟ್ಟು ಹಾಕಲಾರದು.

ಆಫ್ರಿಕಾ ಗಾದೆ

■ ಇನ್ನೊಬ್ಬರ ನೆಲೆಯಲ್ಲಿ ನಿಂತು ನಾವು ನೋಡುವುದು ಸಾಧ್ಯ ಆಗದೇ ಹೋದಲ್ಲಿ ನಾವೆಂದೂ ಆತನನ್ನು ಅರ್ಥಮಾಡಿಕೊಳ್ಳಲಾರೆವು.

ಹಾರ್ಪರ್ ಲೀ

■ ದೊಡ್ಡ ರಾಜ್ಯದ ಆಡಳಿತ ನಡೆಸುವುದೆಂದರೆ ಭಾರೀ ಕಡಾಯಿಯಲ್ಲಿ ಸಣ್ಣ ಮೀನೊಂದು ಕರಿದಂತೆ. ಅದನ್ನು ಹೊರಳಿಸುವ ಕ್ರಿಯೆಯಲ್ಲಿಯೇ ಎಲ್ಲ ಹಾಳು ಮಾಡಿರುತ್ತೇವೆ.

ಲಾವೋತ್ಸೆ

■ ಮನುಷ್ಯನೊಳಗಣ ಹಿಂಸೆ ತಲೆ ಎತ್ತದಂತೆ ನೀಡುವ ಚುಚ್ಚುಮದ್ದೇ ಶಿಕ್ಷಣ.

ಎಡ್ವರ್ಡ್ ಜೇಮ್ಸ್ ಆಲ್ಮಾಸ್

■ ನಮ್ಮ ಇತಿಹಾಸ ತಿಳಿದುಕೊಳ್ಳುವುದೇನೋ ಸರಿ ಆದರೆ, ಅದರ ಬಗ್ಗೆಯೇ ಕೊಚ್ಚಿಕೊಳ್ಳುತ್ತಾ ಹೋಗುವುದೇ ಭಾರಿ ಅಸಹ್ಯದ ಸಂಗತಿ.

ಕೆನೆತ್ ಆಕೆನ್ ಕ್ಲಾಸ್

■ ಮನುಷ್ಯನಲ್ಲಿ ಹಮ್ಮು ಇಲ್ಲದೇ ಹೋಗಿದ್ದರೆ ಹೊಗಳಿಕೆ ಎಂಬ ಖೋಟಾ ನಾಣ್ಯಕ್ಕೆ ಚಲಾವಣೆಯಾದರೂ ಎಲ್ಲಿ ಸಾಧ್ಯವಾಗುತ್ತಿತ್ತು?

ರಾಶ್‌ಫೋಕಾಲ್ಡ್

ಸಂಪಾದಕ
ಚಂದ್ರಕಾಂತ ವಡ್ಡು
ಕಾರ್ಯನಿರ್ವಾಹಕ ಸಂಪಾದಕ
ಎಂ.ಎಲ್. ದೇಶಿಕರ್
ಸಹಕಾರ
ಲಿಂಗರಾಜು
ಕಲೆ
ಎಂ.ಎಸ್.ಮೂರ್ತಿ
ವಿಳಾಸ
ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ: 7951
ಬಸವೇಶ್ವರ ನಗರ, ಬೆಂಗಳೂರು-560 079
ದೂರವಾಣಿ: 3307810

Printed, Published and Owned by Chandrakanta Vaddu, 473, I Cross, I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3307810 Pager:9622 738638 Mobile:98440 87433 Editor : Chandrakanta Vaddu

ಸಾಯಿಬಾಬಾ

'.... ಅವತಾರ ಪುರುಷ ಸಾಯಿಬಾಬಾನ ಕುಟಿಲತೆ, ಕುತಂತ್ರಗಳು ಒಂದಲ್ಲ ಒಂದು ದಿನ ಖಂಡಿತವಾಗಿಯೂ ಬಯಲಿಗೆಳೆಯಲ್ಪಡುತ್ತವೆ. ಭಾರತದ ಸಂವಿಧಾನ ನೀಡಿರುವ ಹತ್ತು ಮೂಲಭೂತ ಕರ್ತವ್ಯಗಳಲ್ಲಿ ಒಂದು ಅಂಶ - ಭಾರತದ ಪ್ರತಿಯೊಬ್ಬ ಪ್ರಜೆಯೂ ತನ್ನದೇ ಆದ ವೈಜ್ಞಾನಿಕ ಪ್ರಜ್ಞೆ, ಮಾನವೀಯ ಪ್ರಜ್ಞೆ ಹಾಗೂ ಪ್ರಶ್ನಿಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬಹುದೆಂದು ಸೂಚಿಸುತ್ತದೆ... ಇದನ್ನು ಉಪಯೋಗಿಸಿಕೊಂಡು ಕುಟಿಲತೆಯನ್ನು ಬಯಲಿಗೆಳೆಯುವ, ಕಪಟ ವೇಷಧಾರಿಗಳಿಂದ ಜನರ ಮೇಲಾಗುವ ದುಷ್ಪರಿಣಾಮವನ್ನು ಬಹಿರಂಗಗೊಳಿಸುವ, ತಡೆಹಿಡಿಯುವ ಕೆಲಸವನ್ನು ಯಾರಾದರೂ ಧಾರಾಳವಾಗಿ ಮಾಡಬಹುದು.... ನಾನು ಸಾಯುವುದರೊಳಗೆ ಸಾಧ್ಯವಾದಷ್ಟು ಇಂತಹ ಮೋಸಗಾರರ, ವಂಚಕರ, ಕುತಂತ್ರಗಳನ್ನು ಬಯಲಿಗೆಳೆಯಬೇಕೆಂದಿದ್ದೇನೆ. ನಯವಂಚಕರ ಜಾಲದೊಳಗೆ ಸಿಕ್ಕಿ ನರಳುತ್ತಿರುವ ಮಿಲಿಯಗಟ್ಟಲೆ ಜನರಲ್ಲಿ ಕೆಲವರಾದರೂ ಮುಕ್ತಿ ಹೊಂದಿದರೆ ನನಗದೇ ತೃಪ್ತಿ. ಆನಂತರ ನಾನು ಸಂತೋಷದಿಂದ ಸಾವನ್ನು ಸ್ವಾಗತಿಸುತ್ತೇನೆ....''

■ ಡಾ. ಅಬ್ರಾಹಂ ಟಿ. ಕೋವೂರ್
(ಶ್ರೀಲಂಕಾದ ಖ್ಯಾತ ವಿಚಾರವಾದಿ)

ಋಣ ಸಂದಾಯ

ನಾನಾಗ ದುಃಸ್ಥಿತಿಯಲ್ಲಿ ಇದ್ದೆ. ಮಾರ್ಕ್ಸ್‌ಕಾರ್ಡ್, ಉಟ್ಟಬಟ್ಟೆ ಬಿಟ್ಟರೆ ಬೇರೇನೂ ಇರಲಿಲ್ಲ. ವಾಪಸು ಊರಿಗೆ ಬರಲೂ ಹಣ ಇಲ್ಲ. ದೂರದ ದೆಹಲಿಯ ರೈಲು ನಿಲ್ದಾಣದಲ್ಲಿ ಕಂಗಾಲಾಗಿ ನಿಂತಿದ್ದೆ. ಆ ಸಮಯಕ್ಕೆ ದೇವರ ಹಾಗೆ ಅವರು ಕಾಣಿಸಿಕೊಂಡರು. ನನಗೆ ಬೇಕಿದ್ದ ಕೆಲವೇ ರೂಪಾಯಿಗಳನ್ನು ನೀಡಿ ಪಾರುಗಾಣಿಸಿದರು. ಕೃತಜ್ಞತೆಯಿಂದ ಹೃದಯ ತುಂಬಿ ಬಂತು.

''ನಿಮ್ಮ ಉಪಕಾರ ದೊಡ್ಡದು. ಈ ಹಣ ಮರಳಿಸುವೆ. ನಿಮ್ಮ ವಿಳಾಸ ಕೊಡಿ'' ಅಂದೆ.

''ನನಗೆ ನೀನೇನೂ ಹಣ ಕೊಡಬೇಕಾಗಿಲ್ಲ. ನಿನ್ನ ಹಾಗೆ ಕಷ್ಟಕ್ಕೆ ಸಿಕ್ಕಿದ ಜೀವಿಯೊಂದು ಕಂಡಾಗ ಕೈಲಾದ ನೆರವು ನೀಡು. ಅದೇ ನಿಜವಾದ ಋಣ ಸಂದಾಯ. ನಾನು ಕಷ್ಟದಲ್ಲಿ ಇದ್ದಾಗ ಹೀಗೇ ಯಾರೋ ಕೈಹಿಡಿದು ಎತ್ತಿದರು. ಇವತ್ತು ನಿನ್ನ ಆಪತ್ತಿಗೆ ನೆರವಾಗಲು ಸಾಧ್ಯವಾಯಿತು'' ಎಂದು ಹೊರಟು ಹೋದರು. ಜೀವನದ ಇಳಿಗಾಲದಲ್ಲಿಯೂ ನಾನು ಅಂದಿನ ಆ ಘಟನೆ, ಆ ಮಹಾನುಭಾವರನ್ನು ಎಂದೂ ಮರೆಯಲಿಲ್ಲ.

ನಾವು ಉಪಕಾರ ಪಡೆದವರಿಗೆ ಕೃತಜ್ಞತೆ ಸಲ್ಲಿಸುವುದೋ, ಪಡೆದ ಹಣ ಮರಳಿಸಿ ಋಣ ಸಂದಾಯ ಮಾಡುವುದೋ ಬೇರೆ! ನನ್ನ ಹಾಗೆ ಆಪತ್ತಿನಲ್ಲಿ ಸಿಲುಕಿದ ವ್ಯಕ್ತಿಗೆ ನಿಜಕ್ಕೂ ನೆರವಾಗಿ ಅಜ್ಞಾತವಾಗಿ ಉಳಿಯುವುದೇ ನಿಜವಾದ ಋಣ ಸಂದಾಯ ಎಂದು ಈಗಲೂ ನನಗನ್ನಿಸುತ್ತದೆ.

■ ಎಂಜಿಕೆ ಮೆನನ್
ಮಾಜಿ ರಕ್ಷಣಾ ಕಾರ್ಯದರ್ಶಿ
(ಅವರ ಆತ್ಮಕಥೆಯಿಂದ)



ಅಜಾತ ಶತ್ರು

ಬದುಕು ವಿಶೇಷಾಂಕ ಉಳಿದೆಲ್ಲ ವಿಶೇಷಾಂಕಗಳಿಗಿಂತ ಭಿನ್ನವಾಗಿದೆ. ಮುಖ್ಯವಾಗಿ ಲೇಖಕರಿಗೆ ಸಂಬಂಧಿಸಿದ ಹಾಸ್ಯ ಪ್ರಸಂಗಗಳು, ಈಗಾಗಲೆ ಒಂದು ಸಂಚಿಕೆ ಕೊಂಡಿರುವುದರಿಂದ ಓದಿದ್ದೆ. ಈ ದಿನ ನನಗೂ ಬಂತು, ನೀವು ಕಳಿಸಿರುವುದು. ಎಲ್ಲಾ ಲೇಖಕರನ್ನು ಬಳಸಿಕೊಂಡಿರುವುದಕ್ಕೆ ನಿಮ್ಮ ಅಜಾತಶತ್ರುತನದ ವ್ಯಕ್ತಿತ್ವ ಕಾರಣ. ನಿಮಗೂ, ನಿಮ್ಮ ಮಿತ್ರರಿಗೂ ನನ್ನ ಅಭಿನಂದನೆಗಳು.

-ಕುಂವೀ, ಹಿರೇಹಾಳು

ನಾವೀನ್ಯ

'ಬಿಸಿಲ ಬದುಕು' ದೀಪಾವಳಿ ವಿಶೇಷಾಂಕ-99 ನೋಡಿದೆ, ಓದಿದೆ. ಖುಷಿಕೊಟ್ಟ ಕೆಲವು ಸಂಗತಿಗಳನ್ನು - ಅಕ್ಷರ ರೂಪು ನೀಡಿದ ಸಂಗಾತಿಗಳನ್ನು ಮತ್ತೆ ಮತ್ತೆ ಮೆಲುಕು ಹಾಕಿದೆ.

ಇಡಿಯಾಗಿ ವಿಶೇಷಾಂಕವನ್ನು ಹೊಸ ಬಗೆಯಲ್ಲಿ ರೂಪಿಸಿದ ನಿಮಗೆ ಹಾಗೂ ನಿಮ್ಮ ಟೀಮ್‌ಗೆ ಅಭಿನಂದನೆಗಳು. ವಿಷಯ, ವಿನ್ಯಾಸಗಳು ವಿಶಿಷ್ಟವಾಗಿದ್ದು, ಇತರ ಅನೇಕ ದೀಪಾವಳಿ ವಿಶೇಷಾಂಕಗಳಿಗಿಂತ ಭಿನ್ನವಾಗಿದೆ. ವಿಶೇಷ ಲೇಖನಗಳು ಚುರುಕಾಗಿವೆ. ಎಸ್. ಮಾಲತಿ, ಜಿ.ಎಂ.ಶಿರಹಟ್ಟಿ, ಸೃಜನ್.... ಮುಂತಾದವರ ದಿಟ್ಟ ವಿಚಾರಗಳು ಚಿಂತನೆಗೆ ಗ್ರಾಸವಾಗಿದ್ದರೆ ನೇಮಿಚಂದ್ರರ ಲೇಖನ ಅಭ್ಯಾಸಪೂರ್ಣವಾಗಿದ್ದು, ಉಪಯುಕ್ತವೆನಿಸಿದೆ. ವಿವಿಧ ಸ್ಪರ್ಧೆಗಳು, ಪ್ರಥಮ ಪ್ರಶಸ್ತಿ ಪಡೆದ ಕತೆ ಹಾಗೂ ಪ್ರಬಂಧ, ಕಥಾಸ್ಪರ್ಧೆಯ ತೀರ್ಪುಗಾರ ಓ.ಎಲ್.ನಾಗಭೂಷಣಸ್ವಾಮಿಯವರ ಅನಿಸಿಕೆಗಳು ಗಮನಾರ್ಹ. 'ವ್ಯಂಗ್ಯ ವಿಶೇಷ' ಹೊಸ ಪ್ರಯೋಗವೆನಿಸಿದ್ದು ತುಂಬಾ ಖುಷಿ ಕೊಟ್ಟಿದೆ.

ಸಿನಿಮಾ ವಿಭಾಗದಲ್ಲಿ 'ಮಸ್ತ್ ಮಸ್ತ್ ಹುಡುಗ ಬಂದ' ಹಾಗೂ 'ನಾಳೆಗಳನ್ನು ಮಾಡುವವರು' ಲೇಖನಗಳಲ್ಲಿನ ವಾಕ್ಯಗಳು ಚುರುಕಾಗಿವೆ. ಯುವ ಜನಾಂಗಕ್ಕೆ ಮುದ ನೀಡುವ ಹರಿತ ಪತ್ರಿಕಾ ಭಾಷೆ ಬಳಸಿರುವುದರಿಂದಾಗಿ ವಿಶೇಷಾಂಕದ ಪ್ರತಿ ಪುಟದಲ್ಲೂ ನಾವೀನ್ಯ ಇದ್ದು, ವೇಗವಾಗಿ ಓದಿಸಿಕೊಂಡು ಹೋಗುತ್ತದೆ.

ಗೆಳೆಯರೆಲ್ಲಾ ಜತೆಗೂಡಿ, ಬಹಳಷ್ಟು ಶ್ರಮಿಸಿ ಈ ವಿಶೇಷಾಂಕವನ್ನು ಹೊರ ತಂದಿದ್ದೀರಿ. 'ನಿಮ್ಮ ಶ್ರಮ ಫಲಿಸಿದೆ' ಎಂಬ ಮಾತು ತೀರಾ ಕ್ಲೀಷೆ ಎನಿಸಿ, ಹಳಸಿದೆ. ಯಾಕೆಂದರೆ ಇಂಥ ಬುರುಡೆ, ಬದನೆಕಾಯಿಗಳಿಗೆ ದಶಕದ ಇತಿಹಾಸವಿದೆ! ಪ್ರಾಯಶಃ, ದೀಪಾವಳಿ ವಿಶೇಷಾಂಕಗಳು ಪುಸ್ತಕ ದಂಗಡಿಗಳಲ್ಲಿ ರಾಶಿ ಬಿದ್ದಿರುವ ಸಮಯದಲ್ಲೇ

ಟಪಾಲು

'ಬಿಸಿಲ ಬದುಕು' ಕೂಡಾ ಬಂದುದರಿಂದಾಗಿ ಈಗಾಗಲೇ ಒಂದೆರಡನ್ನು ಕೊಂಡವರು, ಇದರ ಮುಖಪುಟದಲ್ಲಿ ಮಿಂಚುತ್ತಿರುವ ಸುಂದರ ಹುಡುಗಿಯತ್ತ ಕಣ್ಣು ಮಿಟುಕಿಸಿ, ಖರೀದಿಸದೇ ಹೊರಳುವ ಸಾಧ್ಯತೆ ಇದೆ. ಆದರೆ, 'ಇದು ಅತ್ಯಂತ ಚೆನ್ನಾಗಿದೆ, ರೋಚಕವಾಗಿದೆ' ಎಂದು ಕೂಗಿ ಹೇಳಿ, ವಾಚಕರನ್ನು ಸೆಳೆಯುವುದು ಸಾಧ್ಯವೆ? ಅಂತಹ ಒಂದು ಮಾರ್ಗ, ವಿಧಾನ ಇರುತ್ತಿದ್ದರೆ - ಯಾವ ಬುಕ್‌ಸ್ಟಾಲ್‌ನಲ್ಲೂ 'ಬಿಸಿಲ ಬದುಕು' ಉಳಿಯುತ್ತಿರಲಿಲ್ಲ. ಕನ್ನಡಿಗರ ಮನೆ ಮನಗಳಲ್ಲೆ ಗಟ್ಟಿಯಾಗಿ ನೆಲೆನಿಂತು, ನಿಮ್ಮತ್ತ ಕೈ ಬೀಸುತ್ತಾ 'ಸ್ಟೆಲ್ ಪ್ಲೀಸ್' ಎನ್ನುತ್ತಿತ್ತು. ಅಲ್ಲಲ್ಲಿ ಗೋಚರಿಸುವ ಮಿಂಚು, ಮಿಣುಕು, ತುಣುಕುಗಳು ನಿಜಕ್ಕೂ ಕಾರ್ಗಿಲ್ ಬಾಂಬ್‌ಗಳು. ಕೆಲವು ಸುದ್ದಿ ಜೀವಿಗಳನ್ನು ಬಯಲಲ್ಲೇ ಬೆತ್ತಲಾಗಿಸಿ ನಾವೆಲ್ಲ 'ಗೋಲೋ' ಎಂದು ನಗುವಂತೆ ಮಾಡಿದ್ದೀರಿ. ಕಂಗ್ರಾಟ್ಸ್!

- ಆರೂರು ಲಕ್ಷ್ಮಣ ಶೇಟ್, ಹುಬ್ಬಳ್ಳಿ

ಕೈಗೆಟುಕುವ ಬೆಲೆ

ಕೈಗೆಟುಕುವ ಬೆಲೆಯಲ್ಲಿಯೇ ಸರಳ, ಚಂದಾಗಿ, ಸಿಂಪಲ್ಲಾಗಿ ದೀಪಾವಳಿ ವಿಶೇಷಾಂಕ ತಂದಿರುವಿರಿ. ನೋಡಿ (ಮತ್ತು ಓದಿ) ಖುಶಿಯಾಯಿತು.

- ಚಂಪಾ, ಬೆಂಗಳೂರು.

ಯಶಸ್ವಿ ಸಂಚಿಕೆ

ಬಿಸಿಲ ಬದುಕು ದೀಪಾವಳಿ ವಿಶೇಷಾಂಕವು ಒಳ್ಳೆ ಕಥೆ, ಕವನ ಹಾಗೂ ಲೇಖನಗಳು ಅಲ್ಲದೇ ವಿಮರ್ಶೆ, ಚಿತ್ರಗಳಿಂದ ತುಂಬಾ ಉಪಯುಕ್ತವಾಗಿ ಮೂಡಿ ಹೊರ ಬಂದಿದೆ. ಹೊಸ ಹೊಸ ಲೇಖನಗಳನ್ನು ಪರಿಚಯಿಸುವಲ್ಲಿ ತಾವು ಯಶಸ್ವಿಯಾಗಿದ್ದೀರಿ. ತಮಗೆ ಅನಂತ ಅನಂತ ಧನ್ಯವಾದಗಳು.

-ಶಂಕರ ಮುತ್ತಣ್ಣವರ, ಗಲಗಲಿ.

ಮಾದರಿ ವಿಶೇಷಾಂಕ

ಬಿಸಿಲ ಬದುಕು ದೀಪಾವಳಿ ವಿಶೇಷಾಂಕ-99 ನೋಡಿ ತುಂಬ ಹರ್ಷವಾಯಿತು. ಒಂದು ವಾರ್ಷಿಕ ಸಂಚಿಕೆಯನ್ನು ಹೇಗೆ ಸಂಪಾದಿಸಬೇಕೆನ್ನುವುದಕ್ಕೆ ಇದು ಸಾಕ್ಷಿಯಾಗಿದೆ, ಮಾದರಿಯಾಗಿದೆ. ನಿಮ್ಮ ಶ್ರಮ ಸಾರ್ಥಕ.

-ನಿರಂಜನ ವಾಲಿಶೆಟ್ಟರ, ಹುಬ್ಬಳ್ಳಿ.

ಅಪೂರ್ವ ಸಾಹಸ

ಬಿಸಿಲ ಬದುಕು ದೀಪಾವಳಿ ಸಂಚಿಕೆ ಓದಿದೆ. ತುಂಬಾ ಖುಷಿ ನೀಡುವಂತಹ ಬರಹಗಳು. ನಿಮ್ಮ ಅಪೂರ್ವ ಸಾಹಸವನ್ನು ತುಂಬ ಮೆಚ್ಚಿಕೊಂಡಿರುವೆ.

- ಡಾ. ಚೆನ್ನಣ್ಣ ವಾಲೀಕಾರ, ಗುಲಬರ್ಗಾ.

ಮನಸೂರೆಗೊಂಡ ವಿಶೇಷಾಂಕ

ಬಿಸಿಲ ಬದುಕು ದೀಪಾವಳಿ ವಿಶೇಷಾಂಕವು ತುಂಬಾ ಚೆನ್ನಾಗಿ ಮೂಡಿಬಂದಿದ್ದು, ಆರಂಭದಿಂದ ಅಂತ್ಯದವರೆಗೆ ಒಂದಕ್ಕಿಂತ ಒಂದು ವಿಭಿನ್ನ ಲೇಖನಗಳೊಂದಿಗೆ ಮನ ಸೆಳೆಯಿತು. ಪತ್ರಿಕೆ ಬಿಡುಗಡೆಯಾಗುವುದು ತಡವಾಗಿದ್ದರೂ, ನಮ್ಮ ಕುತೂಹಲವನ್ನು ಇಮ್ಮಡಿಗೊಳಿಸಿದ್ದು ಸಾರ್ಥಕವಾಗಿದೆ. ಬಹುಮಾನಿತ ಕಥೆ 'ಬೆಳದಿಂಗಳ ತಂಪು' ಬೀದರ ಜಿಲ್ಲೆಯ ಭಾಷಾ ಸೊಗಡಿನಿಂದ ಕೂಡಿದ್ದು ನೀತಿಬೋಧಕವಾಗಿದೆ. 'ನಾನೊಂದು ಮರವಾಗಿದ್ದರೆ' ಪ್ರಬಂಧ, ಪರಿಸರ ರಕ್ಷಣೆಯ ಬಗ್ಗೆ ಕಳಕಳಿಯನ್ನು ಹೊಂದಿದೆ. ಬಹುಮಾನಿತ ಛಾಯಾಚಿತ್ರಗಳು ಮನಮೋಹಕವಾಗಿದ್ದು ಆಕರ್ಷಕವಾಗಿವೆ.

- ರಾಜಶೇಖರ ಎಂ. ಹಿರೇಮಠ, ಕುಕನೂರು

ವಿಶೇಷ ಶ್ರಮ

ತಮ್ಮ 'ಬಿಸಿಲ ಬದುಕು' ವಿಶೇಷಾಂಕ ಓದಿದೆ. ಉಳಿದ ವಿಶೇಷಾಂಕಗಳಿಗೆ ಹೋಲಿಸಿದರೆ, ಪುಟ ಪುಟಗಳಿಗೂ ವಿಶೇಷ ಶ್ರಮವಹಿಸಿರುವುದು ಎದ್ದು ಕಾಣುತ್ತದೆ. ಮತ್ತೊಂದು ವಿಶೇಷವೇನೆಂದರೆ ನನ್ನ ಕತೆಗೆ ನನ್ನ ಜೀವನದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಸಮಾಧಾನಕರ ವಿಶೇಷ ಬಹುಮಾನವೊಂದನ್ನು ನಿಮ್ಮ ಪತ್ರಿಕೆ ನೀಡಿದೆ.

-ಪ್ರಹ್ಲಾದ ಅಗಸನಕಟ್ಟೆ, ದಾವಣಗೆರೆ

ಹೊಸ ವರ್ಷದ ಶುಭಾಶಯ ಹೇಳುವುದು ಹೇಗೆ ?

ಈಗ ಬರುತ್ತಿರುವುದು ಪ್ರತಿ ವರ್ಷ ಬರುವ ಸಾಮಾನ್ಯ ಹೊಸ ವರ್ಷವಲ್ಲ. ಇದು ಸಾವಿರ ವರ್ಷಕ್ಕೊಮ್ಮೆ ಬರುವ ಅಪರೂಪದ ಅವಕಾಶ. ಸಹಸ್ರಮಾನ ಆರಂಭಗೊಳ್ಳುವ ಇಂಥ ಕಾಲಘಟ್ಟದಲ್ಲಿ ಜೀವಿಸುತ್ತಿರುವ ನಾವುನೀವೆಲ್ಲ ಅದೃಷ್ಟವಂತರೇ ಸರಿ. 2000ನೇ ಇಸವಿಯನ್ನು ಸ್ವಾಗತಿಸುವ ಈ ಸಂದರ್ಭದಲ್ಲಿ ನಿಮ್ಮ ಆತ್ಮೀಯರಿಗೆ ಶುಭಕೋರಲು ಹಲವಾರು ವಿಧಾನಗಳಿವೆ.
ನಿಮಗೆ ಸರಿಕಂಡಿದ್ದನ್ನು ಆಯ್ಕೆ ಮಾಡಿಕೊಳ್ಳಿರಿ.

ಹಳೆಯ ಆಯ್ಕೆಗಳು

1. ಪ್ರತಿ ವರ್ಷದಂತೆ ಈ ವರ್ಷವೂ ದುಬಾರಿ ಬೆಲೆಯ ಗ್ರೀಟಿಂಗ್ ಕಾರ್ಡನ್ನು ಕೊಂಡು ನಿಮ್ಮ ಆಪ್ತರಿಗೆ ಕಳಿಸಿಕೊಡಿ.
[ನೀವು ಕಳಿಸಿದ ಗ್ರೀಟಿಂಗ್ ಕಾರ್ಡು ಅಂಚೆಯಲ್ಲಿ 'ಮಿಸ್' ಆಗದೆ ವಿಳಾಸದಾರರಿಗೆ ತಲುಪಿದರೆ ಅದು ನಿಮ್ಮ ಪುಣ್ಯ. ಅವರಿಗೆ ತಲುಪುವ ನೂರಾರು ಶುಭಾಶಯ ಪತ್ರಗಳಲ್ಲಿ ನಿಮ್ಮದೂ ಒಂದಾಗಿರುತ್ತದೆ. ಅವರು ಒಮ್ಮೆ ಕಾರ್ಡ್ ಮೇಲೆ ಕಣ್ಣಾಡಿಸಿ ಕಸದ ಬುಟ್ಟಿಗೆ ಕಳಿಸುತ್ತಾರೆ.]
2. ನಿಮ್ಮ ಆಪ್ತರು ನಿಮ್ಮ ಊರಿನಲ್ಲೇ ಇದ್ದರೆ ಅವರಿಗೆ ಬಗೆಬಗೆಯ ಸಿಹಿ ತಿಂಡಿಯನ್ನು ಸ್ವತಃ ತಲುಪಿಸಿ. ಬೇರೆ ಊರಿನವರಾದರೆ ಅಂಚೆ ಅಥವಾ ಕೊರಿಯರ್ ಮೂಲಕ ಸಿಹಿ ಪೊಟ್ಟಣ ರವಾನಿಸಿ.
[ನೀವು ಕಳಿಸಿದ ಸಿಹಿಯ ತುಂಡನ್ನು ಬಾಯಿಗಿರಿಸಿಕೊಂಡ ನಿಮ್ಮ ಆಪ್ತರು ಹತ್ತು ನಿಮಿಷ ಕಾಲ ಸಿಹಿ ಸವಿದು ತಮ್ಮ ದೈನಂದಿನ ಕಾರ್ಯಗಳಲ್ಲಿ ಮಗ್ನರಾಗುತ್ತಾರೆ. ಆಕಸ್ಮಾತ್ ಅವರಿಗೆ ಸಿಹಿ ಇಷ್ಟವಿಲ್ಲದಿದ್ದರೆ ಅಥವಾ ಅವರಿಗೆ ಡೈಯಾಬಿಟಿಸ್ ಇದ್ದರೆ ಆಗುವ ಫಜೀತಿಯನ್ನು ಊಹಿಸಿ]
3. ಹೊಸ ವರ್ಷದ ಅತ್ಯಾಕರ್ಷಕ ಡೈರಿಯನ್ನು ನಿಮ್ಮವರಿಗೆ ಉಡುಗೊರೆ ನೀಡಿ.
[ಡೈರಿಯನ್ನು ಜೋಪಾನವಾಗಿರಿಸಿಕೊಂಡು ದಿನಚರಿ ಬರೆಯುವವರು ಎಷ್ಟು ಜನ ಎಂಬುದನ್ನು ಕೊಂಚ ಯೋಚಿಸಿ. ಒಂದು ಸಮೀಕ್ಷೆ ಪ್ರಕಾರ ಡೈರಿ ಹೊಂದಿದವರಲ್ಲಿ ಶೇ. 90 ರಷ್ಟು ಜನ ಅದನ್ನು ಬಳಸುವುದಿಲ್ಲ!]
4. ಟಿ.ವಿ., ಫ್ರಿಜ್, ವಾಷಿಂಗ್ ಮೆಷಿನ್, ಸ್ಕೂಟರ್ ಮೊದಲಾದವನ್ನು ಪ್ರೆಸೆಂಟ್ ಮಾಡಿ ನಿಮಗೆ ಬೇಕಾದವರನ್ನು ಸಂತೃಪ್ತಗೊಳಿಸಿರಿ.
[ಇದಕ್ಕಾಗಿ ನೀವು ಸಾವಿರಾರು ರೂಪಾಯಿ ಖರ್ಚು ಮಾಡಬೇಕಷ್ಟೇ!]

ಹೊಸ ಅವಕಾಶ

5. ಸಹಸ್ರಮಾನದ ಆರಂಭ ವರ್ಷ ಅರ್ಥಪೂರ್ಣವಾಗುವಂತೆ ನೀವು ನಿಮ್ಮ ಆಪ್ತರಿಗೆ 'ಬದುಕು' ಅಥವಾ 'ದಾರಿ' ಪತ್ರಿಕೆಯನ್ನು ಉಡುಗೊರೆಯಾಗಿ ನೀಡಿ. **[ಇದಕ್ಕಾಗಿ ನೀವು ಖರ್ಚು ಮಾಡಬೇಕಾದುದು ಕೇವಲ ರೂ. 120. ಈ ಪತ್ರಿಕೆಗಳು ನಿಮ್ಮ ಆಪ್ತರಿಗೆ ಜೀವನಪೂರ್ತಿ ಉಪಯೋಗವಾಗುತ್ತವೆ. ಅವರ ಬದುಕಿನಲ್ಲಿ ನಿಮ್ಮ ನೆನಪೂ ಚಿರಸ್ಥಾಯಿಯಾಗಿ ಉಳಿಯುತ್ತದೆ]**

ಉಡುಗೊರೆ ಕೂಪನ್

ನನ್ನ ಹೆಸರು : ....

ವಿಳಾಸ : ....

....

ಈ ಕೆಳಗಿನ ನನ್ನ ಆತ್ಮೀಯರ ವಿಳಾಸಕ್ಕೆ ನನ್ನ ಹೊಸ ವರ್ಷದ ಉಡುಗೊರೆಯಾಗಿ

☐ 'ದಾರಿ' ವಾರ ಪತ್ರಿಕೆಯ 52 ಸಂಚಿಕೆಗಳನ್ನು ಒಂದು ವರ್ಷಕಾಲ ಕಳಿಸಿ.

☐ 'ಬದುಕು' ಮಾಸಪತ್ರಿಕೆಯ 12 ಸಂಚಿಕೆಗಳನ್ನು ಒಂದು ವರ್ಷಕಾಲ ಕಳಿಸಿ.

[ನೀವು ಆಯ್ಕೆ ಮಾಡಿದ ಪತ್ರಿಕೆ ಹಿಂದೆ ✓ ಹೀಗೆ ಟಿಕ್ ಮಾಡಿ]

ಪತ್ರಿಕೆ ಕಳಿಸಬೇಕಾದವರ ಹೆಸರು ....

ವಿಳಾಸ..

....

ವಾರ್ಷಿಕ ಚಂದಾ ಹಣ ರೂ. 120ನ್ನು ಎಂ.ಓ/ಚೆಕ್/ಡಿಡಿ ನಂ....................... ದಿನಾಂಕ.................. ಮೂಲಕ ಕಳಿಸಿದ್ದೇನೆ.


[ಹೊರ ಊರಿನ ಚೆಕ್ ಆದರೆ ರೂ. 20 ಹೆಚ್ಚು ಕಳಿಸಿ. ಡಿ.ಡಿ. ಅಥವಾ ಚೆಕ್ 'ಅಂಕುರ ಪ್ರಕಾಶನ'ದ ಹೆಸರಿನಲ್ಲಿ ಇರಲಿ]

ರಾಜಕೀಯ




ಪ್ರಚಲಿತ





ಹಾಸ್ಯ / ಪ್ರಬಂಧ



ಕತೆ / ಕವನ



ವಿಜ್ಞಾನ-ಆರೋಗ್ಯ

ಸಿನಿಮಾ / ಕ್ರೀಡೆ



ಲೇಖನಗಳು



ಹಾಗೂ

ಸ್ಥಿರ ಶೀರ್ಷಿಕೆಗಳು

ಮುಂದಿನ ಸಂಚಿಕೆಯಲ್ಲಿ

ಇವರು ದ.ಕ. ಜನ !

ಕೃಷ್ಣಾವತಾರ

ಜನ ಸಂಪರ್ಕದ ಬೇರುಗಳಿಲ್ಲದ, ದೂರದೃಷ್ಟಿಯ ಕನಸುಗಳಿಲ್ಲದ ಮನುಷ್ಯನೊಬ್ಬನ ಬಡಬಡಿಕೆಗಳನ್ನು ಇಡೀ ರಾಜ್ಯ ಇವತ್ತು ಕೇಳುತ್ತಾ ಕುಳಿತಿದೆ.

ಎಪ್ಪತ್ತರ ದಶಕ. ಇಡೀ ದೇಶದ ರಾಜಕೀಯ ಇಂದಿರಾಗಾಂಧಿಯ ಬೆರಳ ಸನ್ನೆಗೆ ಕುಣಿಯುತ್ತಿತ್ತು. 'ಆಕೆ ಕತ್ತೆಯನ್ನು ನಿಲ್ಲಿಸಿದರೂ ಆರಿಸಿ ಬರುತ್ತದೆ' ಎಂದು ಆ ಪಕ್ಷದ ನಾಯಕರೇ ಹೇಳುತ್ತಿದ್ದರು. ಹಾಗೇ ಹೆಸರೇ ಕೇಳರಿಯದಿದ್ದ ಕಾಂಗ್ರೆಸ್ಸಿಗರು ಅಸೆಂಬ್ಲಿಗೆ ಪಾರ್ಲಿಮೆಂಟಿಗೆ ಆರಿಸಿಬರುತ್ತಾ ಇದ್ದರು. ಆ ಕಾಲಕ್ಕೆ ರಾಜಕೀಯದ ಗಾಳಿಯಲ್ಲಿ ತೂರಿ ಬಂದವರು ಮದ್ದೂರಿನ ಕೃಷ್ಣ.

ಸಮಾಜವಾದಿ ಹಿನ್ನೆಲೆಯಿಂದ ಬಂದವರು ಎಂದು ಹೇಳಿಕೊಳ್ಳಲಾದ ಇವರು ಸೈಕಲ್ಲೇರಿ ವಿಧಾನಸೌಧಕ್ಕೆ ಬಂದು ಸುದ್ದಿ ಮಾಡಿದ್ದರು. ಟೆಕ್ಸಾಸ್‌ನ ಡಿಗ್ರಿ, ಮಂಡ್ಯದ ನೆಲದ ಸಂಪರ್ಕದಿಂದ ಇವರನ್ನು ದೂರ ಮಾಡಿತ್ತು. ಅಲ್ಲಿನ ಜನ ಆಗ ಕೆ.ವಿ. ಶಂಕರೇಗೌಡರನ್ನು, ಆನಂತರ ಜಿ.ಮಾದೇಗೌಡರನ್ನು ತಮ್ಮ ನಾಯಕ ಎಂದು ಒಪ್ಪಿತ್ತು. ಕೃಷ್ಣ ಒಕ್ಕಲಿಗರೇ ಅಲ್ಲ ಎಂದು ಹಲವಾರು ಪೋಲಿ ಜೋಕುಗಳನ್ನು ಅಲ್ಲಿನ ಹಿರಿಯ ನಾಯಕರೇ ಪ್ರಚುರಪಡಿಸುತ್ತಾ ಇದ್ದರು. ಇವರಿಗೆ ಆ ನೆಲದ ಸಂಪರ್ಕವೂ ಬೇಡವಾಗಿತ್ತು. ಕನ್ನಡವೇ ಮರೆತು ಹೋದವರಂತೆ ಇಂಗ್ಲೀಷು ಉಚ್ಚಾರಣೆಯಲ್ಲಿ ಮಾತಾಡುತ್ತಾ, ಚುನಾವಣೆಗಳು ಬಂದಾಗಲೆಲ್ಲ 'ಅಮ್ಮ'ನ ಆಶೀರ್ವಾದದಿಂದ ಗೆದ್ದು ಬರುವುದಕ್ಕಷ್ಟೇ ಅವರಿಗೆ ತಮ್ಮ ಜಿಲ್ಲೆ ಬೇಕಾಗಿತ್ತು.

ತಲೆಗೊಂದು ನೇಪಾಳಿ ಟೋಪಿ, ಒಳ್ಳೆಯ ಸೂಟುಧರಿಸಿ ಆಗತಾನೆ ವಿದೇಶದಿಂದ ಬಂದಂತೆ ಆಡುತ್ತಿದ್ದ ಕೃಷ್ಣರಿಗೆ ಜನರ ಬಳಕೆಯೂ ಇರಲಿಲ್ಲ., ಊರಿನ ಜನ ಬಂದರೆ, ಏನೋ ದೊಡ್ಡ ಉಪಕಾರ ಮಾಡುತ್ತಿರುವ ಹಾಗೆ ನಾಲ್ಕು ಮಾತು. ಅದೂ ಅವರು ಏನು ಹೇಳುತ್ತಿದ್ದಾರೆ ಎಂದು ಕೇಳುವುದಕ್ಕಷ್ಟೇ. ಬಂದವರು ಏನಾದರೂ ಬೇಡಿಕೆ ಇಟ್ಟರೆಂದರೆ ಮುಗಿದೇ ಹೋಯಿತು. ಕಣ್ಣು ವಿಚಿತ್ರವಾಗಿ ತಿರುಗಿಸುತ್ತಾ ಊರಿನ ಜನ ಯಾವುದೋ ಲೋಕದವರು ಪಿಂಬಂತೆ, ಅವರು ಮಾತಾಡುವುದೆ ಅರ್ಥಹೀನ ಕೀಸರು ಬಾಸರು ಎಂಬಂತೆ ವರ್ತಿಸುತ್ತಾ ಇದ್ದರು. ಹೀಗಾಗಿ ಊರಿನ ಜನ ಎಂದೂ ಇವರ ಬೆಂಬಲಿಗರಾಗಲಿಲ್ಲ. ಇದ್ದ ಕೆಲವೇ ಜನ ಇವರ ಚಮಚಾಗಳು ಅಷ್ಟೇ.

ಮದ್ದೂರು ಮಂಡ್ಯದ ಭಾಗವೇ ಆದರೂ, ಅಲ್ಲಿನ ಹೃದಯ ಭಾಗದಷ್ಟು ಶ್ರೀಮಂತಿಕೆ ಅದಕ್ಕಿಲ್ಲ. ಕಾವೇರಿ ನೀರು ಈ ತಾಲೂಕಿಗೆ ಬರುತ್ತದಾದರೂ, ಸಾಕೆನಿಸುವಷ್ಟು ನೀರು ಸಿಗುವುದು ಅಪರೂಪ. ಒಂದು ರೀತಿ ಅರೆಬರದ ಪ್ರದೇಶ. ಹಾಗಾಗಿ ಮದ್ದೂರಿನವರೆಂದರೆ ಮಂಡ್ಯದ ಉಳಿದ ಭಾಗದ ಶ್ರೀಮಂತ ರೈತರಿಗೆ ಒಂದು ಬಗೆ ತಾತ್ಸಾರ. ಅದನ್ನು ಶ್ರೀಮಂತಗೊಳಿಸಲೆಂದೇ ಮದ್ದೂರಿಗೆ ಕೃಷ್ಣ ಫಾಲ್ಕನ್ ಕಾರ್ಖಾನೆ ತಂದರು, ಮದುರಾ ಕೋಟ್ಸ್‌ನ ಫ್ಲೆರ್ಲೋಗ್ರಾಫ್ ಘಟಕ ತಂದರು. ಕೆಲವರಿಗೆ ಕೆಲಸ ಸಿಕ್ಕಿತು. ಆದರೀಗ ಎರಡೂ ಮುಚ್ಚಿಯೇ ಹೋಗಿವೆ.

ಎಂಬತ್ತರ ದಶಕ. ಸರಿಯಾಗಿ ಹೇಳಬೇಕೆಂದರೆ 1983ರ ಚುನಾವಣೆ. ಮುಖ್ಯಮಂತ್ರಿಯಾಗಿದ್ದ ಗುಂಡೂರಾವ್ ಸಹಿತ ಕಾಂಗ್ರೆಸ್ ಗುಡಿಸಿ ಹೋಗಿತ್ತು. ಕೃಷ್ಣ ಸೋತಿದ್ದರು. ಕಾಂಗ್ರೆಸ್ಸಿಗರಿಗೆ ಅದೆಂಥ ಶಾಕ್ ಆಗಿತ್ತೆಂದರೆ, ಗರಬಡಿದಂತೆ ಶಾಸಕರ ಭವನದಲ್ಲಿ ನಿಂತುಬಿಟ್ಟಿದ್ದರು. ಆಗ ಕೃಷ್ಣರ ಚೇಲ ಒಬ್ಬ ಅವರ ಹಾವಭಾವಗಳನ್ನು ಅಭಿನಯಪೂರ್ವಕ ವಿವರಿಸುತ್ತಾ ''ಹಿಂಗೆ ಜನ ಕಟ್ಟಿಕೊಳ್ಳದ ಮನುಷ್ಯ ಎಲೆಕ್ಷನ್‌ನಲ್ಲಿ ಗೆಲ್ಲೋದುಂಟೇ?'' ಎಂದು ವಿವರಿಸುತ್ತಾ ಇದ್ದ.

ಆಮೇಲೆ ಕೃಷ್ಣರ ಅಹಂಕಾರ ತಗ್ಗಿದ ಹಾಗೆ ಕಂಡಿತು. 1989ರಲ್ಲಿ ಕಾಂಗ್ರೆಸ್ ಪ್ರಚಂಡ ವಿಜಯ ಸಾಧಿಸಿದಾಗ ಮತ್ತೆ ಕೃಷ್ಣ ಬೇರೆ ಅವತಾರ ತಾಳಿದರು. ಮುಖ್ಯಮಂತ್ರಿ ಪಟ್ಟ ಕೈಗೆ ಸಿಕ್ಕಿಯೇ ಬಿಟ್ಟಿತು ಎನಿಸಿದ್ದು ಕೈತಪ್ಪಿತು. ಜನ, ದುಡ್ಡು ಇಲ್ಲದ ಮನುಷ್ಯ ಅಧಿಕಾರಕ್ಕೆ ಯತ್ನಿಸುವುದರ ಪರಿಣಾಮ ಏನೆಂಬುದು ಅರಿತರು. ಅವರು ಎಷ್ಟೇ ಯತ್ನಿಸಿದರೂ ಜನ ಕೈ ಹತ್ತಲಿಲ್ಲ, ದುಡ್ಡು ಸಾಕಷ್ಟು ಆಯಿತು: ಅವರಿಗೆ ವ್ಯವಹಾರದ ಮರ್ಮ ಕಲಿಸಲು ಮುಂಬಯಿ ಉದ್ಯಮಿ ಸದಾನಂದ ಶೆಟ್ಟಿ, ಬೆಂಗಳೂರಿನ ವಿಜಯ ಮಲ್ಯ ನೆರವಾದರು.. ಈಗ ಹಣಕಾಸಿನ ವಿಷಯದಲ್ಲಿ ಕೃಷ್ಣ ನೆಮ್ಮದಿವಂತ. ರಾಜಕೀಯದ ತಿರುವುಗಳಲ್ಲಿ ಸಿಕ್ಕಿ ಅವರೀಗ ಮುಖ್ಯಮಂತ್ರಿ. ತನ್ನ ಮನೆಯಂಗಳದಲ್ಲಿ ರೋಗಗ್ರಸ್ತ ಕೈಗಾರಿಕೆಗಳನ್ನು ನಿಲ್ಲಿಸಿಕೊಂಡ ಅವರೀಗ ರಾಜ್ಯದ ಹೈಟೆಕ್ ಕ್ರಾಂತಿಯ ಬಗ್ಗೆ ಮಾತಾಡುತ್ತಿದ್ದಾರೆ.




ಚಂದ್ರಶೇಖರ ಗುಬ್ಬಿ

ಜನ ಸಂಪರ್ಕದ ಬೇರುಗಳಿಲ್ಲದ, ದೂರದೃಷ್ಟಿಯ ಕನಸುಗಳಿಲ್ಲದ ಮನುಷ್ಯನೊಬ್ಬನ ಬಡಬಡಿಕೆಗಳನ್ನು ಇಡೀ ರಾಜ್ಯ ಇವತ್ತು ಕೇಳುತ್ತಾ ಕುಳಿತಿದೆ. ಕೃಷ್ಣ ಇನ್ನೊಂದು ಅವತಾರದಲ್ಲೀಗ ಉದ್ಭವವಾಗಿದ್ದಾರೆ. ಅದರ ಅವಧಿ ಎಷ್ಟೆಂಬುದೇ ಈಗ ಮುಖ್ಯ ವಿಚಾರ.

■ ಸುಹಾಸ

ಬೂದಿಬಾಬಾ ಹಾಗೂ ಆತನ ಭಕ್ತರು ಉತ್ತರಿಸಲಿ !

■ ನರೇಂದ್ರ ನಾಯಕ್



ಗಾಳಿಯಲ್ಲಿ ಕೈಯನ್ನು ಅಲ್ಲಾಡಿಸಿ, ''ಶೂನ್ಯ''ದಿಂದ ವಸ್ತುಗಳನ್ನು ಸೃಷ್ಟಿಸುವುದು ನೋಡುಗರಿಗೆ ದೊಡ್ಡ ಪವಾಡದಂತೆ ಕಾಣುತ್ತದೆ. ಏಕೆಂದರೆ, ಖಾಲಿ ಕೈಯಲ್ಲಿ, ಯಾವುದೋ ವಸ್ತು ಬರಬೇಕಾದರೆ ಅದು ಖಂಡಿತವಾಗಿಯೂ ಎಲ್ಲಿಂದಲೋ ಬಂದು ಸೇರಿರಬೇಕಲ್ಲವೆ!

ಈ ''ಪವಾಡ''ದಲ್ಲಿ ಅತ್ಯಂತ ಹೆಸರು ವಾಸಿಯಾದ ವ್ಯಕ್ತಿ ಪುಟ್ಟಪರ್ತಿಯ ಸತ್ಯನಾರಾಯಣ ರಾಜು ಅಲಿಯಾಸ್ ಸತ್ಯಸಾಯಿಬಾಬಾ. ಈತನ ಕೈ ಕೆಳಮುಖವಾಗಿ ಚಲಿಸುತ್ತದೆ, ಮೇಲೆ ಹೋಗುತ್ತದೆ, ಕೆಳಗೆ ಬರುತ್ತದೆ, ಕೆಳಗೆ ಬಂದಾಗ ಕೈ ತುಂಬಾ ಘಮಘಮಿಸುವ ಬೂದಿ. ಇದೇ ಕೈಯಚಲನೆಯಿಂದ ವಾಚು, ಚೈನು, ಉಂಗುರಗಳು ಸೃಷ್ಟಿಯಾಗುತ್ತವೆ. ಇಲ್ಲಿ ಬೂದಿ ಸೃಷ್ಟಿ ಮಾಡುವುದು ಹೇಗೆ?

ಬೂದಿಯನ್ನು ಗಂಜಿನೀರಿನೊಂದಿಗೆ ಚೆನ್ನಾಗಿ ಕಲಸಿ, ಚಪಾತಿ ಹಿಟ್ಟು ಮಾಡಿದಂತೆ ಮಾಡುವುದು. ನಂತರ, ಇದನ್ನು ಚಿಕ್ಕ-ಚಿಕ್ಕ ಉಂಡೆಗಳನ್ನಾಗಿ ಮಾಡಿ ಬಿಸಿಲಿನಲ್ಲಿ ಒಣಗಿಸುವುದು. ಈ ಒಣಗಿಸಿದ ಉಂಡೆಗಳನ್ನು, ಕೈಯ ಹೆಬ್ಬೆರಳು ಮತ್ತು ತೋರುಬೆರಳುಗಳ ಮಧ್ಯೆ ಹಿಡಿಯುವುದು. ಕೈಯನ್ನು ಕೆಳಮುಖವಾಗಿ ತಿರುಗಿಸಿದಾಗ, ನೋಡುವವರಿಗೆ ಭ್ರಮೆ ಉಂಟಾಗುತ್ತದೆ. ಇದೇನೆಂದರೆ ಬೂದಿ ಇದ್ದಿದ್ದರೆ ಅದು ಕೈಯನ್ನು ಕೆಳಮುಖವಾಗಿ ಹಿಡಿದಾಗ ಅದು ಬೀಳುತ್ತಿತ್ತೆಂದು! ಅದು ಉಂಡೆರೂಪದಲ್ಲಿರುವುದು ಯಾರ ಮನಸ್ಸಿನಲ್ಲಿರುವುದಿಲ್ಲ. ಗಾಳಿಯಲ್ಲಿ ಕೈಯಾಡಿಸುವ ಉದ್ದೇಶವೇನು? ಮುಖ್ಯವಾಗಿ ಬೆರಳುಗಳ ಚಲನೆ ಕಾಣಿಸಬಾರದು! ಕೈಯ ದೊಡ್ಡ ಚಲನೆ ಬೆರಳುಗಳ ಚಿಕ್ಕ ಚಲನೆಯನ್ನು ಅಡಗಿಸುವುದು. ಇದೇ ಪಾಮಿಂಗ್ (Palming)ಅಥವಾ ಕೈಚಳಕದ ಮೂಲಭೂತ ತತ್ವ. ಈ ರೀತಿ ಮಾಡುವವರು, ವಸ್ತುಗಳನ್ನು ''ಸೃಷ್ಟಿಸಲು'' ಸಾಧ್ಯ. ಈ ವಸ್ತುಗಳು ಎಲ್ಲಿರುತ್ತವೆ? ಕೈಯ ತೋಳುಗಳಲ್ಲಿ, ಕಳ್ಳ ಜೇಬುಗಳಲ್ಲಿ, ಕರಡಿರೋಮದಂತೆ ಉದ್ದವಾಗಿ ಬೆಳೆದಿರುವ ಕೂದಲುಗಳ ಹಿಂದೆ! ಕೆಲವೊಮ್ಮೆ, ಇವರ ಸಹಾಯಕರ ಕೈಯಿಂದಲೂ ಕೂಡಾ!

ಕೆಲವು ವರ್ಷಗಳ ಹಿಂದೆ, ಇದೇ ಸತ್ಯನಾರಾಯಣ ರಾಜು ಕೈಗೆ, ಆತನ ಸಹಾಯಕ ರಾಧಾಕೃಷ್ಣ, ಬಂಗಾರದ ಚೈನೊಂದನ್ನು ಕೊಡುವುದನ್ನು ದೂರದರ್ಶನ ಕ್ಯಾಮೆರಾಗಳು ಚಿತ್ರಿಸಿದ್ದುವು! ಇದು ವಿಚಾರವಾದಿಗಳ ಕೈಗೆ ಸಿಕ್ಕಿ ದೊಡ್ಡ ರಾದ್ಧಾಂತವಾಗಿತ್ತು. ಸ್ವಲ್ಪಸಮಯದ ನಂತರ ಇದೇ ಚೈನು ''ಗಾಳಿಯಿಂದ'' ಸತ್ಯನಾರಾಯಣ ರಾಜು ಕೈಯಲ್ಲಿ 'ಪ್ರತ್ಯಕ್ಷ' ವಾಗಿತ್ತು! ಈ ಫೋಟೋಗಳು ಆಂಧ್ರಪ್ರದೇಶದ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದುವು.

ಈ ಬಾಬಾಗಳು ಬೂದಿಯನ್ನು ಯಾಕೆ ಪ್ರತ್ಯಕ್ಷ ಮಾಡುತ್ತಾರೆ? ಬೂದಿ ಎಂದೊಡನೆ ನಮ್ಮಲ್ಲಿ ಒಂದು ಪವಿತ್ರವಾದ ಭಾವನೆಯುಂಟಾಗುತ್ತದೆ. ನಮ್ಮ ಪವಾಡ ರಹಸ್ಯ ಬಯಲು ಕಾರ್ಯಕ್ರಮಗಳಲ್ಲಿ ಮಾಡುವುದು ಮೊದಲನೆಯದಾಗಿ ಬೂದಿ ಪ್ರತ್ಯಕ್ಷ ಮಾಡುವ ಕೈಚಳಕ. ಇದನ್ನು ಜನಗಳಿಗೆ ಹಂಚುವಾಗ ಭಕ್ತಿಯಿಂದ ಹಣೆಗೆ ಮುಟ್ಟಿಸುತ್ತಾರೆ. ಹೆಚ್ಚಿನವರು ಅದನ್ನು ಬಿಸಾಡದೆ, ಕೈಯಲ್ಲಿ ಹಿಡಿದುಕೊಂಡಿರುತ್ತಾರೆ. ನಾನು ಅದು ಬರೆ ಬೂದಿ. ಅದನ್ನು ಬಿಸಾಡಿಯೆಂದರೂ ಅವರಿಗೆ ಧೈರ್ಯವಿಲ್ಲ! ಇದೊಂದು ಕೆಲವು ವರ್ಷಗಳ ಹಿಂದಿನ ಘಟನೆ. ಖ್ಯಾತ ವಿಚಾರವಾದಿ ಬಿ.ಪ್ರೇಮಾನಂದರು 1982ರಲ್ಲಿ ಮಂಗಳೂರಿಗೆ ಬಂದಾಗ, ನಾವು ಕುಂದಾಪುರದಾಚೆ ಕಾರ್ಯಕ್ರಮ ಕೊಟ್ಟು ಹಿಂದೆ ಬರುತ್ತಿದ್ದೆವು. ರಾತ್ರಿ 11 ಗಂಟೆಗೆ ಡ್ರೈವರ್ ಟೀ ಕುಡಿಯಲು ಕಾರು ನಿಲ್ಲಿಸಿದ. ಆ ಅಂಗಡಿಯಲ್ಲಿ ಬಾಬಾನ ದೊಡ್ಡ ಫೋಟೋ ಇತ್ತು (ಒರಿಜಿನಲ್ ಶಿರಡಿ ಸಾಯಿಬಾಬಾ ಸತ್ಯನಾರಾಯಣ ರಾಜುವಲ್ಲ!). ಆಗ, ನಾನು ಮಿತ್ರ ಪ್ರೇಮಾನಂದರಿಗೆ ತಿಳಿಸಿದೆ. ನೀವು ಬೂದಿ ಮಾಡಿ ಈತನಿಗೆ ಕೊಡಿಯೆಂದು! ಅದಕ್ಕವರು ಹೇಳಿದರು ಮೊದಲು ಆತನ ಹಣ ಕೊಡೆಂದು! ಬಿಲ್ಲು ಚುಕ್ತಾ ಮಾಡಿದ ಬಳಿಕ ಅವರು ಕಾರಿನಿಂದ ಹೊರಬಂದು, ಗಾಳಿಯಲ್ಲಿ ಕೈ ಆಡಿಸಿ, ಬೂದಿ ಸೃಷ್ಟಿ ಮಾಡಿ ಆತನಿಗೆ ಕೊಟ್ಟರು. ಆತ, ಕೂಡಲೇ ಗಲ್ಲಾದಿಂದ ಹೊರಬಂದು ಅವರ ಕಾಲಿಗೆ ಉದ್ದಂಡ ನಮಸ್ಕಾರ ಮಾಡಿದ, ಕೊಟ್ಟ ಬೂದಿಯನ್ನು ತೆಗೆದು ಪೊಟ್ಟಣದಲ್ಲಿ ಕಟ್ಟಿ, ಫೋಟೋ ಹಿಂದೆ ಸಿಕ್ಕಿಸಿದ. ತಾನು ಚಹಾಕ್ಕೆ ಹಣ ಪಡೆದದ್ದು ತಪ್ಪಾಯಿತೆಂದು, ಅದನ್ನು ಹಿಂದೆ ಕೊಡಲು ಬಂದ!

ಇದೇ ರೀತಿ ಬೂದಿ ತೆಗೆದು ಕೆಲವು ಕೇಂದ್ರ-ರಾಜ್ಯ ಮಂತ್ರಿಗಳು, ಎಂಪಿಗಳು, ವಿಜ್ಞಾನಿಗಳನ್ನು ಬೆರಗುಮಾಡಿದ್ದೇನೆ! ಕರ್ನಾಟಕದ ಅಂದಿನ ಮುಖ್ಯಮಂತ್ರಿಯವರಾದ ವೀರಪ್ಪ ಮೊಯಿಲಿಯವರೊಂದಿಗೆ ಕೈಕುಲುಕಿ, ಅದೇ ಕೈಯನ್ನು ಗಾಳಿಯಲ್ಲಿ ಆಡಿಸಿ ವಿಭೂತಿ ಪ್ರತ್ಯಕ್ಷ ಮಾಡಿದಾಗ ಅವರಿಗೆ ಆಶ್ಚರ್ಯ!

ಕೆಲವರಿಗಂತೂ ಈ ಬೂದಿಯಲ್ಲಿ ವಿಶೇಷ ಶಕ್ತಿಯಿರಬೇಕೆಂಬ ಗುಮಾನಿ.

ಮುಖ್ಯಮಂತ್ರಿಗೊಂದು ಬಹಿರಂಗ ಪತ್ರ



ಮಾನ್ಯ ಮುಖ್ಯಮಂತ್ರಿಯವರೆ,

ತಾವು ಹಾಗೂ ಕನ್ನಡ ಚಿತ್ರರಂಗದ ಖ್ಯಾತ ನಟ ರಾಜಕುಮಾರ್‌ರವರು ಇತ್ತೀಚಿಗೆ ಬೆಂಗಳೂರಿನಲ್ಲಿ ನಡೆದ ಕಲ್ಯಾಣಮಂಟಪವೊಂದರ ಉದ್ಘಾಟನಾ ಸಮಾರಂಭದಲ್ಲಿ, ಪುಟ್ಟಪರ್ತಿಯ ಸತ್ಯನಾರಾಯಣ ರಾಜು ಅಲಿಯಾಸ್ ಸತ್ಯಸಾಯಿಬಾಬಾ ಎಂಬ ವ್ಯಕ್ತಿಯ ಶೂನ್ಯದಿಂದ ಬೂದಿ ಉಂಗುರುಗಳ ಸೃಷ್ಟಿಯಿಂದ ಆಶ್ಚರ್ಯಚಕಿತರಾಗಿ, ಆ ವ್ಯಕ್ತಿಯ ಕಾಲಿಗೆರಗಿದಿರೆಂದು ತಿಳಿದುಬಂತು. ಇದಲ್ಲದೆ, ತಾವು ಈ ವ್ಯಕ್ತಿಯೊಂದಿಗೆ ಅಮೆರಿಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ನಿಮ್ಮ ಸಂಬಂಧಿಕರನ್ನು ಗುಣಪಡಿಸುವ ಆಶೀರ್ವಾದ ಬೇಡಿದ್ದೀರೆಂದು ತಿಳಿದುಬಂತು.

ಇಂತಹ ಬೂದಿಬಾಬಾಗಳ ಕಾಲುಗಳಿಗೆ ಎರಗುವುದು ಕರ್ನಾಟಕದ ಜನತೆಯ ಬುದ್ಧಿಗೊಂದು ಅವಮಾನವೆಂದು ನಾವು ಭಾವಿಸುತ್ತೇವೆ. ಈ ವ್ಯಕ್ತಿಯು ರೋಗಗಳನ್ನು ಗುಣಪಡಿಸುವುದಾದಲ್ಲಿ, ನೀವು ನಿಮ್ಮ ಸಂಬಂಧಿಕನನ್ನು ಅಮೆರಿಕಕ್ಕೆ ಚಿಕಿತ್ಸೆಗೆ ಕಳುಹಿಸುವ ಅಗತ್ಯವೇನಿತ್ತು? ಇಲ್ಲಿ ಇಂತಹ ಸಾವಿರಾರು ಮಂದಿ ಬೂದಿಬಾಬಾಗಳಿದ್ದಾರೆ.

ನೀವು ಶೂನ್ಯದಿಂದ ವಸ್ತುಗಳನ್ನು ಸೃಷ್ಟಿಸುವುದನ್ನು ಪವಾಡವೆಂದು ನಂಬಿ, ಇದನ್ನು ಮಾಡಿದಾತನ ಕಾಲಿಗೆರಗುತ್ತೀರಾದರೆ, ನಿಮ್ಮ ಸಮಕ್ಷಮದಲ್ಲಿ ಈ ಐಟಂಗಳನ್ನು ಮಾಡಿತೋರಿಸಲು ಸಿದ್ಧನಿದ್ದೇನೆ. ನೀವು ನನ್ನ ಕಾಲಿಗೆ ಎರಗಬೇಕಾಗಿಲ್ಲ. ಇಂತಹ ವಿಷಯಗಳು ಪವಾಡಗಳಲ್ಲ, ಇವುಗಳನ್ನು ಯಾರೂ ಮಾಡಬಹುದೆಂದು ಒಪ್ಪಿಕೊಂಡರೆ ಸಾಕು!

ಈ ಸಂದರ್ಭದಲ್ಲಿ ಶೂನ್ಯದಿಂದ ವಸ್ತುಗಳನ್ನು ಸೃಷ್ಟಿಸುವವರಿಗೆ ನನ್ನ ಸವಾಲನ್ನು ಪುನರುಚ್ಚರಿಸಬಯಸುತ್ತೇನೆ. ''ನಾನು ಕೇಳಿದ ವಸ್ತುವನ್ನು 30 ಸೆಕೆಂಡುಗಳಲ್ಲಿ ಶೂನ್ಯದಿಂದ ಸೃಷ್ಟಿ ಮಾಡಿ ಕೊಟ್ಟವರಿಗೆ ನನ್ನ ಆಸ್ತಿಯನ್ನೆಲ್ಲಾ ಕೊಟ್ಟು, ಸಾಯುವವರೆಗೆ ಅವರ ಗುಲಾಮನಾಗಿರುತ್ತೇನೆ''. ಈ ಸವಾಲು ಈಗಾಗಲೇ ದೇಶದಾದ್ಯಂತ ಹೆಚ್ಚಿನ ನಿಯತಕಾಲಿಕ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇಂಟರ್‌ನೆಟ್‌ನಲ್ಲೂ ಇದೆ.

ಕೊನೆಯದಾಗಿ ಮುಖ್ಯಮಂತ್ರಿಯವರೆ, ಈ ವ್ಯಕ್ತಿಗೆ ಶೂನ್ಯದಿಂದ ಏನಾದರೂ ವಸ್ತುವನ್ನು ಸೃಷ್ಟಿಸುವ ಶಕ್ತಿ ಇದೆಯಾಗಿದ್ದರೆ, ಬೂದಿ, ಉಂಗುರಗಳನ್ನು ಯಾಕೆ ಸೃಷ್ಟಿಸಬೇಕಾಗಿತ್ತು? ನಿಮ್ಮ ಸಂಬಂಧಿಕನ ಕಾಯಿಲೆ ಗುಣವಾಗುವ ಔಷಧಿಯನ್ನು ಪ್ರತ್ಯಕ್ಷ ಮಾಡಬಹುದಿತ್ತಲ್ಲವೆ? ಯಾ ದೇಶದ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ಯಾವುದಾದರೂ ದಸ್ತಾವೇಜನ್ನು ಬರಿಸಬಹುದಿತ್ತಲ್ಲವೆ?

ಈ ಪತ್ರಕ್ಕೆ ತಮ್ಮ ಉತ್ತರವನ್ನು ಅಪೇಕ್ಷಿಸುತ್ತಿರುವ,

■ **ನರೇಂದ್ರ ನಾಯಕ್**, ಕಾರ್ಯದರ್ಶಿ, ದ.ಕ.ಜಿಲ್ಲಾ ವಿಚಾರವಾದಿ ಸಂಘ
13-9-122012, ವಿಠೋಬ ದೇವಸ್ಥಾನ ರಸ್ತೆ, ಮಂಗಳೂರು-575 006 ದೂರವಾಣಿ : 494379.

ಮಂಗಳೂರಿನ ಬಳಿ, ಕಿನ್ನಿಗೋಳಿಯೆಂಬ ಹಳ್ಳಿಯಲ್ಲಿ ಕಾರ್ಯಕ್ರಮ ಮುಗಿದ ನಂತರ, ಓರ್ವಬಂದು ಬೂದಿಯ ಉಂಡೆ ಕೊಡಬೇಕೆಂದು ಕೇಳಿದ. ಯಾಕಪ್ಪಾ ಎಂದರೆ, ಅದು ಮನೆಯಲ್ಲಿ ಯಾರಿಗಾದರೂ ಕಾಯಿಲೆಯಾದಾಗ ಉಪಯೋಗವಾಗುವುದೆಂದ! ನಾನು ಕೊಡಲು ನಿರಾಕರಿಸಿದೆ. ಇನ್ನೊಂದು ಕಡೆ, ಜಾಥಾ ಹೊರಟು ಕೆಲವು ಕಡೆ ಕಾರ್ಯಕ್ರಮಗಳನ್ನು ಕೊಟ್ಟು ಬಂದಿದ್ದೆ. ಅಲ್ಲಿ ಎಷ್ಟು ಸಫಲರಾಗಿದ್ದೇವೆಂಬುದಕ್ಕೆ ಇದೇ ಉದಾಹರಣೆ! ನೋಡಿದ ಅನಕ್ಷರಸ್ಥನೊಬ್ಬನ ಪ್ರತಿಕ್ರಿಯೆ; ''ಇವರು ಮಾಡುವುದೆಲ್ಲಾ ನಿಜವಾ? ಖಂಡಿತವಾಗಿಯೂ ಇಲ್ಲ! ಆ ಕಾರ್ಯಕ್ರಮದ ಮೊದಲು ಬೂದಿ ಕೊಡುತ್ತಾರಲ್ಲ, ಅದನ್ನು ತೆಗೆದುಕೊಂಡವ ಮತ್ತೆ ಅವರು ವಶೀಕರಣ ಮಾಡಿದಂತೆ! ಅವರು ಹೇಳುವುದೆಲ್ಲಾ ಸತ್ಯವೆಂದು ನಂಬುತ್ತಾನೆ!''

ಇಂತಹ ಬೂದಿಬಾಬಾಗಳ ಬಲೆಗಳಲ್ಲಿ ನಾವೇಕೆ ಬೀಳುತ್ತೇವೆ? ನಮ್ಮನ್ನಾಳುತ್ತಿರುವವರಿಗೆ ಸ್ವಲ್ಪವಾದರು ಬುದ್ಧಿಯಿಲ್ಲವೆ? ಎಂಬ ಪ್ರಶ್ನೆಯನ್ನು ನಾವು ಕೇಳಬೇಕಾಗಿದೆ. ಕೆಲವೊಮ್ಮೆ ಇದು ನಾಟಕದಂತೆ ಕಂಡರೂ, ಆತನ ಭಕ್ತರಿಂದ ಬರುವ ನೂರಾರು ಪತ್ರಗಳು, ಈ ಬಾಬಾಗಳ ಹಿಂದಿರುವ ಮಾಫಿಯಾ ಗ್ಯಾಂಗುಗಳಿಗೆ ಸಾಕ್ಷಿ. ಈತನ ಬಗ್ಗೆ ಬರೆದಾಗ, ಅಂಚೆಯ ಮೂಲಕ ಹಲವಾರು ಪತ್ರಗಳು ಬರುತ್ತವೆ. ಬೈದು ಫೋನ್ ಕರೆಗಳೂ ಬರುತ್ತಿದ್ದವು. ಆದರೆ ಈಗ ಕಾಲರ್ ಲೈನ್ ಐಡೆಂಟಿಫಿಕೇಶನ್ ಬಂದ ಮೇಲೆ, ಫೋನ್ ಕರೆಗಳಿಲ್ಲ. ಎರಡು ಬಾರಿ ನನ್ನ ದ್ವಿಚಕ್ರವಾಹನದ ಹಿಂದಿನ ಬ್ರೇಕ್ ಕೇಬಲ್ ತುಂಡರಿಸಲ್ಪಟ್ಟು, ಕೆಲವೇ ಎಳೆಗಳ ಮೇಲೆ ನಿಲ್ಲಿಸಲ್ಪಟ್ಟಿದೆ. ಕಾರಣ ಅದನ್ನು ಓಡಿಸಿ, ಜೋರಾಗಿ ಬ್ರೇಕ್ ಹಾಕಿದಾಗ ಅದು ಪೂರ್ತಿಯಾಗಿ ತುಂಡಾಗಿ, ನಾನು ಅಪಘಾತಕ್ಕೀಡಾಗಿ ಸಾಯಲಿ ಎಂದು! ಹಲವಾರು ಬಾರಿ ಹಲ್ಲೆಗಳೂ ನಡೆದಿವೆ. ಈ ಮೂಢನಂಬಿಕೆಗಳ ಪ್ರಚಾರ ಮಾಡುವವರಿಗೆ ಇರುವ ಅಪಾಯಕಾರಿ ಶಕ್ತಿಗಳು ಏನನ್ನೂ ಮಾಡಲು ಹೇಸಲಿಕ್ಕಿಲ್ಲವೆಂಬುದಕ್ಕೆ ಇದೇ ಸಾಕ್ಷಿ.

ಶೂನ್ಯದಿಂದ ವಸ್ತುಗಳನ್ನು ಸೃಷ್ಟಿ ಮಾಡುವವರಿಗೆ ನನ್ನ 13 ಪಂಥಾಹ್ವಾನಗಳಲ್ಲಿ 5ನೆಯದು : ''ನಾನು ಕೇಳಿದ ವಸ್ತುವನ್ನು ಶೂನ್ಯದಿಂದ 10 ಸೆಕೆಂಡುಗಳಲ್ಲಿ ಸೃಷ್ಟಿಸಿ ಕೊಡುವುದು''. ಇದನ್ನು ಮಾಡಿದವರಿಗೆ ನಾನು ನನ್ನ ಆಸ್ತಿಯನ್ನೆಲ್ಲಾ ಕೊಟ್ಟು, ಸಾಯುವವರೆಗೆ ಗುಲಾಮನಾಗಿರುತ್ತೇನೆಂದು ತಿಳಿಸಿ 10 ವರ್ಷವಾಯಿತು. ಇವತ್ತಿನವರೆಗೆ ಯಾರೂ ಅದನ್ನು ಸ್ವೀಕರಿಸಿಲ್ಲ. ಈ ಸವಾಲು ಈಗಾಗಲೇ, ಭಾರತದ ಎಲ್ಲಾ ಪ್ರಮುಖ ನಿಯತಕಾಲಿಕಗಳಲ್ಲೂ, ಹೆಚ್ಚಿನ ಪತ್ರಿಕೆಗಳಲ್ಲೂ ಪ್ರಕಟವಾಗಿದೆ.

ಆದರೆ, ಸತ್ಯನಾರಾಯಣ ರಾಜುವಿನ ಭಕ್ತರು, ಈ ಸವಾಲನ್ನು ಸ್ವೀಕರಿಸುವ ಬದಲು ಪುಟ್ಟಪರ್ತಿಯಲ್ಲಿ ನಡೆಯುವ ಸಮಾಜ ಸೇವೆ, ಉತ್ತಮ ಕೆಲಸ, ಇತ್ಯಾದಿಗಳನ್ನು ನೋಡಬೇಕೆಂದು ಹೇಳುತ್ತಿರುತ್ತಾರೆ. ಎಲ್ಲಾ ತಿಳುವಳಿಕೆ, ಜ್ಞಾನದ ಭಂಡಾರವಾಗಿರುವ ಸತ್ಯನಾರಾಯಣ ರಾಜು ಯಾಕೆ ಶಾಲೆ-ಕಾಲೇಜು-ವಿ.ವಿ.ಗಳನ್ನು ನಡೆಸಬೇಕು? ಅಲ್ಲಿ ಶಿಕ್ಷಕರೇಕೆ? ಆತನೇ ತನ್ನ ಪವಾಡ ಸದೃಶ ಶಕ್ತಿಯ ಮೂಲಕ, ಈ ಜ್ಞಾನವನ್ನು ವಿದ್ಯಾರ್ಥಿಗಳ ತಲೆಗೆ ತುಂಬಿಸಬಾರದೆ? ಈತ ಕೊಡುವ ಬೂದಿಯಿಂದ ಏನೇನೊ ಘನಘೋರ ಭಯಂಕರ ರೋಗಗಳು ಗುಣವಾಗಿರುವಾಗ, ಇವುಗಳ ಚಿಕಿತ್ಸೆಗೆ ಆಸ್ಪತ್ರೆಗಳೇಕೆ? ದೊಡ್ಡ ಭರಣಿಯೊಳಗೆ ಬೂದಿ ತುಂಬಿಟ್ಟು, ರೋಗಿಗಳಿಗೆ ಅದನ್ನು ಹಚ್ಚಿದರೆ ಸಾಕಾಗದೆ?

ಇದಕ್ಕಿಂತಲೂ ಮುಖ್ಯವಾದ ವಿಷಯವೇನೆಂದರೆ, ಶೂನ್ಯದಿಂದ ವಸ್ತುಗಳನ್ನು ನಿಜವಾಗಿಯೂ ಪ್ರತ್ಯಕ್ಷಮಾಡುವ ಶಕ್ತಿ ಆತನಲ್ಲಿದೆಯಾದರೆ, ಅದನ್ನು ಯಾಕೆ ವೈಜ್ಞಾನಿಕ ಪರೀಕ್ಷೆಗೊಳಪಡಿಸಬಾರದು? ಮುಂದೆ ಇದೇ ಶಕ್ತಿಯನ್ನು ವಿಶ್ಲೇಷಿಸಿ ವಿಜ್ಞಾನಿಗಳು ಹೊಸದಾದ ಉಪಕರಣಗಳನ್ನು ಸಿದ್ಧಪಡಿಸಿ, ಜಗತ್ತಿನಲ್ಲಿ ವಸ್ತುಗಳ ಸಾಗಾಟದ ತಂತ್ರಜ್ಞಾನದಲ್ಲಿ ಕ್ರಾಂತಿ ಮಾಡಬಹುದಿತ್ತಲ್ಲವೆ?

ಈಗ ಬೂದಿಬಾಬಾ ಹಾಗೂ ಆತನ ಭಕ್ತರು ಈ ಪ್ರಶ್ನೆಗೆ ಉತ್ತರಿಸಲಿ. ■

ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಮತ್ತು ಮಾಂತ್ರಿಕ ಉಂಗುರ

ಕರ್ನಾಟಕದ ಮುಖ್ಯಮಂತ್ರಿಯಾಗಿ ಸಂಭ್ರಮಿಸುತ್ತಿರುವ ಎಸ್.ಎಂ. ಕೃಷ್ಣ ಸಮಾರಂಭವೊಂದರಲ್ಲಿ ಸಾಯಿಬಾಬಾನಿಂದ ಮಾಂತ್ರಿಕ ಉಂಗುರ ಪಡೆದಿರುವುದು ಮತ್ತು ಕರ್ನಾಟಕದ ನಟಸಾರ್ವಭೌಮರಾಗಿರುವ ಡಾ. ರಾಜ್‌ಕುಮಾರ್ ಬೂದಿ ಸ್ವೀಕರಿಸಿರುವುದು ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯಾಯಿತು.

ಸಾಯಿಬಾಬಾನಿಂದ ಮಾಂತ್ರಿಕ ಉಂಗುರ ಸ್ವೀಕರಿಸಿದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಈ ಚಮತ್ಕಾರದ ಪವಾಡಶಕ್ತಿಗೆ ರೋಮಾಂಚಿತರಾಗಿ ದಿಂಡುರುಳಿ ಕರ್ನಾಟಕದ 5 ಕೋಟಿ ಜನರ ಯೋಗ ಕ್ಷೇಮವನ್ನು ತಂದೆ ತಾಯಿಯಂತೆ ನೀವೇ ಕಾಪಾಡಬೇಕೆಂದು ಬಾಬಾ ಅವರನ್ನು ಯಾಚಿಸಿರುವುದು ಕರ್ನಾಟಕದ ಜನತೆಗೆ ಮಾಡಿದ ದೊಡ್ಡ ಅವಮಾನವಾಗಿದೆ. ಸ್ವಾಭಿಮಾನವಿಲ್ಲದ ಮತ್ತು ರಾಜಕೀಯ ಇಚ್ಛಾಶಕ್ತಿಯ ಸಂಕಲ್ಪವಿಲ್ಲದ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಸಾರಾಸಗಟಾಗಿ ಕರ್ನಾಟಕದ ಜನತೆಯ ಮಾನ ಮರ್ಯಾದೆಯನ್ನು ಒಂದು ಯಕಶ್ಚಿತ್ ಉಂಗುರಕ್ಕೆ ಒಬ್ಬ ನಯವಂಚಕ ಬಾಬಾನಿಗೆ ಒತ್ತೆ ಇಟ್ಟಿರುವುದು ಅತ್ಯಂತ ಹೇಯವಾದ ನಡವಳಿಕೆಯಾಗಿದೆ. ತನ್ನನ್ನು ಮುಖ್ಯಮಂತ್ರಿಯ ಸ್ಥಾನಕ್ಕೆ ಆಯ್ಕೆ ಮಾಡಿದ ಸೆಕ್ಯೂಲರ್ ಪ್ರಜಾಪ್ರಭುತ್ವದ ಗೌರವವನ್ನು ಮತ್ತು ಜನತೆಯ ಕಲ್ಯಾಣವನ್ನು ನೋಡಿಕೊಳ್ಳುವ ಜವಾಬ್ದಾರಿಯ ಮಾನವಂತ ಸರ್ಕಾರ ಕೊಡಲಾಗದಿದ್ದರೆ ಮುಖ್ಯಮಂತ್ರಿಯ ಸ್ಥಾನದಿಂದ ತೊಲಗುವುದು ಒಳ್ಳೆಯದು.

ಪಂಚತಾರಾ ಸಂಸ್ಕೃತಿಯ ಆಧುನಿಕ ಮನುಷ್ಯನಂತೆ ಪೋಸ್ ಕೊಡುವ ಎಸ್.ಎಂ. ಕೃಷ್ಣ ಕಂಪ್ಯೂಟರ್ ತಂತ್ರಜ್ಞಾನದಿಂದ ಕರ್ನಾಟಕದ ಆಡಳಿತ ಮತ್ತು ಅಭಿವೃದ್ಧಿಯಲ್ಲಿ ಕ್ಷಿಪ್ರಕ್ರಾಂತಿ ಮಾಡುವುದಾಗಿ ಹೇಳುತ್ತಾ ಸಾಯಿಬಾಬಾನ ಗುಲಾಮನಂತೆ ನಡೆದುಕೊಂಡಿರುವುದು ವಿಪರ್ಯಾಸದ ಸಂಗತಿಯಾಗಿದೆ. ವೈಜ್ಞಾನಿಕ ಮತ್ತು ವೈಚಾರಿಕ ಪ್ರಬುದ್ಧತೆ ಇಲ್ಲದ ಎಸ್.ಎಂ.ಕೃಷ್ಣ ಅವರ ಬಾಲಿಶ ನಡವಳಿಕೆಯ ಮೌಢ್ಯ ಕರ್ನಾಟಕದ ಜನರ ಮೇಲೆ ಸವಾರಿ ಮಾಡುವಂತೆ ತೋರುತ್ತದೆ.

ಮುಖ್ಯಮಂತ್ರಿಯ ಅಧಿಕೃತ ನಿವಾಸ 'ಅನುಗ್ರಹ'ವನ್ನು 50 ಲಕ್ಷ ರೂಪಾಯಿ ವೆಚ್ಚದಲ್ಲಿ ವಾಸ್ತುವಿನ ಮೌಢ್ಯಕ್ಕೆ ಅಪವ್ಯಯ ಮಾಡುತ್ತಿರುವುದು ಮತ್ತು ಯಮಗಾತ್ರದ ಸಚಿವ ಸಂಪುಟವನ್ನು ರಚಿಸಿ ಯದ್ವಾತದ್ವಾ ಖಾತೆಗಳನ್ನು ಹಂಚಿ ಪರದಾಡುತ್ತಿರುವುದು ಕೃಷ್ಣ ಅವರ ಅಪಕ್ವ ರಾಜಕೀಯ ಪರಿಜ್ಞಾನವನ್ನು ಪ್ರತಿಬಿಂಬಿಸುತ್ತದೆ.


ಕೃಷ್ಣ ಅವರ ಮಂತ್ರಿಮಂಡಲದ ಅನೇಕ ಸಚಿವರು ಮುಠ್ಠಾಳರಂತೆ ವರ್ತಿಸುತ್ತಾ ಭೇತಾಳಗಳಂತೆ ವಾಸ್ತುವಿನ ಬೆನ್ನು ಹತ್ತಿರುವುದು ಹಾಸ್ಯಾಸ್ಪದವಾಗಿದೆ. ವಿಧಾನಸೌಧವನ್ನು ತಮ್ಮ ಸ್ವಂತ ಜಹಗೀರ್ ಎಂದು ತಿಳಿದಿರುವ ಈ ಮೂರ್ಖರು ವಿಧಾನಸೌಧದಲ್ಲಿ ಮಾಡಿರುವ ಹೋಮ ಹವನಗಳ ಕುಂಕುಮಾರ್ಚನೆಯಿಂದ ಸೆಕ್ಯೂಲರ್ ಸರ್ಕಾರದ ವಿಧಾನಸೌಧಕ್ಕೆ ಶನಿ ಹಿಡಿದಂತೆ ಕಾಣುತ್ತದೆ. ಪುರೋಹಿತರು, ಜ್ಯೋತಿಷ್ಯದವರು ವಿಧಾನ ಸೌಧದಲ್ಲಿ ವಿಜೃಂಭಿಸಿರುವುದು ಮತದಾರರಿಗೆ ಮಂಕುಬೂದಿ ಎರಚಲು ಸಜ್ಜಾಗುತ್ತಿರುವುದಕ್ಕೆ ಸಾಕ್ಷಿಯಾಗಿದೆ.

ಎಸ್.ಎಂ.ಕೃಷ್ಣ ಮತ್ತು ಅವರ ಮಂತ್ರಿಮಂಡಲದ ಸದಸ್ಯರು ಈ ರೀತಿ ಮೂರ್ಖ ಶಿಖಾಮಣಿಗಳಂತೆ ವರ್ತಿಸುತ್ತಿರುವುದನ್ನು ನೋಡಿದರೆ ಇವರು ಕರ್ನಾಟಕ ಜನತೆಗೆ ಎಂತಹ ಮಾನವಂತ ಸರ್ಕಾರಗಳನ್ನು ಕೊಡುತ್ತಾರೆಂಬುದನ್ನು ಕಲ್ಪಿಸಿಕೊಳ್ಳಬಹುದು.

ಅನೇಕ ವಿವಾದಗಳ ಸುಳಿಯಲ್ಲಿ ಸಾಯಿಬಾಬಾ ಕುಖ್ಯಾತರಾದರೂ ಉನ್ನತ ಅಧಿಕಾರದಲ್ಲಿರುವ ರಾಜಕೀಯ ವ್ಯಕ್ತಿಗಳ ಒಡನಾಟದಲ್ಲಿ ವಿಜೃಂಭಿಸುತ್ತಾ ಉಂಗುರ, ವಾಚು, ಬೂದಿಗಳ ಚಮತ್ಕಾರದ ಕೈಚಳಕವನ್ನು ತೋರಿಸುತ್ತಾ ಪಟ್ಟಭದ್ರ ಹಿತಾಸಕ್ತಿಗಳನ್ನು ಕಾಪಾಡುವ ದಂಧೆಯನ್ನು ಮುಂದುವರಿಸುತ್ತಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ.

ಮುಖ್ಯಮಂತ್ರಿಯ ಸ್ಥಾನವನ್ನು ಅಲಂಕರಿಸಿರುವ ಎಸ್.ಎಂ.ಕೃಷ್ಣ ಅವರಿಗೆ





ಮಾಂತ್ರಿಕ ಉಂಗುರಕ್ಕೆ ಕರ್ನಾಟಕದ ಜನತೆಯ ಮರ್ಯಾದೆ ಮಾರಲು ನಿಮಗೆ ಅಧಿಕಾರ ಕೊಟ್ಟವರು ಯಾರು?

ಈ ಬಗ್ಗೆ ತಿಳುವಳಿಕೆ ಇಲ್ಲದಿರುವುದು ಆಶ್ಚರ್ಯದ ಸಂಗತಿಯಾಗಿದೆ. ಮುಖ್ಯಮಂತ್ರಿಯವರಿಗೆ ಚಿನ್ನದ ಉಂಗುರವನ್ನು ದಯಪಾಲಿಸಿ, ಡಾ. ರಾಜಕುಮಾರ್ ಅವರಿಗೆ ಬೂದಿ ಕೊಟ್ಟ ಚಮತ್ಕಾರದ ರಹಸ್ಯವೇನು? ತಂದಿದ್ದ ಒಂದು ಚಿನ್ನದ ಉಂಗುರ ಅಧಿಕಾರದಲ್ಲಿರುವ ಕೃಷ್ಣರಿಗೆ ಲಭ್ಯವಾಯಿತು. ಉಳಿದ ಬೂದಿ ರಾಜಕುಮಾರರ ಪಾಲಿಗೆ ಬಂತು.

ಹೆಂಡದ ಮಳಿಗೆಯ ಮಾಲಿಕರಾದ ಆದಿಕೇಶವಲು, ಸಾಯಿಬಾಬಾ ಮತ್ತು ರಾಜಕುಮಾರನನ್ನು ಮುಂದಿಟ್ಟುಕೊಂಡು ಲಾಬಿ ಮಾಡಲು ಈ ಸಮಾರಂಭ ಒಂದು ಕುಂಟುನೆಪ. ಈ ದಂಧೆಯಲ್ಲಿ ಪಳಗಿರುವ ಆಂಧ್ರಮೂಲದ ಆದಿಕೇಶವಲು ಹಿಂದೆ ಹೆಚ್.ಡಿ.ದೇವೇಗೌಡರು ಮುಖ್ಯಮಂತ್ರಿ ಮತ್ತು ಪ್ರಧಾನ ಮಂತ್ರಿಯಾಗಿ ಅಧಿಕಾರದಲ್ಲಿದ್ದ ಕಾಲದಲ್ಲಿ ಅವರನ್ನು ಆಶ್ರಯಿಸಲು ಅವಕಾಶಗಳನ್ನು ಕಲ್ಪಿಸಿಕೊಂಡಂತೆ, ಈಗ ಎಸ್.ಎಂ.ಕೃಷ್ಣ ಅವರನ್ನು ಬಲೆಗೆ ಹಾಕಿಕೊಳ್ಳಲು ಸಾಯಿಬಾಬಾ ದಳ್ಳಾಳಿ ಕೆಲಸ ಮಾಡುತ್ತಿರುವುದೇ ಮಾಂತ್ರಿಕ ಉಂಗುರದ ಚಮತ್ಕಾರವಾಗಿದೆ.

ಕರ್ನಾಟಕದಲ್ಲಿ ಕುಖ್ಯಾತರಾಗಿರುವ ಪುಟ್ಟಪರ್ತಿ ಸಾಯಿಬಾಬಾ ಮತ್ತು ಮೈಸೂರಿನ ಗಣಪತಿ ಸಚ್ಚಿದಾನಂದರ ನಡುವೆ ಉನ್ನತ ರಾಜಕೀಯ ವ್ಯಕ್ತಿಗಳನ್ನು ಮತ್ತು ಬಂಡವಾಳಶಾಹಿಗಳಾದ ಉದ್ಯಮಪತಿಗಳ ಪಟ್ಟಭದ್ರ ಹಿತಾಸಕ್ತಿಗಳನ್ನು ಕಾಪಾಡುವ ದಂಧೆಯಲ್ಲಿ ಪೈಪೋಟಿ ನಡೆಯುತ್ತಿರುವಂತೆ ಕಾಣುತ್ತದೆ.

ಪಿ.ವಿ. ನರಸಿಂಹರಾವ್ ಪ್ರಧಾನಮಂತ್ರಿಯಾಗಿದ್ದ ಕಾಲದಲ್ಲಿ ಅವರ ಏಜೆಂಟರಂತೆ ವರ್ತಿಸುತ್ತಿದ್ದ ಚಂದ್ರಾಸ್ವಾಮಿಯ ವಿದ್ಯಮಾನಗಳು ಬಹಿರಂಗ ವಾದಂತೆ, ಸಾಯಿಬಾಬಾ ಮತ್ತು ಗಣಪತಿ ಸಚ್ಚಿದಾನಂದ ಸ್ವಾಮಿಗಳ ದಂಧೆ ಬಹಿರಂಗವಾಗಬೇಕಾಗಿದೆ. ಇವರ ಪಂಚತಾರಾ ಆಶ್ರಮಗಳನ್ನು ನೋಡಿದರೆ ಸಾಕು ಈ ದೇವಮಾನವರ ಬಂಡವಾಳದ ರಹಸ್ಯ ಬಯಲಾಗುತ್ತದೆ.

ದೆಹಲಿಯ ಕೇಂದ್ರ ಸರ್ಕಾರವನ್ನು ವಶಪಡಿಸಿಕೊಂಡಿರುವ ಸಂಘ ಪರಿವಾರದವರು ಇಂತಹ ಕುಖ್ಯಾತ ಸ್ವಾಮಿಗಳನ್ನು ತಮ್ಮ ರಾಜಕಾರಣಕ್ಕೆ ಬಳಸಿಕೊಳ್ಳುತ್ತಿರುವುದರಿಂದ ಈ ಸ್ವಾಮಿಗಳು ಇನ್ನೂ ವಿಜೃಂಭಿಸುವ ಅವಕಾಶಗಳೇ ಹೆಚ್ಚುತ್ತಿರುವುದು ಆತಂಕಕಾರಿಯಾಗಿದೆ. ಇಂದಿರಾಗಾಂಧಿಯವರ ಕಾಲದಲ್ಲಿ ಧೀರೇಂದ್ರ ಬ್ರಹ್ಮಚಾರಿ ಮೆರೆದಾಡಿದಂತೆ ಕಾಂಗ್ರೆಸ್ ಪಕ್ಷದ ಪ್ರಧಾನಮಂತ್ರಿಗಳು, ಮುಖ್ಯಮಂತ್ರಿಗಳು, ರಾಜ್ಯಪಾಲರು, ರಾಷ್ಟ್ರಪತಿಗಳು ಇಂಥವರನ್ನು ಪ್ರೋತ್ಸಾಹಿಸುತ್ತಾ ಇವರ ದಂಧೆಯಲ್ಲಿ ಫಲಾನುಭವಿಗಳಾಗಿದ್ದಾರೆ. ಈಗಿನ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರೊಬ್ಬರೆ ಸೆಕ್ಯೂಲರ್ ರಾಷ್ಟ್ರದ ಗೌರವ ಕಾಪಾಡುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರನ್ನು ಆಶೀರ್ವದಿಸಲು ಕರ್ನಾಟಕದ ಅನೇಕ ಜಗದ್ಗುರುಗಳು ಕಾಯುತ್ತಿದ್ದಾರೆ. ಈಗಾಗಲೇ ಶೃಂಗೇರಿಗೆ ಹೋಗಿ ಆಶೀರ್ವಾದ ಪಡೆದು ಬಂದಿರುವ ಮುಖ್ಯಮಂತ್ರಿಯವರು, ಕರ್ನಾಟಕದ ಎಲ್ಲ ಮಠಾಧೀಶರಿಂದ ಮತ್ತು ಧರ್ಮಗುರುಗಳಿಂದ ಮಾರ್ಗದರ್ಶನ ಪಡೆಯುವುದಾಗಿ ಘೋಷಿಸಿದ್ದಾರೆ.

ಜಾತ್ಯಾತೀತವಾದ ಮತ್ತು ಧರ್ಮನಿರಪೇಕ್ಷವಾದ ಪ್ರಜಾಪ್ರಭುತ್ವವೆಂದು ಹೇಳಿಕೊಳ್ಳಲು ನಾಚಿಕೆಯಾಗುವಂತಹ ಸ್ಥಿತಿ ಭಾರತದ ರಾಜಕಾರಣದಲ್ಲಿ ನಿರ್ಮಾಣವಾಗಿದೆ. ಜನತಾದಳದವರಾಗಲಿ, ಕಾಂಗ್ರೆಸ್ಸಿನವರಾಗಲಿ ಸಂಘ ಪರಿವಾರದ ಬಿ.ಜೆ.ಪಿ.ಗಿಂತ ಭಿನ್ನ ರೀತಿಯಲ್ಲಿ ವರ್ತಿಸದಿರುವುದರಿಂದ ಧರ್ಮ ನಿರಪೇಕ್ಷ ಪ್ರಭುತ್ವ ಹುಸಿಯಾದಂತೆ ಕಾಣುತ್ತದೆ.

ಭಾರತದಲ್ಲಿ ಸಂಘ ಪರಿವಾರದವರು ರಾಜಕೀಯವಾಗಿ ಬೆಳೆಯಲು ಪರೋಕ್ಷವಾಗಿ ಕಾಂಗ್ರೆಸ್ ಮತ್ತು ಜನತಾದಳ ಸರ್ಕಾರಗಳು ಜವಾಬ್ದಾರವಾಗಿರುವುದು ಇಂತಹ ಜಾತಿ - ಮತ - ಮೌಢ್ಯಗಳ ಕಾರಣದಿಂದ ಎಂಬುದರಲ್ಲಿ ಅನುಮಾನವಿಲ್ಲ. ಇಂತಹ ಹೊಣೆಗೇಡಿ ರಾಜಕೀಯ ಪಕ್ಷಗಳ ವಿದ್ಯಮಾನದಿಂದ ಭಾರತದಲ್ಲಿ ಜಾತೀಯತೆ ಮತ್ತು ಮತಾಂಧತೆ ಎಲ್ಲ ಕ್ಷೇತ್ರಗಳಲ್ಲೂ ತಾಂಡವವಾಡುತ್ತಿದೆ. ಮಠಮಾನ್ಯಗಳು, ಜಗದ್ಗುರುಗಳು ಶ್ರೀಮಂತವಾಗಿ ವಿಜೃಂಭಿಸಲು ಸಾಧ್ಯವಾಗಿದೆ.

ಕರ್ನಾಟಕದ ಪ್ರಜ್ಞಾವಂತ ಜನರು ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರಿಗೆ ಕೇಳಬೇಕಾಗಿದೆ. ''ಮಾಂತ್ರಿಕ ಉಂಗುರಕ್ಕೆ ಕರ್ನಾಟಕದ ಜನತೆಯ ಮರ್ಯಾದೆಯನ್ನು ಮಾರಲು ನಿಮಗೆ ಅಧಿಕಾರ ಕೊಟ್ಟವರು ಯಾರು?''

ಈ ರೀತಿ ಪ್ರಶ್ನಿಸಲಾಗದಿದ್ದರೆ, ಜನ ಸಾಮಾನ್ಯರಿಗೆ ಮಂಕುಬೂದಿ ಎರಚುವ' ನಯವಂಚಕ ಸಾಯಿಬಾಬಾನನ್ನೇ ಮುಖ್ಯಮಂತ್ರಿಯಾಗಿ ಒಪ್ಪಿಕೊಳ್ಳಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ■

■ ಕೆ. ರಾಮದಾಸ್
ಕನ್ನಡ ಪ್ರಾಧ್ಯಾಪಕ
'ಚಾರ್ವಾಕ', 986, ಪಂಚಮಂತ್ರ ರಸ್ತೆ,
ಕುವೆಂಪು ನಗರ, ಮೈಸೂರು- 570 023.



ಪವಾಡ ಪುರುಷರಿಗೆ ಸವಾಲುಗಳು

1976ರ ಇಸವಿಯಿಂದ ದ.ಕ. ಜಿಲ್ಲಾ ವಿಚಾರವಾದಿ ಸಂಘದ ಪರವಾಗಿ ಈ ಸಂಘದ ಕಾರ್ಯದರ್ಶಿಯಾದ ನಾನು, ಪವಾಡ, ಅತೀಂದ್ರಿಯ ಶಕ್ತಿ ಮತ್ತು ಅತಿಮಾನುಷ ಶಕ್ತಿಗಳನ್ನು ಹುಡುಕುತ್ತಿದ್ದೇನೆ. 1989ರಲ್ಲಿ ಇಂತಹ ಶಕ್ತಿಗಳನ್ನು ತೋರಿಸುವವರಿಗೆ ರೂ.25,000ದ ಬಹುಮಾನವನ್ನು ಘೋಷಿಸಿದ್ದೇನೆ. ಈ ಬಹುಮಾನದ ಮೊತ್ತಕ್ಕೆ ಯಾರೂ ಬಾರದ ಕಾರಣ, 1990ರಲ್ಲಿ ಇದನ್ನು ದ್ವಿಗುಣಗೊಳಿಸಿ, ರೂ. 50,000ವನ್ನು ನಿಗದಿ ಮಾಡಲಾಯಿತು. ಈಗಿನವರೆಗೂ ಈ ಪಣಕ್ಕೆ ಯಾರೂ ಮುಂದೆ ಬಾರದ ಕಾರಣ, 1992ರಲ್ಲಿ ನಮ್ಮ ಸಂಘವು ಈ ಹಣದ ಮೌಲ್ಯವನ್ನು ಹೆಚ್ಚಿಸಲು ಆಜ್ಞಾಪಿಸಿದೆ. ತತ್ಕಾರಣ, ಮುಂದೆ ಈ ಕೆಳಗಿನ ಸವಾಲುಗಳಲ್ಲಿ ಯಾವುದಾದರೂ ಒಂದು ಯಾ ಅಧಿಕವನ್ನು ನಮ್ಮ ಶಕ್ತಿಗಳಿಗನುಗುಣವಾಗಿ ಮಾಡಿ ತೋರಿಸಿದಲ್ಲಿ ನನ್ನ ಎಲ್ಲಾ ಲೌಕಿಕ ಸಂಪತ್ತನ್ನು ಪಣವಾಗಿ ಒಡ್ಡಿದ್ದೇನೆ. ಇದಲ್ಲದೆ, ಇದನ್ನು ಮಾಡಿ ತೋರಿಸಿದ ವ್ಯಕ್ತಿ ಹೇಳಿದ ಯಾವುದೇ ಕಾರ್ಯಕ್ಕೆ ನನ್ನ ಉಳಿದ ಜೀವನವನ್ನು ಮೀಸಲಾಗಿಡುತ್ತೇನೆ. ನಾನು ಮುಂದೆ ಸಂಪಾದಿಸಬಹುದಾದ ಯಾವುದೇ ಹಣ, ಆಸ್ತಿ - ಪಾಸ್ತಿಯ ಮೇಲೆ ನನ್ನ ಯಾವುದೇ ಹಕ್ಕಿರದೆ ಅವೆಲ್ಲವೂ ಸವಾಲು ಮಾಡಿ ತೋರಿಸಿದವರಿಗೆ ಮೀಸಲಾಗಿರುತ್ತದೆ (ನನ್ನ ಈಗಿನ ಲೌಕಿಕ ಸಂಪತ್ತಿನ ದೃಢೀಕರಿಸಿದ ಪ್ರಮಾಣ ಪತ್ರವನ್ನು ಆಡಿಟರ್‌ರಿಂದ ಪಡೆಯಬಹುದು. ಇದಕ್ಕೆ ರೂ.250ರ ಶುಲ್ಕವನ್ನು ಮುಂಚಿತವಾಗಿ ಕೊಡತಕ್ಕದ್ದು).

ಮಾಡಿ ತೋರಿಸಬಹುದಾದ ಪವಾಡಗಳು ಯಾ ಅತೀಂದ್ರಿಯ ಶಕ್ತಿಯ ಪ್ರದರ್ಶನಗಳ ಸಾಮಾನ್ಯವಾದ ವಿವರಣೆಗಳು ಕೆಳಗಿವೆ (ವಿವರವಾದ ಶರ್ತಗಳನ್ನು ಇವುಗಳನ್ನು ಪ್ರದರ್ಶಿಸುವ ಮೊದಲು ಬರವಣಿಗೆ ಒಪ್ಪಂದದಲ್ಲಿ ವಿಧಿಸಲಾಗುವುದು).


1. ನೀರಿನ ಮೇಲೆ ಮೂರು ಹೆಜ್ಜೆ ನಡೆಯುವುದು.
2. ನೆಲದಿಂದ 2 ಅಡಿ 20 ಸೆಕೆಂಡುಗಳ ಕಾಲ ತೇಲುವುದು.
3. ಕೆಂಡಗಳ ಮೇಲೆ ಬರಿಗಾಲಿನಲ್ಲಿ 30 ಸೆಕೆಂಡುಗಳ ಕಾಲ ನಿಂತು ಕಾಲಿಗೆ ಯಾವುದೇ ಹಾನಿಯಾಗದಿರುವುದು.
4. ನೀರನ್ನು ಪೆಟ್ರೋಲ್, ದ್ರಾಕ್ಷಾರಸ ಯಾ ಇತರ ಯಾವುದೇ ದ್ರವವನ್ನಾಗಿ ಪರಿವರ್ತಿಸುವುದು.
5. ನಾನು ಕೇಳಿದ ವಸ್ತುವನ್ನು 10 ಸೆಕೆಂಡುಗಳೊಳಗೆ ಶೂನ್ಯದಿಂದ ಸೃಷ್ಟಿಸುವುದು.
6. ಫೋಟೋ ತೆಗೆದ ಬಳಿಕ ನೆಗೆಟಿವ್‌ನಿಂದ ಕಾಣೆಯಾಗುವುದು.
7. ಬೀಗ ಹಾಕಿದ ಕೋಣೆಯಿಂದ ಅದೃಶ್ಯನಾಗುವುದು.
8. ಯಾವುದೇ ಅತೀಂದ್ರಿಯ, ಅತಿಮಾನುಷ ಶಕ್ತಿಯಿಂದ ಲಕೋಟೆಯಲ್ಲಿ ಮೊಹರು ಮಾಡಲಾದ ನೋಟಿನ ನಂಬರನ್ನು ಓದುವುದು.
9. ಮುಂದೆ ನಡೆಯಬಹುದಾದ ನಾವು ತಿಳಿಸಿದ ವಿಷಯವನ್ನು, ನಾವು ತಿಳಿಸಿದ ನಿಖರತೆಗೆ ಅನುಗುಣವಾಗಿ ಮುನ್ಸೂಚಿಸುವುದು.
10. ನಾವು ತೋರಿಸಿದ ನೋಟಿನ ದ್ವಿಪ್ರತಿಯನ್ನು ಸೃಷ್ಟಿಸುವುದು. ಅದರ ಮೌಲ್ಯ ಕ್ರಮಾಂಕವೆಲ್ಲವೂ ಅದೇ ಇರಬೇಕು.
11. ನಾವು ತೋರಿಸಿದ, ನಾವೇ ನಿರ್ಧರಿಸಿದ ರೋಗವುಳ್ಳ 10 ರೋಗಿಗಳಲ್ಲಿ ಕನಿಷ್ಠ ಐದು ಮಂದಿಯನ್ನು ಯಾವುದೇ ಔಷಧ, ಪಥ್ಯಗಳ ನಿರ್ಬಂಧವಿಲ್ಲದೆ, ಬರೇ ಪ್ರಾರ್ಥನೆ ಯಾ ಇತರ ಅತಿಮಾನುಷ ಶಕ್ತಿಯಿಂದ ನಾವು ನಿಖರ ಪಡಿಸಿದ ಅವಧಿಯೊಳಗೆ ಗುಣಪಡಿಸುವುದು.
12. ಕೊಟ್ಟ ಹತ್ತು ಜನ್ಮ ದಿನಾಂಕ, ಸ್ಥಳ ಮತ್ತು ಸಮಯಗಳನ್ನು ಉಪಯೋಗಿಸಿ, ಜಾತಕವನ್ನು ರಚಿಸಿ, ಯಾರು ಗಂಡು, ಯಾರು ಹೆಣ್ಣು, ಯಾರು ಬದುಕಿದ್ದಾರೆ, ಯಾರು ಸತ್ತಿದ್ದಾರೆಂದು 95% ನಿಖರತೆಯ ಮಿತಿಯಲ್ಲಿ ಫಲಜ್ಯೋತಿಷ್ಯದ ಸೂತ್ರಗಳಂತೆ ತಿಳಿಸುವುದು.
13. ಇವಲ್ಲದೆ, ಇವಕ್ಕೆ ಹೊರತಾದ ಅತಿಮಾನುಷ, ಅತೀಂದ್ರಿಯ ಯಾ ಇತರ ಯಾವುದೇ ಪವಾಡ ಸದೃಶ ಶಕ್ತಿಯನ್ನು ಹೊಂದಿರುವ ಯಾ ತೋರಿಸಿಕೊಳ್ಳುವವರು ಆ ಬಗ್ಗೆ ಮೊದಲೇ ನಿಷ್ಕರ್ಷ ಮಾಡಿಕೊಂಡು ಅವುಗಳನ್ನು ತೋರಿಸಲು ಮುಂದಾದಲ್ಲಿ ಅಂತಹವರಿಗೂ ಪಣಗಳನ್ನು ಒಡ್ಡಲಾಗುವುದು. ಪಣದ ಮೊತ್ತ ಇತ್ಯಾದಿಗಳು ಮಾಡಿ ತೋರಿಸಬಹುದಾದ ವಿಷಯಗಳನ್ನು ಹೊಂದಿಕೊಂಡಿರುತ್ತದೆ.

ಶರತ್ತುಗಳು

1. ಪಣವು ಬರೇ ಮೇಲ್ಕಾಣಿಸಲಾದ ಕ್ರಿಯೆಗಳನ್ನು ಮಾಡಿ ತೋರಿಸುವುದಕ್ಕೆ ಸೀಮಿತವಾಗಿದೆ. ಈ ಬಗ್ಗೆ ಯಾವುದೇ ಐತಿಹಾಸಿಕ ಪುರಾವೆಗಳು, ಮುದ್ರಿತ ದಾಖಲೆಗಳು, ಪ್ರಕಟಿತ ಯಾ ಅಪ್ರಕಟಿತ ಸಾಕ್ಷಿ ವೃತ್ತಾಂತಗಳನ್ನು ಸ್ವೀಕರಿಸಲಾಗುವುದಿಲ್ಲ.
2. ಮಾನಸಿಕ ರೋಗಗಳಿಂದ ಬಳಲುವವರು 21 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಯಾ ಇತರರ ಪರವಾಗಿ ಪಣಗಳನ್ನು ಒಡ್ಡುವವರಿಂದ ಸವಾಲುಗಳನ್ನು ಸ್ವೀಕರಿಸಲಾಗುವುದಿಲ್ಲ.
3. ಸಂಬಂಧ ಪಟ್ಟ ಪ್ರಯೋಗವನ್ನು ಮಾಡಿ ತೋರಿಸುವ 24 ಗಂಟೆಗಳ ಮೊದಲು ಎಲ್ಲಾ ಶರತ್ತುಗಳನ್ನು ವಿವರವಾಗಿ ಅಗತ್ಯದ ಮೌಲ್ಯದ ಸ್ಟಾಂಪು ಕಾಗದದ ಮೇಲೆ ದಾಖಲಿಸಿ, ಈ ಬಗ್ಗೆ ಶರತ್ತನ್ನು ರಚಿಸಲಾಗುವುದು.
4. ಪಣವನ್ನೊಡ್ಡುವವರು ಭದ್ರತಾ ಠೇವಣಿಯಾಗಿ ರೂ. 1000ವನ್ನು ನನ್ನಲ್ಲಿ ಇರಿಸಬೇಕು. ಅವರು ಶರ್ತಗಳಿಗನ್ವಯ ಪ್ರಯೋಗವನ್ನು ಮಾಡಿ ತೋರಿಸಿ ಗೆದ್ದಲ್ಲಿ ಮಾತ್ರ ಈ ಹಣವನ್ನು ಹಿಂದಿರುಗಿಸಲಾಗುವುದು. ಇಲ್ಲವಾದಲ್ಲಿ ಈ ಮೊತ್ತವನ್ನು ಕಳಕೊಳ್ಳುತ್ತಾರೆ.
5. ಶರ್ತಗಳಿಗನ್ವಯ ಪ್ರಯೋಗಗಳನ್ನು ಮಂಗಳೂರಿನಲ್ಲಿಯೇ ಪೂರ್ವ ನಿರ್ಧರಿತ ದಿನಾಂಕ ಸಮಯದಂದು ನಡೆಸಲಾಗುವುದು. ಈ ಬಗ್ಗೆ ನಡೆಯುವ ಖರ್ಚು - ವೆಚ್ಚಗಳನ್ನು ಪ್ರಯೋಗವನ್ನು ಮಾಡಿ ತೋರಿಸುವವರೇ ಭರಿಸತಕ್ಕದ್ದು. ಪ್ರಯೋಗ ನಡೆಸುವ ಸಮಯದಲ್ಲಿ ಯಾವುದೇ ಹಾನಿ, ಜೀವ ನಷ್ಟಕ್ಕೆ, ಪಣವೊಡ್ಡಿದ ನಾನು ಜವಾಬ್ದಾರನಲ್ಲ. ಮಂಗಳೂರಿಗೆ ಪ್ರಯಾಣಿಸುವ ಖರ್ಚು, ತಿಂಡಿ, ಊಟ, ವಸತಿ ಯಾ ಯಾವುದೇ ಖರ್ಚಿಗೆ ನಾನು ಜವಾಬ್ದಾರನಲ್ಲ.

ಪವಾಡ ಪುರುಷರು, ಅತಿಮಾನುಷ ಶಕ್ತಿಯುಳ್ಳವರು, ಫಲಜ್ಯೋತಿಷ್ಯರು, ಅತೀಂದ್ರಿಯ ಶಕ್ತಿಯುಳ್ಳವರು ವಿಪುಲವಾಗಿ ಹಬ್ಬಿರುವ ನಮ್ಮ ಕರ್ನಾಟಕ ರಾಜ್ಯದ ಮೂಲೆ-ಮೂಲೆಗಳಿಂದಲೂ ಈ ಸವಾಲುಗಳನ್ನು ಸ್ವೀಕರಿಸುವವರು ಮುಂದೆ ಬಂದಾರೆಂದು ಆಶಿಸುತ್ತೇನೆ.

■ ನರೇಂದ್ರ ನಾಯಕ್



ಏನು ವ್ಯತ್ಯಾಸ ?



ಅನೇಕ ಸಾಯಿಬಾಬಾ ಸಮರ್ಥಕರು ಆತ ಶಿಕ್ಷಣ, ವೈದ್ಯಕೀಯ ಕ್ಷೇತ್ರದಲ್ಲಿ ಮಾಡಿರುವ ಸಮಾಜ ಸೇವೆ ಬಗ್ಗೆ ಗಮನ ಸೆಳೆಯುತ್ತಾರೆ. ಹಾಗೆ ಹೋಲಿಸುವುದಾದರೆ ಕಾಡುಗಳ್ಳ ವೀರಪ್ಪನ್ ಕೂಡ ಸಮಾಜೋದ್ಧಾರಕನೇ! ಇವತ್ತಿಗೂ ಆತನನ್ನು ಬಂಧಿಸಲು ಸಾಧ್ಯವಾಗದ್ದಕ್ಕೆ ಕಾರಣ ಆತ ತನ್ನ ಪ್ರದೇಶದಲ್ಲಿ ಹೊಂದಿರುವ ಜನ ಬೆಂಬಲ. ಆ ಹಳ್ಳಿಗಳ ಬಹುತೇಕ ಬಡಜನರು ಆತನ ನೆರವು ಪಡೆದಿದ್ದಾರೆ. ಆದರೆ ಆತನಿಗೆ ನೆರವು ನೀಡುವ ಶಕ್ತಿ ಎಲ್ಲಿಂದ ಬಂತು ಎಂಬುದು ಬಹುಮುಖ್ಯ ಪ್ರಶ್ನೆ. ಕೊಲೆ, ಕಾಡುಗಳ್ಳತನಗಳಿಂದ ಗಳಿಸಿದ ಸಂಪತ್ತನ್ನು ಆತ ಹಳ್ಳಿಗರಿಗೆ ವಿತರಿಸಿದರೆ, ಬಾಬಾ ಜನರ ಭಾವನಾತ್ಮಕ ನಂಬಿಕೆಗಳನ್ನು ಶೋಷಿಸಿ ಕಲ್ಯಾಣ ಕಾರ್ಯಗಳ ಪೋಸು ಕೊಡುತ್ತಾರೆ. ಜನರನ್ನು ಭಯ, ಭಕ್ತಿಯ ಸರಳುಗಳಲ್ಲಿ ಕಟ್ಟಲು ಅವರು ಬಳಸುವ ತಂತ್ರವೇ ಪವಾಡ!

ದ.ಕ.ಜಿಲ್ಲಾ ವಿಚಾರವಾದಿ ಸಂಘ



ಇದು 1976ರಲ್ಲಿ ಸ್ಥಾಪನೆಯಾಗಿದ್ದು, ಅಂದಿನಿಂದ ಹಲವಾರು ವೈಚಾರಿಕ ಚಟುವಟಿಕೆಗಳಲ್ಲಿ ತೊಡಗಿದೆ. ಸ್ಥಾಪನೆಯ ಸಮಯದಿಂದಲೂ ನರೇಂದ್ರ ನಾಯಕ್ ಅದರ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಮೊದಲನೆಯ ಕಾರ್ಯಕ್ರಮವು ನವಂಬರ್ 1976ರಲ್ಲಿ ಖ್ಯಾತ ವಿಚಾರವಾದಿ ಡಾ. ಎ.ಟಿ.ಕೋವೂರ್‌ರವರ ಪವಾಡ ರಹಸ್ಯ ಬಯಲು ಕಾರ್ಯಕ್ರಮದೊಂದಿಗೆ ಆರಂಭವಾಯಿತು. ನಂತರ, ಹಲವಾರು ಕಡೆ, ಭೂತ-ಪ್ರೇತ-ಕುಟ್ಟಿಚಾತನ್‌ಗಳ ರಹಸ್ಯಗಳನ್ನು ಬಯಲಿಗೆಳೆಯಲಾಯಿತು. ಐವತ್ತಕ್ಕಿಂತಲೂ ಹೆಚ್ಚು ಅಂತರ್ಜಾತೀಯ, ಸರಳ ವಿವಾಹಗಳನ್ನು ಯಾವುದೇ ಧಾರ್ಮಿಕ ವಿಧಿಗಳಿಲ್ಲದೆಯೇ ಏರ್ಪಡಿಸಿದ್ದೇವೆ.

ಮುಂದೆ, 1982, 84, 86ರಲ್ಲಿ ಪೊದನೂರಿನ ಬಿ.ಪ್ರೇಮಾನಂದರವರ ಪವಾಡ ರಹಸ್ಯ ಬಯಲು ಕಾರ್ಯಕ್ರಮಗಳನ್ನು ನಮ್ಮ ಜಿಲ್ಲೆಯಾದ್ಯಂತ ಏರ್ಪಡಿಸಲಾಗಿದೆ. 1987ರಲ್ಲಿ ಬಿ.ಜೆ.ವಿ.ಜೆಯ ಜಾಥಾಪೂರ್ವ ಚಟುವಟಿಕೆಯಾಗಿ ಈ ಕಾರ್ಯಕ್ರಮವನ್ನು ಆರಂಭಿಸಲಾಯ್ತು. ನಂತರ, ಈ ಕಾರ್ಯಕ್ರಮಗಳನ್ನು ಕರ್ನಾಟಕದ ಮೂಲೆ-ಮೂಲೆಗಳಲ್ಲೂ ನಡೆಸಲಾಗಿದೆ.

1989ರ ನಂತರ ಈ ಕಾರ್ಯಕ್ರಮಗಳನ್ನು ನಡೆಸಲು ತರಬೇತಿ ಕೊಡಲು ಆರಂಭಿಸಿದೆವು. ಶೀಘ್ರದಲ್ಲೇ ನರೇಂದ್ರ ನಾಯಕ್‌ರನ್ನು ರಾಷ್ಟ್ರೀಯ ಮಟ್ಟದ ತರಬೇತಿದಾರನನ್ನಾಗಿ ಆಯ್ಕೆ ಮಾಡಲಾಯಿತು. 1999ರ ವರೆಗೆ ದೇಶದ ಹಲವಾರು ರಾಜ್ಯಗಳ ಕಾರ್ಯಕರ್ತರಿಗೆ ಈ ಬಗ್ಗೆ ತರಬೇತಿ ನೀಡುವ ಸುಮಾರು ನೂರರಷ್ಟು ತರಬೇತಿ ಶಿಬಿರಗಳು ನಡೆದಿವೆ. ಸಿಕ್ಕಿಂ, ನಾಗಾಲ್ಯಾಂಡ್, ಮೇಘಾಲಯ, ತ್ರಿಪುರಾ, ಆಸ್ಸಾಂಗಳಲ್ಲಿ, ಮಧ್ಯಪ್ರದೇಶ, ದೆಹಲಿ, ಗೋವಾ, ಕೇರಳ ರಾಜ್ಯಗಳಲ್ಲೂ ತರಬೇತಿ-ಸಾರ್ವಜನಿಕ ಕಾರ್ಯಕ್ರಮಗಳನ್ನು ನೀಡಲಾಗಿದೆ. ಸುಮಾರು 1500ರಷ್ಟು ಇಂತಹ ಕಾರ್ಯಕ್ರಮಗಳು ನಡೆದಿವೆ.

ರಾಷ್ಟ್ರೀಯ ಮಟ್ಟದಲ್ಲಿ ವಿಚಾರವಾದಿ ಸಂಘಟನೆಗಳನ್ನು ಒಟ್ಟಾಗಿರಿಸುವ ಹಲವಾರು ಪ್ರಯತ್ನಗಳೂ ನಡೆದಿವೆ. ಇದರಲ್ಲೂ ಈ ಸಂಘದವರು ಸಾಕಷ್ಟು ಮುತುವರ್ಜಿ ವಹಿಸಿದ್ದಾರೆ. ಹಲವಾರು ರಾಷ್ಟ್ರೀಯ ಮಟ್ಟದ ವಿಚಾರಗೋಷ್ಠಿ, ಸಭೆಗಳಲ್ಲಿ ಭಾಗವಹಿಸಿ, ಆಂದೋಲನವನ್ನು ಬಲಪಡಿಸಲು ಯತ್ನಿಸಲಾಗಿದೆ. ಪವಾಡ, ಅತೀಂದ್ರಿಯ, ಅತಿಮಾನುಷ ಶಕ್ತಿಯ ಘಟನೆಗಳನ್ನು ಸಂಶೋಧಿಸಲು ಜಾಗತಿಕ ಮಟ್ಟದ ಸಂಘಟನೆಯಾದ ಸ್ಕೆಪ್ಟಿಕ್‌ಗಳ ಭಾರತದ ಶಾಖೆಯಾಗಿರುವ ಕಮಿಟಿ ಫಾರ್ ಸೈಂಟಿಫಿಕ್ ಇನ್ವೆಸ್ಟಿಗೇಷನ್ ಆಫ್ ದಿ ಪಾರನೋರ್ಮಲ್‌ನ ಸದಸ್ಯರೂ ಆಗಿದ್ದೇವೆ.

ಸಂಘದ ಕಾರ್ಯದರ್ಶಿ, ಪವಾಡ ರಹಸ್ಯ ಬಯಲು, ವಿಚಾರವಾದಿ ಡಾ. ಕೋವೂರ್. ಮೂಢನಂಬಿಕೆಗಳನ್ನು ತೊಲಗಿಸಿ ಇತ್ಯಾದಿ ಪುಸ್ತಕಗಳನ್ನು ಬರೆದಿದ್ದಾರೆ. ಎನ್.ಸಿ.ಎನ್.ಟಿ.ಸಿ. ವತಿಯಿಂದ ಪ್ರಕಟವಾಗಲಿರುವ ಪವಾಡ ರಹಸ್ಯ ಬಯಲು ಕಾರ್ಯಕರ್ತರಿಗೆ ಕೈಪಿಡಿ ಪುಸ್ತಕದ ಹಿಂದಿ-ಇಂಗ್ಲಿಷ್ ಅವತರಣಿಕೆಗಳಲ್ಲಿಯೂ ಸಂಘದಿಂದ ಕೆಲವು ಅಧ್ಯಾಯಗಳನ್ನು ಬರೆಯಲಾಗಿದೆ.

ನರೇಂದ್ರ ನಾಯಕ್, ಭಾರತೀಯ ಜನವಿಜ್ಞಾನ ಜಾಥಾದ ದ.ಕ.ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿದ್ದು, ವಿಜ್ಞಾನ ಕಾರ್ಯಕರ್ತರ ಸಮೂಹದ ಕಾರ್ಯಕರ್ತರಾಗಿದ್ದಾರೆ. ■



ಸತ್ಯಸಾಯಿಬಾಬಾ ಜತೆಗಿನ ಜಟಾಪಟಿ

ಎಪ್ಪತ್ತರ ದಶಕದಲ್ಲಿಯೇ, ಸಾಯಿಬಾಬಾ ಜತೆಗೆ ಜಟಾಪಟಿಗೆ ಇಳಿದ ಖ್ಯಾತ ವಿಚಾರವಾದಿ ಡಾ. ಎಚ್.ನರಸಿಂಹಯ್ಯನವರು ಪವಾಡ ಮತ್ತು ಮೂಢ ನಂಬಿಕೆಗಳ ತನಿಖಾ ಸಮಿತಿಗೆ ಅಧ್ಯಕ್ಷರಾಗಿದ್ದರು. ಈ ಸಮಿತಿ ಸಾಯಿಬಾಬಾರನ್ನು ಕಾಣಲು ನಡೆಸಿದ ವಿಫಲ ಯತ್ನದ ವಿವರಗಳನ್ನು ಎಚ್.ಎನ್. ಮಾತಿನಲ್ಲೇ ಕೇಳಿ.

ಸಾಯಿಕೃಷ್ಣನನ್ನು ಬಹಿರಂಗಗೊಳಿಸಿದ ಮೇಲೆ ಸಹಜವಾಗಿ ನಮ್ಮ ಗಮನವು ವಾಚು, ಪ್ರತಿಮೆ, ಚಿನ್ನದ ಸರಗಳನ್ನು ಸೃಷ್ಟಿಸುವ, ನೀರನ್ನು ಪೆಟ್ರೋಲಾಗಿ ಪರಿವರ್ತಿಸುವ, ವಾಸಿಯಾಗದ ರೋಗಗಳನ್ನು ವಾಸಿಮಾಡುವ ಇಂಥ ಎಲ್ಲ ಬಗೆಯ ಶಕ್ತಿಗಳನ್ನು ಪಡೆದಿರುವದಾಗಿ ಪ್ರಸಿದ್ಧರಾದ ಶ್ರೀ ಸತ್ಯಸಾಯಿಬಾಬಾ ಅವರ ಕಡೆಗೆ ತಿರುಗಿತು. ಇವರು ತಮ್ಮ ಉತ್ಸಾಹೀ ಅನುಯಾಯಿಗಳಿಂದ ದೇವರು ಅಥವಾ ದೇವಮಾನವ ಎಂದು ಪರಿಗಣಿತರಾದವರು. ಇವರು ಪವಾಡ ನಡೆಸುವುದಕ್ಕಾಗಿ ರಾಷ್ಟ್ರೀಯವಾಗಿ ಮತ್ತು ಅಂತರಾಷ್ಟ್ರೀಯವಾಗಿ ಪ್ರಸಿದ್ಧರಾದವರು. ಇವರು ನಡೆಸುವ ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ, ಬೆಂಗಳೂರಿನಿಂದ ಎಂಟುಮೈಲು ದೂರದ ವೈಟ್‌ಫೀಲ್ಡ್‌ನಲ್ಲಿಯ ಕಾಲೇಜು ಮತ್ತು ಅಲ್ಲಿಯೇ ಇರುವ ಅವರ ವಾಸಸ್ಥಳವೂ ಸೇರಿವೆ. ಇವರಿಗೆ ಸಾಕಷ್ಟು ಸಂಖ್ಯೆಯ ಅನುಯಾಯಿಗಳಿದ್ದು ಅವರಲ್ಲಿ ಬಹಳಷ್ಟು ಜನರು ಸಾರ್ವಜನಿಕ ಜೀವನದಲ್ಲಿ ಉನ್ನತ ಸ್ಥಾನಗಳನ್ನು ಹೊಂದಿದವರು. ಅವರ ಅನುಯಾಯಿಗಳಲ್ಲಿ ಕೆಲವರು ಸುಪ್ರಸಿದ್ಧ ವಿಜ್ಞಾನಿಗಳೂ ಇದ್ದಾರೆ. ಆದ್ದರಿಂದ ಸಹಜವಾಗಿ ಸಮಿತಿಯು ತನ್ನ ಗಮನವನ್ನು ಇಂಥ ದೇವಮಾನವರ ಮೇಲೆ ಕೇಂದ್ರೀಕರಿಸಬೇಕಾಯಿತು.

ವಿಜ್ಞಾನದ ವಿಧಾನಗಳನ್ನು ಉಪಯೋಗಿಸಿ ನಿಯಂತ್ರಿತ ಪರಿಸ್ಥಿತಿಗಳಲ್ಲಿ ಅವರ ಮೇಲೆ ತನಿಖೆ ನಡೆಸುವುದಕ್ಕೆ ಅವರ ಸಹಕಾರಕ್ಕಾಗಿ ವಿನಂತಿಸಿಕೊಂಡು ಶ್ರೀ ಸತ್ಯಸಾಯಿಬಾಬಾ ಅವರಿಗೆ ಸಮಿತಿಯ ಚೇರ್‌ಮನ್ನರು ಮೂರು ಪತ್ರಗಳನ್ನು ಬರೆದರು.

ಮೊದಲ ಪತ್ರ (ಅಂಡರ್ ಸರ್ಟಿಫಿಕೆಟ್ ಆಫ್ ಪೋಸ್ಟಿಂಗ್)

ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು-560 056.
ಸಂ. ವಿಸಿಪಿ 73/76, ದಿನಾಂಕ 2ನೆಯ ಜೂನ್ 1976

ಇವರಿಗೆ
ಶ್ರೀ ಸತ್ಯಸಾಯಿಬಾಬಾ, ಬೃಂದಾವನ,
ಕಾಡುಗೋಡಿ ಪೋಸ್ಟ್, ವೈಟ್‌ಫೀಲ್ಡ್, ಬೆಂಗಳೂರು ಜಿಲ್ಲೆ

ಪ್ರೀತಿಯ ಸ್ವಾಮೀಜಿ,

ನಿಮಗೆ ಗೊತ್ತಿರುವಂತೆ ನಮ್ಮ ದೇಶದಲ್ಲಿ ಸಾಕಷ್ಟು ಜನರು ತಮ್ಮಲ್ಲಿ ಪವಾಡ ನಡೆಸುವ ಶಕ್ತಿಯಿರುವುದಾಗಿ ಸಾರಿಕೊಂಡಿದ್ದಾರೆ. ಅವರಲ್ಲಿಯೇ ಕೆಲವರು ಶೂನ್ಯದಿಂದ ವಸ್ತುಗಳನ್ನು ಸೃಷ್ಟಿಸುವರೆಂಬುದನ್ನು ಸಹ ನಂಬಲಾಗಿದೆ. ಶೂನ್ಯದಿಂದ ವಸ್ತುಗಳನ್ನು ಸೃಷ್ಟಿಸುವದು ವಿಜ್ಞಾನದ ಎಲ್ಲ ನಿಯಮಗಳನ್ನು ಉಲ್ಲಂಘಿಸುವ ಅಸಹಜ ಚಮತ್ಕಾರ ಎಂಬ ವಿಚಾರದಲ್ಲಿ ನೀವು ನನ್ನೊಂದಿಗೆ ಸಹಮತಿಸುವದಾಗಿ ನನಗೆ ಖಚಿತವಿದೆ. ವಾಸ್ತವವಾಗಿ ಜಗತ್ತಿನಾದ್ಯಂತ ಇಲ್ಲಿಯವರೆಗೆ ವಿಜ್ಞಾನ ಕ್ಷೇತ್ರದಲ್ಲಿ ನಡೆದಿರುವ ಎಲ್ಲ ಸಂಶೋಧನೆಗಳು ಮತ್ತು ಆವಿಷ್ಕಾರಗಳು ಈ ಚಮತ್ಕಾರಗಳಿಗೆ ಹೋಲಿಸಿದರೆ ಮಂದವಾಗಿ ನಿಕೃಷ್ಟವೆನಿಸಿವೆ. ಸಹಜವಾಗಿಯೇ ನಮ್ಮಲ್ಲಿ ಅನೇಕರು ಈ ಅಸಾಮಾನ್ಯ ಚಮತ್ಕಾರಗಳ ಕುರಿತು ಗಂಭೀರವಾಗಿ ಆಲೋಚನೆಗೆ ತೊಡಗಿದ್ದೇವೆ. ಅಲ್ಲದೆ, ನಮ್ಮ ರಾಷ್ಟ್ರವು ಅನೇಕ ಮೂಢನಂಬಿಕೆಗಳಲ್ಲಿ ಮುಳುಗಿದ್ದು ಜನರ ಮೇಲೆ ಅವುಗಳ ಆಘಾತಕಾರಿ ಪರಿಣಾಮಗಳ ವಿಷಯದಲ್ಲಿ ನಾವು ತುಂಬಾ ಚಿಂತಿತರಾಗಿದ್ದೇವೆ.

ಇತ್ತೀಚೆಗೆ ಬೆಂಗಳೂರು ವಿಶ್ವವಿದ್ಯಾಲಯವು ಪವಾಡಗಳು ಮತ್ತು ಇತರ ಪ್ರಮಾಣಿಸಿ ನೋಡಬಹುದಾದ ಮೂಢನಂಬಿಕೆಗಳನ್ನು ವೈಚಾರಿಕವಾಗಿ ಮತ್ತು ವೈಜ್ಞಾನಿಕವಾಗಿ ತನಿಖೆ ನಡೆಸಲು ಒಂದು ಸಮಿತಿಯನ್ನು ನಿಯಮಿಸಿದೆ. ಈ ತನಿಖೆಯು ದೇವರು ಅಥವಾ ಧರ್ಮದ ವಿರುದ್ಧವಲ್ಲ.

ಸಮಿತಿಯ ಸದಸ್ಯರು ವಿವಿಧ ಕ್ಷೇತ್ರಗಳಿಗೆ ಸಂಬಂಧಪಟ್ಟವರಾಗಿದ್ದು ಇಂಥ ತನಿಖೆಗಳನ್ನು ನಡೆಸುವದಕ್ಕಾಗಿ ಸಾಕಷ್ಟು ಸಮರ್ಥರಾಗಿದ್ದ ಜನರಿಗೆ ಪವಾಡಗಳು ಮತ್ತು ಮೂಢನಂಬಿಕೆಗಳ ಕುರಿತಾದ ಸತ್ಯಾಂಶವನ್ನು ತಿಳಿಯುವದು ಸಾಧ್ಯವಾಗುವದೆಂಬ ತನಿಖೆಯ ಸತ್ಯಾನ್ವೇಷಣೆಯ ಹೊರತಾಗಿ ಬೇರೇನೂ ಅಲ್ಲ.

ನಿಮ್ಮ ಅದ್ಭುತ ಶಕ್ತಿಗಳ ಕುರಿತು ನಾವು ಸಾಕಷ್ಟು ಕೇಳಿದ್ದೇವೆ. ವಾಸ್ತವವಾಗಿ

ನೀವು ನಿಮಗೆ ಕೊಡಮಾಡಲ್ಪಟ್ಟಿರುವ ದಿವ್ಯಶಕ್ತಿಗಳಿಗಾಗಿ ಆ ಶಕ್ತಿಗಳು ನಿಮಗೆ ಅದ್ಭುತಗಳನ್ನು ನಡೆಸಲು ಅದರಲ್ಲೂ ವ್ಯಾಪಕವಾಗಿ ಪ್ರಸಿದ್ಧವಾಗಿರುವ ಶೂನ್ಯದಿಂದ ವಸ್ತುಗಳನ್ನು ಸೃಷ್ಟಿಸಲು ಕಾರಣವಾಗಿವೆ ಎಂಬುದಕ್ಕಾಗಿ ರಾಷ್ಟ್ರೀಯವಾಗಿ ಮತ್ತು ಅಂತರರಾಷ್ಟ್ರೀಯವಾಗಿ ಪ್ರಸಿದ್ಧರಾಗಿದ್ದೀರಿ. ನೀವು ಧರ್ಮ ಪ್ರಸಾರ ಮತ್ತು ಸತ್ಯಕ್ಕೆ ಪ್ರಾಧಾನ್ಯ ನೀಡುವಲ್ಲಿಯೂ ಸಹ ಪ್ರಸಿದ್ಧರಾಗಿದ್ದೀರಿ. ಆದ್ದರಿಂದ ನೀವು ನನಗೆ ಮತ್ತು ಸಮಿತಿಯ ಸದಸ್ಯರಿಗೆ ನಿಮ್ಮನ್ನು ಭೇಟಿಯಾಗುವ ಮತ್ತು ಈ ಎಲ್ಲ ವಿಷಯಗಳನ್ನು ಕುರಿತು ನಿಮ್ಮೊಂದಿಗೆ ಚರ್ಚಿಸುವ ಮತ್ತು ಚೆನ್ನಾಗಿ ಪ್ರತಿಷ್ಠಾಪಿತ ವಿಜ್ಞಾನದ ನಿಯಮಗಳ ಅನುಸಾರ ನಿಯಂತ್ರಿತ ಪರಿಸ್ಥಿತಿಗಳಲ್ಲಿ ಈ ಚಮತ್ಕಾರಗಳನ್ನು ತನಿಖೆ ಮಾಡುವ ಅವಕಾಶವನ್ನು ನೀಡಿದರೆ ನಾನು ನಿಮಗೆ ತುಂಬಾ ಕೃತಜ್ಞನಾಗಿರುತ್ತೇನೆ. ನಿಮ್ಮಷ್ಟು ಯೋಗ್ಯತೆಯುಳ್ಳ ವ್ಯಕ್ತಿ, ಅಪರೂಪದ ದಿವ್ಯಶಕ್ತಿಗಳನ್ನು ಒಂದು ವೇಳೆ ಹೊಂದಿದ್ದರೂ, ನಾವು ನಮ್ಮ ದೇಶದ ಮತ್ತು ಹೊರದೇಶಗಳ ಹೆಚ್ಚಿನ ಸಂಖ್ಯೆಯ ಜನರಿಗೆ ಅತ್ಯಂತ ಪ್ರಯೋಜನವುಳ್ಳ ಅರ್ಥಪೂರ್ಣವಾದ ತನಿಖೆಗಳನ್ನು ನಡೆಸಲು, ಕೆಲವೊಮ್ಮೆ ದೇವರಿಗೆ ಸಮಾನವೆಂದು ಪರಿಗಣಿಸಲ್ಪಡುವ ಸತ್ಯದ ಹೆಸರಿನಲ್ಲಿ ನಿಮ್ಮ ಸಂಪೂರ್ಣವಾದ ಸಹಕಾರವನ್ನು ನೀಡುತ್ತೀರೆಂಬುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ.

ನಿಮ್ಮನ್ನು ಕಾಣುವ ಸಂತೋಷದ ಮತ್ತು ಸೌಲಭ್ಯದ ಅವಕಾಶಕ್ಕಾಗಿ ದಯವಿಟ್ಟು ಸ್ಥಳ, ದಿನಾಂಕ, ವೇಳೆಗಳನ್ನು ನನಗೆ ತಿಳಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಗೌರವಪೂರ್ವಕ ಕೃತಜ್ಞತೆಗಳು

ನಿಮ್ಮ ವಿಶ್ವಾಸದ

ಎಚ್. ನರಸಿಂಹಯ್ಯ

ಉಪಕುಲಪತಿ ಮತ್ತು ಚೇರಮನ್

ಪವಾಡ ಮತ್ತು ಮೂಢನಂಬಿಕೆಗಳ ತನಿಖಾ ಸಮಿತಿ

ಎರಡನೆಯ ಪತ್ರ, (ಅಂಡರ್ ಸರ್ಟಿಫಿಕೆಟ್ ಆಫ್ ಪೋಸ್ಟಿಂಗ್)

ನಂ. ವಿಸಿಪಿ 99/76, ದಿನಾಂಕ 16ನೆಯ ಜೂನ್ 1976

ಪ್ರೀತಿಯ ಸ್ವಾಮೀಜಿ,

ನನ್ನ 1976 ಜೂನ್ ಎರಡನೆಯ ತಾರೀಖಿನ ಪತ್ರ ನಿಮಗೆ ತಲುಪಿರಬೇಕೆಂದು ಆಶಿಸುತ್ತೇನೆ, ನಿಮ್ಮಿಂದ ಯಾವುದೇ ಉತ್ತರ ಬರಲಿಲ್ಲ ಎಂದು ತಿಳಿಯಪಡಿಸಲು ವಿಷಾದಿಸುತ್ತೇನೆ. ದಯವಿಟ್ಟು ನೀವು ಈ ಪತ್ರಕ್ಕೆ ನಿಮಗೆ ಸಾಧ್ಯವಾದಷ್ಟು ಬೇಗ ಅನುಕೂಲಮಾಡಿಕೊಂಡು ಉತ್ತರಿಸಿ ನಿಮ್ಮನ್ನು ನಾವು ಕಾಣಬೇಕಾದ ಸ್ಥಳ, ದಿನಾಂಕ ಮತ್ತು ವೇಳೆಗಳನ್ನು ನಮಗೆ ತಿಳಿಸಿದರೆ ನಾನು ನಿಮಗೆ ಋಣಿಯಾಗಿರುತ್ತೇನೆ. ನಿಮ್ಮ ಸಿದ್ಧ ಆಧಾರಕ್ಕಾಗಿ ಹಿಂದಿನ ಪತ್ರದ ಪ್ರತಿಯೊಂದನ್ನು ಲಗತ್ತಿಸಲಾಗಿದೆ.

ಗೌರವ ಪೂರ್ವಕ ಕೃತಜ್ಞತೆಗಳು

ನಿಮ್ಮ ವಿಶ್ವಾಸದ

ಎಚ್. ನರಸಿಂಹಯ್ಯ


ಮೂರನೆಯ ಪತ್ರ, (ಅಂಡರ್ ಸರ್ಟಿಫಿಕೆಟ್ ಆಫ್ ಪೋಸ್ಟಿಂಗ್)

ನಂ. ವಿಸಿಪಿ 134/76, ದಿನಾಂಕ ಜುಲೈ 5, 1976

ಪ್ರೀತಿಯ ಸ್ವಾಮೀಜಿ,

ನನ್ನ 1976ರ ಜೂನ್ 2ನೆಯ ತಾರೀಖಿನ ಪತ್ರಕ್ಕೆ ನಿಮ್ಮಿಂದ ಉತ್ತರ ಇಲ್ಲದಿರುವದು ಅತ್ಯಂತ ವಿಷಾದದ ಸಂಗತಿಯಾಗಿದೆ. 1976ರ ಜೂನ್ 16ರ ಜ್ಞಾಪನ ಪತ್ರವೂ ನಿರೀಕ್ಷಿತ ಪರಿಣಾಮಗಳನ್ನು ಉಂಟುಮಾಡಲಿಲ್ಲ.

ನೀವು ಪವಾಡಗಳನ್ನು ನಡೆಸುತ್ತೀರೆಂಬ ನಂಬಿಕೆಯ ಮೇಲೆ ನಿಮ್ಮ ಸುತ್ತ ಪ್ರಭಾವಲಯ ನಿರ್ಮಾಣವಾಗಿದೆ. ನಿಮ್ಮ ಪವಾಡ ಕಾಲ್ಪನಿಕವೆಂದು ಸಿದ್ಧವಾದಗಳಿಗೆಗೆ ನೀವೂ ಒಬ್ಬ ಸಾಮಾನ್ಯ ಮನುಷ್ಯರಾಗುತ್ತೀರೆಂಬುದು ನಿಮಗೆ ಗೊತ್ತಿದೆ. ಆದ್ದರಿಂದ ನೀವು ಆ ಪ್ರಭಾವಳಿಯನ್ನು ತೆಗೆದುಹಾಕುವ ಎಲ್ಲ ಪ್ರಯತ್ನಗಳಿಂದ ನುಣುಚಿಕೊಳ್ಳುವದನ್ನು ಅತ್ಯಂತ ತಾರ್ಕಿಕವಾದ ರೀತಿಯಲ್ಲಿ ಅನುಸರಿಸುತ್ತಿರುವಂತೆ ಕಾಣುತ್ತಿದೆ. ನಿಮ್ಮ ಅಸಹಕಾರಕ್ಕೆ ಬೆಂಬಲವಾಗಿ ಈ ಕೆಲ



ವಾದಗಳು ಎದುರಿಗಿರಬಹುದು, ''ಇಂತಹ ಮಹಾವ್ಯಕ್ತಿ, ದಿವ್ಯವ್ಯಕ್ತಿ, ದೇವರು, ಮರ್ತ್ಯಜೀವಿಗಳಿಂದ ಇಂತಹ ತನಿಖೆಗಳಿಗೆ ಒಳಪಡುವದು ಹೇಗೆ? ಇಂತಹ ಕಟ್ಟಳೆಗೆ ಅವರು ಅಧೀನರಲ್ಲ'', ಈ ವಾದಗಳು ಅಸಮರ್ಥನೀಯವೆಂದು ಹೇಳುವದು ಅನಗತ್ಯ.

ಒಬ್ಬ ವ್ಯಕ್ತಿ ತಾನು ಹೇಳುವುದನ್ನು ಸಮರ್ಥಿಸಿಕೊಳ್ಳಬೇಕು ಮತ್ತು ತಾನು ಮಾಡುವುದನ್ನು ವಿವರಿಸಬೇಕು. ಇದು ಒಬ್ಬ ಸಭ್ಯಮನುಷ್ಯನಿಂದ ನಿರೀಕ್ಷಿಸಬಹುದಾದ ಪ್ರಾಥಮಿಕ ಅಗತ್ಯ.

ದೊಡ್ಡ ಸಂಖ್ಯೆಯ ಜನರನ್ನು ದಾರಿತಪ್ಪಿಸುವದು ಅಥವಾ ವಂಚಿಸುವದು ಕಠಿಣವಲ್ಲ. ಆದರೆ ಯಾವುದೇ ವ್ಯಕ್ತಿ ತನ್ನ ಆತ್ಮಸಾಕ್ಷಿಯನ್ನು ವಂಚಿಸಲಾರ. ಇದು ನಿಮಗೆ ಚೆನ್ನಾಗಿ ಗೊತ್ತು. ನಮ್ಮೆಲ್ಲ ಕ್ರಿಯೆಗಳಿಗೂ ಸದಾ ಜಾಗೃತ, ಸದಾ ಪ್ರತ್ಯಕ್ಷ ಸಾಕ್ಷಿ ನಮ್ಮ ಆತ್ಮಸಾಕ್ಷಿಯೇ. ಯಾರೇ ಆಗಲಿ ತನ್ನ ಸ್ವಂತ ಆತ್ಮಸಾಕ್ಷಿಗೆ ಪ್ರಾಮಾಣಿಕವಾಗಿರಬೇಕು. ವಾಸ್ತವವಾಗಿ ಇದು ನಮ್ಮೆಲ್ಲರ ಕ್ರಿಯಾನೀತಿಯಾಗಬೇಕು. ಹೆಚ್ಚು ದೈವಿಕವಾದ ವ್ಯಕ್ತಿ ಆತ್ಮಸಾಕ್ಷಿಯ ಅಸ್ತಿತ್ವ ಮತ್ತು ಅದಕ್ಕೆ ಪ್ರಾಮಾಣಿಕನಾಗಿರಬೇಕಾದ ಅಗತ್ಯಗಳ ವಿಷಯದಲ್ಲಿ ಹೆಚ್ಚು ಪ್ರಜ್ಞಾಶಾಲಿಯಾಗಿರಬೇಕು.

ಮಹಾನ್ ದೈವಿಕ ವ್ಯಕ್ತಿಗಳು ಯಾವತ್ತೂ ತಮ್ಮ ಕೃತಿ ಮತ್ತು ಮಾತುಗಳನ್ನು ವಿಶದಗೊಳಿಸುವದನ್ನು ಜೀವನ ಧ್ಯೇಯವಾಗಿಸಿಕೊಂಡಿದ್ದಾರೆ. ಭಗವಾನ್ ಬುದ್ಧ, ಸ್ವಾಮಿ ವಿವೇಕಾನಂದ ಮತ್ತು ಮಹಾತ್ಮಾಗಾಂಧಿ ಇವರು ತಮ್ಮನ್ನು ಪರೀಕ್ಷೆ ಮತ್ತು ಪ್ರಮಾಣೀಕರಣದ ನಂತರವೇ ಸ್ವೀಕರಿಸಬೇಕೆಂದು ತಮ್ಮ ಅನುಯಾಯಿಗಳನ್ನು ಒತ್ತಾಯಿಸಿದ್ದಾರೆ. ಅವರ ಬದುಕು ತೆರೆದ ಪುಸ್ತಕಗಳು. ಅವರು ಯಾವುದೇ ಸಮಸ್ಯೆಯನ್ನು ತೀರ ಸಣ್ಣದೆಂದು ಪರಿಗಣಿಸುತ್ತಿರಲಿಲ್ಲ. ಅವರು ಎಲ್ಲ ಸಮಸ್ಯೆಗಳಿಗೂ ಉತ್ತರಿಸಿದ್ದಾರೆ ಮತ್ತು ಪ್ರತಿಯೊಂದು ಕ್ರಿಯೆಯನ್ನು ಪ್ರತ್ಯಕ್ಷ ಆಚರಣೆಯಲ್ಲಿ ತೋರಿಸಿದ್ದಾರೆ. ಅವರು ನಿರಹಂಕಾರಿಗಳು, ಸರಳರು ಆಗಿದ್ದು ಬಡವರು ಮತ್ತು ಕೆಳತುಳಿಯಲ್ಪಟ್ಟವರ ನಡುವೆ ಬದುಕಿದವರು. ಈ ದೈವಿಕ ವ್ಯಕ್ತಿಗಳು ರಹಸ್ಯವಾಗಿ ನಡೆಸಿದ್ದು ಏನಾದರೂ ಇತ್ತೇ? ನಿಮ್ಮ ಜೀವನ ವಿಧಾನ ಈ ಮಹಾನ್ ಜೀವಿಗಳಿಗಷ್ಟೇ ಅಲ್ಲ ನಿಜವಾದ ಧಾರ್ಮಿಕರು ಮತ್ತು ದಿವ್ಯ ವ್ಯಕ್ತಿಗಳು ನಡೆಸಿದ ಜೀವನಕ್ಕೂ ಅಪವಾದವಾಗಿ ತೋರುತ್ತದೆ. ಸತ್ಯ ಬಲಿಯಾದಂತೆ ಕಾಣುತ್ತದೆ ಮತ್ತು ರಹಸ್ಯವನ್ನೇ ನೀವೊಂದು ವೈಶಿಷ್ಟ್ಯವಾಗಿಸಿಕೊಂಡಂತೆ ತೋರುತ್ತದೆ. ಎಲ್ಲ ಮಹಾ ವ್ಯಕ್ತಿಗಳು ಮತ್ತು ಧಾರ್ಮಿಕ ಪುರುಷರು ಸತ್ಯವೇ ದೇವರು ಮತ್ತು ರಹಸ್ಯವು ಪಾಪವೆಂದು ಸಾರಿದ್ದಾರೆ.

ಗೌರವಾರ್ಹ ಪರಂಪರೆಯುಳ್ಳ ನಮ್ಮ ರಾಷ್ಟ್ರದಲ್ಲಿ ಜೀವನದ ಸಮಸ್ಯೆಗಳನ್ನೂ ಧೈರ್ಯದಿಂದ ಎದುರಿಸಲಾರದೆ ಸುಲಭವಾಗಿ ಮೋಸಹೋಗುವ ಮತ್ತು ಚಮತ್ಕಾರಗಳು ಹಾಗೂ ಕುತಂತ್ರಗಳಿಗೆ ಮೂಢಬಲಿಯಾಗುವ ಜನರು ನಿರಂತರವಾಗಿ ಆಧ್ಯಾತ್ಮದ ಹೆಸರಿನಲ್ಲಿ ಶೋಷಣೆಗೆ ಒಳಗಾಗುತ್ತಿರುವದು ದುರದೃಷ್ಟದ ಸಂಗತಿಯಾಗಿದೆ.

ನಿಮ್ಮನ್ನು ದೂಷಿಸುವುದು ಅಥವಾ ನಿಮ್ಮ ಭಾವನೆಗಳನ್ನು ನೋಯಿಸುವುದು ಈ ಪತ್ರದ ಉದ್ದೇಶವಲ್ಲ. ಅದೇ ಸಂದರ್ಭದಲ್ಲಿ ಇಂತಹ ವಿಷಯಗಳಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಸತ್ಯಾನ್ವೇಷಣೆಯ ಆಳವಾದ ಕಾಳಜಿಯನ್ನು ನೀವು ಮೆಚ್ಚಿಕೊಳ್ಳುವ ಹಾಗೆ ಪತ್ರವು ಸಾಕಷ್ಟು ಪ್ರಭಾವಶಾಲಿಯಾಗಿರಬೇಕೆಂಬುದು ನನ್ನ ಭಾವನೆಯಾಗಿದೆ.

ಇದು ಈ ಸರಣಿಯಲ್ಲಿ ನಾನು ನಿಮಗೆ ಬರೆಯುತ್ತಿರುವ ಕೊನೆಯ ಪತ್ರ. 1976ರ ಜುಲೈ 19ರ ಒಳಗೆ ನಿಮ್ಮಿಂದ ಉತ್ತರ ಬರದೆ ಹೋದರೆ ಈ ವಿಷಯದಲ್ಲಿ ನೀವು ಹೇಳುವುದು ಏನೂ ಇಲ್ಲವೆಂದು ಭಾವಿಸಿ ನಾನು ಈ ಪತ್ರಗಳನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡುವ ಒತ್ತಡಕ್ಕೆ ಗುರಿಯಾಗಬಹುದು.

ನೀವು ನನ್ನ ವಿನಂತಿಯನ್ನು ಒಪ್ಪಿಕೊಳ್ಳುವ ನೈತಿಕ ಧೈರ್ಯವನ್ನು ಪ್ರದರ್ಶಿಸಬಹುದೆಂದು ನಾನು ಈಗಲೂ ಆಶಿಸುತ್ತೇನೆ.

ನಿಮ್ಮ ವಿಶ್ವಾಸದ,
ಎಚ್.ನರಸಿಂಹಯ್ಯ

ಪತ್ರಿಕೆಗೆ ಪತ್ರಗಳ ಬಿಡುಗಡೆ

ಅವರಿಂದ ಪ್ರತ್ಯುತ್ತರ ಇಲ್ಲದ್ದರಿಂದ ಪತ್ರಗಳನ್ನು ಬಿಡುಗಡೆ ಮಾಡಲಾಯಿತು. ಪತ್ರಗಳನ್ನು ಪತ್ರಿಕೆಗೆ ಬಿಡುಗಡೆ ಮಾಡಿದ ಪರಿಣಾಮವಾಗಿ ಎಲ್ಲ ದಿನಪತ್ರಿಕೆ ಮತ್ತು ನಿಯತಕಾಲಿಕಗಳಲ್ಲಿ ವ್ಯಾಪಕವಾದ ರಾಷ್ಟ್ರೀಯ ಚರ್ಚೆ ನಡೆಯಿತು. ಈ ವಿವಾದವನ್ನು ಪ್ರಸ್ತಾಪಿಸದ ಒಂದೇ ಒಂದು ಪತ್ರಿಕೆಯಿರಲಿಲ್ಲ. ಅನೇಕ ಪ್ರತಿಷ್ಠಿತ ನಿಯತಕಾಲಿಕಗಳ ಸಂಪಾದಕರುಗಳು ನನ್ನನ್ನು ಮತ್ತು ಶ್ರೀ ಸತ್ಯಸಾಯಿಬಾಬಾ ಅವರನ್ನು ಸಂದರ್ಶಿಸಿದರು. ಪರಸ್ಪರ ಹೇಳಿಕೆ ಪ್ರತಿಹೇಳಿಕೆಗಳನ್ನು ಮಿಲಿಯಗಟ್ಟಲೆ ಜನರು ಅತ್ಯಂತ ಆಸಕ್ತಿ ಮತ್ತು ಹಂಬಲದಿಂದ ಓದುತ್ತಿದ್ದರು. ಶ್ರೀ ಸತ್ಯಸಾಯಿಬಾಬಾ ಅವರು ತಮ್ಮ ಹೇಳಿಕೆ ಮತ್ತು ಭಾಷಣಗಳಲ್ಲಿ ತಾತ್ಸಾರ ಮತ್ಸರಗಳ ನಂಜನ್ನು ಹರಿಸಿ, ತಮ್ಮನ್ನು ತನಿಖೆ ಮಾಡಲು ನಮಗಿರುವ ಅರ್ಹತೆಯನ್ನು ಪ್ರಶ್ನಿಸಿದರು ಮತ್ತು ತಮ್ಮ ದಿವ್ಯ ಪವಾಡ ಶಕ್ತಿಗಳನ್ನು ಗ್ರಹಿಸಲು ಅಸಮರ್ಥವಾದ ಅಪ್ರಯೋಜಕ ಕ್ಷುಲ್ಲಕ ಕ್ರಿಮಿಯೆಂದು ಬಣ್ಣಿಸಿದರು.

ವೈಟ್‌ಫೀಲ್ಡ್‌ನಲ್ಲಿರುವ ಶ್ರೀ ಸತ್ಯಸಾಯಿಬಾಬಾ ಕಾಲೇಜಿಗೆ ಸಂಬಂಧಿಸಿದ ಒಂದು ಸಭೆಯು ಈ ವಿವಾದ ನಡೆಯುತ್ತಿರುವ ಸಂದರ್ಭದಲ್ಲಿಯೇ ಬೆಂಗಳೂರಿನಲ್ಲಿ ಅಸಹಜವಾಗಿ ನಡೆಸಲ್ಪಟ್ಟಿತು. ಸಭೆಯ ನಡಾವಳಿಯಿಂದ ಅದರ ಮುಖ್ಯ ಉದ್ದೇಶ ವಿಶ್ವವಿದ್ಯಾಲಯದ ಸಮಿತಿಯನ್ನು ಅವಮಾನಿಸುವುದೇ ಆಗಿತ್ತೆಂಬುದು ಸ್ಪಷ್ಟವಾಯಿತು. ಶ್ರೀ ಸತ್ಯಸಾಯಿಬಾಬಾ ಅವರು ತಮ್ಮ ಭಾಷಣದಲ್ಲಿ ವಿಶ್ವವಿದ್ಯಾಲಯ ಸಮಿತಿಯನ್ನು ಕಟುವಾಗಿ ಆಕ್ರಮಿಸಿದರು. ಅವರು ನನ್ನನ್ನು ಮತ್ತು ಇತರ ಸದಸ್ಯರನ್ನು ನಾಯಿಗಳು ಮತ್ತು ಇರುವೆಗಳೆಂದು ಕರೆದರು. ಅವರು ತಮ್ಮನ್ನು ತಾವೇ ತಾರೆ ಮತ್ತು ಆಳವರಿಯಲು ಸಾಧ್ಯವಿರದ ಸಾಗರಕ್ಕೆ ಹೋಲಿಸಿಕೊಂಡರು. ವಿಶ್ವವಿದ್ಯಾಲಯದ ವಿರುದ್ಧ ಆಪಾದನೆಗಳನ್ನು ಮಾಡಿದ್ದಲ್ಲದೆ ನಮಗೆ ನಮ್ಮ ಕೆಲಸಗಳನ್ನು ನೋಡಿಕೊಳ್ಳುವಂತೆ ಕೇಳಿಕೊಂಡರು. ಅವರು ಭೂಮಿಯ ಮೇಲೆ ತಮ್ಮನ್ನು ಪರೀಕ್ಷಿಸುವ ಯಾವ ಶಕ್ತಿಯೂ ಇಲ್ಲವೆಂದು ಸಾರಿದರು.

ಈ ವಿವಾದದ ಮಹತ್ವವನ್ನು ಅರ್ಥಮಾಡಿಕೊಂಡ ದಿನಪತ್ರಿಕೆ ಮತ್ತು ನಿಯತಕಾಲಿಕಗಳು ವರದಿಗಾರರು ಸಂದರ್ಶನವನ್ನು ನಿರೀಕ್ಷಿಸಿ ಪುಟ್ಟಪರ್ತಿಗೆ ಯಾತ್ರೆ ಹೋದರು ಮತ್ತು ಶ್ರೀ ಸತ್ಯಸಾಯಿಬಾಬಾ ಅವರಿಂದ ತತ್‌ಕ್ಷಣವೇ ಅವರ ನಿರೀಕ್ಷೆ ಈಡೇರಿಸಲ್ಪಟ್ಟಿತು. ಮಹತ್ವದ ವ್ಯಕ್ತಿಗಳು ಕೂಡ ಅವರ ದರ್ಶನಕ್ಕಾಗಿ ಗಂಟೆಗಟ್ಟಲೆ ಮತ್ತು ದಿನಗಟ್ಟಲೆ ಅವರ ಬಾಗಿಲಲ್ಲಿ ಕಾಯಬೇಕಾಗಿತ್ತು ಎಂದು ಈ ಹಿಂದೆ ಅನೇಕ ಸಂದರ್ಭಗಳಲ್ಲಿ ಹೇಳಲಾಗಿತ್ತು. ಆದರೆ ಈಗ ಪರಿಸ್ಥಿತಿ ಗಣನೀಯವಾಗಿ ಬದಲಾಯಿತು. ಈಗ ನಿರೀಕ್ಷೆ ಮತ್ತು ಆತಂಕಗಳಿಂದ ವರದಿಗಾರರಿಗಾಗಿ ಕಾಯುವ ಸರದಿ ಶ್ರೀ ಸತ್ಯಸಾಯಿಬಾಬಾ ಅವರದಾಯಿತು. ತಮ್ಮ ಭಕ್ತರು ಮತ್ತು ಇತರರಿಂದ ಲೇಖನಗಳ ಸರಣಿಯನ್ನು ಬರೆಯಿಸಿ ದಿನಪತ್ರಿಕೆ ಮತ್ತು ವಾರಪತ್ರಿಕೆಗಳಲ್ಲಿ ಪ್ರಕಟಿಸುವ ಮೂಲಕ ಅವರು ಒಂದು ವ್ಯವಸ್ಥಿತವಾದ ಯೋಜಿತವಾದ ದಂಡಯಾತ್ರೆ ನಡೆಸಿದರು. ಎಲ್ಲ ಲೇಖನಗಳಲ್ಲಿ ಶ್ರೀ ಸತ್ಯಸಾಯಿಬಾಬಾ ಅವರ ದಿವ್ಯಶಕ್ತಿಯನ್ನು ಕೊಂಡಾಡಿ ನೀರನ್ನು ಪೆಟ್ರೋಲಾಗಿ ಪರಿವರ್ತಿಸುವ , ವಾಸಿಯಾಗದ ರೋಗಗಳನ್ನು ಗುಣಪಡಿಸುವ, ಸತ್ತವರಿಗೆ ಜೀವನೀಡುವ, ವಸ್ತುಗಳನ್ನು ಸೃಷ್ಟಿಸುವ ಮತ್ತು ಇತರ ಇಷ್ಟೇ ವಿಲಕ್ಷಣವಾದ ಅಸಾಧಾರಣ ಪವಾಡಶಕ್ತಿಗಳನ್ನು ಅವರಲ್ಲಿ ಆರೋಪಿಸಿದರು ಮತ್ತು ಅವರನ್ನು ಪರಿಶುದ್ಧ ಮತ್ತು ನಿಷ್ಕಲ್ಮಶ ಸಾಕ್ಷಾತ್ ದೇವರೇ ಎಂದು ಅಚಲ ಮತ್ತು ಅಂತಿಮ ತೀರ್ಮಾನಕ್ಕೆ ಬಂದರು.

ಶ್ರೀ ಸತ್ಯಸಾಯಿಬಾಬಾ ಅವರಿಗೆ ಇನ್ನಷ್ಟು ಪತ್ರಗಳು

ಈ ಚರ್ಚೆ ತಿಂಗಳುಗಟ್ಟಲೆ ನಡೆಯಿತು. ಬೆಂಗಳೂರು ವಿಶ್ವವಿದ್ಯಾಲಯದ ಆಶ್ರಯದಲ್ಲಿ ಪವಾಡಗಳನ್ನು ಕುರಿತು ಪ್ರಾತ್ಯಕ್ಷಿಕ ಉಪನ್ಯಾಸ ನೀಡುವಂತೆ ಆಹ್ವಾನಿಸಿ ಶ್ರೀ ಸತ್ಯಸಾಯಿಬಾಬಾ ಅವರಿಗೆ ಇನ್ನೊಂದು ಪತ್ರಬರೆಯಲಾಯಿತು. ಮೊದಲಿನಂತೆ ಅದಕ್ಕೂ ಉತ್ತರವಿಲ್ಲ.

ಅಂತಿಮವಾಗಿ ಸಮಿತಿಯು 1977ರ ಮೇ 29ರಂದು ಮುಂಜಾನೆ 10.00 ಗಂಟೆಗೆ ಅವರ ವೈಟ್‌ಫೀಲ್ಡ್ ನಿವಾಸದಲ್ಲಿ ಭೇಟಿ ಮಾಡುವದಾಗಿ ಏಕಮುಖವಾಗಿ ತಿಳಿಸುವ ಪತ್ರ ಬರೆಯಲು ನಿರ್ಣಯಿಸಿತು. ಪರಿಣಾಮವಾಗಿ ಸಮಿತಿಯ ಎಲ್ಲ ಸದಸ್ಯರು ಪತ್ರಿಕಾ ಪ್ರತಿನಿಧಿಗಳೊಂದಿಗೆ ಅವರನ್ನು ಭೇಟಿಮಾಡಲು ಒಂದು ಬಸ್ಸಿನಲ್ಲಿ ಹೋದೆವು. ಇಂಥ ಭೇಟಿಯ ಗಂಭೀರ ಪರಿಣಾಮಗಳನ್ನು ಕುರಿತು ಸ್ಥಳೀಯರಾದ ಪ್ರಮುಖ ಭಕ್ತರು ಮತ್ತು ಇತರ ಮಧ್ಯವರ್ತಿಗಳು ಸಮಿತಿಯ ಸದಸ್ಯರಿಗೆ ಎಚ್ಚರಿಕೆ ನೀಡಿದರು. ಸಮಿತಿಯು ಎಚ್ಚರಿಕೆಗಳನ್ನು ಅಲಕ್ಷಿಸಿ ಅವರ ನಿವಾಸದ ಸದೃಢವಾದ, ಭದ್ರಕಾವಲುಳ್ಳ ಹೆಬ್ಬಾಗಿಲನ್ನು ತಲುಪಿದಾಗ ಒಳಾವರಣ ಪ್ರವೇಶಿಸಲು ನಿರಾಕರಿಸಲಾಯಿತು. ಅವರು ಒಳಗಿದ್ದು ನಮಗೆ ಪ್ರವೇಶಿಸಲು ಅನುಮತಿ ಇಲ್ಲವೆಂದು ಹೇಳಲಾಯಿತು. ನಾವು ನಿರಾಶರಾಗಿ ಹಿಂದಿರುಗಿದೆವು.

ಶ್ರೀ ಸತ್ಯಸಾಯಿಬಾಬಾರನ್ನು ಕಾಣುವ ಮತ್ತು ಅವರ ಮೇಲೆ ತನಿಖೆಗಳನ್ನು ನಡೆಸುವ ನಮ್ಮ ದಣಿವರಿಯದ ನಿರಂತರ ಪ್ರಯತ್ನಗಳು ಹೀಗೆ ಕೊನೆಗೊಂಡವು. ಆದರೆ ಈ ವಿವಾದವು ಹದಿನೆಂಟು ತಿಂಗಳವರೆಗೆ ಪ್ರಬಲವಾಗಿದ್ದು ಅಶಿಕ್ಷಿತರನ್ನೂ ಚರ್ಚೆಯಲ್ಲಿ ಪಾಲುಗೊಳ್ಳುವಂತೆ ಉತ್ತೇಜಿಸಿ ಜನತೆಯ ಆಲೋಚನಾ ರೀತಿಯ ಮೇಲೆ ಅತ್ಯಂತ ಆರೋಗ್ಯಕರವಾದ ಪರಿಣಾಮವನ್ನು ಹುಟ್ಟುಹಾಕಿತು. ಇದು ಸಾಕಷ್ಟು ಅವಧಿಯವರೆಗೆ ಮನೆಮಾತಾಗಿತ್ತು. ಇದು ಶ್ರೀ ಸತ್ಯಸಾಯಿಬಾಬಾರವರ ಅತ್ಯಂತ ನಿಕಟಭಕ್ತರಲ್ಲಿಯೂ ಸಂಶಯದ ಬೀಜಗಳನ್ನು ಬಿತ್ತಿತು. ಕೆಲವು ಪ್ರಸಿದ್ಧ ಅನುಯಾಯಿಗಳು, ಪ್ರಮುಖವಾಗಿ ಭಾರತೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕರಾಗಿದ್ದ, ಭಾರತ ಸರ್ಕಾರದ ರಕ್ಷಣಾ ಇಲಾಖೆಯ ಮಾಜಿ ಕಾರ್ಯದರ್ಶಿಯಾಗಿದ್ದ ಡಾ. ಎಸ್. ಭಗವಂತಂ ಅಂಥವರು ಅವರನ್ನು ತೊರೆದರು. ಅವರ ಪ್ರಭಾವ ಇಳಿಮುಖವಾಯಿತು. ಬಹುತೇಕ ಅವರು ಪವಾಡಗಳನ್ನು ನಡೆಸುವದನ್ನು ನಿಲ್ಲಿಸಿಯೇ ಬಿಟ್ಟರು. ಕೊನೆಗೂ ಸಮಿತಿಯ ಪ್ರಯತ್ನಗಳು ನಿರರ್ಥಕವಾಗಲಿಲ್ಲ.

■ **ಡಾ. ಎಚ್.ನರಸಿಂಹಯ್ಯ**


'ತಾಪ'ಮಾನ

ತಾಪ ಏರಿದಾಗ ತಾಪತ್ರಯ ಜಾಸ್ತಿ. ದಪ್ಪಗಿರುವವರಿಗೆ ಬಿಸಿ ಬೇಗ ತಟ್ಟುತ್ತದಂತೆ. ಅಂಥವರು ಸೀದಾ 'ತಂಪಾಗಿ ಬಿಡಲು' ತಂಪು ಡ್ರಿಂಕ್‌ಗೆ ಕೈಚಾಚಿದರೆ, ಅಲ್ಲೂ ಬಿಸಿತಟ್ಟುವ ಭಯ ಇನ್ನು ಮುಂದೆ.

ಯಾಕೆಂದರೆ ಲಂಡನ್‌ನ ಕೋಕಾಕೋಲಾ ಕಂಪೆನಿ, ತಾಪಮಾನ ಏರಿದಂತೆ ಬೆಲೆಯೂ ತಾನಾಗಿ ಏರುವ ವೆಂಡಿಂಗ್ ಮೆಷಿನ್ ಒಂದನ್ನು ರೂಪಿಸುತ್ತಾ ಇದೆಯಂತೆ. ಲಂಡನ್ ನಮಗೇನೂ ದೂರವಿಲ್ಲ(!) ಹಾಗಾಗಿ ಇಂಥ ಬಿಸಿಗಳು ಬೇಗ ನಮ್ಮನ್ನು ತಟ್ಟುತ್ತವೆ.

ನಡಿಗೆಗೂ ಒಂದು ರೀತಿ ನೀತಿ

ನಡಿಗೆಯ ಶೈಲಿಯಿಂದಲೇ ವ್ಯಕ್ತಿತ್ವ ತಿಳಿಯಬಹುದು. ಮನುಷ್ಯನ ನಡಿಗೆಗೂ, ಆತನ ವ್ಯಕ್ತಿತ್ವಕ್ಕೂ ನೇರ ಸಂಬಂಧ ಇರುತ್ತದೆ.



ಎದೆಯೆತ್ತಿ, ನೇರವಾಗಿ ನಡೆಯುವ ಮನುಷ್ಯ ನೇರ ನಡೆನುಡಿಯವನು. ಏನೋ ಕಳೆದುಕೊಂಡ ವಸ್ತು ಹುಡುಕುತ್ತಿರುವಂತೆ ನಡೆಯುವಾತ ನಮ್ಮ ಕನಿಕರಕ್ಕೆ ಅರ್ಹ. ಹೀಗೆ ನಡಿಗೆಯ ಶೈಲಿಯಿಂದಲೇ ವ್ಯಕ್ತಿತ್ವ ತಿಳಿಯಬಹುದು. ಮನುಷ್ಯನ ನಡಿಗೆಗೂ, ಆತನ ವ್ಯಕ್ತಿತ್ವಕ್ಕೂ ನೇರ ಸಂಬಂಧ ಇರುತ್ತದೆ.

ಪಟಪಟನೆ ನಡೆಯುತ್ತಿದ್ದ ಇಂದಿರಾಗಾಂಧಿ ಈಗಲೂ ಚಿರನೆನಪು. ಅಂತೆಯೇ ಅಮಿತಾಬ್‌ನ ನೀಳಕಾಲುಗಳ ಬೀಸು ನಡಿಗೆ, ಮಾಧುರಿ ದೀಕ್ಷಿತ್‌ಳ ಬಳುಕು ನಡಿಗೆ ಹೀಗೆ ನಾನಾ ನಡಿಗೆಗಳ ಮಾದರಿ ನಮ್ಮ ಕಣ್ಣೆದುರೇ ಇವೆ.

ಸಾಮಾನ್ಯವಾಗಿ ಜನ ರೂಢಿಸಿಕೊಳ್ಳುವ ಹಲವು ನಡಿಗೆಯ ಶೈಲಿಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಹಣೆ ಮುಂದೆ ಚಾಚಿ ನಡೆಯುವವರು : ಇವರು ಸದಾ ಆತಂಕದಿಂದ ಇರುವವರು. ಹಾಗೇ ಬುದ್ಧಿಜೀವಿಗಳು ಕೂಡ. ಜ್ಞಾನದ ಹಸಿವು, ಅದಕ್ಕಾಗಿ ಕಾತರ, ಆತಂಕ ಇವರ ಸಹಜ ವ್ಯಕ್ತಿತ್ವ. ಇದೆಲ್ಲ ಸರಿ. ಆದರೆ ರಸ್ತೆಯಲ್ಲಿ ಹಣೆ ಮುಂದೆ ಚಾಚಿ ನಡೆಯುವುದು, ಒಂಟೆ ನಡೆದಂತೆ ವಕ್ರ ನಡಿಗೆಯಾಗಿ ಕಾಣಿಸುತ್ತದೆ. ಇಂಥವರು ಕುರ್ಚಿಯಲ್ಲಿ ಕುಳಿತು ಸಣ್ಣದೊಂದು ವ್ಯಾಯಾಮ ಮಾಡುವುದರಿಂದ ಇದರ ಪರಿಹಾರ ಸಾಧ್ಯ. ಕುಳಿತ ಭಂಗಿಯಲ್ಲಿ, ತಲೆಯ ಹಿಂದೆ ಕೈಗಳನ್ನು ತಂದು ಬೆರಳುಗಳನ್ನು ಹೆಣೆದು, ಅದಕ್ಕೆ ತಲೆಯನ್ನು ಜೋರಾಗಿ ಒತ್ತಬೇಕು. ಆ ಸಮಯ ಗದ್ದ ನೆಲಕ್ಕೆ ಸಮಾನಾಂತರವಾಗಿ ಇರಬೇಕು. ಹೀಗೆ ಆರು ಸೆಕೆಂಡುಗಳಷ್ಟು ಕಾಲ ಒತ್ತಿ ಹಿಡಿದು, ನಂತರ ಉಸಿರು ಹೊರಚೆಲ್ಲಿ ಮತ್ತೆ ಹಲವು ಬಾರಿ ವ್ಯಾಯಾಮ ಮಾಡಿದರೆ ನಡಿಗೆಯಲ್ಲಿ ಸೂಕ್ತ ಬದಲಾವಣೆ ಕಾಣಿಸುತ್ತದೆ.

ಗದ್ದ ಮುಂದೆ ಚಾಚಿ ನಡೆಯುವವರು : ಹೀಗೆ ನಡೆಯುವವರು ಆಕ್ರಮಣಶೀಲರು. ತಾವು ಹೇಳಿದ್ದೇ ಸರಿ ಎಂದು ಪಟ್ಟು ಹಿಡಿದು ಸಾಧಿಸುವವರು. ಜನರ ಗಮನ ಸೆಳೆಯುವಲ್ಲಿ ಇವರಿಗೆ ಅಪಾರ ಆಸಕ್ತಿ.

ಇಂಥವರು, ತಮ್ಮ ಬಗ್ಗೆ ತಾವು ಎಷ್ಟೇ ಒಳ್ಳೆಯ ಅಭಿಪ್ರಾಯ ಇಟ್ಟುಕೊಂಡಿದ್ದರೂ, ಜನಕ್ಕೆ ತಿರಸ್ಕಾರ. 'ಹಂದಿ ನುಗ್ಗಿದ ಹಾಗೆ ನುಗ್ಗುತ್ತಾನೆ' ಎಂದು ಗೊಣಗುತ್ತಾರೆ. ಜೊತೆಗೆ ಗದ್ದ ಎತ್ತಿ ನಡೆಯುವುದರಿಂದ ಕತ್ತಿನ ಮೇಲೆ ಹೆಚ್ಚಿನ ಹೊರೆ ಬೀಳುತ್ತದೆ.

ಇದರ ನಿವಾರಣೆಗೆ ಸುಲಭ ಉಪಾಯವಿದೆ. ಅಂಗೈಯನ್ನು ಚಾಚಿ ಗದ್ದ ಅದರ ಮೇಲಿಡಿ. ಚಾಚಿ ಹಿಡಿದ ಮೊದಲ ಅಂಗೈ ಕೆಳಗೆ ಇನ್ನೊಂದು ಅಂಗೈ ಕೂಡ ಬರಲಿ. ಉಸಿರು ಹೊರಹಾಕುತ್ತಾ ಅಂಗೈ ಮೇಲೆ ಗದ್ದವನ್ನು ಒತ್ತಿ. ತಲೆಬುರುಡೆ ಕುತ್ತಿಗೆ ಸೇರುವ ಜಾಗದಲ್ಲಿ ಇರುವ ಸ್ನಾಯುಗಳು ಇದರಿಂದ ವಿಸ್ತರಗೊಳ್ಳುತ್ತವೆ. ಆರು ಸೆಕೆಂಡುಗಳ ಕಾಲ ವ್ಯಾಯಾಮ ನಡೆಸಿರಿ. ಒಂದು ಸಲಕ್ಕೆ ಮೂರರಿಂದ ನಾಲ್ಕು ಬಾರಿ ಈ ವ್ಯಾಯಾಮ ಸಾಕು.

ಎದೆ ಎತ್ತಿ ನಡೆಯುವವರು : ಇಂಥವರು ಎದೆ ಚಾಚಿ ನಡೆಯುವ ಮೂಲಕ ತಾವು ಭಾರೀ ಆತ್ಮವಿಶ್ವಾಸ ಹೊಂದಿದವರು, ಹೆಮ್ಮೆಯವರು ಎಂದು ಭಾವಿಸುತ್ತಾರೆ. ನೋಡುವ ಜನಕ್ಕೆ ಇವರು ಕೊಂಚ ಅಹಂಕಾರಿಗಳಾಗಿ ಕಂಡರೆ ಆಶ್ಚರ್ಯ ಏನಿಲ್ಲ.

ಇಂಥ ನಡಿಗೆ ಸುಧಾರಣೆಗೆ ಸುಲಭ ಉಪಾಯ ಇದೆ. ಕುರ್ಚಿಯಲ್ಲಿ ಕುಳಿತು, ಕೈಗಳೆರಡನ್ನೂ ತೊಡೆಯ ಕೆಳಗಿಟ್ಟುಕೊಂಡು, ಕುತ್ತಿಗೆಯನ್ನು ಎದೆಯ ಬಳಿಗೆ ಇಂಗ್ಲೀಷಿನ 'C' ಆಕಾರದಲ್ಲಿ ಬಾಗಿಸಿ ಒತ್ತಿ. ಹೀಗೆ ಆರು ಸೆಕೆಂಡ್ ಒತ್ತಿ ಹಿಡಿದು, ಸ್ನಾಯುಗಳು ಸಡಿಲಾಗಲು ಅವಕಾಶ ಮಾಡಿಕೊಡಿ. ಮೂರರಿಂದ ನಾಲ್ಕುಸಲ ವ್ಯಾಯಾಮ ಮಾಡಿದರೆ ಸಾಕು.

ಹೊಟ್ಟೆ ಮುಂದೆ ಚಾಚಿ ನಡೆಯುವವರು : ಇಂಥವರು ಸಹಜವಾಗಿಯೇ ಬೇರೆಯವರ ನಗೆಗೆ ಕಾರಣರಾಗುವವರು. ಬೊಜ್ಜು ಬೆಳೆದು ಇತರರ ಗೇಲಿಯ ವಸ್ತುವಾಗಿದ್ದಾರೆ. ಅವರು ಸ್ವಭಾವತಃ ತಮಾಷೆ ಪ್ರವೃತ್ತಿಯವರು ಹಾಗೂ ಸೋಮಾರಿಗಳು. ಇಂಥವರು ನೆಲದಲ್ಲಿ ಅಂಗಾತ ಮಲಗಿ, ಕೈಯನ್ನು ಅಡಿಯಲ್ಲಿ ನೆಲಕ್ಕೊತ್ತಿ ಹಿಡಿಯಬೇಕು. ಎರಡೂ ಕಾಲುಗಳನ್ನು ಮೇಲೆತ್ತಿ ಫುಟ್‌ಬಾಲ್ ಒದೆಯುತ್ತಾ ಇರುವ ಹಾಗೆ ಕಾಲಾಡಿಸಬೇಕು. ಸಾಮಾನ್ಯವಾಗಿ ಕಾಲುಗಳ ಚಲನೆ ಒಂದು ವೃತ್ತ ರಚಿಸುವಂತಿರಬೇಕು. ಉಸಿರು ಬಿಗಿಹಿಡಿದು ಈ ವ್ಯಾಯಾಮ ನಡೆಸಿ. ನಂತರ ಉಸಿರು ಹೊರಚೆಲ್ಲಿ ಮತ್ತೆ ಶ್ವಾಸ ಎಳೆದುಕೊಂಡು, ಕಾಲುಗಳನ್ನು ಮೊದಲು ಚಲಿಸಿದ್ದ ವಿರುದ್ಧ ದಿಕ್ಕಿನಲ್ಲಿ ಚಾಲಿಸಿ. ಹೀಗೆ ನಿತ್ಯ ಕೆಲವು ಸಲ ಮಾಡುವುದರಿಂದ ಹೊಟ್ಟೆ ಮುಂದೆ ಚಾಚಿ ನಡೆಯುವ ಕ್ರಮ ಮರೆಯಾಗುತ್ತದೆ.

ಕಿಬ್ಬೊಟ್ಟೆ ಮುಂದೊತ್ತಿ ನಡೆಯುವವರು : ಇದೊಂದು ಅಪರೂಪದ ಮಾದರಿ. ಪಾಪ್‌ಗಾಯಕ ಗಾಯಕಿಯರು, ಮಾಡೆಲ್‌ಗಳಿಗೆ ಅಂಟಿದ ರೋಗ ಇದು. ಇಂಥವರು ಕಾಮುಕರೂ ಆಗಿರುತ್ತಾರೆ.

ಇದು ನೀಗಬೇಕಾದರೆ ಕಿಬ್ಬೊಟ್ಟೆ ಹಾಗೂ ಬೆನ್ನುಹುರಿ ಗಟ್ಟಿಯಾಗಬೇಕಾಗುತ್ತದೆ. ಅದನ್ನು ಸಾಧಿಸಲು, ನೆಲದ ಮೇಲೆ ಕಾಲು ಹಿಂದಕ್ಕೆ ಮಡಿಸಿ ಕುಳಿತುಕೊಳ್ಳಬೇಕು. ತಲೆಯನ್ನು ಬಾಗಿಸಿ, ಆದಷ್ಟೂ ತೊಡೆಗಳ ನಡುವೆ ಬರುವಂತೆ ಯತ್ನಿಸಬೇಕು.


■ ಜಯಸಿಂಹ

ಯಜಮಾನಿ : ನೀನು ಹೀಗೇ ಕೆಲಸ ಮಾಡ್ತಾ ಇದ್ದರೆ ಇನ್ನೊಬ್ಬಳನ್ನ ನೋಡಿಕೋಬೇಕಾಗುತ್ತೆ.

ಕೆಲಸದವಳು : ಹಂಗೇ ಮಾಡಿ ಅವ್ವಾರೆ! ನನಗೂ ಒಬ್ಬಳೇ ಕೆಲಸ ಮಾಡಿ ಮಾಡಿ ಸಾಕಾಗೈತೆ.

ದಾರಿ

ಬಹುತೇಕ ಊರ ಜನ ಸಕ್ಕಸೈದನ ಜಾತ್ರೆಗೆ ಬಂದಿದ್ದರೆ ಇತ್ತ ಊರಲ್ಲಿ ಬುದ್ಧಿ ಬಂದಾಗಿನಿಂದ ಒಮ್ಮೆಯೂ ಜಾತ್ರೆ ತಪ್ಪಿಸದಿದ್ದ ಈರಣ್ಣ ಸಾಹುಕಾರ ಎರಡು ಗಾಡಿ ಕಟ್ಟಿಕೊಂಡು ಹೊಲದ ಹಾದಿ ಹಿಡಿದಿದ್ದ.



■ ಚಿತ್ರಶೇಖರ ಕಂಠಿ

ದೀಪಾವಳಿ ಸ್ಪರ್ಧೆಯಲ್ಲಿ ಎರಡನೇ ಬಹುಮಾನ ಪಡೆದ ಕತೆ

ಕರೀ ಗುಂಡಕಲ್ಲ ಗುಡ್ಡದೊಳಗ ಬಣ್ಣ ಬಣ್ಣದ ಬಟ್ಟೆ ಉಟ್ಟಿದ್ದ ಜನ ಇರುವೆ ಸಾಲಿನಂಗ ಕಾಣ್ತಿತ್ತು. ಹೊಲ-ಮನಿ ಕೆಲಸ ಖಾಡೀ ಮಾಡಿದ ಗಂಡು ಹೆಣ್ಣು ಊರ ಸಕ್ಕಸೈದನ ಜಾತ್ರೆಗೆ ನಡೆದಿದ್ದರು. ಊರಿನ ಆ ಕಡೆ ತುದೀ ಮನೆ ಮಲ್ಲಪ್ಪ ಬೆಳಿಗಿನ ತಂಪು ಹೊತ್ತಿನಾಗ ''ಏ ಕಾಕಾ'' ಅಂತ ಕೂಗಿ ಕರೆದರೆ ಈ ತುದೀ ಮನೆ ಬಸ್ಸಪ್ಪ ''ಯಾಕೋ ತಮ್ಮ'' ಅಂತ ಪ್ರತಿಕ್ರಿಯಿಸುವಷ್ಟು ದೊಡ್ಡ ಹಳ್ಳಿ (ಕೆಲವೇ ಮನೆ ಮತ್ತು ಗುಡಿಸಲು) ಹುಲಿಗೂಡು. ಊರೊಳಗೆ ಮೂರ್‍ನಾಲ್ಕು ಗಚ್ಚಿನ ಮನೆ ಬಿಟ್ಟರೆ ಉಳಿದವೆಲ್ಲ ಸೂರಿನ ಮೇಲೆ ಅರಿಬಂಡೆ (ಫರ್ಶಿ) ಹೊತ್ತು ನಿಂತವುಗಳು ಮತ್ತು ಪ್ರತಿ ಮಳೆಗಾಲಕ್ಕೂ ಹೊಸ ಹೊದಿಕೆ ಬಯಸುತ್ತಿದ್ದ ಹುಲ್ಲಿನ ಗುಡಿಸಲುಗಳು. ಉರುಸ್ ಅಂತ ಮುಸ್ಲೀಮರು, ಸಕ್ಕಸೈದನ ಜಾತ್ರೆ ಅಂತ ಮುಸ್ಲೀಮೇತರರು, ಗುಡಿಸಲಿಂದ ಗಚ್ಚಿನ ಮನೆಯವರೆಲ್ಲರೂ ಅಂದು ನೈವೇದ್ಯಕ್ಕೆಂದು ಮಾಲೆದಿ ಮಾಡಿದ್ದವರು ಸಾಲು ಸಾಲಾಗಿ ಗುಡ್ಡ ಹತ್ತುತ್ತಿದ್ದರು. ಏದುಸಿರು ಬಿಡುತ್ತ ಗುಡ್ಡ ಹತ್ತಿ ಮೇಲೆ ಬಂದಿದ್ದ ತಳವಾರ ಸೈದಪ್ಪನ ಕೊನೆಯ ಮಗ ಸಾಬಣ್ಣ ದಾರಿಯ ಎಡಭಾಗದಲ್ಲಿದ್ದ ಮಲ್ಲೀಸಾಬನ ಗುತ್ತಿಗೆ ತೋರಿಸುತ್ತ;

''ಎಪ್ಪಾ, ಮದಲ ಸಕ್ಕಸೈದ ಇಲ್ಲೇ ಇದ್ನಂತಲ್ಲ? ಜಾತ್ರೀನೂ ಇಲ್ಲೇ ನಡೀತಿತ್ತಂತ. ಸುಮ್ಮನೆ ಇಲ್ಲಿಂದ ಓಟು ದೂರ ಯಾಕ ಹೋದ?'' ಅಂತ ತನ್ನ ತಂದೆಯನ್ನು ಕುರಿತು ಹಣೆಯ ಮೇಲಿನ ಬೆವರು ಮುಂಗೈ ತೋಳಿನಿಂದ ಒರೆಸಿಕೊಂಡು ಏದುಸಿರು ಬಿಡುತ್ತ ಕೇಳಿದಾಗ ಸೈದಪ್ಪ ಅಂಗಿಯ ಬಗಲು ಕಿಸೆಯಿಂದ ತೆಗೆದ ಬೀಡಿ ತುಟಿಗಿಟ್ಟು ಕಡ್ಡಿ ಗೀರಿ;

''ಮಗ, ನಿನ್ನ ಮಾತು ಖರೇಅದ, ಮದಲ ಸಕ್ಕಸೈದ ಇಲ್ಲೇ ಇದ್ದ. ನಮ್ಮ ಮುತ್ಯಾ ನಿನ್ನೋಟಿದ್ದಾಗ, ದಿನ ಭರ್ತಿ ಆಗಿದ್ದ ಹೊಟ್ಟಿಲಿದ್ದ ಕುರುಬರ ಹೆಣ್ಣುಮಗಳೊಬ್ಬಕ್ಕಿ ಕುರಿ ಕಾಯದಕ್ಕಂತ ಈ ಗುಡ್ಡಕ್ಕ ಬಂದಿದ್ದಳಂತ. ಮುಗಿಲು ತುಂಬಿದ್ದ ಕರಿಮಾಡ ಕಡಕೊಂಡು ಬಿದ್ದಂಗ ಭಯಂಕರ ಮಳಿ ಸುರು ಆಯ್ತಂತ. ಜತೀಗಿದ್ದ ಸಣ್ಣ ಸಣ್ಣ ಪಾರಗೋಳು ಅದೇ ಮಳ್ಯಾಗ ಗುಡ್ಡ ಇಳದು ಊರ ಹಾದಿ ಹಿಡದರ ಈ ಹೆಣ್ಣಮಗಳ ಎದಿ ಧಸ್ ಅಂದು ಅಲ್ಲೇ ಬಾಣಂತನ ಆತಂತ. ಮರದಿನ ಮನಿಗಿ ಬಂದ ಆಕಿ, ಮುಂದ ಬಾಣಂತನ ಮುಗಸ್ಗೊಂಡು ಸುಣ್ಣ ಹಚ್ಚಸಿ ಕುರಿ ಕಡದು ಶಾಂತಿ ಮಾಡ್ದರನೂ ಸಕ್ಕಸೈದಗ ಮೈಲಿಗೆ ಆದ ಜಾಗದಾಗ ಇರದು ಬ್ಯಾಡ ಅನಿಸಿ ಅಲ್ಲಿ ಹೋಗಿ ಕುಂತನಂತ.'' ಅಂತ ಕತೆ ಮಾಡಿ ಹೇಳಿದ.

ಬಹುತೇಕ ಊರ ಜನ ಸಕ್ಕಸೈದನ ಜಾತ್ರೆಗೆ ಬಂದಿದ್ದರೆ ಇತ್ತ ಊರಲ್ಲಿ ಬುದ್ಧಿ ಬಂದಾಗಿನಿಂದ ಒಮ್ಮೆಯೂ ಜಾತ್ರೆ ತಪ್ಪಿಸದಿದ್ದ ಈರಣ್ಣ ಸಾಹುಕಾರ ಎರಡು ಗಾಡಿ ಕಟ್ಟಿಕೊಂಡು ಹೊಲದ ಹಾದಿ ಹಿಡಿದಿದ್ದ.

ಮುಂದಿನ ಗಾಡಿಯಲ್ಲಿದ್ದ ಆಳುಮಗ ದ್ಯಾಮು, ಮುಖ ತಿರುವಿ; ''ಅಲ್ರಿ ಸೌಕಾರ, ನಾನೂ ಈಸು ವರ್ಸಲಿಂದ ನಿಮ್ಮ ಬಲ್ಲಿ ದುಡೀಲತ್ತೀನಿ, ಅಮಾಸಿ ದಿನ, ಊರ ಜಾತ್ರಿ ದಿನ ಎಂದೂ ಗಾಡಿ, ಕುಂಟಿ, ನೆಗಲು ಹೂಡಲಾರ್ದವರು ಈವತ್ತ ಊರ ಜಾತ್ರಿ ದಿನ ಗಾಡಿ ಕಟ್ಟಸಿದ್ರಲ್ಲ ಯಾಕಂತೀನಿ.'' ಅಂದಾಗ;

''ಟೇಮ್ ಬಂದಂಗ ಮಾಡಬೇಕಲ್ಲೋ ದ್ಯಾಮು. ನಿನಗೇನು ಗೊತ್ತಿಲ್ಲ? ಹೊಲದಾಗಿನ ಪುಂಡಿ ಕಟ್ಟಿಗಿ ತರಬೇಕಂತ ಮನ್ನಿ ಗಾಡಿ ಕಟಗೊಂಡು ಹೋದಾಗ ಏನಾಯ್ತು? ನಮ್ಮ ಹೊಲದಾಗಿಂದ ಗಾಡಿ ಒಯ್ಯಿಬ್ಯಾಡರಿ ಅಂತ ರಸೂಲಸಾಬ ರೋಕ್ ಮಾಡಿದ್ದಿಲ್ಲ? ಮನ್ಯಾಗ ಮೇವು ಅಜೀಬತ್ ಇಲ್ಲದಂಗಾಗ್ಯದ. ಪ್ರಧಾನಗ, ಮೆಂಬರ್‌ಗ ಕರ್‍ಕೊಂಡು ಬರದಕ ಇನ್ನೇಸು ದಿನ ಹಿಡಿತದೇನೊ. ಹ್ಯಾಂಗನೂ ಈವತ್ತ ರಸೂಲನೂ ಸಕ್ಕಸೈದನ ಜಾತ್ರಿಗಿ ಹೋಗಿರ್ತಾನ. ಒಂದೆಡ್ಡ ಗಾಡಿ ಹೊಲದಾಗಿನ ಕಳಕಿ ತರದಕ ಇದೇ ಮೋಖಾ ಅಂತ ತಿಳದೇ ದೇವರ ಮ್ಯಾಲ ಭಾರ ಹಾಕಿ ಗಾಡಿ ಕಟ್ಟಪಂತ ನಿನಗ ಹೇಳ್ದ.''



ಜಗಳ, ಕಿರಿಕಿರಿಯಿಂದ ಗಜ ದೂರವಿರುತ್ತಿದ್ದ ಈರಣ್ಣ ಸಾಹುಕಾರ ತನ್ನ ಆಲೋಚನೆಗಳನ್ನು ಮಂಡಿಸಿದ. ತನ್ನೊಡೆಯನ ಮಾತು ದ್ಯಾಮೂಗೂ ಸರಿ ಅನ್ನಿಸಿತು. 'ಊರ ಹಿರೇರು, ಪಂಚರು ಬಂದು ಹೇಳ್ದಾಗ ಹೂಂ ಅಂತ ತಲಿ ಆಡಿಸಿದ್ದ ಪಿಂಜಾರ, ಮರುದಿನ ತಾ ಗಾಡಿ ಹೊಡಕೊಂಡು ಬರಾಗ ಮತ್ತ ತಕರಾರ ತೆಗೆದು ಹೊಡೆದಕ್ಕೆ ಬಂದ ಬದ್ಮಾಸ್, ಅಲ್ಲೇ ಎತ್ತಿನ ಕೊಳ್ಳಿನ ಕುಣಕಿ ಬಿಚ್ಚಸಿದ್ದ.' ಹಿಂದಿನ ಘಟನೆ ನೆನಪಿಸಿಕೊಂಡ ದ್ಯಾಮು;

''ಸೌಕಾರ, ಬಾಜೂ ಹೊಲದ ಬನದಪ್ಪಗೇ ಒಂದು ಮಾತು ಯಾಕ ಕೇಳ್ಬಾರದು ಅಂತೀನಿ.'' ಹೆಗಲ ಮೇಲಿನ ಬಾರ್ ಕೋಲು ಎತ್ತಿನ ಮೇಲೆ ಬೀಸಿ 'ಹಲ್ಯೆ' ಅಂದು ಕೇಳಿದ.

''ಹ್ಯಾಂಗ ಕೇಳ್ತೊ ದ್ಯಾಮು. ರಸೂಲ ಮತ್ತ ಬನದಪ್ಪನ ನಡುವಿನ ಬದುವಿಗಿ ಹತ್ತೇ ಬನದಪ್ಪನ ಹೊಲದಾಗಿಂದ ಕೆನಲ್ ಹೋಗ್ಯದ ಇಬ್ಬರೂ ಅರ್ದದ ಜಾಗ ಕೊಡ್ರಿ ಅಂತ ಕೇಳಂಗಿಲ್ಲ, ನಡೂ ಹೊಲದಾಗಿಂದ ಗಾಡಿಗಿ ಹಾದಿ ಕೊಡು ಅಂತ ಕೇಳ್ದರ ಅಂವ ಹ್ಯಾಂಗ ಕೊಟ್ಟಾನು ಹೇಳು? ನಡೂ ಹೊಲ ಯಾಕರ ಬಂತೋ ಅನ್ನಂಗ ಆಗ್ಯದ.'' ಬೇಸರಪಡುತ್ತ ಹೇಳಿದ ಈರಣ್ಣ ಸಾಹುಕಾರ.

ಕೊರಳಲ್ಲಿ ಗೆಜ್ಜೆ ಇರದ ಎತ್ತುಗಳು ಸದ್ದಾಗದಂತೆ ಹೆಜ್ಜೆ ಇಡುತ್ತಿದ್ದವು. ಇತ್ತ ಜಾತ್ರೆಯಲ್ಲಿ ಜನರ ಬರೀ ಸದ್ದು ಗದ್ದಲ. ದರ್ಗಾದಲ್ಲಿ ಲೋಬಾನ, ಊದುಬತ್ತಿಯ ಹೊಗೆ ತುಂಬಿ ಹೋಗಿತ್ತು. ದರ್ಗಾದ ಮುಂದೆ ಚುರುಮುರಿಯ ಕಿಸ್ತಿ ತುಂಬಿಸಲು ಜನ ಮುಗಿಬಿದ್ದಿದ್ದರು. ಚೀಲದಿಂದ ಮಂತಣಿಗೆ ಚುರುಮುರಿ ಸುರಿಯುತ್ತಿದ್ದವ ''ಸಕ್ಕಸೈದ್ ಕೀ ದೊಸ್ತರ ಹೋ ದಿನ್''. ಅಂದರೆ, ಕಿಸ್ತಿಯ ಚುರುಮುರಿ ಬಳಿದುಕೊಂಡು ಉಡಿ ತುಂಬಿಕೊಳ್ಳುವ ಭಕ್ತರು ಒಕ್ಕೊರಲಿಂದ ''ದೋಸ್ತರ ಹೋದ್ದಿನ್'' ಅನ್ನುತ್ತಿದ್ದರು. ಸಾಲು ಮಿಠಾಯಿ ಅಂಗಡಿಗಳ ಹಿಂಭಾಗದ ಬಯಲಲ್ಲಿ ಕುಸ್ತಿಯ ಮೈದಾನದ ಸುತ್ತ ರಂಗೇರಿತು. ಸೊಂಟದಲ್ಲಿ ತುಂಡು ಕೆಂಪು ಚಡ್ಡಿ ಧರಿಸಿದ್ದ, ತೆರೆದೆದೆಯ ಹುರಿಮೀಸೆ ಪೈಲ್ವಾನರು ಮೈದಾನಕ್ಕಿಳಿದು ತೊಡೆ ತೋಳು ತಟ್ಟಿಕೊಳ್ಳುತ್ತಿದ್ದಂತೆಯೇ ಲಯಬದ್ಧ ಹಲಗೆ ಸದ್ದಿಗೆ ಜನಪ್ರವಾಹ ಅತ್ತ ಹರಿಯತೊಡಗಿತು. ಒಂದೇ ದಿನದಲ್ಲಿ ಮುಗಿದು ಹೋಗುವ ಸಾವಿರಾರು ಜನ ಸೇರುವ ಜಾತ್ರೆಯಲ್ಲಿ ಭಕ್ತರಿಗೆ ಖುಷಿ ನೀಡುವ ಮನೋರಂಜನೆ ಅಂದರೆ ಮುಖ್ಯವಾಗಿ ಸುತ್ತಲಿನ ಹಳ್ಳಿಗಳ ಪೈಲ್ವಾನರ ಕುಸ್ತಿ. ಅನಂತರದವೆಂದರೆ ಹಾವಾಡಿಗನ ಆಟ, ದೊಂಬರಾಟ ಮತ್ತು ''ಬಂಬೈ ಶಹರ್ ಕಿ ಕಿನಾರೆ ದೇಖೊ; ದಿಲ್ಲೀಕಿ ಕುತುಬ್ ಮಿನಾರ್ ದೇಖೊ.'' ಅಂತ ಕೂಗಿ ಕರೆದು ತೋರಿಸುವ ಡಬ್ಬ ಸಿನೆಮಾಗಳು. ಮೊದಲೆಲ್ಲ ಕೇವಲ ಐದು ರೂಪಾಯಿಯಿಂದ ಕುಸ್ತಿ ಪಂದ್ಯ ಆರಂಭವಾಗುತ್ತಿದ್ದವು. ಕಾಲಗತಿಸಿದಂತೆ ಪಂದ್ಯದ ಹಣವೂ ಹೆಚ್ಚಿ ಈಗೆಲ್ಲ ಅಖಾಡದಲ್ಲಿ ಪಿಳ್ಳೆ ಹುಡುಗರು ತೊಡೆ ತಟ್ಟಿ ನಿಂತರೂ ಕನಿಷ್ಠ ನೂರೊಂದು ರೂಪಾಯಿ ಪಂದ್ಯವೇ ಆಗಬೇಕು. ಪಂದ್ಯದ ಹಣ ಸಾವಿರ ತಲುಪುವುದು ಸಹಜವಾಗಿಬಿಟ್ಟಿದೆ. ಕುಸ್ತಿ ಪಂದ್ಯ ನಿಂತು ನೋಡುವ ಹುಡುಗರು ಸಿಳ್ಳು ಹಾಕುತ್ತ ತಾವೇ ಸೆಣಸುತ್ತಿರುವರೇನೋ ಅನ್ನುವಂತೆ ಮುಷ್ಠಿ ಬಿಗಿಗೊಳಿಸಿ ಕೇಕೆ ಹಾಕಿ ಕುಣಿಯುತ್ತಿದ್ದರು. ಅವಸರವಸರವಾಗಿ ಫಳಾರ ಕಟ್ಟಿಸಿಕೊಂಡ ರಸೂಲಸಾಬ ಗುಂಪಿನ ಮಧ್ಯ ತೂರಿಕೊಂಡು ಪಂದ್ಯ ನೋಡಲು ಬಂದು ನಿಂತ. ಒಂದು ಎರಡು ಮುಗಿದು, ಎಣ್ಣೆ ಬಸಿಯುತ್ತಿದ್ದ ಕರಿದೇಹದ ಮುಕರಂಬಿ ಪೈಲ್ವಾನ ಕಾಶಪ್ಪ ತೊಡೆ ತಟ್ಟಿಕೊಳ್ಳುತ್ತ ಕುಸ್ತಿಗೆ ಸಿದ್ಧವಾಗುತ್ತಲೇ ರಸೂಲಸಾಬ ತನ್ನ ಬಗಲು ಕಿಸೆಯಲ್ಲಿನ ನೂರರ ಎರಡು ಗರಿಗರಿ ನೋಟು ತೆಗೆದು ಕಾಶಪ್ಪನ ಮೇಲೆ, ಹಣ ಕಟ್ಟಿಯೇಬಿಟ್ಟ. ಕಂದಗೂಳ ಪೈಲ್ವಾನ್ ಏನು ಕಡಿಮೆಯೇ ಚಿಗುರು ಮೀಸೆಯ ಮೇಲೊಮ್ಮೆ ಕೈಸವರಿಕೊಂಡು ಎದೆ ಮರೆಮಾಡಿದ್ದ ಹೊದ್ದ ಶೆಲ್ಯ ತೆಗೆದೆಸೆದು ಬಾಗಿ ನೆಲ ಮುಟ್ಟಿ ಮಣ್ಣಿಗೆ ವಂದಿಸಿ ಸಿದ್ಧನಾದ. ಕಳೆದ ಮೂರ್ನಾಲ್ಕು ವರ್ಷಗಳಿಂದಲೂ ನೋಡುತ್ತ ಬಂದಿದ್ದ ರಸೂಲಸಾಬನಿಗೆ ಗೊತ್ತಿತ್ತು, ಎಷ್ಟೇ ಪಂದ್ಯಗಳು ನಡೆದರೂ ಕೊನೆಗೆ ಚಾಂಪಿಯನ್ ಆಫ್ ದೀ ಚಾಂಪಿಯನ್ಸ್ ಕಾಶ್ಯಪ್ಪನೇ ಅಂತ. ನೋಡ ನೋಡುತ್ತಿದ್ದಂತೆಯೇ ಇವನಿನ್ನೂ ವಿಜಯದ ಕನಸು ಕಾಣುತ್ತಿರುವಾಗಲೇ ಪೇಚು ಹಾಕಿದ ಕಾಶ್ಯಪ್ಪ, ಕಂದಗೂಳ ಪೈಲ್ವಾನನನ್ನು ಧೊಪ್ಪನೆ ನೆಲಕ್ಕೆ ಬೀಳಿಸಿ ಚಿತ್ತು ಮಾಡಿ ಬೆನ್ನಿಗೆ ಮಣ್ಣು ಮೆತ್ತಿಸಿ ಎದ್ದು ಚೆಂಡಿನಂತೆ ಕುಣಿದು ಕುಪ್ಪಳಿಸಿದ. ತೀವ್ರ ಪೈಪೋಟಿ ನಿರೀಕ್ಷಿಸಿದ್ದ ಜನ ಇಷ್ಟು ಬೇಗ ಪಂದ್ಯ ಮುಗಿದದ್ದಕ್ಕೆ ನಿರಾಸೆಪಟ್ಟರಾದರೂ ಕಾಶ್ಯಪ್ಪನ ವಿಜಯಕ್ಕೆ ಜಯಕಾರ ಹೇಳುವುದು ಮರೆಯಲಿಲ್ಲ. ತನ್ನೆರಡು ನೂರರ ನೋಟಿನೊಂದಿಗೆ ಇನ್ನೆರಡು ಮರಳಿ ಪಡೆದ ರಸೂಲಸಾಬ ತಾನೇ ಪಂದ್ಯ ಗೆದ್ದಷ್ಟು ಸಂಭ್ರಮ ಪಡುತ್ತ ಜನರ ಗುಂಪಿನಿಂದ ಹಿಂದೆ ಹಿಂದೆ ಸರಿದು ಹೊರಗೆ ಬಂದ. ಹಸಿದಿದೆ ಅಂತ ಹೊಟ್ಟೆ ನೆನಪು ಮಾಡಿತು. ನೂರರ ಎರಡು ಹೊಸ ನೋಟು ಬೇರೆ. ಹಾಗೇ ಜನರ ಮೈಗಳಿಗೆ ಮೈ ಒರೆಸುತ್ತ ರಟಗಲ್ ಸಿದ್ದಣ್ಣನ ಹೋಟೆಲ್‌ನಲ್ಲಿ ಬಂದು ಕುಳಿತು ಬಿಸಿಬಿಸಿ ಪೂರಿ, ಗೋಲ್ ಭಜ್ಜಿ ಒಟ್ಟಿಗೇ ಹೇಳಿದ, ಚಹಾ ಕುಡಿದು ಹೊರಗೆ ಬರುತ್ತಿದ್ದನಿವ. ಆಕಡೆಯಿಂದ ಬರುತ್ತಿದ್ದ ಹೈದರ್, ರಸೂಲಸಾಬನನ್ನು ನೋಡುತ್ತಲೇ;

''ಅರೆ ಚಾಚಾ, ಏಕ ಘಂಟೇಸೇ ಢೂಂಡರಹಾ ಹೂಂ, ತುಂ ಕಿದರ್ ಥೆ?'' ಹತ್ತಿರ ಬಂದು ಹೇಳಿದಾಗ; ''ಕೈಂವರೇ, ಕ್ಯಾ ಬಾತ್ ಹೈ?'' ಅಂತ ಮರುಪ್ರಶ್ನೆ ಹಾಕಿದ.

''ಮೈ ಉರಸ್ ಮೆಂ ಆಕೆ ಏಕ ಘಂಟಾ ಹುವಾ, ಆನೇಸೆ ಪೈಲೆ ಬೈಲ್ ಭಂದನೇಕೆಲಿಯೆ ಖೇತ್ ಗಯಾಥಾ. ಓ ಈರಣ್ಣ ಸೌಕಾರ್ ಹೈನಾ, ತುಮ್ಹಾರೆ ಖೇತ್ ಮೇಸೆ ಗಾಡೀ ಲೇಕೆ ಜಾ ರಹಾ ಥಾ.'' ಅಂತ ಸುದ್ದಿ ಮುಟ್ಟಿಸಿದ. ಜಾತ್ರೆಯ ರಂಗಿನಲ್ಲಿ ಮೈ ಮರೆತಿದ್ದ ರಸೂಲಸಾಬನ ಮುಖ ಕೆಂಪಾಯಿತು. ತಾನು ಬೇಡವೆಂದು ನಿರ್ಬಂಧಿಸಿದ್ದರೂ ತಾನಿಲ್ಲದಿರುವಾಗ ತನ್ನ ಹೊಲದಲ್ಲಿಂದ ಗಾಡಿ ತೆಗೆದುಕೊಂಡು ಹೋದದ್ದಕ್ಕೆ ಸಾಹುಕಾರನ ನೆನೆದು ಹಲ್ಲು ಕಟಿಯುತ್ತ;


''ತೂ ಕ್ಯಾತೊ ಕುಚ್ ಲೇತಾ ಕ್ಯಾ ಲೇಕೆ, ಮೇರೆ ಸಾಥ್ ಚಲ್ ರೇ ಹೈದರ್'' ಅಂದ.

''ಹೂಂ ಚಾಚಾ, ಮೈ ಭಿ ತುಮಾರೆ ಸಾಥ್ ಚಲೂಂಗಾ.'' ಅಂತ ಹೇಳಿದವನೇ ಅವನ ಹಿಂದೆ ನಡೆದ.

ಇತ್ತ ಓದಲೆಂದು ನಗರದಲ್ಲಿದ್ದ ರಸೂಲಸಾಬನ ಮಗ ಉರುಸ್‌ಗೆಂದು ಊರಿಗೆ ಬಂದವ ಊಟ ಮಾಡಲು ತನ್ನವ್ವ ಒತ್ತಾಯಿಸಿದರೂ ಒಪ್ಪದೇ; ''ಪೈಲೇ ಜಾಕೆ ಖುದಾ ಕೋ ಸಲಾಂ ಕರಕೇ ಆತೂಂ'' ಅಂತ ಹೇಳಿ ಗುಡ್ಡದ ಹಾದಿ ಹಿಡಿದಿದ್ದ.

ಮೇವು ತುಂಬಿದ್ದ ಎರಡೂ ಗಾಡಿಗಳು ಇನ್ನೇನು ರಸೂಲಸಾಬನ ಹೊಲದ ಬದು ದಾಟಬೇಕು, ಇಬ್ಬರೂ ಅಡ್ಡಗಟ್ಟಿ ಬಂದು ಗಾಡಿ ಎದುರು ನಿಂತರು.

ಪರಿಹಾರ



ಮಣ್ಣು ನೀಡುವ
ಅನ್ನದ ಋಣ
ತೀರಿಸಲು
ಒಂದೇ ದಾರಿ
ಬೆಳೆಸಬೇಕು
ಮಣ್ಣಿನ ಮೈಮೇಲೆ
ನೆರಳು ಚೆಲ್ಲುವ
ಮರಗಳು

■ ಜರಗನಹಳ್ಳಿ ಶಿವಶಂಕರ್



ಧುತ್ತನೆ ಎದುರಾದ ರಸೂಲನನ್ನು ಕಂಡು ಈರಣ್ಣ ಸಾಹುಕಾರ ಕಕ್ಕಾವಿಕ್ಕಿಯಾದ. ಅನಿರೀಕ್ಷಿತ ಸನ್ನಿವೇಶಕ್ಕೆ ಹೈದರನೇ ಕಾರಣ ಅಂತ ಊಹಿಸಿದ. ರೋಷದಿಂದ ಕುದಿಯುತ್ತಿದ್ದ ರಸೂಲನ ರಕ್ತ ದನಿಯಾಗಿ ಹೊರಬಂದು;

''ಸೌಕಾರ, ಬಾಯಿಮಾತಿಲಿ ಹೇಳ್ದರ ನಿನಗ ತಿಳ್ಯಂಗ ಕಾಣಲ್ಲ. ಹೊಲದಾಗಿಂದ ಹೋಬ್ಯಾಡಂದರಬೀ ನಾನಿಲ್ಲದಾಗ ಗಾಡಿ ತಂದೀದಲ್ಲ ನಿನಗ ಜರಾಅರ ಖಬರ್ ಅದನಾ ಇಲ್ಲ?'' ಅಂದ.

''ಊರ ಹಿರೇರು ಬಂದು, ಬ್ಯಾರೇ ದಾರೀನೇ ಇಲ್ಲ ಹಾದಿಕೊಡು ಅಂದಾಗ ಸುಮ್ಮನಿದ್ದು ಮತ್ತ ತಕರಾರು ತೆಗೆದರ ನಾ ಏನ್ಮಾಡ್ಲಿ ರಸೂಲ? ಮನ್ಯಾಗ ಒಂದು ದಂಟು ಬೇಕಂದರೂ ಕಳಕಿ ಇಲ್ಲೇ ಒಣ ಗೂಟಕ ದನ ಕಟ್ಟೇನಿ. ಇನ್ನ ರಾಶಿ ಆಗಾತನ ಗಾಡಿ ತರಲ್ಲ ದೊಡ್ಡ ಮನಸ್ಸು ಮಾಡಿ ಈ ಸಾರಿ ಬಿಟ್ಟುಬಿಡು.'' ಅಂತ ಸಮಾಧಾನದಿಂದಲೇ ಹೇಳಿದ ಈರಣ್ಣ ಸಾಹುಕಾರ.

''ಹೇಳಾ ಮಕ್ಕಳದೇನು ಗಂಟು ಹೋತದ ಸೌಕಾರ, ಬೆಳಿ ಹಾಳಾದರ ನನಗ ಬ್ಯಾನಿ ಆತದ. ಬೆಳಿ ಹಾಳಾಗಿದ್ದಕ್ಕ ಜುರ್ಮಾನಾ ಕಟ್ಟು ಇಲ್ಲಂದ್ರ ಇಲ್ಲೇ ಗಾಡಿ ಬಿಡು. ''ಹೆಜ್ಜೆ ಕದಲಿಸದೇ ಏರಿದ ದನಿಯಲ್ಲಿ ಹೇಳಿದ ರಸೂಲ.

''ಅಲ್ಲಪ ರಸೂಲ'' ಅನ್ನುತ್ತ ಗಾಡಿಯಿಂದ ಕೆಳಗಿಳಿದು ಬಂದ ಸಾಹುಕಾರ; ಇನ್ನೇನೊ ಹೇಳಬೇಕನ್ನುವಷ್ಟರಲ್ಲೇ ಮತ್ತೆ ರಸೂಲನೇ,

''ಅಲ್ಲಪ್ಪನೂ ಇಲ್ಲ ಬೆಲ್ಲಪ್ಪನೂ ಇಲ್ಲ ಮದಲ ಎತ್ತಿನ ಕೊಳ್ಳು ಹರಿ.'' ಅಂದಾಗ, ಹಿಂದಿನ ಗಾಡಿಯಲ್ಲಿನ ದ್ಯಾಮು;

''ಏ ಪಟೇಲ ಇನ್ನೆಡ್ಡು ಹೆಜ್ಜೆ ಆದರ ನಿನ್ನ ಹೊಲನೇ ಮುಗೀತಲ್ಲ. ಇದೊಂದು ಸಾರಿ ಬಿಡು ಇಬ್ಬರೂ ಕಲ್ತು ಮುಂದೇನರ ಮಾಡ್ಕೋರಿ.'' ಅಂದಾಗ;

''ಏ ತಿರ್ಸಟ್, ಫೈಸಲಾ ಹೇಳಲ್ಯಾಕ ನೀ ಯಾರಲೇ ಮಗನಾ.'' ಅಂದು;

''ಕ್ಯಾ ದೇಖತೇರೆ ಹೈದರ್ ಕುಣಕಿ ಛೋಡರೆ.'' ಅಂತ ರಸೂಲಸಾಬ ಹೈದರನಿಗೆ ಸೂಚನೆ ನೀಡಿದ.

ತನ್ನ ದಿನಚರಿ ಮುಗಿಸಿದ ಸೂರ್ಯ ಅಸ್ತಂಗತನಾಗಿ ಕೆಲನಿಮಿಷಗಳೇ ಗತಿಸಿದ್ದವು. ಮಬ್ಬುಗತ್ತಲಲ್ಲಿ ಜಾಗೃತವಾದ ಜೀರುಂಡೆಗಳ ಸದ್ದು ಇವರ ಎತ್ತರದ ದನಿಯ ಮುಂದೆ ಗೌಣವೆನಿಸಿತು. ಹಸಿದ ಎತ್ತುಗಳು ಬೆಳೆಗೆ ಬಾಯಿ ಹಾಕಲು ಹವಣಿಸಿದಾಗ ಮತ್ತೊಂದು ಅವಾಂತರ ಬೆಸೆದೀತೆಂದು ದ್ಯಾಮು, ಎತ್ತುಗಳಿಗೆ ಕಟ್ಟಿದ್ದ ಹಗ್ಗವನ್ನೆಳೆದುಕೊಂಡು ರಸೂಲನ ಹೊಲ ದಾಟಿಸಿ ಹಗ್ಗ ಸಡಿಲು ಮಾಡಿ ಬಸರಿ ಗಿಡಕ್ಕೆ ಕಟ್ಟಿದ.

ಇತ್ತ ನಡೂ ಊರಲ್ಲಿ ದೇವಕಿ ಗುಡಿಯ ಬಯಲಲ್ಲಿ, ಜಾತ್ರೆ ಮುಗಿಸಿಕೊಂಡು ಮರಳಿದ ಊರಜನ ತಿಂದುಂಡು ಕೌದಿ, ಕಂಬಳಿ, ಚಾಪೆ ಎತ್ತಿಕೊಂಡು ಬಂದು ರಾತ್ರಿ ಇಡೀ ನಡೆಯುವ ಗೀಗೀ ಪದ ಕೇಳಲು ಕಾತುರರಾಗಿ ಕುಳಿತಿದ್ದರು. ಬೇರೆ ಬೇರೆ ಯಾವುದೇ ತಂಡ ಬಂದರೂ ಪ್ರತಿವರ್ಷ ಹಾಡಿನ ಕಾಶಿಬಾಯಿ ಮಾತ್ರ ತಪ್ಪದೇ ಬರಲೇಬೇಕು, ರಾತ್ರಿಯ ಹಾಡುಗಾರಿಕೆಯ ಆರಂಭ ಮಾಡಲೇಬೇಕು. ಕಳೆದ ಹತ್ತೆಂಟು ವರ್ಷಗಳಿಂದಲೂ ಈ ಸಂಪ್ರದಾಯ ಬೆಳೆದು ಬಂದಿತ್ತು. ಎತ್ತರದ ದೇವಕಿ ಗುಡಿಯ ಕಟ್ಟೆಯ ಮೇಲೆ ತಂಡದೊಂದಿಗೆ ಬಂದು ನಿಂತ ಕಾಶಿಬಾಯಿ, ಸೆರಗು ಸೊಂಟಕ್ಕೆ ಸಿಕ್ಕಿಸಿ, ಕೈಬಳೆ ಏರಿಸಿ, ಡಪ್ಪು ಬಡಿಯುತ್ತಿದ್ದಂತೆಯೇ ಅಬಾಲವೃದ್ಧರಾದಿಯಾಗಿ ನೆರೆದವರು ಚಪ್ಪಾಳೆ ತಟ್ಟಿದರು, ಹರೆಯದ ಹುಡುಗರು ಸೊಂಯ್ಯಂತ ಸಿಳ್ಳು ಹಾಕಿದರು. ಎಣ್ಣೆಗಪ್ಪು ಬಣ್ಣದ, ತುಂಬಿದ ಆಕರ್ಷಕ ಮುಖದ ಕಾಶಿಬಾಯಿ ತುಟಿಯಲ್ಲೊಂದು ನಗೆ ಚಿಮ್ಮಿಸಿ, ತಲೆಬಾಗಿ ವಂದಿಸಿ;

''ಕುಂತ ನಿಂತ ಜನಕೆಲ್ಲ
ಕೈ ಮುಗಿದು ಹೇಳತೀನಿ
ಗಪ್ಪಾಗಿ ಕುಂತು ಪದ ಕೇಳಬೇಕ್ರಿ
ಗಪ್ಪಾಗಿ ಕುಂತರ ಹೊಸ ಹೊಸ ಪದಗಳು
ಸಾಕನ್ನೊ ತನ ನಾ ಹಾಡುವಕ್ಕಿರಿ ಗೀಯ ಗಾ... ಗಾಗಿಯ ಗಾ.... ಗೀಯ ಗೀಯ್'' ಅಂತ ಪ್ರಾರಂಭಿಸಿದಳು.

ತಾನು ಊರಿನಿಂದ ಬಂದಾಗಿನಿಂದಲೂ ತನ್ನ ಅಬ್ಬಾನ ಖಬರ್ ಇಲ್ದೇ ಕಕ್ಕಾವಿಕ್ಕಿಯಾಗಿದ್ದ ರಸೂಲಸಾಬನ ಮಗ ಅಪ್ಪ ಹಾಗೇ ಉರಸ್‌ನಿಂದ ಮರಳಿ ಬಂದು ಗೀಗೀ ಪದ ಕೇಳಲು ಹೋಗಿ ಕುಳಿತಿರಬಹುದು ಅಂತ ಲೆಕ್ಕ ಹಾಕುತ್ತ ಅಂಗಳ ದಾಟಿ ಹೊರಗೆ ಬಂದಾಗ ಬೀಡಿಯ ಹೊಗೆ ಬಿಡುತ್ತ ಎದುರಾದ ಐನೋರ ಮಗ ಮಲ್ಲಯ್ಯ;

''ನಾ ನಿನ್ನ ಕಡೇನೇ ಹೊಂಟಿದನಪೋ ತಮ್ಮ'' ಅಂದಾಗ;

''ಯಾಕ ಮಲ್ಲಯ್ಯ ಏನ್ ಕೆಲಸ ಇತ್ತು?'' ಅಂದನಿವ.

''ನಂದೇನೂ ಕೆಲಸ ಇಲ್ಲಪ ನಾ ಜಾತ್ರಿಲಿಂದ ಥಾಂಡ್ಯಾಕ್ ಹೋಗಿ ತುಪ್ಪ ತೊಗೊಂಡು ಮನೀಗಿ ಹೊಂಟಿದ್ದ. ನಿಮ್ಮ ಹೊಲದ ಬಲ್ಲಿ ಬಂದಾಗ ಅಲ್ಲಿನೂ ಒಂದು ಸಣ್ಣ ಜಾತ್ರೀನೇ ನಡದದ. ನಿಮ್ಮಪ್ಪ, ರಸೂಲಸಾಬ ಮತ್ತ ಖೇಂತಿ ಮಾಡ್ಕೊಂಡು ಕುಂತಾರ. ಬ್ಯಾಡ ಅಂತ ಹೇಳದರನೂ ಹೊಲದಾಗಿಂದ ಗಾಡಿ ಹ್ಯಾಂಗ ತಂದಿ ಅಂತ ರಸೂಲ, ಇದೊಂದು ಕಿತ್ಯಾ ಬಿಡು ಮುಂದ ನೋಡಮಿ ಅಂತ ನಿಮ್ಮಪ, ಯಾಕೋ ಕೈ ಕೈ ಮಿಲಾಯಿಸಂಗೇ ಕಾಣ್ತದ, ನೀ ಊರಾಗಿನ ನಾಕ ಮಂದಿ ಹಿರೇರಿಗಿ ಕರ್ಕೊಂಡು ಜರಾ ಜಲ್ದಿ ಹೋಗು ತಮ್ಮ.'' ಅಂತ ವರದಿ ಒಪ್ಪಿಸಿದ. ಕ್ಷಣ ಹೊತ್ತು ಯೋಚನೆಯಲ್ಲಿ ಮುಳುಗಿದ ರಸೂಲನ ಮಗ;

''ಊರಾಗ ಭರ್ಜಕ್ ಗೀಗೀ ಪದ ಸುರು ಆಗ್ಯದ, ಬಾ ಅಂದ್ರ ಈಗ್ಯಾರು ಬರ್‍ತಾರ. ದೊಡ್ಡ ಮನಸ್ಸು ಮಾಡಿ ನೀನೇ ನನ್ನ ಸಂಗಟ ನಡಿ ಮಲ್ಲಣ್ಣ.'' ಅಂದನಿವ.

''ಹಾಂಗಂತ್ಯ ಹಂಗಾದರ ನಾನೇ ಬರ್‍ತೀನಿ ನಡಿ.'' ಅಂದವನೇ ಅವನೊಂದಿಗೆ ಹೆಜ್ಜೆಹಾಕಿದ.

ಕತ್ತಲು ಇನ್ನಷ್ಟು ಹೆಪ್ಪುಗಟ್ಟಿತ್ತು. ಇವರು ಮೌಲಾನಬಿ ಹೊಲದಲ್ಲಿ ಬರುತ್ತಿದ್ದಂತೆಯೇ ಎತ್ತರದ ದನಿ ಇವರ ಕಿವಿಗಪ್ಪಳಿಸಿದಾಗ ನಡಿಗೆಯ ವೇಗ ಮತ್ತಷ್ಟು ಹೆಚ್ಚಿಸಿದರಿವರು.

''ಅಬ್ಬಾ... ಓ ಅಬ್ಬಾ...'' ಹತ್ತಿರ ಬರುತ್ತಾ ಕರೆದಾಗ ಮಗನ ದನಿ ಕೇಳಿ ಮತ್ತಷ್ಟು ಶಕ್ತಿ ಬಂದಂತಾಗಿ.

''ಅರೇ ಬೇಟಾ ತೂ ಕಬ್ ಆಯಾರೆ? ಇತನೀ ರಾತಮೇ ಹ್ಯಾಂ ಕೈಕೊ ಆಯಾ?'' ಅಂದ ಅಪ್ಪನ ಮಾತಿಗೆ ಉತ್ತರಿಸುವ ಗೋಜಿಗೆ ಹೋಗದೇ ಮಧ್ಯದಲ್ಲಿ ಬಂದು ನಿಂತು;

''ಏ ಕ್ಯಾ ಹೋರೆ ಅಬ್ಬಾ? ಇದೇನು ಮಾಡ್ಕೊಂಡು ಕುಂತೀರಿ ಚಾಚಾ?'' ಅಂತ ಕೇಳಿದ.

''ನಾ ಏನ್ಮಾಡೀನೋ ತಮ್ಮ, ಕಳು ಮಾಡಿಲ್ಲ ಮನೀ ಹೊಡದಿಲ್ಲ,

ಗ್ರಂಥ



ದೇಶ ಒಂದು
ಮಹಾ ಗ್ರಂಥ
ಅದರೊಳಗೆ ತುಂಬಿವೆ
ಚಲಿಸುವ ಅಕ್ಷರಗಳು
ಅವು
ಜನ ಸಾಮಾನ್ಯರ
ಕಣ್ಣುಗಳು

■ ಜರಗನಹಳ್ಳಿ ಶಿವಶಂಕರ್

ಎತಗೋಳ ಬಾಯಿಗಿ ಚುಕ್ಕಾ ಹಾಕಿ ಒಂದು ದಂಟ್ನೂ ಬೆಳಿ ಮುಕ್ಕಾಗಲಾರ್ದಂಗ ಎರಡು ಸಾಲು ನಡು ಮಾಡ್ಕೊಂಡು ಗಾಡಿ ತಂದೀನಿ, ಬ್ಯಾಡಂದ್ರನೂ ಗಾಡಿ ಹ್ಯಾಂಗ ತೆಂದೆಂತ ನಿಮ್ಮಪ್ಪ ತೋಳೇರಸಿ ಹೊಡಿಲಾಕೀ ನಿಂತಾನ. ಹೊಲಕ್ಕ ಹೋಗದಕ ಬ್ಯಾರೆ ದಾರೀನೇ ಇಲ್ಲ ತಪ್ಪಂತೂ ಮಾಡೀನಿ ಹೊಡದರ ಹೊಡಿಯಪ್ಪ ಅಂತ ನಾನೂ ಬೆನ್ನು ಕೊಟ್ಟೀನಿ.'' ಅಂತ ಸೌಕಾರ ಹೇಳುವಾಗ ದ್ಯಾಮು ಅವರ ಹಿಂದೆ ಬಂದು ನಿಂತ. ಈರಣ್ಣ ಸಾಹುಕಾರನ ಸೌಮ್ಯ ಸ್ವಭಾವದ ಪರಿಚಯವಿದ್ದ ರಸೂಲಸಾಬನ ಮಗ;

''ಅರೇ ಅಬ್ಬಾ, ಜೋ ಹೋಗಯಾ ಸೋ ಹೋಗಯಾ. ಉರುಸ್ ಕೇ ದಿನ್ ಏ ಕ್ಯಾ ಲೇಕೆ ಬೈಠೆ? ರಾತ್ ಹೋಗಯ ಅಬ್ ಚಲೋ ಕಲ್ ಸುಬಹ ದೇಖೆಂಗೆ.'' ಅಂತ ತನ್ನ ಅಬ್ಬಗೆ ಸಮಜಾಯಸಿ ಹೇಳಿದಾಗ ಮಗನ ಅನಿರೀಕ್ಷಿತ ಸಮಾಧಾನಕ್ಕೆ ರೇಗಿ ಹೋದ ರಸೂಲ;

''ಅರೆ ಬೇಟಾ ಏ ಹಕೀಕತ್ ತೇರೆ ಸಮಜಮೆ ನಹಿ ಆಯೇಗಿ ತೂ ಜರಾ ಚುಪ್ ಬೈಟ್.'' ಅಂದಾಗ ತನ್ನಪ್ಪನ ಕೈ ಹಿಡಿದುಕೊಂಡು ತುಸು ದೂರ ನಡೆದು;

''ಅಬ್ಬಾ, ಉಮರ್ ಮೆ ಮೈ ಛೋಟಾ ಜರೂರ ಹೂಂ. ಮೇರಾ ಬಾತ್ ಕೋ ಸಮಝನೇಕಿ ಕೋಶಿಶ ಕರೋ. ಶಹರಮೆ ಅಗರ್ ಈರಣ್ಣ ಚಾಚಾಕಾ ಬೇಟಾ ನ ಹೋತಾ ಮೈ ಬಹುತ ಪಹಿಲೇ ಹಿ ಶಹರ ಛೋಡಕೆ ವಾಪಸ್ ಘರ್ ಆಕೆ ಬೈಠಾ ಹೋತಾ. ಓ ಮುಝೆ ಸಮಝಾಯಾ, ಅಪನೇ ರೂಂಮೇ ಬುಲಾಲಿಯಾ, ಪಡಾಯಿಕೆ ಬಾರೆಮೆ ಬಹುತ್ಸೇ ಬಾತ್ ಸಿಕಾಯಾ. ಅಗರ್ ಉನ್‌ಕಿ ಮದ್ದತ್ ನಹಿ ಮಿಲಾ ಹೋತಾ ಆಜ್ ಮೈ ಡಿಗ್ರಿ ಹಾಸಿಲ್ ನಹಿ ಕರ್ ಸಕತಾತಾ. ಮೈತೋ ಉನಕೊ ಮೇರಾ ಬಡಾ ಭಾಯಿ ಮಾನಾ ಹೂಂ. ಖುದಾ ಕೇ ಲಿಯೇ ಮೇರಾ ಬಾತ್ ಮಾನೋ ಅಬ್ ಗಾಡಿ ಛೋಡೊ. ಕಭಿ ಕಭಿ ಆನೆ ಜಾನೆ ಕೇ ಲಿಯೆ ಆಗೆಭಿ ಇತರಾಜ್ ಮತ್ ಕರೋ.'' ಅಂತ ಸಜ್ಜನನಂತೆ ಮಗ ಹೇಳಿದಾಗ;

''ಬೇಟಾ ಓ ಬಾತ್ ಅಲಗ್ ಹೈ, ಅಗರ್ ಅಬ್ ಮೈ ಛೋಡ್ ದಿಯಾ ಕಲ್ ಔರ ಏ ಸಿಲ್ ಸಿಲಾ.....'' ಅನ್ನುತ್ತಿದ್ದ ಅಪ್ಪನನ್ನು ಮಧ್ಯದಲ್ಲೇ ತಡೆದ ಮಗ;

''ಮೈ ಕಹಾನಾ ಅಬ್ಬಾ, ಸಾರ ಪುರಾನಾ ಬಾತ್ ಛೋಡದೊ. ಮೇರಾ ಬಾತ್‌ಮಾನೊ ಹಂ ಸಬ್ ಪಡೋಸ್ ಭಾಯಿ ಭಾಯಿ ಜೈಸಾ ರಹನೇ ಮೇ ಹಿ ಹಮ್ ಸಬ್ ಕಾ ಭಲಾ ಹೈ.'' ಅಂತ ಹೇಳಿದವನೇ ತನ್ನಪ್ಪನ ಕೈ ಹಿಡಿದುಕೊಂಡು ಗಾಡಿಯ ಬಳಿ ಬಂದ.

''ಸೌಕಾರ, ನನ್ನ ಮಗ ನಾಕು ಒಳ್ಳೆ ಇಚಾರದ ಮಾತು ಹೇಳಿದ ಮ್ಯಾಲ ತೆಗದು ಹಾಕದಕ ಮನಸು ಬರಲ್ದು ಈಗ ಗಾಡಿಗಿ ಕೊಳ್ಳು ಕಟ್ಟಿ ಊರಿಗಿ ನಡೀರಿ ಮತ್ತ ನಾಳಿಗಿ ಕುಂತು ಇಚಾರ ಮಾಡಮು'' ಅಂತ ಹೇಳಿದ ರಸೂಲಸಾಬನ ಮಾತು ಸಾಹುಕಾರನಿಗೆ ನಂಬಲಿಕ್ಕೇ ಆಗಲಿಲ್ಲ, ಓದಿದ ಮಗನ ಜಾಣತನ ಮನದಲ್ಲೇ ಮೆಚ್ಚಿದ ಸಾಹುಕಾರ;

''ಏಮಗಾ ನಾಳೀಗಿ ಊರಿಗಿ ಹೋತೇನೋ ಮುಂಜೇನಿ ಜರಾ ಮನಿ ಕಡಿ ಬಂದು ಹೋಗಪ್ಪ, ಜಾತ್ರಿ ಫಳಾರ, ಮಿಠಾಯಿ ಕುಡ್ತೇನಿ ನಿನ್ನ ದೋಸ್ತಗ ಅದೇ ನನ್ನ ಮಗನಿಗಿ ಮುಟ್ಟಸು''. ಅಂತ ಹೇಳುತ್ತಿರುವಾಗಲೇ ದ್ಯಾಮು ಎತ್ತು ತಂದು ಗಾಡಿ ಕಟ್ಟಿ ಹೊರಡಲು ಸಿದ್ಧತೆ ಮಾಡಿದ. ಅನಿರೀಕ್ಷಿತ ತಿರುವು ಕಂಡು ಹೈದರ ಫಕೀರನಂತೆ ಬಾಯಿ ಬಿಟ್ಟು ನೋಡುತ್ತಿದ್ದ; ಮೈ ಮ್ಯಾಲ ಬಿದ್ದು ಹೊಡೆದಕ್ಕೇ ಬಂದಿದ್ದ ರಸೂಲ, ಮಗ ಬರುತ್ಲೇ ಹ್ಯಾಂಗ ಮೆತ್ತಗಬಿದ್ದ ಅಂತ ದ್ಯಾಮು ಲೆಕ್ಕ ಹಾಕ್ತಿದ್ದ. ಸುದ್ದಿ ಮುಟ್ಟಸಿದ್ದಕ್ಕೂ ಸಾರ್ಥಕ ಆಯ್ತಂತ ಅಯ್ನೋರ ಮಲ್ಲಯ್ಯ ಬೀಗತಿದ್ದ. ಈರಣ್ಣ ಸೌಕಾರನ ಮುಖದಲ್ಲಿ ನಗು ಮೂಡಿದ್ದು ಕತ್ತಲು ಮರೆಮಾಡಿತ್ತು. ಊರಲ್ಲಿ ಹಾಡುತ್ತಿದ್ದ ಗೀಗಿ ಪದದ ದನಿ ಕ್ಷೀಣವಾಗಿ ಲೌಡ್ ಸ್ಪೀಕರ್ನಿಂದ ತಂಪು ಗಾಳಿಯಲ್ಲಿ ತೇಲಿ ಬರುತ್ತಿತ್ತು. ■

HOTEL Shivani


''ಸುಂದರ ಪರಿಸರ ಪ್ರವಾಸಿಗರ ಸ್ವರ್ಗ''
ಪ್ರವಾಸಿ ತಾಣ ಶಿರಸಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಸಿ-ಯಾತ್ರಾರ್ಥಿಗಳ ವಾಸ್ತವ್ಯಕ್ಕಾಗಿ ಅಂತಾರಾಷ್ಟ್ರೀಯ ಗುಣಮಟ್ಟದಂತಹ ಪರಿಸರವನ್ನೊಳಗೊಂಡು, 13ನೇ ನವೆಂಬರ್ 1999ರಂದು ತಮ್ಮ ಸೇವೆಗಾಗಿ ಪ್ರಾರಂಭಗೊಂಡಿದೆ.



■ ಪ್ರವಾಸೋದ್ಯಮ ಇಲಾಖೆ, ಕರ್ನಾಟಕ ರಾಜ್ಯ ಸರಕಾರದಿಂದ ಮಾನ್ಯತೆ ಪಡೆದಿದೆ.
■ ಹನಿಮೂನ್ ಸ್ಪೆಷಲ್ (ನವ-ದಂಪತಿಗಳಿಗೆ) ಡಿಸೈನ್ಡ್ ಆ್ಯಂಡ್ ಡೆಕೋರೇಟೆಡ್ ಆರ್.ಆನಂದಕುಮಾರ್, ಬೆಂಗಳೂರು.
■ ಹವಾ ನಿಯಂತ್ರಿತ ಕೊಠಡಿಗಳು.
■ ಡಿಲಕ್ಸ್ ರೂಂಗಳು.
■ ಶುಚಿ-ರುಚಿ ತುರ್ತು ಸೇವೆಗಾಗಿ.

ಒಮ್ಮೆ ಭೇಟಿ ನೀಡಿ
ಹೋಟೆಲ್ ಶಿವಾನಿ
ಕಾರ್ಯನಿರ್ವಾಹಕ ನಿರ್ದೇಶಕರು
ದಿವ್ಯಾ ಟೂರಿಸ್ಟ್ ಕಂ (ಪ್ರೈ) ಲಿ.,
ಗಾರ್ಡನ್ ಲ್ಯಾಂಡ್, ಶಿರಸಿ-581402 (ಉತ್ತರ ಕನ್ನಡ)
ಫೋನ್ ನಂ. : 08384-29267.
ಫ್ಯಾಕ್ಸ್ ನಂ. : 08384-27797.

"ಚೌಡಯ್ಯದಾನಪುರ ಅಲ್ಲ, ಶಿವಪುರ"



ಮುಕ್ತೇಶ್ವರ ದೇವಾಲಯದ ಒಂದು ಆಕರ್ಷಕ ಮಾದರಿಗೊಳಪಟ್ಟ ಸೌಂದರ್ಯವನ್ನು ಹೊಂದಿದೆ. ಆದಾಗ್ಯೂ ಗ್ರಾಮದ ಹೆಸರು ತುಂಬಾ ಕುತೂಹಲದ ಘಟ್ಟವನ್ನು ಇಂದಿಗೂ ಉಳಿಸಿಕೊಂಡು ಚಕಿತರನ್ನಾಗಿಸಿಬಿಡುತ್ತದೆ.

ಹಾಲಿ ಚೌಡಯ್ಯದಾನಪುರ ಒಂದು ಐತಿಹಾಸಿಕ ಗ್ರಾಮವಾಗಿದೆ. ಹಾವೇರಿ ಜಿಲ್ಲೆಯ ರಾಣೇಬೆನ್ನೂರು ತಾಲ್ಲೂಕಿನ ಈ ಗ್ರಾಮದಲ್ಲಿ ಚಾಲುಕ್ಯರ ಕಾಲದ ದೇವಾಲಯವಿದೆ. ಅದುವೇ ಮುಕ್ತೇಶ್ವರ ದೇವಾಲಯ.

ಸದರೀ ಮುಕ್ತೇಶ್ವರ ದೇವಾಲಯವನ್ನು ಮುಂಭಾಗದಿಂದ ಇಡಿಯಾಗಿ ನೋಡಿದರೆ, ಬೇಲೂರು-ಹಳೇಬೀಡು ದೇವಾಲಯ ಎಂಬಂತೆ ಆಕರ್ಷಿಸಿಬಿಡುತ್ತದೆ. ಶಿಲ್ಪಕಲೆ ಉತ್ಕೃಷ್ಟ ಮಾದರಿಯಲ್ಲಿದೆ. ವಾಸ್ತುಶಿಲ್ಪ ಇಲಾಖೆಯ ವ್ಯಾಪ್ತಿಗೊಳಪಟ್ಟಿರುವ ಮುಕ್ತೇಶ್ವರ ದೇವಾಲಯ 11 ಮತ್ತು 12ನೇ ಶತಮಾನದಲ್ಲಿ ಕಟ್ಟಲ್ಪಟ್ಟಿದೆ ಎನ್ನಲಾಗಿದೆ.

ಮುಕ್ತೇಶ್ವರ ದೇವಾಲಯ ಒಂದು ಆಕರ್ಷಕ ಮಾದರಿಗೊಳಪಟ್ಟ ಸೌಂದರ್ಯವನ್ನು ಹೊಂದಿದೆ. ಆದಾಗ್ಯೂ ಗ್ರಾಮದ ಹೆಸರು ತುಂಬಾ ಕುತೂಹಲದ ಘಟ್ಟವನ್ನು ಇಂದಿಗೂ ಉಳಿಸಿಕೊಂಡು ಚಕಿತರನ್ನಾಗಿಸಿ ಬಿಡುತ್ತದೆ.

ಚೌಡಯ್ಯದಾನಪುರ ಎಂದಾಕ್ಷಣ ಅಂಬಿಗರ ಚೌಡಯ್ಯನ ಇತಿಹಾಸ ಇಲ್ಲಿ ಗರಿಗೆದರಿ ನಿಲ್ಲುತ್ತದೆ. ಆಸಕ್ತಿ ಕೆರಳಿಸುತ್ತದೆ. ಅಂತೆಯೇ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹನ್ನೆರಡನೇ ಶತಮಾನ ತನ್ನದೇ ಆತ ವೈಶಿಷ್ಟ್ಯತೆ ಪಡೆದಿತ್ತೆಂಬುದನ್ನು ನೆನಪಿಸುತ್ತದೆ ಈ ಕ್ಷೇತ್ರ. ಸಂಸ್ಕೃತಿಮಯವಾಗಿದ್ದ ಕನ್ನಡ ಸಾಹಿತ್ಯ ಆಡುಮಾತಿಗಿಳಿದ ಕಾಲವದು. ಯಾವಾಗ ಸಾಹಿತ್ಯ ಆಡುಮಾತಿಗಿಳಿಯಿತೋ ಆಗ ಜನಸಾಮಾನ್ಯರು ಅದರಲ್ಲಿ ಪಾಲ್ಗೊಂಡರು ಅಂಥವರಲ್ಲಿ ಶಿವಶರಣ ಅಂಬಿಗರ ಚೌಡಯ್ಯನೂ ಒಬ್ಬ.

ಹನ್ನೆರಡನೇ ಶತಮಾನದ ಬಹುತೇಕ ವಚನಕಾರರ ಪೂರ್ವಾಪರ ಇತಿಹಾಸ ಗೋಜಲು ಗೋಜಲಾಗಿರುವಂತೆ ಶರಣ ಚೌಡಯ್ಯನದೂ ಆಗಿದೆ. ಈತನ ಜನ್ಮ ಸ್ಥಳ ಯಾವುದು? ಆತನ ತಂದೆ-ತಾಯಿ ಯಾರು? ಆತ ಎಷ್ಟು ವರ್ಷ ಕಾಲ ಬಾಳಿ ಬದುಕಿದ? ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ಖಚಿತವಾಗಿ ದೊರೆಯುವುದು ತೀರಾ ಕಷ್ಟ.

ಶಿಲಾ ಲೇಖನಗಳನ್ನು ಉಲ್ಲೇಖಿಸಿ ಶಿವಶರಣ ಅಂಬಿಗರ ಚೌಡಯ್ಯ ಬಸವ ಸಮಕಾಲೀನ ಎಂಬುದರಲ್ಲಿ ಎಳ್ಳಷ್ಟು ಸಂದೇಹವೇ ಇಲ್ಲ ಎಂದು ಎಸ್.ಎಸ್.ಭೂಸರೆಡ್ಡಿ ಖಚಿತವಾಗಿ ಹೇಳಿದ್ದಾರೆ. ಆದರೆ, ಬಸವಣ್ಣನವರ ತರುವಾಯ ಅವತರಿಸಿದ ಶಿವದೇವರಿಗೆ ಚೌಡಯ್ಯ ಗುತ್ತರಸರಿಂದ ಭೂದಾನ ಮಾಡಿಸಿದ್ದಾನೆಂದೂ, ಆ ಕಾರಣಕ್ಕಾಗಿಯೇ ಇಲ್ಲಿಯ ಸ್ಥಳಕ್ಕೆ ಚೌಡಯ್ಯದಾನಪುರ ಹೆಸರು ಬಂತೆಂತಲೂ ಎಂ.ಜಿ.ನಂಜುಡಾರಾಧ್ಯರು ಸಂಪಾದಿಸಿದ 'ಶಿವದೇವ ವಿಜಯಂ'ನಲ್ಲಿ ಹೇಳಲಾಗಿದೆ.

ಆದರೆ ಚೌಡಯ್ಯದಾನಪುರ 13ನೇ ಶತಮಾನದ ಆದಿ ಭಾಗದಲ್ಲಿ ಕೊರ್ತಗಿ ಎಂಬ ಹೆಸರು ಪಡೆದಿತ್ತೆಂದು ಲೇಖಕ ಜೆ.ಎಂ.ಮಠದ ಇಲ್ಲಿಯ ಶಿಲಾ ಲೇಖನ ನಂ. 3ನ್ನು ಉಲ್ಲೇಖಿಸಿ 'ಚೌಡಯ್ಯದಾನಪುರ ಕ್ಷೇತ್ರ ಮಹಿಮೆ' ಗ್ರಂಥದಲ್ಲಿ ದಾಖಲಿಸಿದ್ದಾರೆ. ಈ ಗ್ರಾಮ ಶಿವಪುರ, ಗೊಪೆ, ಶಿವಗಿರಿ, ಮುಕ್ತಿಕ್ಷೇತ್ರ ಎಂಬ ಇತ್ಯಾದಿ ಹೆಸರು ಪಡೆದಿತ್ತೆಂದು ಇತಿಹಾಸದ ಪುಟಗಳಿಂದ ತಿಳಿದು ಬರುತ್ತದೆ.

Choudadanapur A monograph ಗ್ರಂಥದಲ್ಲಿ ಡಾ.ಜಿ.ಎಸ್.ಗಾಯಿಯವರು ಬರೆದು The Modern name of the place Choudadanapur does not appear in any of the inscriptions studies here. The place is called Muktikshetra. The place was also known as Gope. Since one or two records refers to the god Muktinata of Gope. ಎಂದು ಹೇಳಿದ್ದಾರೆ. ಈ ಅಂಶವನ್ನು ಆಧಾರವಾಗಿಟ್ಟುಕೊಂಡರೆ ಚೌಡಯ್ಯದಾನಪುರ ಹೆಸರಿಗೇ ಅರ್ಥವಿಲ್ಲವೆಂದು ಹೇಳಬೇಕಾಗುತ್ತದೆ. ಯಾವಾಗ ಚೌಡಯ್ಯದಾನಪುರಕ್ಕೆ ಅರ್ಥ ಲಭಿಸುವುದಿಲ್ಲವೋ ಆಗ ಚೌಡಯ್ಯದಾನಪುರಕ್ಕೆ ಮತ್ತು ಅಂಬಿಗರ ಮಧ್ಯದ ಸಂಬಂಧದ ಕೊಂಡಿಗಳು ಸಡಿಲಗೊಳ್ಳುತ್ತವೆ.

ಶಿವಶರಣ ಚೌಡಯ್ಯ ಬಸವಣ್ಣನವರ ಸಮಕಾಲೀನನಾಗಿದ್ದು, ಅನುಭವ ಮಂಟಪದ ಕ್ರಿಯಾಶೀಲ ಸದಸ್ಯನಾಗಿದ್ದ ಬಗ್ಗೆ ಇತಿಹಾಸದ ಪುಟಗಳಲ್ಲಿ ದಾಖಲೆಗಳಿವೆ. ಆದ್ದರಿಂದ 13ನೇ ಶತಮಾನದ ಶಿವದೇವ ಮುನಿಗಳಿಂದ - ಮುನಿಗಳಿಗಾಗಿ ಚೌಡಯ್ಯ ಕಾಯಕನಿಷ್ಠನಾಗಿದ್ದ ಎಂಬಲ್ಲಿ ಅರ್ಥಗಳಿಲ್ಲ. ಕಲ್ಯಾಣ ಕ್ರಾಂತಿಯನ್ನು ಮುಂದೆ ತರುವುದಾಗಲಿ, ಚೌಡಯ್ಯದಾನಪುರ ಶಾಸನ, ಶಾಸನದ ಕಾಲವನ್ನು ಹಿಂದೆ ಒಯ್ಯುವುದಾಗಲಿ ಅಷ್ಟು ಸುಲಭದ ಕಾರ್ಯವಲ್ಲ. ಅಂಬಿಗರ ಚೌಡಯ್ಯನ ಕುರಿತು ಸರ್ವ ಲೇಖಕರ ಅಭಿಪ್ರಾಯಗಳು ತೌಲನಿಕ ಸಂವಹನ ಕ್ರಿಯೆಗೆ ಎಟುಕದಿರುವುದೂ ಒಂದು ದೊಡ್ಡ ದುರಂತವೇ ಆಗಿದೆ.

ಆದಾಗ್ಯೂ ಪ್ರಪಂಚದ ಬೇರಾವುದೇ ಭಾಗದಲ್ಲಿಯೂ ಚೌಡಯ್ಯದಾನಪುರದ ಹೆಸರೇ ಇಲ್ಲ ಎಂಬುದೊಂದು ದಾಖಲಾರ್ಹತೆ ಹೊಂದಿ ವೈಶಿಷ್ಟ್ಯ ಉಳಿಸಿಕೊಂಡು ಗತ ಇತಿಹಾಸ ಮೆಲುಕು ಹಾಕುವಂತೆ ಮಾಡುತ್ತದೆ.

ಪುರಾಣ ಕಾಲದಲ್ಲಿ 'ತ್ರಿಪುರ ರಾಕ್ಷಸ ಸಂಹಾರ'ದ ಕಥೆ ಇದ್ದು, ಆ ತ್ರಿಪುರಗಳೆಂದರೆ ಶಿವಪುರ, ನರಸೀಪುರ, ಚಂದಾಪುರ. ಆ ಹಿಂದಿದ್ದ ಶಿವಪುರ ಇಂದು ಚೌಡಯ್ಯದಾನಪುರ ಹೆಸರಿನಲ್ಲಿ ಪ್ರಚಲಿತದಲ್ಲಿದೆ. ಚೌಡಯ್ಯದಾನಪುರ ಹೆಸರೂ ಮುದ್ದಾಗಿದೆ.

ಇಲ್ಲಿ ಪಶ್ಚಿಮವಾಹಿನಿಯಾಗಿ ತುಂಗಭದ್ರೆ ಹರಿದಿದ್ದಾಳೆ. ನದಿ ದಡಕ್ಕೇ ಹೊಂದಿ ಇತ್ತೀಚೆಗೆ ಕಟ್ಟಲಾಗಿರುವ ಅಂಬಿಗರ ಚೌಡಯ್ಯನ ಮಂಟಪವಿದೆ. ತೋಟಗಾರಿಕೆ ಇದೆ. ಮುಕ್ತೇಶ್ವರ ದೇವಾಲಯದೊಂದಿಗೆ ಹಲವಾರು ದೇವರುಗಳ ಸಮುಚ್ಚಯವೇ ಇಲ್ಲಿದೆ. ಉಳಿದುಕೊಳ್ಳಲೂ ಇಲ್ಲಿ ವ್ಯವಸ್ಥೆ ಇದೆ. ಪ್ರವಾಸಕ್ಕೆಂದು ದಿನ ಗೊತ್ತುಪಡಿಸಿಕೊಂಡು ಹೊರಟರೆ ಈ ಭಾಗದಲ್ಲಿ ಮೈಲಾರ, ಕುರುವತ್ತಿ, ಚೌಡಯ್ಯದಾನಪುರ ಸುಕ್ಷೇತ್ರಗಳ ತ್ರಿವಳಿ ಸಂಗಮ ಸ್ಥಳಗಳು ಪ್ರವಾಸಿಗರ ಮನ ತಣಿಸುತ್ತವೆ.

■ ಚಿತ್ರಲೇಖನ : ಜೆ.ಎಂ.ರಾಜಶೇಖರ,
ಚೌಡಯ್ಯದಾನಪುರ



ಮತ್ಸ್ಯ ಸ್ಮಾರಕ

ದಕ್ಷಿಣ ಕನ್ನಡ ಜಿಲ್ಲೆ ಮೀನುಗಾರಿಕೆಗೆ ಬಹಳ ಹೆಸರುವಾಸಿಯಾಗಿದೆ. ಹಾಗೆಯೇ ಬೆಳ್ತಂಗಡಿಯ ಶಿಶಿಲ ಗ್ರಾಮದ ಶಿಶಿಲೇಶ್ವರ ದೇವಸ್ಥಾನದ ಕಪಿಲಾ ನದಿಯಲ್ಲಿ ದೊಡ್ಡ ಮೀನುಗಳು ದೇವರ ಮೀನುಗಳೆಂದು ಪ್ರಸಿದ್ಧಿಯಾಗಿವೆ. ಈ ನದಿಯಲ್ಲಿ ಹಲವಾರು ಜಾತಿಯ ದೊಡ್ಡ ದೊಡ್ಡ ಮೀನುಗಳನ್ನು ಕಾಣಲು ಹಲವಾರು ರಾಜ್ಯಗಳಿಂದ ಯಾತ್ರಿಕರು ಬರುತ್ತಿದ್ದು ದೇವಸ್ಥಾನದೊಂದಿಗೆ ಮೀನುಗಳು ಕೂಡಾ ಪ್ರಖ್ಯಾತವಾಗಿವೆ. ಶಿವನ ದೇವಸ್ಥಾನದಲ್ಲಿ ವಿಷ್ಣುವಿನ ಅವತಾರ ಮತ್ಸ್ಯ ರೂಪದಲ್ಲಿ ನದಿಯಲ್ಲಿ ಇದೆಯೆಂದು ಪ್ರತೀತಿ ಇದೆ.

ಗ್ರಾಮೀಣ ಪ್ರದೇಶದ ಸುಂದರ ಪರಿಸರದಲ್ಲಿ ಈ ಮೀನುಗಳನ್ನು ಕಂಡ ದುಷ್ಟ ವ್ಯಕ್ತಿಗಳು ಮೂರು ವರ್ಷಗಳ ಹಿಂದೆ ವಿಷವನ್ನು ಈ ನದಿಗೆ ಬಿಸಾಡಿ ಮೀನುಗಳನ್ನು ಸಂಹಾರ ಮಾಡಿದ್ದರು. ಕಡಿಮೆ ಪಕ್ಷ 25 ಲಾರಿಗಳಲ್ಲಿ ಹಿಡಿಯುವಷ್ಟು ಮೀನುಗಳು ಈ ವಿಷಕ್ಕೆ ಬಲಿಯಾದವು. ಇಂತಹ ಪವಿತ್ರ ಕ್ಷೇತ್ರದಲ್ಲಿ ಮಡಿದ ಮೀನುಗಳ ನೆನಪಿಗಾಗಿ ಶ್ರೀಶಿಶಿಲೇಶ್ವರ ದೇವಸ್ಥಾನದ ಮತ್ಸ್ಯ ಹಿತರಕ್ಷಣಾ ವೇದಿಕೆಯವರು ಮತ್ಸ್ಯ ಸ್ಮಾರಕ ನಿರ್ಮಾಣ ಮಾಡುವ ಕ್ರಮ ಕೈಗೊಂಡರು.

ಏಕ ಶಿಲೆಯಲ್ಲಿ ಭಾರೀ ಗಾತ್ರದಲ್ಲಿ ಅರಳುತ್ತಿರುವ ಮೀನಿನ ಆಕೃತಿ. ಇಲ್ಲಿ ಸೂಕ್ತ ಸ್ಮಾರಕವೆನಿಸಲಿದೆ. ಸುಮಾರು ಎಂಟು ಕ್ವಿಂಟಾಲ್ ಭಾರ, ಐದು ಅಡಿ ಉದ್ದ ಹಾಗೂ ಎರಡೂವರೆ ಅಡಿ ಅಗಲದ ಈ ಮೂರ್ತಿಯನ್ನು ಶ್ರೀಯುತ ಮಣಿ ಲ್ಯಾಲ ಅವರು ಕೆತ್ತಿದ್ದಾರೆ.

ಶಿಶಿಲ ಶ್ರೀ ಶಿಶಿಲೇಶ್ವರ ದೇವಸ್ಥಾನದ ಬ್ರಹ್ಮ ಕಲಶ ಮುಂದಿನ ವರ್ಷ ಜರುಗಲಿದ್ದು, ಅದೇ ದಿನ ಈ ಮತ್ಸ್ಯವನ್ನು (ಕಲ್ಲಿನ) ಸ್ಮಾರಕವಾಗಿ ಸ್ಥಾಪಿಸಲಾಗುವುದು. ಮತ್ಸ್ಯ ಸಂಕುಲದ ನೆನಪನ್ನು ಜೀವಂತವಾಗಿಸುವ ಈ ಪ್ರಯತ್ನ ನಿಜಕ್ಕೂ ಪ್ರಶಂಸನೀಯ.

ಉಮಾ ಬೆಳ್ತಂಗಡಿ

“ಹೆಂಡತಿಯನ್ನು ನಿಯಂತ್ರಿಸುವ ಕಲೆ ನನಗೆ ಗೊತ್ತಿದ್ದಿದ್ದರೆ ನಾನು ಯಾಕೆ ಸನ್ಯಾಸಿಯಾಗುತ್ತಿದ್ದೆ? ನೀರೆಯನ್ನಾಗಲಿ, ಸೀರೆಯನ್ನಾಗಲಿ ನಂಬಬೇಡ. ಅವು ಯಾವಾಗ ಬಣ್ಣ ಬಿಡುತ್ತವೆ ಎಂಬುದು ಹೇಳಲಾಗದು”

ಬಾಬಾ, ನನಗೊಂದು ಕುಂಬಳಕಾಯಿ ಕೊಡು !

ಸ್ವಾಮಿ ಎಂದ ಮೇಲೆ ಒಂದು ಗಡ್ಡವಾದರೂ ಇರಬೇಕು. ಗಡ್ಡವೊಂದು ಅಡ್ಡವಿದ್ದರೆ ಎಂಥ ಹೆಡ್ಡನನ್ನೂ ಮರುಳುಮಾಡುವಂತೆ ಪವಾಡಗಳು ತೋರಿಸಲು ಸಾಧ್ಯ ಎಂದು ವಿಶ್ವ ಹೇಳಿದ್ದ ಬಹಳ ಹಿಂದೆ. ಅವನು ಒಬ್ಬ ಸಾಧು ಸನ್ಯಾಸಿಯನ್ನು ಕಂಡು ಕೈ ಮುಗಿದು ಕೇಳಿದ್ದ.

“ಸ್ವಾಮಿ, ನೆಲಕ್ಕೆ ತಾಕುವಂತೆ ಗಡ್ಡ ಬೆಳೆಸಿರುವ ತಾವು ಗಿನ್ನಿಸ್ ದಾಖಲೆಗೆ ಸೇರುವ ದಿನ ದೂರವಿಲ್ಲ. ನನ್ನ ಒಂದು ಪ್ರಶ್ನೆಗೆ ಸಮಾಧಾನ ಹೇಳಿ ಸ್ವಾಮಿ. ನನ್ನ ಹೆಂಡತಿ ನನ್ನ ಅಂಕೆಯಲ್ಲಿ ಇಲ್ಲ ಎಂಬ ಶಂಕೆ ಕಾಡುತ್ತಿದೆ. ನೀರೆಯನ್ನು ನಿಯಂತ್ರಿಸುವುದು ಹೇಗೆ? ದಯಮಾಡಿ ಉಪದೇಶಿಸಿ”

“ವತ್ಸಾ” ಸ್ವಾಮೀಜಿಗಳು ಕಣ್ಣು ತೆರೆದರು. “ಹೆಂಡತಿಯನ್ನು ನಿಯಂತ್ರಿಸುವ ಕಲೆ ನನಗೆ ಗೊತ್ತಿದ್ದಿದ್ದರೆ ನಾನು ಯಾಕೆ ಸನ್ಯಾಸಿಯಾಗುತ್ತಿದ್ದೆ? ನೀರೆಯನ್ನಾಗಲಿ, ಸೀರೆಯನ್ನಾಗಲಿ ನಂಬಬೇಡ. ಅವು ಯಾವಾಗ ಬಣ್ಣ ಬಿಡುತ್ತವೆ ಎಂಬುದು ಹೇಳಲಾಗದು ವತ್ಸಾ” ಎಂದ ಸ್ವಾಮಿ ಕಣ್ಮುಚ್ಚಿ ಧ್ಯಾನದ ಆಳಕ್ಕೆ ಇಳಿದು ಗೊರಕೆ ಪ್ರಾರಂಭಿಸಿದ್ದರು.

ಇದು ಮುಗಿದು ಹಲವು ವರ್ಷಗಳೇ ಕಳೆದಿರಬೇಕು. ಕಳೆದ ತಿಂಗಳು ಹಿರಿಯ ಚೇತನವೊಂದು ತಲೆಯ ಮೇಲೆ ಕೈ ಹೊತ್ತು ಕೂತಿರುವುದು ಕಂಡಾಗ ವಿಶ್ವ ಅವರನ್ನು ಸಮೀಪಿಸಿದ್ದ.

“ನಮಸ್ಕಾರ ಸ್ವಾಮಿ” ಎಂದ.

“ನನಗೆ ಸ್ವಾಮಿಯಾಗೋ ಅದೃಷ್ಟ ಎಲ್ಲಿದೆ? ಅದಕ್ಕೂ ಪುಣ್ಯ ಕೇಳಿಕೊಂಡು ಬಂದಿರಬೇಕು” ಎಂದರವರು.

“ಮತ್ತೆ, ತಾವು, ಬಿಳಿಯ ಬಟ್ಟೆ ಹಾಕ್ಕೊಂಡು......”

“ನನ್ನ ಹೆಸರು ನರಸಿಂಹಯ್ಯ ಅಂತ!”

“ಸಾರ್! ನೀವಾ” ವಿಶ್ವನಿಗೆ ಆನಂದವಾಯಿತು.

“ವಿದೇಶಕ್ಕೆ ಹೋಗಿದ್ದಾಗ ಬರೀ ಉಪ್ಪಿಟ್ಟು ಮಾತ್ರ ತಿಂದು ವಿದೇಶಿಯರನ್ನು ಆಶ್ಚರ್ಯಚಕಿತಗೊಳಿಸಿದವರು ನೀವೇ ಸಾರ್” ಎಂದ.

“ಆದರೆ ನನ್ನ ಆಶ್ಚರ್ಯಮಾಡೋ ಬಾಬಾಜೀ ಇಲ್ಲೇ ಇದ್ದಾರಲ್ಲ ಮಗು? ಏನು ಬೇಕಾದರೂ ಸೃಷ್ಟಿ ಮಾಡಿ ಕೊಡ್ತಾರೆ. ಗಾಳೀಲಿ ಕೈ ಆಡಿಸಿದರೆ ಸಾಕು. ಶೂನ್ಯದಿಂದ ಸೃಷ್ಟಿ ಪವಾಡ.”

“ಏನು ಮಾಡಿದರು ಬಾಬಾ?”

“ಮುಖ ನೋಡಿ ಮಣೆ ಹಾಕಿದರು. ನಮ್ಮ ಮುಖ್ಯಮಂತ್ರಿಗಳು ಹೋದಾಗ ಅವರಿಗೆ ಬಂಗಾರದ ಉಂಗುರ, ಕನ್ನಡದ ಕಣ್ಮಣಿಯಾದ ರಾಜ್ ಅವರಿಗೆ ಹಣೆಗೆ ಹಚ್ಚಿಕೊಳ್ಳಲು ಬೂದಿ”

“ಇದು ಮಹಾನ್ ಪಕ್ಷಪಾತವಾಯಿತಲ್ಲ?”



“ಹೌದು. ಒಂದೇ ಪಂಕ್ತಿಯಲ್ಲಿ ಇಬ್ಬರು ಊಟಕ್ಕೆ ಕೂತರೆ ಒಬ್ಬರಿಗೆ ತುಪ್ಪದ ಚಿರೋಟಿ ಬಡಿಸಿ ಮತ್ತೊಬ್ಬರಿಗೆ ಪಾಮ್ ಎಣ್ಣೆಯ ಪೂರಿ ಹಾಕೋದು ನ್ಯಾಯಾನಾ? ಇಂಥ ಪಕ್ಷಪಾತ ಬಾಬಾ ಮಾಡಬಹುದಾ?”

“ತಪ್ಪು ಸಾರ್. ಕೊಟ್ಟ ಮೇಲೆ ಎಲ್ಲ ಭಕ್ತರಿಗೂ ಕೊಡಬೇಕು. ಒಂದೇ ಕೊಡಬೇಕು. ಅದು ಧರ್ಮ. ಅಂದಂತೆ ನಿಮಗೆ ಏನು ಕೊಟ್ಟರು”

“ನಾನು ಕಾಲು ಶತಮಾನದ ಹಿಂದೇನೇ ಅರ್ಜಿ ಹಾಕಿದ್ದೆ. ಸ್ವಾಮೀ, ನನಗೊಂದು ಕುಂಬಳಕಾಯಿ ಬೇಕು. ತಾವು ವಾಚು, ಉಂಗುರ, ಬೆಳ್ಳಿ ಉಡಿದಾರ, ಹಿತ್ತಾಳೆ ಗಲಗಂಟೆ ಎಲ್ಲವನ್ನೂ ಶೂನ್ಯದಿಂದ ಸಂಪಾದಿಸಿ ಕೊಡ್ತಾ ಇದ್ದೀರಲ್ಲ, ಈ ಎಲ್ಲ ವಸ್ತುಗಳಿಗಿಂತ ನನಗೆ ಒಂದು ಕುಂಬಳಕಾಯಿ ಶ್ರೇಷ್ಠ ಅನ್ನಿಸ್ತಾ ಇದೆ - ಅಂತ ಕೇಳಿದ್ದೆ”

“ಅದ್ಯಾಕೆ? ಬಂಗಾರ ನಿಮಗೆ ಬೇಡವಾ?”

“ಯಾರಿಗೆ ಯಾವುದು ಇಲ್ಲವೋ ಅದನ್ನು ಅವರು ಕೇಳ್ತಾರೆ. ಉದಾಹರಣೆಗೆ ನೀನಾಗಿದ್ದರೆ ಒಳ್ಳೆಯ ಬುದ್ಧಿ, ಒಳ್ಳೆಯ ಮನಸ್ಸು ಕೊಡಪ್ಪ ಅಂತ ಕೇಳ್ತಿದ್ದೆ” ಎಂದು ವಿಶ್ವನನ್ನು ರೇಗಿಸಿದರು.

“ಕುಂಬಳಕಾಯೇ ಯಾಕೆ ಆಗಬೇಕು ನಿಮಗೆ?”

“ಪುನೀತ್ ರಾಜ್‌ಕುಮಾರ್ ಪುಟ್ಟ ಹುಡುಗನಾಗಿದ್ದಾಗ ಒಂದು ಸೊಗಸಾದ ಹಾಡು ಹೇಳಿದ್ದ. ‘ಕಾಣದಂತೆ ಮಾಯವಾದನು ನಮ್ಮ ಶಿವ’ ಹಾಡಲ್ಲಿ “ಕುಂಬಳಕಾಯಿ ನೆಲದಲ್ಲಿಟ್ಟನು” ಅಂತ ಒಂದು ಸಾಲು ಬರುತ್ತೆ. ಆ ಹಾಡು ಕೇಳಿದಾಗಿಂದ ಶಿವರೂಪಿಯಾದ ಬಾಬಾ ಅವರ ಕೈಲಿ ಒಂದು ಕುಂಬಳಕಾಯಿ ಪಡೆಯಬೇಕು ಅಂತ ಆಸೆ ಆಗಿದೆ. ಅವರಿಗೆ 1972ರಲ್ಲೇ ಇದನ್ನು ಕೇಳಿದ್ದೀನಿ. 1975ರಲ್ಲಿ ನನ್ನ ಕುಂಬಳಕಾಯಿ ಅರ್ಜೀನ ರಿನ್ಯೂ ಮಾಡಿದ್ದೀನಿ.

“ಉಂಗುರ ಕೊಟ್ಟರೆ, ವಾಚ್ ಕೊಟ್ಟರೆ ಅದು ಕಡೇವರೆಗೂ ಇರುತ್ತಲ್ಲ ಸಾರ್?”

“ನನ್ನ ಹತ್ರ ಇರೋದು ಎರಡು ಪಂಚೆ, ಎರಡು ಷರಟು, ಒಂದು ಟೋಪಿ. ವಾಚು, ಉಂಗುರ ನಂಗ್ಯಾಕೆ? ಅಲ್ಲದೆ ನಾನು ವಿಜ್ಞಾನಿ. ನನ್ನ ಕೈಗೆ ಒಂದು ಸೃಷ್ಟಿ ಮಾಡಿದ ವಾಚನ್ನು ಕೊಟ್ಟರೆ ಅದರ ಡಯಲ್ಲು, ಅದರ ಫ್ರೇಮು, ಅದರ ಮೇಕು ಎಲ್ಲ ಸಂಶೋಧನೆ ಶುರು ಮಾಡಿದ್ರೆ ಅದು ಎಚ್‌ಎಂಟಿ ವಾಚು, ಸ್ವಿಸ್ ವಾಚು, ಒಮೇಗಾ ವಾಚು ಅಂತ ತಿಳಿದು ಬಿಡುತ್ತೆ. ಕುಂಬಳಕಾಯಿ ಆದರೆ

ಅವರಿಗೂ ಸೇಫು, ನನಗೂ ಸೇಫು.''

''ಆದರೆ ವಿ.ಕೃ.ಗೋಕಾಕ್, ಜಿ.ಪಿ.ರಾಜರತ್ನಂ, ನಾ.ಕಸ್ತೂರಿ ಮೊದಲಾದ ಪ್ರಸಿದ್ಧ ಸಾಹಿತಿಗಳೇ ಬಾಬಾ ಅವರ ಶಿಷ್ಯರಾಗಿದ್ದರು?''

''ಅವರಿಗೆ ಪೆನ್ನು, ಇಂಕು ಸೃಷ್ಟಿ ಮಾಡಿ ಕೊಟ್ಟಿರಬಹುದು. ಬೇರೆಯವರ ನಂಬಿಕೇನ ನಾನು ಅಲ್ಲಗಳೆಯುವುದಿಲ್ಲ. ನನಗೆ ಕುತೂಹಲ ಇದೆ. ಅದಕ್ಕೆ ಕೇಳ್ತೀನಿ. ಬಾಬ ಒಂದು ವೇಳೆ ಶೂನ್ಯದಿಂದ ಕುಂಬಳಕಾಯಿ ನನಗೆ ಕೊಟ್ಟು ಬಿಟ್ಟರೆ ಅವರ ಫೋಟೋಗೆ ಬೆಳ್ಳಿ ಫ್ರೇಂ ಹಾಕಿಸಿ, ಸೈಕಲ್ ಬ್ರಾಂಡ್ ಅಗರ ಬತ್ತಿ ಹಚ್ಚಿ ಕೈ ಮುಗಿದು ಬಿಡ್ತೀನಿ'' ಎಂದರು ಎಚ್ಚೆನ್.

''ಸಾರ್, ನೀವು ದೇವರಿಗೆ ಕೈ ಮುಗಿದಿದ್ದು ನಾನೇ ಕಂಡೇ ಇಲ್ಲ'' ಎಂದೆ.

''ಬಾಬಾನ ದೇವರ ರೂಪದಲ್ಲಿ ನೋಡಿದ ಮೇಲೆ ನಾನು ಕೈ ಮುಗಿಲೇ ಬೇಕಲ್ಲವಾ? ಯಾಕೆ ಅಂದ್ರೆ ನಮ್ಮ ಗೌರಿಬಿದನೂರಿನಲ್ಲಿ ಕುಂಬಳಕಾಯಿ ನೆಲದಲ್ಲಿ ಬೆಳೆಯುತ್ತೆ''

''ಎಲ್ಲಕಡೆ ಅಷ್ಟೇ ಸಾರ್''

''ಭೂತಾಯೀನ ನಾನು ದೇವರು ಅಂತ ತಿಳೀತೀನಿ. ಆಕೆ ನನಗೆ ಸಕಲವನ್ನೂ ಕೊಡ್ತಾಳೆ. ಅದೇ ರೀತಿ ಬಾಬಾನೂ ಕೊಡೋದಾದರೆ ಬಾಬಾ ಸಹ ದೇವರಾಗಿ ನಾನು 'ಬಾಬಾ ದೇವರೇ ಬಾ ಇಲ್ಲಿ ದೇವರೇ, ಕುಂಬಳಕಾಯಿ ದೇವರೇ' ಅಂತ ಒಂದು ಶಿಶುಗೀತೆ ಕಟ್ಟಿ ಕೈ ಮುಗಿದುಬಿಡ್ತೀನಿ'' ಎಂದರು.

''ನಿಮ್ಮ ಮುಂದಿನ ಯೋಜನೆಗಳಾವುವು?''

''ನಿಸರ್ಗದ ನಿಯಮಗಳಿಗೆ ವಿರುದ್ಧವಾಗಿ ಶೂನ್ಯದಿಂದ ಯಾರಾದರೂ ಏನಾದರೂ ಸೃಷ್ಟಿ ಮಾಡಿದರೆ ಅವರನ್ನೇ ರಾಜ್ಯದ ನಾಯಕರನ್ನಾಗಿ ಮಾಡುವುದು. ನೂರು ಲಾರಿಗಳನ್ನು ಬಾಡಿಗೆಗೆ ಪಡೆಯುವುದು''

''ಲಾರಿಗಳು ಯಾಕೆ?''

''ಇವರು ಶೂನ್ಯದಿಂದ ಕುಂಬಳಕಾಯಿ ಸೃಷ್ಟಿ ಮಾಡ್ತಾ ಹೋಗ್ತಾರೆ. ಆ ಕುಂಬಳಕಾಯಿಗಳ್ನ ಲಾರಿಗಳಲ್ಲಿ ತುಂಬಿ ಒರಿಸ್ಸಾದ ನತದೃಷ್ಟರಿಗೆ ಕಳಿಸಿಕೊಡೋದು. ಅದರಿಂದ ಸಹಸ್ರಾರು ಪ್ರಾಣಗಳು ಉಳಿದಂತೆ ಆಗುತ್ತೆ. ಆ ಜನ ಹಸಿವಿಂದ ತತ್ತರಿಸಿ ಹೋಗ್ತಾ ಇದ್ದಾರೆ''

''ಹಾಗಿದ್ದ ಮೇಲೆ ಬಂಗಾರದ ಉಂಗುರಕ್ಕೆ ನೀವು ಒಪ್ಪಬೇಕು ಸಾರ್. ಅದನ್ನು ಮಾರಿ ಹಣ ಕಳಿಸಬಹುದು''

''ಬೇಡಪ್ಪ. ಅದನ್ನು ಮಾರೋಕೆ ಹೋದ್ರೆ ಯಾವ ಅಂಗಡೀದು ಎಷ್ಟು ಕ್ಯಾರೆಟ್ಟು, ಯಾವ ಬೀಟ್‌ರೂಟ್ ಅಂತೆಲ್ಲ ತಿಳಿದು ಬಿಡುತ್ತೆ. ಅವರಿಗೂ ಕಷ್ಟ ನನಗೂ ಕಷ್ಟ'' ಎಂದ ಎಚ್ಚೆನ್ ಬಾಬಾ ಅವರಿಗೆ ಎಸ್.ಟಿ.ಡಿ ಮಾಡಲು ಎದ್ದು ಹೋದರು.

■ ಎಂ.ಎಸ್.ನರಸಿಂಹಮೂರ್ತಿ

ಬಹೂಪಯೋಗಿ ಬಡೇಸೋಪು

ಬಡೇಸೋಪನ್ನು ಊಟವಾದ ಮೇಲೆ ಅಥವಾ ತಿಂಡಿ ತಿಂದ ಮೇಲೆ ತಿನ್ನುವುದು ಎಲ್ಲೆಡೆ ರೂಢಿಯಲ್ಲಿದೆ. ಸುಗಂಧಭರಿತ ರುಚಿಕರ ಬಡೇಸೋಪು ಮಸಾಲೆ ಪದಾರ್ಥವೂ ಆಗಿದೆ. ತಾಂಬೂಲದಲ್ಲೂ ಬಡೇಸೋಪು ಪ್ರಮುಖ ಸ್ಥಾನ ಪಡೆದಿದೆ. ಎರಡು-ಮೂರು ಅಡಿ ಎತ್ತರಬೆಳೆಯುವ ಚಿಕ್ಕಗಿಡದಲ್ಲಿ, ಹೂಬಿಟ್ಟು-ನಂತರ ಬೀಜಗಳಾಗಿ, ಬಡೇಸೋಪು ಲಭ್ಯವಾಗುತ್ತದೆ. ಉತ್ತರ ಪ್ರದೇಶ, ಪಂಜಾಬ, ಒರಿಸ್ಸಾ, ಪಶ್ಚಿಮೋತ್ತರ ಭಾರತದಲ್ಲಿ, ಹೆಚ್ಚಾಗಿ ಬೆಳೆಯುತ್ತಿದ್ದು, ತೈಲವನ್ನೂ ತೆಗೆಯುತ್ತಾರೆ. ಸಂಸ್ಕೃತದಲ್ಲಿ ಮಧುರಿಕಾ, ಶತಪುಷ್ಪವೆಂದೂ, ಹಿಂದಿಯಲ್ಲಿ ಸೌಂಪ್ ಎಂದೂ, ಇಂಗ್ಲೀಷ್‌ನಲ್ಲಿ ಫಿಯಲ್‌ಸೀಡ್ (Feual Seed) ಎಂದೂ ಲ್ಯಾಟಿನ್‌ನಲ್ಲಿ ಫೋರ್ನಿಕುಲಮ್ ವಲ್ಗೋರ್ ಎಂದೂ, ಬಡೇಸೋಪು, ಕಾಸಂಚಸಿಗೆ ಕರೆಯಲಾಗುತ್ತದೆ.

ಯುನಾನಿ ಪದ್ಧತಿಯಲ್ಲಿ ಹಾಗೂ ಆಯುರ್ವೇದದಲ್ಲಿ ಬಡೇಸೋಪನ್ನು ಔಷಧವಾಗಿಯೂ ಉಪಯೋಗಿಸುತ್ತಾರೆ. ಲಘು, ರೂಕ್ಷ, ರೋಚಕ, ದೀಪಕ, ಪಾಚಕ, ಉತ್ತೇಜಕ, ವಿರೇಚಕವೂ ಆಗಿದೆ. ಇದರಿಂದ ಅಜೀರ್ಣ, ಅರುಚಿ, ಕಾಸ, ಉದರಶೂಲೆ, ಕ್ರಿಮಿರೋಗ, ದಾಹ, ಮುಖರೋಗ ನಿವಾರಣೆ, ಮಲಬದ್ಧತೆ, ಜ್ವರ, ಹೊಟ್ಟೆನೋವು, ಉರಿ, ಮೂಲವ್ಯಾಧಿ, ಕಫ, ಅತಿಸಾರ, ವಾಂತಿ, ಆಮ, ಪ್ಲೀಹ, ಜಂತುಹುಳುಬಾಧೆ, ಮೂತ್ರವಿಕಾರ, ಹೃದಯರೋಗ, ಗರ್ಭಪ್ರದ, ಇತ್ಯಾದಿಗಳು ನಿವಾರಣೆಯಾಗುತ್ತವೆ - ಬೇರೆ ಔಷಧ ದ್ರವ್ಯಗಳೊಂದಿಗೂ ಇದನ್ನು ಸೇರಿಸಿ ನಾನಾ ರೀತಿಯ ತೊಂದರೆ ನಿವಾರಣೆಗೆ ಔಷಧವಾಗಿ ಬಳಸಲಾಗುತ್ತದೆ. ಬಡೇಸೋಪು ಮೇಧಸ್ಸು ಹಾಗೂ ಪ್ರೋಟೀನ್‌ಯುಕ್ತವಾಗಿದೆ.

1. ಪಚನ ಶಕ್ತಿ ಹೆಚ್ಚಿಸುತ್ತದೆ.
2. ಲವಲವಿಕೆ ಹೆಚ್ಚಿಸುತ್ತದೆ.
3. ಬಾಯಿಯ ದುರ್ಗಂಧ ನಿವಾರಣೆಯಾಗುತ್ತದೆ.
4. ಮಲಬದ್ಧತೆ ವಾಸಿ ಆಗುತ್ತದೆ.

> ಗುಟಕಾ ತಿಂದರೆ ಆರೋಗ್ಯ ಹಾಳು. ಬಡೇಸೋಪು ತಿಂದರೆ ಆರೋಗ್ಯವಂತ ಬಾಳು.

5. ಸೊಂಪು ಕಾಳಿನ ಕಷಾಯವನ್ನು ಜೇನುತುಪ್ಪದೊಂದಿಗೆ ಸೇವಿಸಿದರೆ, ಮುಟ್ಟಿನ ದೋಷ ನಿವಾರಣೆಯಾಗುವುದು.
6. ವೃಷ್ಯ ಅಂದರೆ ವೀರ್ಯಾಂಗಗಳಿಗೆ ಉತ್ತೇಜಕವಾಗಿದೆ.
7. ನರಮಂಡಲ ಶೂಲೆ ಪರಿಹಾರಕ.
8. ಅಜೀರ್ಣವಾಯು, ವಾಂತಿ, ಅಜೀರ್ಣಬೇಧಿ ಶಮನಕಾರಿ.
9. ಹೃದಯಶೂಲೆ, ರಕ್ತನಲಿಕಾ ಕಾಠಿನ್ಯ, ರಕ್ತಕ್ರಿಮಿ ನಿವಾರಕ.
10. ಕಫ, ಕೆಮ್ಮು, ಉಬ್ಬಸ ಗುಣಕಾರಿ.
11. ಮೂತ್ರ ತಡೆ ನಿವಾರಕ.
12. ಬಾಣಂತಿಯರಿಗೆ ಹಾಲಿನವೃದ್ಧಿಗೆ ಸಹಾಯಕ.
13. ಜ್ವರಶಾಮಕವಾಗಿದ್ದು ಬೆವರು ಬರುವಂತೆ ಮಾಡುತ್ತದೆ.
14. ಚರ್ಮರೋಗ ಬರದಂತೆ ತಡೆಯುತ್ತದೆ.
15. ಯುನಾನಿ ಪದ್ಧತಿಯಲ್ಲಿ ಹೊಟ್ಟೆಯೊಳಗಿನ ಗಂಟು ಕರಗಿಸಲು ಬಡೇಸೋಪು ಉಪಯೋಗಿ.
16. ಬಾಯಿ ಹುಣ್ಣು ನಿವಾರಕ.
17. ಬೇಧಿ ನಿಲ್ಲಿಸಲು ಸಹಾಯಕ. ಮುಂತಾಗಿ ಇನ್ನೂ ಅನೇಕ ರೀತಿಯಲ್ಲಿ ಔಷಧವಾಗಿಯೂ ಪ್ರಸಿದ್ಧವಾಗಿದೆ.

ಗಾತ್ರದಲ್ಲಿ ಚಿಕ್ಕದಾದರೂ ಸುಗಂಧ-ರುಚಿಯಲ್ಲಿ ದೊಡ್ಡದಾಗಿದೆ. ಮಕ್ಕಳಿಂದ ಮುದುಕರವರೆಗೂ, ಮನೆಮಂದಿ-ಅತಿಥಿಗಳಿಗೂ ಬಡೇಸೋಪು ಅಚ್ಚುಮೆಚ್ಚು. ಬಡೇಸೋಪುಯುಕ್ತ ಚಿಕ್ಕಚೀಟಿಗಳೂ ಈಗ ಲಭ್ಯವಾಗತೊಡಗಿವೆ. ಗುಟಕಾ ತಿಂದು ಆರೋಗ್ಯ ಕೆಡಿಸಿಕೊಳ್ಳುವುದಕ್ಕಿಂತ, ಬಡೇಸೋಪು, ಲವಂಗ, ಯಾಲಕ್ಕಿಯಂತಹ ಸುಗಂಧಯುಕ್ತ ಮಸಾಲಾಪದಾರ್ಥ ತಿಂದು, ಆರೋಗ್ಯ ಹೆಚ್ಚಿಸಿಕೊಳ್ಳುವುದು ಜಾಣತನವಲ್ಲವೆ?

■ ಚಂದ್ರಕಾಂತ ಎಸ್. ಭಟ್

ಬಿಸಿ ಏರುತ್ತಿರುವ ಭೂಮಿ ಅಪಾಯದ ಕರೆಗಂಟೆಯೇ?

ಭೂಮಿ ಬಿಸಿಯಾಗುತ್ತಿದೆ. ಇದರಿಂದ ಆಗಬಾರದ ಅನಾಹುತ ಜರುಗುತ್ತದೆ. ಧ್ರುವ ಪ್ರದೇಶಗಳ ಹಿಮಕರಗಿ ಸಮುದ್ರ ಮಟ್ಟ ಏರುತ್ತದೆ. ಎಷ್ಟೋ ದೇಶಗಳು ನೀರಲ್ಲಿ ಮುಳುಗಿ ಕಣ್ಮರೆಯಾಗುತ್ತವೆ. ಆಫ್ರಿಕಾ ಮತ್ತು ಭಾರತೀಯ ಉಪಖಂಡಗಳಲ್ಲಿ ಆಹಾರಕ್ಕಾಗಿ ಹಾಹಾಕಾರ ಏಳುತ್ತದೆ. ಹಸಿವೆಯಿಂದಲೇ ಅಲ್ಲಿ ಜನ ಸಹಸ್ರ, ಲಕ್ಷಗಳ ಸಂಖ್ಯೆಯಲ್ಲಿ ಅಸುನೀಗಬೇಕಾಗುತ್ತದೆ.

ಇಂಥದೊಂದು ವಾದ ಈಚೆಗೆ ಚುರುಕಾಗುತ್ತಿದೆ. ಇದನ್ನು ಪ್ರಳಯದ ಮುನ್ಸೂಚನೆ ಎಂದೂ ಬಿಂಬಿಸಲಾಗುತ್ತಿದೆ. ವಿಶೇಷವೆಂದರೆ, ಈ ವಿಷಯ ಜಗತ್ತಿನ ಗಮನ ಸೆಳೆಯುವಂತೆ ಮಾಡಿದ್ದು ಅಮೆರಿಕಾದ ಒಬ್ಬ ಸೆನೆಟರ್. ಆತನ ಹೆಸರು ಜಾರ್ಜ್ ಮಿಶೆಲ್.

'ಪ್ರಳಯ ಆಗಲಿದೆ' ಎಂದು 1991ರಲ್ಲಿ ಬೊಬ್ಬೆ ಆರಂಭಿಸಿದ ಆತ. ಅವನು ಮಂಡಿಸಿದ ವಾದದಲ್ಲಿ ಮುಖ್ಯವಾಗಿ ಹವಾಮಾನದ ವೈಪರೀತ್ಯದ ವಿಷಯಗಳಿದ್ದವು. ವಿಪರೀತ ತಾಪಮಾನ. ಅಚಾನಕ ಬಿರುಗಾಳಿ, ಚಂಡಮಾರುತದ ಹಾವಳಿ. ಇದರಿಂದ ಮಿಲಿಯಾಂತರ ಜನ ಅಸುನೀಗುತ್ತಾರೆ. ಇದಲ್ಲದೇ ಪ್ರವಾಹ, ಕ್ಷಾಮಗಳಿಂದಾಗಿಯೇ ಆಫ್ರಿಕಾ, ಭಾರತ ಉಪಖಂಡಗಳು ತೀವ್ರ ಸ್ಥಿತಿ ಎದುರಿಸಬೇಕಾಗುತ್ತದೆ.

ಇವು ಮಿಶೆಲ್‌ನ ವಾದದ ಪ್ರಮುಖ ಅಂಶಗಳು. ಇದು ಸಾಬೀತುಪಡಿಸಲು ಆತ ಕಂಪ್ಯೂಟರ್‌ಗಳನ್ನು ಬಳಸಿದ್ದ. ಎಲ್ಲ ಕಣ್ಣಿಗೆ ಕಟ್ಟುವಂತೆ ಚಿತ್ರವತ್ತಾಗಿ ಇದ್ದುದರಿಂದ ಜನ ಬೆಚ್ಚಿದರು.

ಇದೊಂದು ಎಳೆ ಸಿಕ್ಕಿದ್ದೇ ಸಾಕು ಎಂಬಂತೆ ನಮ್ಮಲ್ಲಿನ ಥೀಡ್ ಪಂಡಿತರು ಪ್ರಳಯ ಆಗಿಯೇ ಬಿಡುತ್ತದೆ ಎಂದು ಅದಕ್ಕೊಂದು ದಿನಾಂಕ ಕೂಡ ಕೊಟ್ಟುಬಿಟ್ಟರು. ಇದನ್ನು ಪ್ರಕಟಿಸಿದ ಪತ್ರಿಕೆಯ ಲಕ್ಷಾಂತರ ಪ್ರತಿಗಳು ಖರ್ಚಾದವು. ಇನ್ನೂ ಬೇಡಿಕೆ ಏರುತ್ತಲೇ ಹೋಯಿತು. ಅದು ಮನಗಂಡ ಧೂರ್ತನೊಬ್ಬ ಬರೀ ಆ ಪ್ರಳಯ ಕುರಿತ ಲೇಖನ ಅಚ್ಚುಹಾಕಿಸಿ ಲಕ್ಷಾಂತರ ರೂಪಾಯಿ ಸಂಪಾದಿಸಿ ತಣ್ಣಗೆ ಕುಳಿತುಬಿಟ್ಟ. ಇನ್ನೊಬ್ಬ ಧೂರ್ತ ಪತ್ರಕರ್ತನೊಬ್ಬ ಪ್ರಳಯದಿಂದಾಗಿ ಕರಾವಳಿ ಮುಂತಾದ ಪ್ರದೇಶಗಳು ನೀರಿನಲ್ಲಿ ಮುಳುಗಿಬಿಡುತ್ತವೆ ಎಂದು ಬುರುಡೆ ಬಿಟ್ಟು, ಬೆಂಗಳೂರು ಒಂದೇ ಸುರಕ್ಷಿತ ಪ್ರದೇಶ ಎಂದೂ ಸಾರಿದ. ಬೆಂಗಳೂರಲ್ಲಿ ಕುಸಿಯುತ್ತಿರುವ ಜಮೀನು ಬೆಲೆಯಿಂದ ಆತ ಕಂಗಾಲಾಗಿದ್ದ. ಹೀಗಾದರೂ ತನ್ನ ವ್ಯವಹಾರಕ್ಕೆ ಲಾಭ ತಂದುಕೊಳ್ಳಬಹುದು ಎಂದು ರಿಯಲ್ ಎಸ್ಟೇಟು ವ್ಯವಹಾರಿಗಳ ಬೆಂಬಲಿಗನಾದ ಆತನ ಆಸೆ. ಹೇಗಿದೆ ಪ್ರಳಯದ ಪಾಲಿಟಿಕ್ಸ್ ಮತ್ತು ವ್ಯವಹಾರ.

ಅಸಲು ಸಂಗತಿ ಬೇರೆಯೇ. ಮುಂದಿನ ಶತಮಾನಕ್ಕೆ ಭೂಮಿಯ ತಾಪ ಏರುತ್ತದೆ. ಅದು ನಿಜ. ಆದರೆ ಅಮೆರಿಕಾದ ಸೆನೆಟರ್ ಬೊಗಳೆ ಬಿಟ್ಟಂತೆ ಯದ್ವಾತದ್ವ ಅದು ಏರುವುದಿಲ್ಲ. ಹಾಗಾಗಲು ಪ್ರಕೃತಿ ಬಿಡುವುದಿಲ್ಲ. ಮುಂದಿನ ಶತಮಾನದ ವೇಳೆಗೆ ಭೂಮಿಯ ತಾಪಮಾನ 1.8 ಸೆಲ್ಸಿಯಸ್‌ನಷ್ಟು ಏರುತ್ತದೆ. ಹಿಂದೆಯೂ ಆ ರೀತಿ ಆಗಿದೆ. ಮಧ್ಯಕಾಲೀನ ಯುಗದಲ್ಲಿ ಕ್ರಿ.ಶ. 900ರಿಂದ 1300 ನಡುವೆ ಹೀಗೇ ಭೂಮಿಯ ತಾಪಮಾನ ಏರಿತ್ತು. ಆಗೇನೂ ಆಗಬಾರದ ಅನಾಹುತ ಆಗಲಿಲ್ಲ. ಬದಲಿಗೆ ಒಳ್ಳೆಯದೇ ಆಯಿತು ಎಂದು ಇತಿಹಾಸ ಹೇಳುತ್ತದೆ.

ಆಗ ಚಳಿಗಾಲದ ಅವಧಿ ಕಡಿಮೆಯಾಗಿ, ಕೃಷಿ ಉತ್ಪನ್ನಗಳನ್ನು ಬೆಳೆಸಲು ಹೆಚ್ಚು ಅವಧಿ ದೊರೆತು, ಆಹಾರ ಧಾನ್ಯಗಳ ಉತ್ಪಾದನೆ ಜಾಸ್ತಿಯಾಗಿತ್ತು. ಮಳೆ ಜಾಸ್ತಿಯಾದರೂ ಪ್ರವಾಹಗಳ ಹಾವಳಿ ಇರಲಿಲ್ಲ. ಭೂಮಿಗೆ ಬಿದ್ದ ನೀರು ಬೇಗ ಆವಿಯಾಗುತ್ತಾ ಇದ್ದುದೇ ಇದಕ್ಕೆ ಕಾರಣ.

ತಾಪಮಾನ ಏರಿಕೆಯಾದ ಕಾರಣ ಜನ ಬಿಡುಬೀಸಾಗಿ ಓಡಾಡಬಹುದಿತ್ತು. ಚಳಿಗಾಲದ ಅವಧಿ ಜಾಸ್ತಿಯಾದರೆ, ಒಂದೆಡೆ ಮುದುಡಿಕೊಂಡು ಕೂರುವುದರಿಂದ ನಾನಾ ರೀತಿ ಕಾಯಿಲೆಗಳೂ ಹೆಚ್ಚಿ, ಸಾವಿನ ಸಂಖ್ಯೆಯೂ ಜಾಸ್ತಿ. ಬೇಸಾಯದ ಅವಧಿ ಹೆಚ್ಚಿ ಆಹಾರ ಧಾನ್ಯ ದಂಡಿಯಾಗಿ ದೊರೆತಿದ್ದರಿಂದ ಜನರೂ ತಿಂದುಂಡು ಆರೋಗ್ಯವಾಗಿ ಅಡ್ಡಾಡಿಕೊಂಡಿದ್ದರು.

ಮಧ್ಯಕಾಲೀನ ಯುಗದಲ್ಲಿ, ಬದಲಾದ ಹವಾಮಾನದ ಜೊತೆಗೇ ಕೆಲವು ಪ್ರಯೋಜನಕಾರಿ ಬದಲಾವಣೆಗಳೂ ಆದದ್ದು ಇತಿಹಾಸ ಹೇಳುತ್ತದೆ. ಸಾಹಸ ಯಾತ್ರೆಗಳೂ ಆಗಲೇ ಆರಂಭವಾದವು. ಗ್ರೀನ್‌ಲ್ಯಾಂಡ್ ಕಂಡುಹಿಡಿದ ವೈಕಿಂಗ್ ಜನಾಂಗ ಅಲ್ಲಿಯೇ ನೆಲೆಸಿದರು. ಈಗ ಹಿಮ ಮುಚ್ಚಿಕೊಂಡಿರುವ ಥಂಡ್ರಾ ಪ್ರದೇಶ ಆಗ ಬೆಚ್ಚಗಿತ್ತು. ಜನ ಅಲ್ಲಿ ದನ ಸಾಕಿ ಜೀವನ ನಿರ್ವಹಿಸಿದರು. ಆಫ್ರಿಕಾದ ಉತ್ತರ ಭಾಗದಲ್ಲಿ ಮಳೆ ಹೆಚ್ಚಾಗಿ ಸಹರಾ ಮರುಭೂಮಿ ಕುಗ್ಗಿತು. ಇಂಗ್ಲೆಂಡಿನಲ್ಲಿ ದ್ರಾಕ್ಷಾರಸ ತಯಾರಿಕೆಗೆ ಉತ್ತಮ ವಾತಾವರಣ ನಿರ್ಮಾಣವಾಯಿತು. ಜಪಾನು, ರಷಿಯಾಗಳಲ್ಲಿ ಕೃಷಿ ವಿಸ್ತರಿಸಿತು.

ಇದು ಇತಿಹಾಸದ ಸತ್ಯ. ಹಾಗಿರುವಾಗ ಭೂಮಿ ಬಿಸಿ ಏರುತ್ತಿದೆ ಎಂದು ಕೆಲವರು ಹುಯಿಲೆಬ್ಬಿಸಿ ಅಂಜಿದವರ ಕಾಲುಗಳ ನಡುವೆ ಹಾವು ಬಿಡಲು ಯತ್ನಿಸುತ್ತಾ ಇದ್ದಾರೆ ಅಷ್ಟೇ.

ಇನ್ನೊಂದು ಗಮನಿಸಬೇಕಾದ ಅಂಶವಿದೆ. ಬರುವ ಶತಮಾನದಲ್ಲಿ ಭೂಮಿಯ ಬಿಸಿ ಏರಿಕೆಯಿಂದ ಹಗಲಿನ ತಾಪಮಾನ ಏರುವುದಿಲ್ಲ. ಇದರಿಂದಾಗಿ ಜನಕ್ಕೆ ದಣಿವು, ಆಯಾಸ ತಟ್ಟುವುದಿಲ್ಲ. ತಾಪಮಾನ ಸ್ವಲ್ಪವೇ ಸ್ವಲ್ಪ ರಾತ್ರಿ ವೇಳೆಯಲ್ಲಿ ಏರುತ್ತದಾದರೂ, ಜನ ಆರಾಮಾಗಿರಲು ಇದರಿಂದ ಯಾವುದೇ ತೊಂದರೆ ಆಗುವುದಿಲ್ಲ.

ಬಿಸಿ ಏರಿಕೆಯಿಂದ ಹವಾಮಾನ ವೈಪರೀತ್ಯ, ಚಂಡಮಾರುತ ಜಾಸ್ತಿಯಾಗುತ್ತವೆ ಎಂದು ವಾದ ಇದೆ. ಇದಲ್ಲದೇ ಧ್ರುವ ಪ್ರದೇಶಗಳ ಹಿಮಕರಗಿ ನ್ಯೂಯಾರ್ಕ್, ಜಪಾನುಗಳೇ ಮುಳುಗುತ್ತವೆ ಎಂಬ ಬೊಬ್ಬೆ ಇದೆ. ಇದು ಕಪೋಲ ಕಲ್ಪಿತ.

ಭೂಮಧ್ಯರೇಖೆ ಹಾದು ಹೋಗುವ ಪ್ರದೇಶಗಳಲ್ಲಿ ಮತ್ತು ಧ್ರುವ ಪ್ರದೇಶಗಳಲ್ಲಿನ ಉಷ್ಣಾಂಶದಲ್ಲಿ ತೀರಾ ಏರುಪೇರು ಆದಾಗ ಮಾತ್ರ ಚಂಡಮಾರುತಗಳು ಸಂಭವಿಸುತ್ತವೆ. ಮುಂದೆ ಬರಲಿರುವ ಬದಲಾವಣೆಯಲ್ಲಿ ತಾಪಮಾನ ಏರಿಕೆ ಕಂಡುಬರುವುದು ಧ್ರುವ ಪ್ರದೇಶಗಳಲ್ಲಿ ಮಾತ್ರ. ಹೀಗಾಗಿ ಭೂಮಧ್ಯರೇಖೆಯ ಪ್ರದೇಶಗಳು ಹಾಗೂ ಧ್ರುವ ಪ್ರದೇಶಗಳ ನಡುವಿನ ತಾಪಮಾನದ ವ್ಯತ್ಯಾಸ ಸಹಜವಾಗಿ ಕಡಿಮೆಯಾಗುತ್ತದೆ. ಹಾಗಾದಾಗ ಚಂಡಮಾರುತಗಳ ಹಾವಳಿ ಖಂಡಿತ ಇರದು.

ನಿರಾಶಾವಾದಿಗಳ ಇನ್ನೊಂದು ಕೂಗಿದೆ. ನಾವು ನಾನಾ ಇಂಧನಗಳನ್ನು ಉರಿಸಿ ವಾತಾವರಣದಲ್ಲಿ ಇಂಗಾಲದ ಡೈಆಕ್ಸೈಡ್ ಪ್ರಮಾಣ ಹೆಚ್ಚಿಸುತ್ತಾ ಇದ್ದೇವೆ. ಇದರಿಂದಾಗಿಯೇ ವಾತಾವರಣದಲ್ಲಿ ಏರುಪೇರಾಗಿ, ಬಿಸಿ ಏರುತ್ತಿದೆ ಎಂಬುದು ಇವರ ವಾದ. ಇಂಗಾಲದ ಡೈ ಆಕ್ಸೈಡ್ ಪ್ರಮಾಣ ಹೆಚ್ಚಾದಲ್ಲಿ, ಇರುವ ಗಿಡಮರಗಳು ಅದನ್ನು ಬಳಸಿ ಇನ್ನೂ ಸೊಂಪಾಗಿ ಬೆಳೆಯುತ್ತವೆ. ಹಿಂದೆ ಕೂಡ ಹಾಗೇ ಆಗಿತ್ತು.

ಇದೆಲ್ಲ ಪರಿಗಣಿಸಿದರೆ ಭೂಮಿಯ ಬಿಸಿ ಏರಿಕೆ ಎಂಬುದು ಶಾಪವಲ್ಲ ವರದಾನ ಎಂಬುದು ಯಾರಿಗಾದರೂ ಅರಿವಾದೀತು. ಇವರೆಲ್ಲ ಹೇಳುವ ಹಾಗೆ ಧ್ರುವ ಪ್ರದೇಶಗಳ ಹಿಮಕರಗಿ ಭೂಪ್ರದೇಶಗಳನ್ನು ಮುಳುಗಿಸುವುದಿಲ್ಲ. ತಾಪ ಏರಿಕೆಯಿಂದ ಧ್ರುವ ಹಿಮಕರಗುತ್ತದೆ. ಆದರೆ, ಹವಾಮಾನದಲ್ಲಿ ತೇವಾಂಶ ಜಾಸ್ತಿ ಇರುತ್ತದೆ. ಮಳೆ ಜಾಸ್ತಿ ಆಗುತ್ತದೆ. ಧ್ರುವ ಪ್ರದೇಶಗಳಲ್ಲಿ ಮೊದಲಿಗಿಂತ ಹೆಚ್ಚು ಹಿಮವರ್ಷವೂ ಆಗಿ ಸಮತೋಲ ಏರ್ಪಡುತ್ತದೆ.

ಪ್ರಕೃತಿ ವಿನಾಶಕಾರಿಯಲ್ಲ. ಅದರ ಪರಿವರ್ತನೆ ನಿಧಾನ ಹಾಗೂ ಉಪಯುಕ್ತ ಪರಿಣಾಮ ಬೀರುವಂಥದ್ದು. ಅದನ್ನು ಅರ್ಥಮಾಡಿಕೊಳ್ಳದೇ ಸಣ್ಣದೊಂದು ಸತ್ಯದ ಎಳೆ ಹಿಡಿದು, ಸುಳ್ಳಿನ ಗೋಪುರ ನಿರ್ಮಿಸುವ ಕೆಲಸ ನಡೆದಿದೆ. ನಾವು ನಿಜವಾಗಿ ಹೆದರಬೇಕಾದ್ದು ಪ್ರಕೃತಿಯಲ್ಲಿನ ಬದಲಾವಣೆಗೆ ಖಂಡಿತ ಅಲ್ಲ. ಸುಳ್ಳು ಹೇಳುತ್ತಾ ಅಂಜಿಸುತ್ತಿರುವವರ ಬಗ್ಗೆಯೇ ನಾವು ಹೆಚ್ಚು ಎಚ್ಚರ ವಹಿಸಬೇಕಾಗುತ್ತದೆ.

■ ಕೆ.ಸಿ.ಚೆರಿಯನ್

ಕತೆ

ಜ್ಞಾಪಕಗಳಲ್ಲಿ....



■ ಕೆ.ವಿ.ರಾಜಲಕ್ಷ್ಮಿ

''ಆಫೀಸಿಗಿನ್ನೂ ಹೊರಟಿಲ್ಲ ತಾನೆ? ನಮ್ಮ' ಶೀನೂ ಮಾಮ ಹೋಗ್ಬಿಟ್ರಂತೆ, ನೀವು ನೇರ ಮೂರ್ತಿ ಮನೇಗೆ ಬಂದ್ಬಿಡಿ,'' ಬೆಳಗ್ಗಿನ ಎಂಟರ ಸಮಯ, ತವರುಮನೆಯಿಂದ ನನ್ನವಳು ರತ್ನ, ಫೋನ್ ಮಾಡಿದ್ದಳು.

ಕಣ್ಣಾಡಿಸುತ್ತಿದ್ದ ದೈನಿಕವನ್ನು ಮಡಿಚಿಟ್ಟು, ನೈಟ್‌ಸೂಟ್ ಬದಲಿಸಿ, ಸ್ಕೂಟರ್ ಚಾಲೂ ಮಾಡಿದೆ. ಶೀನೂ ಮಾಮ ಅಂದರೆ, ನನ್ನ ಹೆಂಡತಿಯ ಸೋದರತ್ತೆಯ ಪತಿ, ಸುಮಾರು ಎಂಭತ್ತೈದೋ ಎಂಭತ್ತಾರೋ ವಯಸ್ಸಾಗಿದ್ದಿರಬಹುದು. ನಾಲ್ಕು ಮಕ್ಕಳು, ಎಲ್ಲರಿಗೂ ಮದುವೆಯಾಗಿದೆ. ಮೊಮ್ಮಕ್ಕಳನ್ನೂ ಕಂಡಾಯಿತು. ಕಣ್ಣಿಗೆ ಕಾಣಿಸುವಂತಹ ಕೊರತೆಯೇನೂ ಇಲ್ಲ.

ಆಗಲೇ ಸಾಕಷ್ಟು ಜನ ಸೇರಿದ್ದರು. ವಾರಿಜತ್ತೆ, ನಿರ್ಜೀವವಾಗಿದ್ದ ಗಂಡನ ಪಕ್ಕದಲ್ಲೇ ಕುಳಿತಿದ್ದರು. ರತ್ನಳೂ ಅಲ್ಲೇ ಇದ್ದುದರಿಂದ, ನೇರ ವಾರಿಜತ್ತೆಯ ಬಳಿಗೇ ಹೋದೆ.

''ನೋಡಪ್ಪ, ಕೊನೆಗೂ ಹೊರಟೇ ಹೋದರು'' ನನ್ನನ್ನು ನೋಡುತ್ತಲೇ ಹೇಳಿದರು.

ನನಗೆ ಏನೂ ಹೇಳಲು ತೋಚಲಿಲ್ಲ. ಎಲ್ಲರೂ ಒಂದು ದಿನ ಹೋಗುವುದು ತಿಳಿದ ವಿಷಯವೇ. ಆದರೂ ಆ ಗಳಿಗೆಗೆ ವೇದಾಂತಿಯಂತೆ ಸಂತೈಸುವುದು ಉಚಿತವೆನಿಸದೆ ಸುಮ್ಮನಾದೆ.

''ಇವತ್ತೂ ಬೇಗ ಹೋಗ್ಬೇಕಾ? ಆಡಿಟ್ ಇನ್ನೂ ಮುಗಿದಿಲ್ವಾ?'' ರತ್ನ ನನ್ನಲ್ಲಿ ಪಿಸುಗುಟ್ಟಿದಾಗ ''ಇಲ್ಲ ಇನ್ನೂ ಎರಡು ದಿನ ಇದೆ'' ಎಂದೆ. ಬೇಸಿಗೆಯ ರಜೆಯೆಂದು ಅಮ್ಮನ ಮನೆಯಲ್ಲಿ ಟೆಂಟ್ ಹಾಕಿದ್ದಳು. ಮಕ್ಕಳು ದೆಹಲಿಯಲ್ಲಿ ನನ್ನ ತಂಗಿಯ ಮನೆಯಲ್ಲಿದ್ದರು. ತವರು ಒಂದೇ ಊರಿನಲ್ಲಿದ್ದರೂ ನನ್ನನ್ನು ಅದೆಷ್ಟು ಮಿಸ್ ಮಾಡುತ್ತಿದ್ದಳು. ದಿನಕ್ಕೆರಡು ಬಾರಿ ಫೋನ್ ಮಾಡಿ ಕುಶಲ ವಿಚಾರಣೆ. 'ಯಾವಾಗ ಬರ್ತೀ' ಎಂದಾಗಲೆಲ್ಲ ಹಾರಿಕೆಯ ಉತ್ತರ, 'ಅಮ್ಮ ಕಳುಹಿಸಿಕೊಟ್ಟಾಗ!' ಕೊನೆಯ ಮಗಳು ಮುದ್ದಾಗಿ ಬೆಳೆದವಳು. 'ಇನ್ನೊಂದು ವಾರದ ನಂತರ ಕಳುಹಿಸ್ತೀನಿ ಅಭ್ಯಂತರವಿಲ್ಲವಲ್ಲ?' ಅತ್ತೆಯವರೇ ಒಮ್ಮೆ ಸಂಕೋಚದಿಂದ ಕೇಳಿದಾಗ 'ಇಲ್ಲ'ವೆಂದು ಸಮ್ಮತಿಸಿದ್ದೆ. ದಾಂಪತ್ಯವೆಂಬುದು ಎಂಥ ಸುಂದರ ಬಂಧ? ಅನುಭವ. ಯೋಚನೆಯಲ್ಲಿ ತೇಲಿದವನು, ಇಹಕ್ಕೆ ಬಂದೆ. ವಾರಿಜತ್ತೆಗೆ ಭರಿಸಲಾರದ ದುಃಖವಲ್ಲ? ವಾರಿಜತ್ತೆಯನ್ನು ಮಾತನಾಡಿಸಲು ಮತ್ತಾರೋ ಬಂದರು. ಯಥಾಪ್ರಕಾರ, ಅವರೊಂದಿಗೂ ಸಾಧಾರಣವಾಗೇ ವ್ಯವಹರಿಸಿದರು. ನನ್ನ ಗಮನಕ್ಕೆ ಬಂದ ಅಚ್ಚರಿಯ ಸಂಗತಿಯೆಂದರೆ, ಪತಿಯ ಅಗಲಿಕೆ, ಆಕೆಯನ್ನು ಅಷ್ಟೇನೂ ಭಾದಿಸಲಿಲ್ಲವೋ ಎಂಬಂತಿದ್ದ ಅವರ ಮುಖಭಾವ. ನಾನೆಣಿಸಿದ ಭೋರೆಂದು ಅಳುವಿಕೆಯೋ, ಅಥವಾ ಪ್ರಪಂಚವೇ ಕಳಚಿಬಿದ್ದಂತಹ ಶೂನ್ಯಭಾವವೋ ಇಲ್ಲದಿರುವಿಕೆ. ಅಥವಾ ನಾನೇ ತಪ್ಪು ತಿಳಿದೆನೆ?

ವಾರಿಜತ್ತೆ ಮೆಲ್ಲನೆ ಹೆಣದತ್ತ ಬಾಗಿ, ನಿರ್ಜೀವವಾಗಿದ್ದ ಗಂಡನ ಕೆಳತುಟಿಯನ್ನು ಬಲವಾಗಿ ಅದುಮಿ ಹಿಡಿದು ನಂತರ ಬಿಟ್ಟದ್ದು ಕಣ್ಣೆವೆ ಮುಚ್ಚಿ ತೆಗೆಯುವುದರೊಳಗೆ ಆಗಿ ಹೋಗಿತ್ತು. ನಾನು ಅವಾಕ್ಕಾದೆ. ಸುತ್ತಮುತ್ತ ಯಾರ ಗಮನಕ್ಕಾದರೂ ಬಂದಿತೆ?

ಮುಂಬಾಗಿಲಿಗೆ ಅಂಟದಂತಿದ್ದ ರಸ್ತೆಯಲ್ಲಿ ಒಂಬು ಬದಿಗೆ ಹತ್ತಾರು ಕುರ್ಚಿಗಳನ್ನು ಹಾಕಿದ್ದು, ಒಂದಷ್ಟು ಮಂದಿ ಗಂಡಸರು ಉಪಸ್ಥಿತರಿದ್ದರು. ನಾನೂ ಅಲ್ಲಿಗೇ ಹೋಗುವುದು ಒಳಿತೆನಿಸಿ, ಮೇಲೆದ್ದೆ.

ಖಾಲಿಯಿದ್ದ ಕುರ್ಚಿಯಲ್ಲಿ ಕುಳಿತೆ. ಒಬ್ಬಿಬ್ಬರು ಗುರುತಿನವರಿದ್ದರು. ಕಾಮನ್ ರಿಲೇಟೀವ್ಸ್. ಮುಗುಳ್ನಕ್ಕೆ.

''ಪೂರ್ಣಾಯಸ್ಸೇ, ಬಿಡಿ, ಇನ್ನೂ ಎಷ್ಟು ವರ್ಷಾಂತ ಇರಬೇಕಿತ್ತು ಎಲ್ಲ ಸುಖವನ್ನೂ ಕಂಡಾಗಿತ್ತು''

''ಅದೂ ನಿಜ ಹಿಂದಿನ ಕಾಲದವರು ಇಷ್ಟಾದರೂ ರೋಗ, ರುಜಿನ ಇಲ್ದೇ ಇರೋದು, ಈಗಲೋ, ಹುಟ್ಟುತ್ತಲೇ ದೊಡ್ಡ ಕಾಯಿಲೆಗಳು''

''ಆಸ್ತಿ ಪಾಸ್ತಿ ಏನೂ ಇಟ್ಟಂಗಿಲ್ಲ, ಪೆನ್ಶನ್ ಇರೋದ್ರಿಂದ ಪರ್ವಾಗಿಲ್ಲ, ಆ ಹೆಂಗಸಿಗೆ ಫ್ಯಾಮಿಲಿ ಪೆನ್ಶನ್ ಬರುತ್ತೆ, ತೀರಾ ಮಕ್ಕಳನ್ನೇ ಅವಲಂಬಿಸಬೇಕಿಲ್ಲ''

''ಮಕ್ಕಳ ಮನೆಗೆ ಬಂದರೂ ಹೊಂದ್ಕೋಬೇಕಲ್ಲ? ಈಗಿನ ಕಾಲದಲ್ಲಿ ಅವರವರ ಸಂಸಾರ ತೂಗಿಸೋದೇ ಹೆಚ್ಚು, ಅದರಲ್ಲೂ ಇವರ ಆಚಾರ, ವ್ಯವಹಾರ ಈಗಿನವರಿಗೆ ಸರಿಹೋಗೊಲ್ಲ. ಹೆಂಗಸರ ನಡುವೆ ಅನ್ನೋಕೂ ಆಗದೆ ಅನುಭವಿಸೋಕ್ಕೂ ಆಗದೆ ನಲುಗೋದು ನಾವು ಗಂಡಸರೇ''

ಅಲ್ಲಿಂದ ಮಾತು ಕೆಲಸ, ಪ್ರಮೋಷನ್ನು, ರಾಜಕೀಯ, ಕ್ರಿಕೆಟ್, ಸಿನಿಮಾ ಎಲ್ಲದರ ಸುತ್ತಲೂ ಗಿರುಕಿ ಹೊಡೆಯುತ್ತಿತ್ತು. ನಾನು ಮೂಕ ಪ್ರೇಕ್ಷಕನಾಗಿ ಎಲ್ಲರನ್ನೂ ಗಮನಿಸುತ್ತಿದ್ದೆ.

ಸುಡುಬೇಸಿಗೆ, ಆದರೇನು, ಯಾರೋ ನೆರೆಯವರಿರಬೇಕು ಕಾಫಿ ತಂದುಕೊಟ್ಟರು.

''ಮೂರನೆಯ ಮಗ ಇರೋದು ಗುಜರಾತಿನಲ್ಲಿ, ಅಲ್ಲಿಂದ ಬರಬೇಡವೆ? ಹಾಗೇಂತ ಎಷ್ಟು ಹೊತ್ತೂಂತ ಹೊಟ್ಟೆ ಕಾಯ್ಸೋದು, ತೀರಾ ಇರಲೇಬೇಕಾದವರು ಇದ್ದುಕೊಳ್ಳಲಿ'' ಯಾರೋ ಹಿರಿಯರು ಹೇಳುತ್ತಿದ್ದರು.

ಕಾಲ ಎಷ್ಟು ಬದಲಾಗಿತ್ತು?

ಬೇಡವೆನ್ನದೆ ಕಾಫಿ ತೆಗೆದುಕೊಂಡೆ.

''ನನ್ನದಂತೂ ಎರಡನೆಯ ಡೋಸ್ ಕಾಫಿ ಆಗಿರಲೇ ಇಲ್ಲ. ಸದ್ಯ ಒಳ್ಳೇದಾಯ್ತು'' ಸಂತೋಷವಾಗಿ ಒಬ್ಬರು ಕಾಫಿ ಗುಟುಕರಿಸಿದರೆ,

''ಜ್ಯೂಸ್ ಇದ್ದಿದ್ದರೆ ಚೆನ್ನಾಗಿರ್ತಿತ್ತಲ್ವ? ಈ ಬಿಸಿಲಿಗೆ ತಂಪಾಗಿ?''

''ಕಾಫಿಗೇನು ಟೈಮು ರೀ? ಜ್ಯೂಸ್ ಕುಡಿದರೂ ಕಾಫಿ ಕುಡಿದಾಗ ಆಗುವಂತಹ ಹಿತ ಇರೋಲ್ಲ ನೀವು ಏನೇ ಹೇಳಿ''

ಅಸಹ್ಯವಾಯಿತು, ಇವರಿಗೆಲ್ಲ ಹೊತ್ತುಗೊತ್ತಿನ ಪರಿ ಇಲ್ಲವೆ? ಯಾವ ಸಂದರ್ಭದಲ್ಲಿ ಏನು ಮಾತಾಡಬಹುದು? ಹೇಗೆ ವ್ಯವಹರಿಸಬಹುದು? ಎಂಬ ಪರಾಮರ್ಶೆ ಇಲ್ಲವೆ, ಛೆ,

ವಾಚ್ ನೋಡಿಕೊಂಡೆ,

ಹೊರಡುವುದೇ, ಅಥವಾ ಇನ್ನೊಂದೈದು ನಿಮಿಷ ಅಲ್ಲೇ ಉಳಿಯುವುದೇ?

ರತ್ನಳಿಗಾಗಿ ಅವಳು ಕುಳಿತಿದ್ದ ಜಾಗದೆಡೆ ಕಣ್ಣು ಹಾಯಿಸಿದೆ. ಅವಳು ಅಲ್ಲಿಲ್ಲ. ವಾರಿಜತ್ತೆಯ ಕಡೆ ಗಮನ ಹರಿಸಿದೆ, ಅರೆ, ಇದೇನು ಮಾಡುತ್ತಿರುವರು?

ವಾರಿಜತ್ತೆ ಮೆಲ್ಲನೆ ಹೆಣದತ್ತ ಬಾಗಿ, ನಿರ್ಜೀವವಾಗಿದ್ದ ಗಂಡನ ಕೆಳತುಟಿಯನ್ನು ಬಲವಾಗಿ ಅದುಮಿ ಹಿಡಿದು ನಂತರ ಬಿಟ್ಟಿದ್ದು ಕಣ್ಣೆವೆ ಮುಚ್ಚಿ ತೆಗೆಯುವುದರೊಳಗೆ ಆಗಿ ಹೋಗಿತ್ತು. ನಾನು ಅವಾಕ್ಕಾದೆ. ಸುತ್ತಮುತ್ತ ಯಾರ ಗಮನಕ್ಕಾದರೂ ಬಂದಿತೆ?

ಇಲ್ಲ, ಯಾರೂ ಗಮನಿಸಿದಂತಿಲ್ಲ, ಎಲ್ಲರೂ ಅವರವರ ಮಾತುಕತೆಯ ಲೋಕದಲ್ಲಿ ಮುಳುಗಿದ್ದಾರೆ, ಅಥವಾ ಗಮನಿಸಿದರೂ ಏನು ಹೇಳಿಯಾರು?

ಅಂತೂ ವಾರಿಜತ್ತೆಯ ಕ್ರಿಯೆ ಮಾತ್ರ ಅನೂಹ್ಯ!

ರತ್ನ ನಾನಿದ್ದಲ್ಲಿಗೇ ಬಂದಾಗ, ಹೊರಡುವೆನೆಂದು ಕಣ್ಸನ್ನೆಯಲ್ಲೇ ಹೇಳಿ ಹೊರಟೆ.

ಮನದ ತುಂಬ ವಾರಿಜತ್ತೆಯ ಕುರಿತೇ ಮಥನ.

★

ತವರಿನಿಂದ ರತ್ನ ವಾಪಸಾಗಿದ್ದಳು. ಮಕ್ಕಳು ಬಂದಿರಲಿಲ್ಲ, ಸಮಯ ನೋಡಿ ಮೆಲ್ಲನೆ ವಾರಿಜತ್ತೆಯ ಬಗ್ಗೆ ಪ್ರಸ್ತಾಪಿಸಿದೆ.

''ಪಾಪ ಅಲ್ವ? ವಾರಿಜತ್ತೆ, ಇಷ್ಟು ದಿನ ಜೊತೆಯಾಗಿದ್ದು ಈಗ ದಿಢೀರ್ ಅಂತ ಈ ಸ್ಥಿತಿ''

''ನೀವೂ ಸರಿ, ಇದ್ದಾಗ ನೆಟ್ಟಗೆ ನೋಡಿಕೊಂಡಿದ್ದು ಅಷ್ಟರಲ್ಲೇ ಇದೆ.'' ಮೂದಲಿಸಿದಳು.

''ಹಾಗಂದರೆ ಹೇಗೆ ರತ್ನ? ದೊಡ್ಡ ಮಗನಿಗೇ ಐವತ್ತೇಳು ಐವತ್ತೆಂಟು ವರ್ಷ. ದೀರ್ಘ ದಾಂಪತ್ಯದ ನಂತರ, ಅತ್ತೆಗೆ ಕಷ್ಟವೆನಿಸೋಲ್ವೆ?''

''ಸದ್ಯ, ಅದರ ಬಗ್ಗೆ ಹೆಚ್ಚು ಮಾತನಾಡದಿರುವುದೇ ಒಳ್ಳೆಯದು. ಮಾಡಿದವರ ಪಾಪ ಆಡಿದವರ ಬಾಯಲ್ಲೀಂತ ನಮಗ್ಯಾಕೆ ಬೇಕು ಅದೂ ಆತ ಸತ್ತು ಸ್ವರ್ಗದಲ್ಲಿರುವಾಗ''

''ನೀನು ಹೇಳೋದು ಒಂದೂ ಅರ್ಥವಾಗ್ತಿಲ್ಲ. ಅಲ್ಲ, ಯಾತಕ್ಕೆ ಕಡಿಮೆಯಾಗಿತ್ತು ವಾರಿಜತ್ತೆಗೆ?'' ಅವಳನ್ನು ಕೆಣಕಿದೆ, ಬೇರೆ ಉಪಾಯಕಾಣದೆ,

''ಏನೂಂತ ಹೇಳ್ಲಿ? ಪ್ರಪಂಚ ಅರಿಯೋಕ್ಕೆ ಮುಂಚೆ ಗಂಟು ಹಾಕಿದ್ರಾ? ಮಾವನಿಗೋ ಊರೂರೂ ಅಲೆಯೋ ಕೆಲಸ. ಅದೇ, ವರ್ಗ. ಹೋದ ಊರಲೆಲ್ಲ ಒಂದೊಂದನ್ನು ಸರಿಪಡಿಸಿಕೊಂಡು, ಸಂಪಾದನೆಯನ್ನೆಲ್ಲ ಆ ಚಪಲಕ್ಕೆ ಸುರಿದದ್ದಾಯಿತು. ಇನ್ನು ಸಂಸಾರವೇನು ಮಾಡಿಯಾರು? ಅಲ್ಲಿಗೂ ಪುಣ್ಯ ಅಂತಲೇ ಹೇಳಬೇಕು, ಏನೋ ನಮ್ಮ ಅಪ್ಪ, ಅಮ್ಮ 'ಅಯ್ಯೋ' ಅಂದದ್ದಕ್ಕೆ ಮಕ್ಕಳು ಮುಂದುವರೆದವು. ಆದರೇನಂತೆ, ಕೊನೆಗಾಲಕ್ಕೆ ಅತ್ತೇನೇ ಬೇಕಾಯ್ತು. ಅವರಾಗೋ ಹೊತ್ತಿಗೆ ತಾಳ್ಮೆಗೆಡದೆ ಮಾಡಿದರು'' ನಿಡುಸುಯ್ದಳು.

''ಪೆನ್ಶನ್ ಆಗೇ ಇಪ್ಪತ್ತು ವರ್ಷವಾಗಿರಬೇಕಲ್ಲ? ಇನ್ನೂ ಜಾಸ್ತಿ''

''ಆದರೇನಂತೆ ಪೆನ್ಶನ್ ತೊಗೊಂಡು ಹೊರಟರೆ ಪೂರ್ತಿ ಖರ್ಚಾದ ನಂತರವೇ ಹಿಂತಿರುಗುತ್ತಿದ್ದದ್ದು''

ಕೀಟದಂತೆ ಕೊರೆಯುತ್ತಿದ್ದ ನನ್ನ ಪ್ರಶ್ನೆಗಳಿಗೆಲ್ಲ ಉತ್ತರ ಸಿಕ್ಕಿತ್ತು. ವಾರಿಜತ್ತೆಯ ಸ್ಥಿತಿಗೆ ಮರುಕವಾಯಿತು.

★

ವೈಕುಂಠ ಸಮಾರಾಧನೆ ಮುಗಿದು ವಾರದ ಮೇಲಾಗಿತ್ತು.

''ರತ್ನ'' ಯಾರೋ ಕರೆದಂತಾಗಿ ಮುಂಬಾಗಿಲಿಗೆ ಹೋದೆ, ಹೊರಗೆ ಗೇಟಿನಲ್ಲಿ ಆಚೆ ಬದಿಗೆ ವಾರಿಜತ್ತೆ.

''ಬನ್ನಿ ಅತ್ತೆ'' ಕರೆದೆ.

''ಬೇಡಪ್ಪ, ಇಲ್ಲೇ ಇರಲಿ, ರತ್ನನ್ನ ಕರಿ''

''ಅವಳನ್ನು ಕರೀತೀನಿ, ನೀವು ಬನ್ನಿ ಒಳಗೆ''

ಆಗ್ರಹಿಸಿದೆ, ಅಷ್ಟರಲ್ಲೇ ರತ್ನ ಬಂದಳು.

''ನೀವು ಒಳಗೆ ಬಂದರೆ ನಮಗೇನೂ ಕೆಡುಕಾಗೋಲ್ಲ, ನನಗೆ ಅದರಲ್ಲಿ ನಂಬಿಕೇನೂ ಇಲ್ಲ, ಸುಮ್ಮನೆ ಬನ್ನಿ'' ರತ್ನಳೂ ದನಿಗೂಡಿಸಿದಾಗ ವಿಧಿಯಿಲ್ಲದೆ, ಮನೆಯೊಳಗೆ ಅಡಿಯಿಟ್ಟರು.

''ಇಲ್ಲೇ ಕೂರ್ತೀನಿ'' ವರಾಂಡದಲ್ಲಿನ ಬೆತ್ತದ ಕುರ್ಚಿಯಲ್ಲಿ ಸಂಕೋಚಿಸುತ್ತ ಕುಳಿತರು

''ಹೇಗಿದ್ದೀರಿ'' ಕೇಳಿದಳು ರತ್ನ ಲೋಟದಲ್ಲಿ ಕಾಫಿ ಕೊಡುತ್ತ.

''ನಿಜ ಹೇಳಲಾ? ನಾನು ಆರಾಮಾಗೇ ಇದ್ದೀನಿ, ಮಾವ ಇಲ್ಲ ಅನ್ನೋದು ಕೊರತೆಯಾಗೇ ಕಂಡಿಲ್ಲ, ಇದ್ದಾಗ ಪಟ್ಟ ಸಂಭ್ರಮ ಅಷ್ಟರಲ್ಲೇ ಇದೆ ಅನ್ನೋದು ನಿನಗೂ ಗೊತ್ತಿಲ್ಲದ ವಿಷಯವಲ್ಲ, ನಿನ್ನ ಗಂಡನಿಗೆ ಹೇಳಿ ನನಗೆ ಪೆನ್ಶನ್ ಸ್ವಲ್ಪ ಬೇಗ ಬರೋ ಹಾಗೆ ಮಾಡ್ಬೇಕಿತ್ತು, ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನೆಲ್ಲ ತಂದಿದ್ದೀನಿ.'' ವಾರಿಜತ್ತೆ ಮಾತನಾಡುತ್ತಲೇ ಇದ್ದರು.

ತೀರಾ ಪ್ರಾಕ್ಟಿಕಲ್ ಆಗಿ ವ್ಯವಹರಿಸುತ್ತಿದ್ದ ವಾರಿಜತ್ತೆ ಆ ಕ್ಷಣಕ್ಕೆ ಎತ್ತರದಲ್ಲಿರುವಂತೆ ಕಂಡರು.

''ರೀ, ಅತ್ತೆ ಹೇಳಿದ್ದು ಕೇಳಿಸಿಕೊಂಡಿರಾ?'' ಅವರಿಗೆ ಸಹಾಯ ಮಾಡಬಾರದಾ' ಎಂಬ ಅಳಲಿನ ಛಾಯೆಯಿತ್ತು ರತ್ನಳ ದನಿಯಲ್ಲಿ.

''ಅದಕ್ಕೇನಂತೆ, ನನ್ನ ಕೈಲಾದ ಸಹಾಯ ಖಂಡಿತ ಮಾಡ್ತೇನೆ'' ನಾನೂ ಸಹಾಯ ಹಸ್ತ ಚಾಚಿದೆ.

ವಾರಿಜತ್ತೆಯ ಮುಖದಲ್ಲಿ ಗೆಲುವಿನ ಹೊನಲು!

ವಿಧಿಯೆಂದರೆ, ಆ ತೃಪ್ತಭಾವವನ್ನು ಕಾಣಲು ಅಥವಾ ಅನುಭವಿಸಲು, ಶೀನೂ ಮಾವ ಇರದಿದ್ದುದು.

ಇಲ್ಲ, ಆ ಭಾವ ಮೂಡಲು ಅವರೇ ಕಾರಣರಾದುದು!

■

ಹೊಸ ಪುಸ್ತಕ




ನಿನಾದ

ಲೇ: ಸೂರ್ಯಕಾಂತ ಗುಣಕಿಮಠ -
ಶರಣಪ್ಪ ಗುಡದಿನ್ನಿ
ಪ್ರ: ಪವಿತ್ರವಾಣಿ ಪ್ರಕಾಶನ, ಬೆಂಗಳೂರು.
ಮ.ನಂ. 3963, 2ನೇ ಮುಖ್ಯ ರಸ್ತೆ, 7ನೇ
ಅಡ್ಡರಸ್ತೆ, ಗಾಯತ್ರಿ ನಗರ, ಬೆಂಗಳೂರು-21.
ಪುಟ: 120, ಬೆಲೆ: 45/-



ವಂದೆ ಮಾತರಂ

ಲೇ: ಎನ್.ನಾಗರಾಜ
ಪ್ರ: ಕವಿತ ಪಬ್ಲಿಷರ್ಸ್
ಗಂಗಾನಗರ, ಬೆಂಗಳೂರು-560 032.
ಪುಟ: 64, ಬೆಲೆ: 25/-




ಪ್ರೊ॥ ಸಿ.ಎನ್.ಆರ್.ರಾವ್

ಲೇ: ಡಾ.ಎನ್.ಎಸ್.ಲೀಲಾ
ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು-560 018.
ಪುಟ: 124, ಬೆಲೆ: 30/-



ವಾಸ್ತು ಎಷ್ಟು ವಾಸ್ತವ ?

ಲೇ: ಬಿ.ವಿ.ವೀರಭದ್ರಪ್ಪ
ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್
ಲಿಮಿಟೆಡ್, ಎಂಬೆಸಿ ಸೆಂಟರ್,
ಕ್ರೆಸೆಂಟ್ ರಸ್ತೆ, ಬೆಂಗಳೂರು-560 001.
ಪುಟ: 88, ಬೆಲೆ: 20/-



ಹೆಸರಿಡದ ಕವನ ಸಂಕಲನ

ಲೇ: ಡಾ॥ ಸಬಿತಾ ಮರಕಿಣಿ
ಪ್ರ: ಗ್ರಾಮೋದಯ, ಬೆಂಗಳೂರು.
ಪುಟ: 46, ಬೆಲೆ: 40/-




ಅಟಲ್ ಬಿಹಾರಿ ವಾಜಪೇಯಿ ಕವಿತೆಗಳು

ಲೇ: ಡಾ॥ ಸರಜೂ ಕಾಟ್ಕರ್
ಪ್ರ: ವಿಮೋಚನಾ ಪ್ರಕಾಶನ
ಅಥಣಿ-591 304.
ಪುಟ: 88, ಬೆಲೆ: 100/-



ಕಾರ್ಗಿಲ್ಲಿನ ಕರೆ

ಸಂ: ಜಿ.ಎಂ. ಶಿರಹಟ್ಟಿ
ಪ್ರ: ನೆಲಮನೆ ಪ್ರಕಾಶನ
ರಂಗನಾಥನಗರ,
ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ
ಪುಟ: 120, ಬೆಲೆ: 35/-




ಪರಾಗದ ಕಣಗಳು

ಹನಿಗವಿತೆಗಳು

ಲೇ: ವಿ.ಮಲ್ಲಿಕಾರ್ಜುನಯ್ಯ
ಪ್ರ: ಶುಭದ ಪ್ರಕಾಶನ
ಜರಗನಹಳ್ಳಿ, ಬೆಂಗಳೂರು-560 078.
ಪುಟ: 58, ಬೆಲೆ: 25/-

ಮಾರುಕಟ್ಟೆಯ 'ಮೈತ್ರಿಸಂದೇಶ'ವೆಂಬ

ಗ್ರೀಟಿಂಗ್ ಕಾರ್ಡು



ಗ್ರೀಟಿಂಗ್ಸ್ ಸೀಸನ್ ಬಂದೇಬಿಟ್ಟಿತು.

ಡಿಸೆಂಬರ್ 25 - ಕ್ರಿಸ್‌ಮಸ್, ಬೆನ್ನಹಿಂದೆಯೇ ಹೊಸ ಶತಮಾನ ಆರಂಭವಾಗಲಿದೆ... ಈ ಶತಮಾನದ ಕೊನೆಯ ಕೊಂಡಿ ಕಳಚಲಿದೆ!!

ಕಳೆದು ಹೋಗುತ್ತಿರುವ ವರ್ಷಕ್ಕೆ ಬೀಳ್ಕೊಡುಗೆ... ಹೊಸ ವರ್ಷಕ್ಕೆ ಸ್ವಾಗತ... ಇನ್ನು ಗ್ರೀಟಿಂಗ್ ಕಾರ್ಡುಗಳ ಸುಗ್ಗಿಯೇ ಸುಗ್ಗಿ!!

ಹೊಸ ವರ್ಷಕ್ಕೆ ಸ್ವಾಗತದ ಶುಭಾಶಯ ಕೋರುತ್ತಾ ಸ್ನೇಹಿತರ, ಹಿತೈಷಿಗಳ, ಆತ್ಮೀಯರ, ಗೆಳೆಯ-ಗೆಳತಿಯರ ಪರಸ್ಪರ ಪ್ರೀತಿ-ತುಂಬಿದ ಗ್ರೀಟಿಂಗ್ ಕಾರ್ಡುಗಳ ಮಹಾಪೂರವೇ ಹರಿದು ಬರುತ್ತದೆ.

ಬರೀ ಕ್ರಿಸ್‌ಮಸ್, ದೀಪಾವಳಿ, ಸಂಕ್ರಮಣ, ಹೊಸವರ್ಷಗಳ ಪ್ರಯುಕ್ತಕ್ಕೆ ಮಾತ್ರವಲ್ಲದೇ ಪ್ರೀತಿಯ ಶುರುವಿಗೆ, ಮೊದಲ ಮುತ್ತಿಗೆ, ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗೆ, ಹುಟ್ಟುಹಬ್ಬಕ್ಕೆ, ಅಪ್ಪ-ಬಾಸ್ ರಿಟೈರ್ಡ್ ಆದದ್ದಕ್ಕೆ, ತಂಗಿಯ-ಅಕ್ಕನ ಅಥವಾ ಗೆಳೆಯ-ಗೆಳತಿಯರ ನಿಶ್ಚಿತಾರ್ಥಕ್ಕೆ ಗ್ರೀಟಿಂಗ್ ಕಳಿಸಲು ಕಾರಣಬೇಕಿಲ್ಲ ಈ ಯುಗದಲ್ಲಿ!!

ಇನ್ನೂ ಪತ್ರಬರೆಯದೇ ಮರೆತ ಗೆಳತಿಗೋ, ಗೆಳೆಯನಿಗೋ ಅದನ್ನು ನೆನೆಪಿಸಲು ಗ್ರೀಟಿಂಗ್ ಕಾರ್ಡ್! ಇನ್ನು 'ಡೈವೋರ್ಸ್' ತಗೊಂಡವರಿಗೂ ಗ್ರೀಟಿಂಗ್ ಕಾರ್ಡ್ಸ್ ಕಳಿಸಲು ಅವಕಾಶವಿದೆ... ಇನ್ನು 'ಕ್ಷಮಾಪಣೆ' ಕಾರ್ಡ್‌ಗಳಿಗೆ ಲೆಕ್ಕವಿಲ್ಲಬಿಡಿ!!

ಇಷ್ಟೆಲ್ಲಾ ನಮ್ಮ ಬದುಕಲ್ಲಿ ಹಾಸುಹೊಕ್ಕಾದ ಈ ಗ್ರೀಟಿಂಗ್ ಕಾರ್ಡ್‌ಗಳ ಹಿನ್ನೆಲೆ? ಎಲ್ಲಿಂದ ಬಂತು? ಯಾರು ಕಂಡುಹಿಡಿದರು?

ರೆವರೆಂಡ್ ಎಡ್ವರ್ಡ್ ಬ್ರಾಡ್‌ಲಿ ಎಂಬ ಕ್ರೈಸ್ತಪಾದ್ರಿ, ಈ 'ಗ್ರೀಟಿಂಗ್ ಕಾರ್ಡ್' ಮುದ್ರಣಕ್ಕೆ ನಾಂದಿ ಹೇಳಿದ ಎಂದು ಕೆಲವರೆನ್ನುತ್ತಾರೆ. ವಿಶೇಷವಾಗಿ ಕ್ರಿಸ್‌ಮಸ್ ಹಬ್ಬಕ್ಕೆಂದೇ ಮುದ್ರಿಸಲ್ಪಟ್ಟ ಈ ಗ್ರೀಟಿಂಗ್ ಕಾರ್ಡ್ ಮೇಲೆ ಕೇವಲ ಕ್ರೈಸ್ತನ ಚಿತ್ರಮಾತ್ರ ಅಚ್ಚಾಗಿತ್ತು ಮತ್ತು ಯಾವುದೇ ರೀತಿಯ ಸಂದೇಶ ಇರಲಿಲ್ಲ.

ವಿಶಿಷ್ಟವಾದ ಆ ಶುಭಾಶಯಪತ್ರ ಎಷ್ಟೋಜನರಿಗೆ ವಿಚಿತ್ರ ಹಾಗೂ ಬೆರಗಿನ ಸುದ್ದಿಯಾಗಿತ್ತು.

1842-1843!? : ಎಡ್ವರ್ಡ್ ಬ್ರಾಡ್‌ಲಿ ಗ್ರೀಟಿಂಗ್ ಕಾರ್ಡು ಮುದ್ರಿಸಿದ ವರ್ಷ ಸ್ಪಷ್ಟವಾಗಿ ತಿಳಿದಿಲ್ಲವಾದರೂ ಕೆಲವರ ಪ್ರಕಾರ 1842ರಲ್ಲಿ ಸರ್ ರೋಜರ್ ಡಿ ಕವರ್ಲೆ ಮೊಟ್ಟಮೊದಲ ಶುಭಾಶಯಪತ್ರ ಮುದ್ರಿಸಿದನೆನ್ನಲು ಸುದ್ದಿ ದಾಖಲೆ ಇದೆ!!

ಕವರ್ಲೆ ಮುದ್ರಿಸಿದ ಕಾರ್ಡಿನ ಮೇಲೆ 'A Marry Christmas and A Happy New Year' - ಸಂದೇಶ ಸಹಿತ ಮುದ್ರಿಸಲಾಗಿತ್ತು. ಈ ಅಪರೂಪದ ಶುಭಾಶಯಪತ್ರ ಈಗಲೂ ಬ್ರಿಟಿಷ್ ಮ್ಯೂಸಿಯಂನಲ್ಲಿ ನೋಡಲು ಸಿಗುತ್ತದೆ.

ಆದರೆ 1843ರಲ್ಲಿ ಜೆ.ಸಿ. ಹಾರ್ಸ್‌ಲಿ ಮೊದಲ ಶುಭಾಶಯ ಪತ್ರ ತಯಾರಿಸಿದನೆನ್ನುವ ಗಾಳಿಸುದ್ದಿ ಕೂಡಾ ಇದೆ. - ಈತ ಸೃಷ್ಟಿಸಿದ ಕಾರ್ಡಿನಲ್ಲಿ ಚಿತ್ರದೊಂದಿಗೆ ಸಂದೇಶ ಕೂಡಾ ಅಚ್ಚಾಗಿತ್ತೆನ್ನುವ ವಿಷಯ ಹೈಲೈಟ್!

ಒಟ್ಟಾರೆ ಈ ಮೂರು ಗ್ರೀಟಿಂಗ್ ಕಾರ್ಡುಗಳಲ್ಲಿ ಮೊದಲನೆಯದು ಯಾವುದೂಂತ ಇನ್ನೂ ನಿರ್ಧಾರವಾಗದೇ ಇರೋದು ವಿಪರ್ಯಾಸ.

ಒಂದು ಮಾತ್ರ ನಿಜ! ಎಲ್ಲಾ ಸಂದರ್ಭಗಳಿಗೂ, ಹಬ್ಬಗಳಿಗೂ ಅನ್ವಯವಾಗುವಂತೆ 'ಗ್ರೀಟಿಂಗ್ ಕಾರ್ಡಿನ' ನಮೂನೆಯನ್ನು 'ಬ್ರಾಡ್‌ಲಿ' ಕಂಡುಹಿಡಿದನೆನ್ನುವುದು ಮಾತ್ರ ಸತ್ಯ!

ಮೇಲೆ ಉಲ್ಲೇಖಿಸಿದ 'ಗ್ರೀಟಿಂಗ್ ಕಾರ್ಡು'ಗಳು ಕೇವಲ ಸ್ನೇಹಿತರಿಗಾಗಿ ತಯಾರಾದ ಸ್ಯಾಂಪಲ್ಲುಗಳು ಮಾತ್ರ! ಒಟ್ಟಾರೆ ಗ್ರೀಟಿಂಗ್ ಕಾರ್ಡುಗಳ ತವರೂರು ಇಂಗ್ಲೆಂಡ್ ಅಂತಲೇ ಹೇಳಬಹುದು.

ಅಂತೂ 1847-48ರಲ್ಲಿ ಈ ಶುಭಾಶಯ ಪತ್ರಗಳು ಕಮರ್ಷಿಯಲ್ ಮಾರುಕಟ್ಟೆಗೆ ಬಂದವು. ಒಂದು ಮಾತಲ್ಲಿ ಹೇಳಬೇಕೆಂದರೆ ಶುಭಾಶಯ ಪತ್ರಗಳು 'ಮಾರುಕಟ್ಟೆಯ ಮೈತ್ರಿ ಸಂದೇಶ'ಗಳೆಂದೇ ಕರೆಯಬಹುದು. 150 ವರ್ಷಗಳ ಸುದೀರ್ಘ ಇತಿಹಾಸದ ಹಿನ್ನೆಲೆ ಇರುವ ಈ ಪುಟ್ಟ ಗ್ರೀಟಿಂಗ್ ಕಾರ್ಡ್ ಇಂದಿಗೂ ಮಹತ್ವಪೂರ್ಣ ಬದಲಾವಣೆಗಳಿಂದ ನಮ್ಮ ಮುಂದೆ ರಾರಾಜಿಸುತ್ತಿದೆ. ಸಾಮಾಜಿಕ, ಆರ್ಥಿಕ, ತಾಂತ್ರಿಕ ಅಂಶಗಳನ್ನೊಳಗೊಂಡಂತೆ ಬದಲಾಗುತ್ತಿರುವ ಜನರ ಅಭಿರುಚಿ, ಹೊಸ ಪ್ರಯೋಗಗಳಿಂದ, ಅದ್ಭುತವಾದ ವಿನ್ಯಾಸಗಳಿಂದ ಇವು ಮಾರುಕಟ್ಟೆಯಲ್ಲಿ ಸ್ಪರ್ಧಿಸುತ್ತಿವೆ - ಹಾಟ್‌ಕೇಕ್‌ಗಳಂತೆ ಖರ್ಚಾಗುತ್ತಿವೆ.

★

ರಾಣಿ ವಿಕ್ಟೋರಿಯಾ ಬಳಿ ಶುಭಾಶಯ ಪತ್ರಗಳ ರಾಶಿಯೇ ಇದ್ದವಂತೆ. ಕಲಾವಿದರು ತಮ್ಮ ಮೂಲಕಲಾಕೃತಿಗಳನ್ನು ರಾಣಿಯಬಳಿ ಕಳಿಸಿಕೊಡುತ್ತಿದ್ದರಂತೆ - ಅವುಗಳಲ್ಲಿ ರಾಣಿ ಅತ್ಯುತ್ತಮವಾದುವನ್ನು ಆಯ್ಕೆ ಮಾಡಿ ಮುದ್ರಣಕ್ಕೆ ಆಯ್ಕೆ ಮಾಡುತ್ತಿದ್ದಳು.

ಸುಮಾರು 40 ವರ್ಷಗಳ ಹಿಂದೆ : ಭಾರತದೇಶದ ಶುಭಾಶಯಪತ್ರಗಳಿಗೆ ಸುಮಾರು 40 ವರ್ಷಗಳ ಇತಿಹಾಸವಿದೆ. 'ವಕೀಲ್ಸ್' ಎನ್ನುವ ಮುದ್ರಕರು ಈ ಗ್ರೀಟಿಂಗ್ ಕಾರ್ಡುಗಳ ಬೆಳವಣಿಗೆಗೆ ಮಹತ್ವಪೂರ್ಣ ಕೊಡುಗೆ ಕೊಟ್ಟಿದ್ದಾರೆ.

ಇಂದು ಭಾರತದಲ್ಲಿ ತಯಾರಾದ ಶುಭಾಶಯಪತ್ರಗಳಿಗೆ ಅಂತಾರಾಷ್ಟ್ರೀಯ ಮನ್ನಣೆ ದೊರೆತಿದೆ. ವಿನ್ಯಾಸ, ಲೇಔಟ್, ವಸ್ತು, ಸೃಜನಶೀಲತೆಗೆ ವಿದೇಶಿ ಮಾರುಕಟ್ಟೆಯಲ್ಲಿ ಸಾಕಷ್ಟು ಬೇಡಿಕೆ ಇದೆ.

ಗ್ರೀಟಿಂಗ್ ಕಾರ್ಡ್‌ಗಳ ನಾಣ್ಯತೆ ಅದನ್ನು ತಯಾರಿಸಲು ಬಳಸುವ ಕಾಗದದ ಗುಣಮಟ್ಟದ ಮೇಲೆ ಆಧಾರಪಟ್ಟಿರುತ್ತದೆ. 'ಹ್ಯಾಂಡ್ ಮೇಡ್' ಕಾಗದದ ಬಳಕೆ ಗ್ರೀಟಿಂಗ್ ತಯಾರಿಕೆಯಲ್ಲಿ ಸಿಂಹಪಾಲಿದ್ದರೂ ಕೆಲವು ವಿಶಿಷ್ಟ ವರ್ಣಗಳನ್ನು ಈ ಕಾಗದದ ಮೇಲೆ ಮುದ್ರಿಸಲು ಅವಕಾಶ ಇಲ್ಲ. ಆದ್ದರಿಂದ ಈಗ ಆ ಕಾಗದದ ಸ್ಥಾನದಲ್ಲಿ 'ಆರ್ಟ್‌ಪೇಪರ್' ಬಳಕೆ ಹೆಚ್ಚುತ್ತಿದೆ. ಈ ರೀತಿಯ ಕಾರ್ಡು ತಯಾರಿಕೆಯಲ್ಲಿ 'ಹಾಲ್‌ಮಾರ್ಕ್-ಮ್ಯಾಕ್ಸಿಮ್' ಕಂಪೆನಿ ಹೆಚ್ಚು ಚಾಲ್ತಿಯಲ್ಲಿದೆ. ಇನ್ನು ಇಡೀ ಜಗತ್ತಿನಲ್ಲೇ ಸಾಕಷ್ಟು ಜನರ ಬಾಯಿ ಮಾತಾಗಿರುವ 'ಆರ್ಚಿಸ್', ಫೌಂಟೇನ್‌ಹೆಡ್ (Fountain Head), ಪೇಪರ್‌ರೋಸ್, ಮಾರ್ಕ್ಸ್, ಪ್ಯಾಪಿರಸ್, ಪ್ಯಾರಾಮೌಂಟ್, ಅಂಬಾಸಡರ್, ಅನಿ, ಕ್ಲಾಸಿಕ್ ರಿಲಯಬಲ್‌ದಂತಹ ಕಂಪೆನಿ ಕಾರ್ಡುಗಳೂ ಜಗತ್ಪ್ರಸಿದ್ಧಿ ಪಡೆದಿವೆ.

ಇನ್ನು ಸ್ಪಾಟಿಕ್ಸ್ ಸೊಸೈಟಿ, ಯೂನಿಸೆಫ್, ಮೊಬೈಲ್ ಕ್ರಾಷಸ್, ಚೈಲ್ಡ್ ರಿಲೀಫ್ ಅಂಡ್‌ಯೂ, ಅಕ್ಷರ್, ಮಾಸ್ಟರ್‌ಪೀಸ್, ಹ್ಯಾಂಡಿಕ್ಯಾಪ್ಡ್ ಆರ್ಟಿಸ್ಟ್ಸ್ ಪಬ್ಲಿಕೇಶನ್ಸ್‌ಗಳಂತಹ ಚಾರಿಟಿ ಕಾರ್ಡುಗಳು ಮಾರಾಟವಾದ ಹಣದಿಂದ ಸಮಾಜ ಕಲ್ಯಾಣ ಕಾರ್ಯಗಳಿಗೆ ಉಪಯೋಗಿಸುವ ಪರಿಪಾಠವಿಟ್ಟುಕೊಂಡಿದ್ದಾರೆ.

ಈ ರೀತಿಯ ಚಾರಿಟಿ ಕಾರ್ಡುಗಳ ಮುದ್ರಣ-ಮಾರಾಟದಲ್ಲಿ 'World wild life of India' ಮೊದಲಸ್ಥಾನದಲ್ಲಿದೆ. ಮರ, ಗಿಡ, ಪಶು, ಪಕ್ಷಿ, ಪ್ರಾಣಿ, ಪರಿಸರಗಳನ್ನೇ ರೂಪದರ್ಶಿಯಾಗಿರಿಸಿಕೊಂಡು ಮುದ್ರಿಸುವ WWL ಕಾರ್ಡುಗಳನ್ನು ಸಾಕಷ್ಟು ಪ್ರಮಾಣದಲ್ಲಿ ದೊಡ್ಡ ದೊಡ್ಡ ಕಂಪೆನಿಗಳು ಖರೀದಿಸುತ್ತಿವೆ.





1946ರಲ್ಲಿ ಯುರೋಪಿನಲ್ಲಿ ಯುದ್ಧದಲ್ಲಿ ಮಡಿಧ ಯೋಧರ ಮಕ್ಕಳ ಕಲ್ಯಾಣಕ್ಕಾಗಿ 'ಯೂನಿಸೆಫ್' ಸಂಸ್ಥೆ ಹುಟ್ಟಿಕೊಂಡಿತು. ಜೆಕೆಸ್ಲೋವಾಕಿಯಾದ ಪುಟ್ಟ ಹುಡುಗಿಯೊಬ್ಬಳು ತಾನೇ ಬಿಡಿಸಿದ ಚಿತ್ರವೊಂದನ್ನು ಕಳಿಸಿದ್ದರ ಪ್ರೇರಣೆಯಿಂದ ತೀವ್ರವಾಗಿ ಸ್ಪಂದಿಸಿದ ಯೂನಿಸೆಫ್ 1947ರಿಂದ ಕಾರ್ಡುಗಳ ಮುದ್ರಣಕ್ಕೆ ನಾಂದಿಹಾಡಿತು.

ಜಗತ್ತಿನ ಕಲಾವಿದರು, ಫೋಟೋಗ್ರಾಫರ್ಸ್ ಎಲ್ಲರೂ ತಮ್ಮ ಕೃತಿಗಳನ್ನೂ ಸೇವಾ ಮನೋಧರ್ಮದಿಂದ ನೀಡುವುದರ ಮೂಲಕ ಯೂನಿಸೆಫ್ ಅನ್ನು ಹೆಚ್ಚು ಜನಪ್ರಿಯ ಮಾಡುತ್ತಿದ್ದಾರೆ. ಈ ಸಂಸ್ಥೆಯ ಕಾರ್ಡುಗಳ ಮೇಲೆ ಇಂಗ್ಲಿಷ್, ಸ್ಪಾನಿಷ್, ಫ್ರೆಂಚ್, ರಷ್ಯನ್ ಹಾಗೂ ಚೈನೀಸ್ ಭಾಷೆಯಲ್ಲಿ ಕೂಡಾ ಸಂದೇಶಗಳನ್ನು ಮುದ್ರಿಸುತ್ತಿದ್ದಾರೆ.

ಇಪ್ಪತ್ತನೇ ಶತಮಾನದ ಅಂಚಿನಲ್ಲಿ ಪ್ರತಿಯೊಂದು ರಂಗದಲ್ಲೂ ಕ್ರಾಂತಿಯಾಗಿರುವುದರಿಂದ ಹೊಸತನ-ಕ್ರಿಯೇಟಿವಿಟಿಗಳೇ ಬಂಡವಾಳವಾಗಿರುವಂತಹ ಗ್ರೀಟಿಂಗ್‌ಕಾರ್ಡುಗಳಲ್ಲಿ ಸಹಿತ ಅಪಾರವಾದ ಪ್ರಯೋಗಗಳಾಗಿವೆ. ಇಲ್ಲೂ ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ಸ್, ಗ್ರಾಫಿಕ್ಸ್, ವೆಬ್‌ಸೈಟ್ಸ್ ಬಂದಿವೆ.

ಗ್ರೀಟಿಂಗ್ ಕಾರ್ಡುಗಳು ಗ್ರಾಹಕರ ಅಭಿರುಚಿಗೆ ತಕ್ಕ ವಿನ್ಯಾಸ, ನಾಣ್ಯತೆಗಳಿಂಡ ಮಾರುಕಟ್ಟೆಗೆ ವಿಜೃಂಭಿಸುತ್ತಿವೆ. ಇನ್ನೇನು ಬಸ್ಟ್ಯಾಂಡು, ರೇಲ್ವೆಸ್ಟೇಷನ್, ಕಾಲೇಜು, ಗಿಫ್ಟ್‌ಕಾರ್ನರ್ಸ್, ಎಲ್ಲೆಂದರಲ್ಲಿ ಶುಭಾಶಯಪತ್ರಗಳ ಮಳಿಗೆಗಳು ನಾಯಿಕೊಡೆಗಳಂತೆ ಏಳುತ್ತವೆ. ಗ್ರೀಟಿಂಗ್‌ಕಾರ್ಡ್ಸ್ 'ದುಬಾರಿ' ಅಂತ ಬಜೆಟ್‌ನಲ್ಲಿ ಅನಿಸಿದರೂ ಆ ಕ್ಷಣ ಅದನ್ನು ಮರೆತು ಜನ ಅಂಗಡಿಗೆ ನುಗ್ಗುತ್ತಾರೆ. ತಮಗೆ ಪ್ರಿಯವಾದವರಿಗೆ ಕಾರ್ಡ್ ಕೊಳ್ಳುತ್ತಾರೆ. ಸ್ಟ್ಯಾಂಪ್ ಹಚ್ಚಿ ಪೋಸ್ಟಿಗೆ ಹಾಕುತ್ತಾರೆ. ಮರುಕ್ಷಣದಿಂದ ತಮಗೆ ಬರಬಹುದಾದ ಶುಭಾಶಯ ಪತ್ರಕ್ಕೆ ಕಾಯುತ್ತಾರೆ.

ನಿಜವಾಗಿಯೂ ಈ 'ಮೈತ್ರಿಸಂದೇಶ'ಗಳಿಗೆ ಬೆಲೆಕಟ್ಟಲು ಸಾಧ್ಯವಾ?

■ ಸೃಜನ್ 99

"ಇಫ್ ಹಿ ಟಾಕ್ ಒನ್ ವರ್ಡ್ ಎಬೌಟ್ ಮೈ ಕಂಟ್ರಿ..."

1996ರ ವಿಶ್ವಕಪ್ ಕ್ರಿಕೆಟ್‌ನಲ್ಲಿ ಭಾರತ ತಂಡ ಕ್ವಾರ್ಟರ್ ಫೈನಲ್ ತಲುಪಿತ್ತು. ಪಾಕಿಸ್ತಾನ ತಂಡದ ವಿರುದ್ಧ ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಮಾರ್ಚ್ 9 ರಂದು ನಮ್ಮ ತಂಡ ಆಡುತ್ತ ನಡೆದ ರೀತಿ ಕೊನೆಗೆ ವಿಜಯಮಾಲೆಯನ್ನು ಭಾರತ ತಂಡದ ಕೊರಳಿಗೇ ಹಾಕಿತ್ತು. ಈ ಆಟವನ್ನು ಟಿವಿಗಳಲ್ಲಿ ನೋಡುತ್ತಿದ್ದವರಿಗೆ ಎಂಥ ಭಾವನೆ ಮೂಡಿಸಿತ್ತೋ ಗೊತ್ತಿಲ್ಲ. ಆದರೆ ಸ್ಟೇಡಿಯಂನಲ್ಲಿಯೇ ಈ ಆಟವನ್ನು ನೋಡಲು ಹೋಗಿದ್ದ ನನ್ನಲ್ಲಿ ಪುಟಿದುಕ್ಕಿದ್ದ ಸಂತೋಷೋಲ್ಲಾಸ ಹಿಂದೆಂದೂ ಇಲ್ಲದಂತೆ ನನ್ನ ಮೈ-ಮನದಲ್ಲೆಲ್ಲಾ ಹರಿದಿತ್ತು. ತುದಿಗಾಲಲ್ಲಿ ನಿಂತು ಕೂತು ನೋಡುತ್ತಿದ್ದವನು ಗೆಲವು ಭಾರತ ತಂಡದ್ದಾಯಿತು ಎಂದೊಡನೆ ಸುತ್ತ ಇದ್ದವರು ಪರಿಚಯದವರಾಗಲಿ, ಆಗದಿರಲಿ ಷೇಕ್‌ಹ್ಯಾಂಡ್ ಕೊಡುತ್ತ, ಕೆಲವರನ್ನು ತಬ್ಬಿ ನನ್ನ ಸಂತೋಷದ ಉಕ್ಕುವಿಕೆಯನ್ನು ವ್ಯಕ್ತಪಡಿಸುತ್ತ ನನ್ನಂತೇ ಮುಖದ ತುಂಬ ಉಲ್ಲಾಸ ಹರಿಸುತ್ತಿದ್ದ ಜನಸಾಗರದ ನೂಕು ನುಗ್ಗಲಿನ ನಡುವಿನಲ್ಲಿ, ರಾತ್ರಿಯನ್ನೇ ಹಗಲಾಗಿಸಿದ್ದ ಫ್ಲಡ್ ಲೈಟ್ ಬೆಳಕಿನ ಪ್ರಭೆಯಲ್ಲಿ ಸ್ಟೇಡಿಯಂನ ಬಾಗಿಲುಗಳನ್ನು ದಾಟಿ ಹೊರಗೆ ಬಂದರೆ ಅಲ್ಲಿ ಒಳಗಿದ್ದುದಕ್ಕಿಂತಲೂ ಮಿಗಿಲಾದ ಹರ್ಷ ಎಲ್ಲರಿಂದಲೂ ಚಿಮ್ಮಿ ಹರಿಯುತ್ತಿತ್ತು. ಒಂದು ಯುದ್ಧ ಗೆದ್ದಂಥ ಭಾವನೆ ಎಲ್ಲರಲ್ಲೂ ಉಕ್ಕುತ್ತಿರುವುದು ಕಂಡಿತ್ತು. ಪೊಲೀಸರು, ಮಿಲಿಟರಿಯವರು, ಸಾರ್ವಜನಿಕರು ಎಂಬ ಭೇದವೇ ಅಳಿದುಹೋಗಿತ್ತು. ತಮ್ಮ ಖುಷಿಯ ಅಮಲಿನಲ್ಲಿ ಕೈಗೆಟುಕುವಂತಿದ್ದ ಎಂಥವರನ್ನೂ ತಬ್ಬಿ ತಮ್ಮ ಭಾವನೆ ತೋರಿ ಮುಂದೆ ಸಾಗುತ್ತಿದ್ದರು. ಆ ದೃಶ್ಯಗಳು ಎಷ್ಟು ಚೆನ್ನಾಗಿದ್ದುವೆಂದರೆ ಈಗಲೂ ಅವು ಕಣ್ಣಮುಂದೆ ಸುಳಿದು ನಿಲ್ಲುತ್ತವೆ.



ಈ ಸಂತೋಷದಲ್ಲಿಯೇ ನನ್ನೊಂದಿಗೆ ಆಟ ನೋಡಲು ಬಂದಿದ್ದ ನನ್ನ ಮಾವ ಶಿವಸುಂದರಂ ಅವರ ಜೊತೆ ಊಟಕ್ಕೆಂದು ಹೊರಟೆ. ನಾವು ಹೋದದ್ದು ಒಬೆರಾಯ್ ಹೋಟೆಲ್‌ಗೆ. ಅಲ್ಲಿಗೆ ಹೋದರೆ, ಅಲ್ಲಿಗೆ ಪ್ರವೇಶ ಮಾಡಿದ ಮೊದಲನೆಯವರೇ ನಾವಾಗಿದ್ದೆವು. ಅಲ್ಲಿ ನಾವೇ ಸ್ಟೀವರ್ಡ್ಸ್‌ಗಳಿಗೆಲ್ಲ ಕಂಗ್ರಾಟ್ಸ್ ಮಾಡಿ ಒಬ್ಬರಿಗೊಬ್ಬರು ಸಂತೋಷ ಹಂಚಿಕೊಂಡೆವು. ಇಲ್ಲಿಯೂ ಯಾವ ಬೇಧ ಭಾವ ಇರಲಿಲ್ಲ. ನಾವು ಕಸ್ಟಮರ್ ಅವರು ಸ್ಟೀವರ್ಡ್ಸ್ ಅನ್ನೋ ಭಾವನೆ ಇರಲಿಲ್ಲ ಆಗ. ಸೆಕ್ಯುರಿಟಿಯಿಂದ ಸ್ಟೀವರ್ಡ್ಸ್, ಮೇನೇಜರ್‌ವರೆಗೆ ಎಲ್ಲರೂ ಖುಷಿಯಿಂದ ನಮ್ಮ ಕಂಗ್ರಾಟ್ಸ್ ಹಂಚಿಕೊಂಡರು. ನಾರ್ಮಲ್ ಆಗಿ ಭೇದ ಭಾವ ಇರುತ್ತೆ. ಆದರೆ ಭಾರತ ಗೆದ್ದಿದ್ದ ಖುಷಿ ಆಗ ಇದನ್ನೆಲ್ಲ ಮರೆಸಿತ್ತು ಅಂಥ ಸಿಚುಯೇಷನ್.....

ಊಟಕ್ಕೆ ಅಂತ ಆರ್ಡರ್ ಮಾಡಿ ಇನ್‌ಸೈಡ್‌ನಲ್ಲಿ ನಾನು ನಮ್ಮ ಮಾವ ಕೂತಿದ್ದೆವು. ಒಂದು ಹತ್ತು ನಿಮಿಷದಲ್ಲಿ ಸೂಪ್ ಮುಂತಾದ್ದನ್ನು ನಮ್ಮ ಮುಂದೆ ತಂದು ಇಟ್ಟರು. ಅಷ್ಟು ಹೊತ್ತಿಗೆ ಕಲ್ಕತ್ತಾದಿಂದ ಈ ಮ್ಯಾಚ್ ನೋಡಕ್ಕೆ ಬಂದಿದ್ದ, ಈ ಹೋಟೆಲಲ್ಲೇ ಉಳಿದಿದ್ದ ನಾಲ್ಕೈದು ಜನ ಬಂದರು. ನಾವು ಮಾತಾಡಿದ್ದನ್ನು ನೋಡಿ ಖುಷಿಯಾಗಿ ಎಮೋಷನಲ್ ಆಗಿ ನಮ್ಮ ಮನಸ್ಸನ್ನು ಮುಟ್ಟೋ ಹಾಗೆ ಮಾತಾಡಿಕೊಂಡು ನಮ್ಮ ಜೊತೆಗೇ ಬೆರೆತರು. ಅವರು ಕಲ್ಕತ್ತಾದಿಂದ ಬಂದವರು ಅಂತ ಅವರು ಮಾತಾಡಿದಾಗಷ್ಟೇ ನಮಗೆ ಗೊತ್ತಾದದ್ದು. ಅಲ್ಲಿಂದ ಬಂದು, ಇಂಥ ಫೈವ್‌ಸ್ಟಾರ್ ಹೋಟೆಲಲ್ಲಿ ಉಳಿದು, ಬ್ಲಾಕ್‌ನಲ್ಲಿ ಟಿಕೆಟ್ ತಗೊಂಡು ಮ್ಯಾಚ್ ನೋಡೋದು ಅಂದರೆ ಕನಿಷ್ಠ ಐವತ್ತು ಸಾವಿರದಷ್ಟು ಖರ್ಚು. ಆದರೂ ಅವರು ಬಂದಿದ್ದರು! ಇಂಥ ಫೈವ್‌ಸ್ಟಾರ್ ಹೋಟೆಲುಗಳಲ್ಲಿ ಒಂದು ಟೇಬಲ್‌ನವರು ಇನ್ನೊಂದು ಟೇಬಲ್‌ನವರ ಜೊತೆ ಮಾತಾಡೋದೇ ಇಲ್ಲ. ಆದರೆ ಅವತ್ತು ಇವರ ಹಾಗೆ ಬಾಂಬೆ, ಮದ್ರಾಸ್‌ನಿಂದ ಬಂದಿದ್ದವರು ಸುತ್ತ ಇದ್ದ ಟೇಬಲುಗಳಲ್ಲಿ ಜೋರು ಜೋರಾಗಿಯೇ ಎಂದೂ ಇಲ್ಲದ ಹಾಗೆ ಮಾತಾಡ್ತಾ ಇದ್ದರು. ಯಾರು ಯಾರು ಹೇಗೆ ಬೌಲ್ ಮಾಡಿದರು, ವೆಂಕಟೇಶ್ ಪ್ರಸಾದ್ ಎಂಗೆ ಬೌಲ್ ಮಾಡಿದ, ಇದಕ್ಕೆ ಬ್ಯಾಟಿಂಗ್‌ಗೆ ನಿಂತವನು ಎಂಗೆ ದುರಂಹಕಾರ ತೋರಿಸಿದ, ನೆಕ್ಸ್ಟ್ ಬಾಲಲ್ಲಿ ಎಂಗೆ ಔಟ್ ಆದ, ಅನ್ನೋದನ್ನೆಲ್ಲಾ ಮಾತಾಡ್ತಾ ಇದ್ದೆವು. ಮಿಯಂದಾದಾಗೆ ಹೇಗೆ ಮುಖಭಂಗ ಆಯ್ತು ಅಂತ ಒಬ್ಬರು ಒಂದು ಟೇಬಲ್‌ನಲ್ಲಿ ಹೇಳಿದರೆ ಇದಕ್ಕೆ ಇನ್ನೊಂದು ಟೇಬಲ್‌ನವರು ಜೋರಾಗೇ ಉತ್ತರ ಕೊಡ್ತಿದ್ದರು. 'ಆಟಕ್ಕೆ ನಿಂತು ಆಟಗಾರನಂಗೆ ನಡಕೊಳ್ಳದಿದ್ದರೆ ಇನ್ನೇನು ಆಗುತ್ತೆ?'

ಸ್ಟೇಡಿಯಂನಲ್ಲಿ ಇದ್ದ ಹೀಟ್, ಕಾವು, ಬಿಸಿ ನಮ್ಮಲ್ಲಿ ಇನ್ನೂ ಕಡಿಮೆಯಾಗಿರಲಿಲ್ಲ. ಅದೇ ಟೆಂಪರ್‌ನಲ್ಲೇ ಹೀಗೆ ಮಾತು ಸಾಗಿತ್ತು. 'ಆಪ್ ಕಿದರ್ ಸೇ?' ಅಂತ ಅವರು ಕೇಳಿದರೆ 'ಬೆಂಗಳೂರ್' ಅಂತ ನಾವು ಹೇಳೋದು. 'ಹಮ್ ಕಲ್ಕತ್ತಾಸೇ ಆಯೇ' ಅವರು ಹೇಳೋದು. 'ಸಾಲೇಕೋ ಕೈಸಾ ಮಾರಾ ದೇಖೋ!' ಅಂತ ಒಬ್ಬರು ಅಂದರು. 'ಬರಾಬರ್ ಸಿಖಾದಿಯಾ ಹಮ್‌ಲೋಗ್' ಅಂತ ಇನ್ನೊಬ್ಬರು ಹೇಳಿದರು. ಹೀಗೆ

ಮಾತಾಡ್ತಾ ಇರೋದು ಹತ್ತಿಪ್ಪತ್ತು ವರ್ಷದ ಫ್ರೆಂಡ್ಸ್ ಮಧ್ಯೆಯೇನೋ ಅನ್ನೋಂಗಿತ್ತು ಆಗಿನ ವಾತಾವರಣ. ಮೀಟ್ ಆಗಿ ಇನ್ನೂ ಹತ್ತು ನಿಮಿಷ ಆಗದಿದ್ದರೂ ಸಂದರ್ಭ ಹೀಗೆ ನಮ್ಮನ್ನು ಕ್ಲೋಸ್ ಆಗಿಸಿತ್ತು. ಅಂಥ ಇಂಟಿಗ್ರಿಟಿ ತಂದಿತ್ತು ಈ ಮ್ಯಾಚ್.

ಹೀಗೆ ನಮ್ಮ ಮಾತು ನಡೆಯುತ್ತಿದ್ದಾಗ ಒಬ್ಬ ಬ್ರಿಟಿಷ್‌ನವನು ಅಲ್ಲೇ ಹತ್ತಿರದ ಬಾರ್ ಛೇರ್ ಮೇಲೆ ಕೂತಿದ್ದ. ಅದು ವಿಲ್ಸ್‌ಕಪ್ ಅಲ್ಲವೇ? ಇದು ಯಾರು ಎಲ್ಲೋ ನೋಡಿದ ಫೆಮಿಲಿಯರ್ ಫೇಸ್ ಅಂತ ನೋಡಿದರೆ ಆತ ಟೋನಿಗ್ರೇಗ್! ಆತನ ಜೊತೆ ಇನ್ನೊಬ್ಬ ವಿದೇಶಿ ಇದ್ದ. ಅವರ ಟೇಬಲ್‌ಗೂ ನಮಗೂ ಸುಮಾರು ಒಂದು ಐದು ಅಡಿ ದೂರವಷ್ಟೇ ಇತ್ತು. ನಾವು ಮಾತಾಡೋದು ಅವರಿಗೆ ಕೇಳುತ್ತಿತ್ತು. ಅವರು ಮಾತಾಡೋದು ನಮಗೆ ಕೇಳಿಸುತ್ತಿತ್ತು.

ನಮ್ಮ ದೇಶದಲ್ಲಿ, ನಮ್ಮ ಟೀಮ್ ಒಂದು ಮ್ಯಾಚನ್ನ ಗೆದ್ದ ಸಂತೋಷವನ್ನು ನಾವು ಹೀಗೆ ಖುಷಿಯಾಗಿ ಎಂದೆಂದೂ ಪರಿಚಯ ಇಲ್ಲದವರೂ ಸ್ನೇಹದಿಂದ ಹಂಚಿಕೊಳ್ಳುತ್ತಿದ್ದರೆ ನಮ್ಮ ಹತ್ತಿರ ಕೂತಿದ್ದ ಈ ಇಬ್ಬರಲ್ಲಿ ಆ ಇನ್ನೊಬ್ಬ ಇದ್ದನಲ್ಲ, ಅವನು ಇಂಗ್ಲಿಷ್ ಸಿನಿಮಾಗಳಲ್ಲಿ ವಿಲನ್‌ಗಳು ನೋಡ್ತಾರಲ್ಲ - ಹಂಗೆ ನೋಡ್ತಿದ್ದ.

ಎಲ್ಲರೂ ಖುಷಿಯಾಗಿರುವಾಗ ಇವನು ಯಾಕೆ ಹೀಗೆ ಹಿಂಗೆ ನೋಡ್ತಿದಾನೆ ಅಂತ ಅವನ ಕಡೆ ನೋಡಿದರೆ ಕಣ್ಣಿಗೆ ಕಣ್ಣಿಟ್ಟು ನೋಡ್ತಿದ್ದ. ನನಗೂ ಸಿಟ್ಟು ಬಂತು, 'ಯಾಕಿಂಗೆ ನೋಡ್ತಾನೆ ಇವನು?' ಅಂತ. ಆಮೇಲೆ ನಾನು ನಮ್ಮ ಮಾವ ಅವರಿಗೆ ಹೇಳಿದೆ 'ಅಂಕಲ್ ನೋಡಿ, ಅವನು ಯಾಕೋ ಸಿಕ್ಕಾಪಟ್ಟೆ ನೋಡ್ತಿದ್ದಾನೆ. ಹುಚ್ಚುಗಿಚ್ಚು ಹಿಡ್ದಿದೆಯೋ, ತಲೆಗಿಲೆ ಕೆಟ್ಟಿದೆಯೋ?' ಅಂತ.

ಇದೇ ಹೊತ್ತಿಗೆ ಅವನು. 'ಲುಕ್ ಅಟ್ ದಟ್ ಫೆಲೋ ಹೌ ಹಿ ಇಸ್ ಟಾಕಿಂಗ್' ಅಂದು ಕೈ ತೋರಿಸಿದ ನನ್ನ ಕಡೆ. ಆ ಮಾತು ಮತ್ತು ಕೈ ತೋರಿಸಿದ್ದರಲ್ಲಿ ಇದ್ದ ತಿರಸ್ಕಾರ ಇತ್ತಲ್ಲ ಅದು ಇವರೆಲ್ಲ ಎಂಥ ಅನಾಗರಿಕರು, ಹೇಗೆ ವರ್ತಿಸ್ತಿದಾರೆ ಅನ್ನೋ ಭಾವನೆಯಲ್ಲಿತ್ತು. ಅದರಲ್ಲೂ ಅವನು ಕೈಯನ್ನು ಪಾಯಿಂಟ್ ಮಾಡಿ ನನ್ನ ಕಡೆ ತೋರಿಸಿದ ತಕ್ಷಣ ಇದ್ದದ್ದೂ ಕೋಪ ಬಂದುಬಿಡ್ತು. ನನಗೆ ತಡಕೊಳ್ಳಲಿಕ್ಕೆ ಆಗಲಿಲ್ಲ. ಪಕ್ಕದಲ್ಲೇ ಇದ್ದ ಮಾವ ಅವರಿಗೆ 'ಇವನು ಹಿಂಗೇ ಮಾತಾಡಿದರೆ ಗ್ಯಾರಂಟಿ ಹೊಡಿತೀನಿ' ಅಂದೆ. ನಾವು ಮರ್ಯಾದೆಯಿಂದಲೇ ವರ್ತಿಸುತ್ತಿದ್ದೆವು. ಅವರೇನೋ ಇಂಗ್ಲಿಷ್‌ನಲ್ಲಿ ಅಂದುಬಿಡಬಹುದು. ನಾವು ಅನ್ನೋಕೆ ಹೊರಟರೆ ನಮ್ಮ ಬಾಯಲ್ಲೂ ಬರುತ್ತೆ. ಆದರೆ ದುಡುಕಬಾರದು ಅಂತ ತಡಕೊಂಡಿದ್ದೆ, ಆ ಕಲ್ಚರ್‌ಲೆಸ್ ಜನಗಳ ಹಾಗೆ ಬಿಹೇವ್ ಮಾಡಬೇಕೆ ಅಂತ ಹಾಗೇ ನೋಡ್ತಿದ್ದೆ. 'ಯಾಕೆ ಹಿಂಗೆ ಮಾಡಿದ?' ಅಂತ ನನಗೆ ಒಳಗೇ ಕಟಿಯುತಿತ್ತು. ನಮ್ಮ ಮಾವ ಅವರಿಗೆ ಕೇಳಿದಾಗ ಅವರು 'ವೇಲು ಬಾಯ್, ಅವನು ಮತ್ತೆ ಏನಾದರೂ ನಮ್ಮ ಬಗ್ಗೆ ಮಾತಾಡಿದರೆ, ಅವರನ್ನು ಕೇಳು 'ವಾಟ್ಸ್ ಯುವರ್ ಪ್ರಾಬ್ಲಮ್' ಅಂತ ಹೇಳಿದರು. ಏನಾದರೂ ಜಾಸ್ತಿ ಮಾತಾಡಿದರೆ 'ಲೆಟ್ ಮಿ ಆಲ್ಸೊ ಜಾಯಿನ್ ವಿತ್ ಯು, ವಿಲ್ ಸೀ ವಾಟ್ ವಿ ಡೂ' ಅಂತಲೂ ಹೇಳಿದರು.

ಅಷ್ಟು ಹೊತ್ತಿಗೆ ಸ್ಟೀವರ್ಡ್ ನಾಲ್ಕೈದು ಜನ ಬಂದು ನಿಂತರು. ಅವರಿಗೂ ಇಲ್ಲಿ ಏನೋ ಆಗ್ತಿದೆ ಅಂತ ಅನ್ನಿಸಿತ್ತು. ನಾನು ಒಬ್ಬನ್ನ ಕೇಳಿದೆ. 'ವಾಟ್ಸ್ ಹ್ಯಾಪನಿಂಗ್?'

'ಇಲ್ಲ ಸಾರ್, ಇವನು ಯಾವಾಗಲೂ ಹೀಗೆ' ಅಂತ ಆ ಸ್ಟೀವರ್ಡ್ ಹೇಳಿದ.

ಇದೇ ಹೊತ್ತಿಗೆ ಕುಳ್ಳಕಿರೋ ಫೇಮಸ್ ಅಂಪೈರ್ ಅಲ್ಲಿಗೆ ಎಂಟ್ರಿ ಆದ. ವಿಷಲ್ ಊದಿಕೊಂಡು ಗಿಡ್ಡ ಶರೀರ ಕುಲುಕಿಸಿಕೊಂಡು ಅವನು ಬಂದ ಮೇಲೆ ನನಗೂ ಒಳಗೆ ಕುದೀತಿದ್ದನ್ನು ಕಾರಿಕೊಳ್ಳೋಕೆ ಸಮಯ ಬಂತು. ದನಿಯೇರಿಸಿ ಜೋರಾಗೇ ಹೇಳಿದೆ. 'ಆಲ್ ಕಲ್ಚರ್‌ಲೆಸ್ ಫೆಲೋಸ್, ಕಮಿಂಗ್ ಫೈವ್‌ಸ್ಟಾರ್ ಹೋಟೆಲ್, ವಿಷಲಿಂಗ್ ಇನ್ ಸೈಡ್ ಅಂಡ್ ಕಮಿಂಗ್' ಅಂದು ಅವರ ಕಡೆ ಕೈ ತೋರಿಸಿದೆ. ಹಾಗಂದ ತಕ್ಷಣ, ಟೋನಿಗ್ರೇಗ್‌ಗೆ ವಿಪರೀತ ಕೋಪ ಬಂತು. ಕಣ್ಣು ಅರಳಿಸಿ ನೋಡಿದ. 'ಹೌ ಹಿ ಇಸ್ ಟಾಕಿಂಗ್, ಲುಕ್ ಅಟ್ ದಟ್ ಫೆಲೋ, ಜಸ್ಟ್ ಬಿಕಾಸ್ ದೆ ವಿನ್ ದ ಮ್ಯಾಚ್ ಸೀ ದೆರಿಸ್ ನೋ ಲಿಮಿಟ್ ದೆ ಎಂಜಾಯಿಂಗ್ ಹಿಮ್‌ಸೆಲ್ಫ್' ಅಂತ ಶುರು ಮಾಡಿದ.

ನನಗೆ ಇನ್ನೂ ವಿಪರೀತ ಕೋಪ ಬಂತು. ನಾವು ಗೆದ್ದಿದ್ದು ಅವರಿಗ ಸೈರಣೆ ಇರಲಿಲ್ಲ. ಇವರು ಯಾವಾಗಲೂ ಹೀಗೆಯೇ ಅಂತ ಆಮೇಲೆ ಗೊತ್ತಾಯ್ತು. ನಾವು ಗೆದ್ದಿದ್ದಕ್ಕೆ ಅವನಿಗೆ ಹೊಟ್ಟೆಯುರಿ. ನಮ್ಮ ದೇಶದ ಟೀಮ್ ಗೆದ್ದಿದ್ದಕ್ಕೆ ನಾವು ಹೀಗೆ ಮಾತಾಡಿಕೊಳ್ತಿದ್ದದ್ದು, ವಿಕ್ಟರಿ ಎಂಜಾಯ್ ಮಾಡ್ತಿದ್ದದ್ದು ಅವನಿಗೆ ತಡೆದುಕೊಳ್ಳೋಕೆ ಆಗ್ತಿರಲಿಲ್ಲ. ಅವರು ನಮ್ಮ ಫೈವ್‌ಸ್ಟಾರ್ ಹೋಟೆಲಿಗೆ ಬಂದು ಇಲ್ಲಿನ ಆತಿಥ್ಯ ತಗೊಂಡು ಇಲ್ಲಿನ ಸೆಕ್ಯುರಿಟೀಲಿ ಇದ್ದು ಹೀಗೆ ನಮ್ಮನ್ನೇ ದ್ವೇಷಿಸೋದು ಕಂಡು ನನಗೆ ಮೈಯೆಲ್ಲ ಉರಿ ಹತ್ತಿತ್ತು. ನಾನು ಯಾವಾಗ ಹೀಗೆ ರೈಸ್ ಆದೆ, ಅದನ್ನು ನೋಡಿ ಜನರಲ್ ಮೇನೇಜರ್ ಬಂದು 'ವಾಟ್ ಹ್ಯಾಪನ್ ಸರ್?' ಅಂದ.

'ಲುಕ್ ಅಟ್ ದಟ್ ಫೆಲೋ ಆಸ್ಕ್ ಹಿಮ್ ಟು ಗೆಟ್‌ಔಟ್ ಹೋಟೆಲ್. ಇಫ್ ಟಾಕ್ ಎನಿಥಿಂಗ್ ಎಬೌಟ್ ಇಂಡಿಯಾ, ಐ ವಿಲ್ ಟೇಕ್ ಸಮ್‌ಥಿಂಗ್..... ಬ್ರೇಕ್' ಅಂದೆ.

'ಇಫ್ ಹಿ ಟಾಕ್ ಒನ್ ವರ್ಡ್ ಎಬೌಟ್ ಮೈ ಕಂಟ್ರಿ.... ' ಅಂತ ಮತ್ತೆ ಹೇಳಿದೆ.

ಯಾವಾಗ ಇದು ಹೀಗೆ ಈ ಮಟ್ಟಕ್ಕೆ ಹೋಯ್ತೋ, ಅವರಿಗೆ ಗೊತ್ತಾಗಿಬಿಡ್ತು. ಇವರು ಹೊಡಿತಾರೆ ಬಿಡಲ್ಲ ಅಂತ. ಅವರು ಜಾಗ ಖಾಲಿ ಮಾಡಿದರು. ನಮ್ಮ ಟೀಮ್ ಗೆದ್ದ ಖುಷೀನ ಇವರು ಹೀಗೆ ಅವತ್ತು ಹಾಳು ಮಾಡಿದ್ದರು.

■ ತುಳಸಿರಾಮ್ ನಾಯ್ಡು (ವೇಲು)



ಒಮ್ಮೆ ದೂರದ ಮೈಸೂರಿನಿಂದ ಬಂದಿದ್ದ ಅಪರಿಚಿತರೊಬ್ಬರು ರಾತ್ರಿಯ ಕೊನೆಯ ಬಸ್ಸಿಗೆ ಧಾರವಾಡಕ್ಕೆ ಬಂದಿಳಿದು, ಚೆನ್ನವೀರ ಕಣವಿಯವರು ವಾಸಿಸುತ್ತಿದ್ದ ಕಲ್ಯಾಣನಗರ ಬಡಾವಣೆಯಲ್ಲಿಯೇ ಇರುವ ಮತ್ತೊಬ್ಬ ಸಾಹಿತಿ - ಪ್ರೊಫೆಸರ್ ಒಬ್ಬರ ಮನೆ ಹುಡುಕಿಕೊಂಡು ಇವರ ಮನೆಯ ಮುಂದೇ ಹಾಯ್ದು ಹೋಗುತ್ತ 'ಅವರ ಮನೆ ಇನ್ನೂ ಎಷ್ಟು ದೂರ?' ಎಂದು ಹೊರಗಿದ್ದ ಇವರನ್ನೇ ಕೇಳಿದರಂತೆ. ಅದಕ್ಕೆ ಚೆನ್ನವೀರ ಕಣವಿಯವರು ಐದೇ ನಿಮಿಷದಲ್ಲಿ ನೀವು ಅವರ ಮನೆ ತಲುಪಬಹುದು. ಆದರೆ ಈ ಹೊತ್ತಿನಲ್ಲಿ ಅವರ ಮನೆಯಲ್ಲಿ ನಿಮಗೆ ಪ್ರವೇಶಾವಕಾಶ ದುರ್ಲಭವೆಂದೂ, ಈ ಹೊತ್ತಿನಲ್ಲಿ ಉಳಿದುಕೊಳ್ಳಲು ಲಾಜಿಂಗ್ ಹುಡುಕಿಕೊಂಡು ಮರಳಿ ಸಿಟಿಗೆ ಹೋಗುವುದೂ ಅಸಾಧ್ಯವೆಂದು ತಿಳಿಸಿ, ದೂರದೂರಿನಿಂದ ಬಂದಿದ್ದೀರಿ, ಸುಮ್ಮನೆ ನಮ್ಮ ಮನೆಯಲ್ಲಿ ಉಳಿದು - ಬೆಳಿಗ್ಗೆ ನೀವು ಭೇಟಿ ಮಾಡಲು ಉದ್ದೇಶಿಸಿದ ಆ ಪ್ರೊಫೆಸರರ ಮನೆಗೆ ಹೋಗಿರಿ ಎಂದು ಬಗೆಬಗೆಯಾಗಿ ತಿಳಿಸಿ ಹೇಳಿದರೂ ಅವರು ಕೇಳಲಿಲ್ಲ. 'ಇಲ್ಲ, ನಾನು ಮೊದಲೇ ಪತ್ರ ಬರೆದಿದ್ದೇನೆ. ಖಂಡಿತ ತಮ್ಮ ಮನೆಗೇ ಬರಬೇಕೆಂದು ಅವರು ತಿಳಿಸಿದ್ದಾರೆ. ಎಷ್ಟೊತ್ತಾದರೂ ಅವರು ಕಾಯುತ್ತಿರುತ್ತಾರೆ' ಎಂದು ಅತ್ಯುತ್ಸಾಹದಿಂದ ಅವರು ಪ್ರೊಫೆಸರ್ ಮನೆಗೇ ಹೋಗುವುದಾಗಿ ಹಠ ಹಿಡಿದಾಗ ವಿಧಿಯಿಲ್ಲದೆ ತಮ್ಮ ಹುಡುಗನೊಬ್ಬನನ್ನು ಜೊತೆ ಮಾಡಿ ಕಳಿಸಿದರಂತೆ.

ಹದಿನೈದು ನಿಮಿಷ ಕಳೆದಿರಬೇಕು. ಅವರು ನಿರುಪಾಯರಾಗಿ ತಿರುಗಿ ನಡೆದು ಬರುತ್ತಿರುವುದನ್ನು ಕಂಡು, ಅದನ್ನು ಮೊದಲೇ ಮನಗಂಡವರಂತೆ ತಮ್ಮ ಮನೆಯ ಮುಂದಿನ ಲೈಟು ಉರಿಸಿಕೊಂಡು ಕಾಯುತ್ತಿದ್ದ ಕಣವಿಯವರು ಆ ಆಗಂತುಕರನ್ನು ಹುಸಿನಗೆಯಿಂದ ಕರೆದು, ಅಂದಿನ ರಾತ್ರಿ ತಮ್ಮ ಮನೆಯಲ್ಲಿಯೇ ಉಳಿಸಿಕೊಂಡಿದ್ದರಂತೆ.

■ ಈರಪ್ಪ

ಶಬರಿಯ ಕವಿತೆಗಳು

■ ಸಂಧ್ಯಾ ಎಸ್



1
ಒಂದು ಕ್ಷಣದ ಹಿಂದೆ
ನೀನಿಲ್ಲಿ ಬಂದಿದ್ದೆಯಾ?
....
ಒಂದು ಕ್ಷಣ ನನ್ನ ಮನ
ಹೊಸ್ತಿಲಾಚೆಯ ಈ ನದಿಯೊಂದಿಗೆ
ಎದುರಿನ ಬೆಟ್ಟ ಬಳಸಿ
ಹರಿದು ಹೋಗಿತ್ತು
ನಿನ್ನ ಹುಡುಕುತ್ತ
ಆಗೇನಾದರೂ ನೀನು ಬಂದು ಹೋಗಿಬಿಟ್ಟೆಯಾ?

2
ಎಲ್ಲ ಮೂಲೆ ಮಡಕುಗಳನ್ನೂ
ರಾಮರಾಮದೊಂದಿಗೆ ಗುಡಿಸಿ ಸಾರಿಸಿರುವೆ.
ಒಂದೊಂದು ಹೃದಯ ಬಡಿತವನ್ನೂ
ರಾಮರಾಮದೊಂದಿಗೆ ಬೆರೆಸಿ ಇಟ್ಟಿರುವೆ

ರಾಮರಾಮದ ಜೊತೆಗೇ ಒಂದೊಂದೂ ಹೂವಕಿತ್ತೆ
ಒಂದೊಂದು ಹಣ್ಣು ತಂದೆ.

ನೀನು ಬಂದರೆ
ನಿನಗೆ ಇನ್ನು ಜಾಗವೆಲ್ಲಿ?
ಎಲ್ಲಿ ಬರುತ್ತೀಯ
ಇನ್ನು ಯಾಕೆ ಬಂದೀಯ?
ಹೇಗೆ ತಾನೇ ಬರುತ್ತೀಯ ರಾಮ?

3
ಸಾವಿರ ವರ್ಷಗಳು
ಕನಸಿದ್ದ
ಆ ಪಾದ ಪದ್ಮಗಳು
...........!
ಓ
ಅವುಗಳನ್ನು
ನನ್ನ ಹಣೆಯಿಂದ
ಇಂದು
ಸ್ಪರ್ಶ ಮಾಡಿದೆ
ಓಹ್!

4
ನೀಲಿಯಾಗಸದ ಮೋಡಗಳಲ್ಲಿ
ನಿನ್ನ ಸ್ವರೂಪ ಕಂಡಾಗ
ಮನ ಕುಣಿದಾಡುವುದು

ಒಳಹೊರಗುಗಳಲ್ಲಿ
ನೀನು ಕಾಣದೇ ಹೋದಾಗ
ಮನ ಮುದುಡುವುದು.

ಇವೆರಡರಲ್ಲಿ
ನಿಜವಾದ ನಾನು ಯಾವುದು ರಾಮ?

5
ಓ ಮನಸೇ
ಎಷ್ಟು ಸಲ ಈ ಬಂಧನಿರ್ಬಂಧಗಳ ಜಾಲಕ್ಕೆ

ಅವನ ನಾಮ ರೂಪಗಳ ಜಾಲಕ್ಕೆ
ಸಿಕ್ಕಿಸಿಕ್ಕಿ ಬೀಳುತ್ತೀಯ?
ಒಳ್ಳೆಯ ಕನಸಾದರೆ
ಮಹದಾನಂದವೆಂಬಂತೆ ಕುಣಿದಾಡುವೆ
ಸ್ವಲ್ಪ ಅದಲುಬದಲಾದ ಕನಸಾದರೆ
ಪಾತಾಳದಾಳಕ್ಕೆ ಬೀಳುವೆ

ಅವನಂತೂ
ಎರಡರಿಂದಲೂ ವಿಚಲಿತನಾಗುವುದಿಲ್ಲ
ಇದು ಖಂಡಿತ.

6

ನೀನು ಸರ್ವವಸ್ತುವಂತೆ
ನೀನು ಸರ್ವಶಕ್ತನಂತೆ
ಹಾಗಿದ್ದರೆ
ನನ್ನನ್ನು
ನೀನು ನಡೆದಾಡುವ ಭೂಮಿಯಾಗಿಸು
ನೀನು ಉಸಿರಾಡುವ ಉಸಿರಾಗಿಸು
ಗಿಡಮರ ಬಳ್ಳಿಯಾಗಿಸು
ಎಲ್ಲೆಡೆ ಚಾಚಿರುವ ಸ್ವತಂತ್ರ ಆಕಾಶವಾಗಿಸು.

ನಾನೆಂಬ ನನ್ನೀ ಬಯಕೆಯನ್ನು
ಈ ಕೃಶದೇಹದಲ್ಲಿ ಇನ್ನು ಬಂಧಿಸಿಡಲಾರೆ
ಇಗೋ, ಉರುಳುತ್ತಿದೆ ಈ ದೇಹ.

7

ಇಲ್ಲ ಇಲ್ಲ
ಆ ಕೀಟಗಳು ನಿನಗಾಗಿ ತೆಗೆದಿರಿಸಿದ ಹೂಗಳ
ಪಕಳೆಗಳನ್ನು ತಿಂದುಹಾಕುತ್ತಿವೆ
ಎಂದು ಗೊಣಗಿದೆ ಅಷ್ಟೇ.
ನಾನವುಗಳಿಗೆ ಏನೂ ಕೆಡಕು ಮಾಡಲಿಲ್ಲ.
ಹಾಗೆಂದು ನಾನು ಅವನ್ನು ಬೈಯ್ಯಲೂ ಇಲ್ಲ
ಇಲ್ಲ, ಗೊಣಗಲೂ ಇಲ್ಲ
ಹಾಗೆ ಅರೆಕ್ಷಣ ಅನಿಸಿತ್ತು ಮಾತ್ರ ಅಷ್ಟೇ
ಅಷ್ಟಕ್ಕೇ ನೀನ್ಯಾಕೆ ನನ್ನ ಕನಸಿಂದ ಮರೆಯಾಗುವೆ?

ನೀನಂತೂ ಬರಲಿಲ್ಲ
ಕನಸೆಂಬ ಉಡುಗೊರೆ
ಯೊಳಗೆ ನೀನಿದ್ದೆ
ಅಲ್ಲಿಂದಲೂ ನೀನು ಹೊರಟುಹೋದೆಯಲ್ಲಾ!

ಅದು ನೀನಲ್ಲವಾಗಿದ್ದರೆ
ಮತ್ತೆ ಅದು ನಾನೇ ಆಗಿರಬೇಕು

ಕಡಿದಾದ ಈ ಕಣಿವೆಯ ಪಕ್ಕದ
ಈ ಗಿರಿಶಿಖರದ ತುದಿಯಲ್ಲಿ
ನಿಂತಿರುವುದು-
ನಿಂತು
ಮೇಲಾಗಸದ ಮೋಡಗಳಿಗಿಂತ ಮೇಲಕ್ಕೆ
ಹುಬ್ಬು ಏರಿಸಿ
ದಿಗಂತದಾಚೆ ದಿಟ್ಟಿಸುತ್ತಿರುವುದು
ನಾನೇ.

ನಿಟ್ಟುಸಿರಾಸಿ ಹೊರಬಂದು
ಮರಗಳ ಮೇಲೆ ಬೀಸಿ
ಬೆಟ್ಟಗಳ ಭುಜ ಸವರಿ
ಮೋಡಗಳನ್ನು ಚದುರಿಸುವುದೂ
ಅದೇ ನಾನೇ.

ಅದೇ ನಾನಲ್ಲವೆ
ಮಂಜು ಕವಿದ ಶಿಖರಗಳಿಂದ
ನಿನ್ನ ಪಾದ ತೊಳೆಯಲೆಂದು
ಕೆಳಗೆ ಹರಿದುಬರುತ್ತಿರುವುದು?

ಹಿಂದಿನೆಲ್ಲ ಕವಿತೆಗಳ
ಬೇಲಿ ಹೂ ಬೇಲಿ ಕಾರ್ಯಗಳೂ ನಾನೇ.

ನೀನು ಎಂಬುದು ಒಂದು ಇಲ್ಲದ ವಸ್ತುವೇ ಇರಬೇಕು.
ಇಲ್ಲದಿದ್ದರೆ
ಈ 'ನಾನು'
ಈ ಮುದಿಮೈ ಎಂಬ ಉಡುಗೆಯಿಂದ ಹೊರಟು
ಬೆಟ್ಟ ಕಣಿವೆ ಗಾಳಿ ಗಿಡ ಮರಗಳಾಗಿ
ಯಾಕೆ ಹರಿದಿರುತ್ತಿತ್ತು?

ಪಾದಗಳ ಬದಲು ಪಾದಪದ್ಮಗಳು
ಕರಗಳೋ ಕರಕಮಲಗಳು
ನಿನ್ನ ನಯಸಗಳು ನೀಲಾಂಬುಜ ನಯನಗಳು
ಮುಖವು ಅರವಿಂದವು
ಓ ನಿನ್ನ ಹೃದಯಕಮಲ!

ಮತ್ತೆ ನಿನ್ನ ನಾಭಿಯಿಂದಲೂ ಕಮಲದಳ ಹೊರಡುವುದಂತೆ!

ನನ್ನ ಗುಡಿಸಲ ಆ ಮೂಲೆಯ ಮೆತ್ತಗೆ ಒರಗಿರುವೆ ನೀನೇ
ಒಂದು ಧವಳ ಕಮಲವಲ್ಲವೆ?
ಸಾವಿರ ದಳಗಳ ಕಮಲ ನೀನೇ ಅಲ್ಲವೆ?
ನನ್ನ ಉಸಿರಾಟದ ರಾಮರಾಮ
ಪ್ರತಿ ರಾಮರಾಮದೊಂದಿಗೆ
ಪಕಳೆ ಬಿರಿಸುವ
ಸುಂದರ ಧವಳ ಕಮಲ ನೀನಲ್ಲವೆ?

ನನ್ನ ಗುಡಿಸಿಲನ್ನು ಯಾರೋ ಮ್ಯೂಸಿಯಂ ಮಾಡುತ್ತಾರಂತೆ
ಮಾಡಿಕೊಳ್ಳಲಿ ಬಿಡು
ರಾಮ ಕೂತದ್ದು ಇಲ್ಲಿ, ಒರಗಿದ್ದು ಈ ಮೆತ್ತೆ
ನಡೆದದ್ದು ಈ ಹಾಸಿನ ಮೇಲೆ.
ತಿಂದ ಬೋರೆಹಣ್ಣಿನ ಒಳಗಿನ ಬೀಜ, ಇಗೋ
ಇದೇ ಬಾಗಿಲಾಸಿ ಅವನು ಒಳಬಂದದ್ದು
ಇದೇ ಗಾಳಿ ಉಸಿರಾಡಿದ್ದು!

ಫೋಟೋ ತೆಗೆಸಿದ್ದರೆ ಇಟ್ಟುಕೊಳ್ಳಲಿಬಿಡು
ಅವನ ನಗುಮುಖದ ಚಿತ್ರವನ್ನು
ರೆಕಾರ್ಡ್ ಮಾಡಿಕೊಂಡಿದ್ದರೆ, ಅವನ ದನಿಯನ್ನೂ.

ಅವನು ನನ್ನ ತಲೆ ನೇವರಿಸಿದ್ದನ್ನು
ನಾನು ಅವನ ಪಾದಕ್ಕೆರಗಿದ್ದನ್ನು
ಬಿಡಿಸಿ ಇಟ್ಟುಕೊಳ್ಳಲಿ ಬಿಡು.

ಕಾಲಾಂತರದವರೆಗೆ ಅವನ್ನೆಲ್ಲಾ
ಇಟ್ಟುಕೊಳ್ಳಲಿ ಅವರುಗಳು

ನಾನಂತೂ ನಿನ್ನ ಜೊತೆ
ಇಲ್ಲಿಂದ
ಹೋಗಿಬಿಟ್ಟಿರುತ್ತೇನೆ.

ಬೀಸಿಹೋದ ಬಿರುಗಾಳಿ


ಮಾಲ್ಕಂ ಮಾರ್ಷಲ್

ವೆಸ್ಟಿಂಡೀಸಿಗರು ಕ್ರಿಕೆಟಿನ ದೈತ್ಯರು. ಅವರ ಆಕೃತಿಯ ವಿಚಾರಕ್ಕೂ ಈ ಮಾತು ನಿಜ. ಅವರ ಎತ್ತರ, ಆಳ್ತನ, ರಭಸಕ್ಕೆ ಎದುರಾಳಿಯ ಎದೆ ನಡುಗಬೇಕು. ಅಂಥವರ ನಡುವೆ ಮಾಲ್ಕಂ ಮಾರ್ಷಲ್ ಸ್ವಲ್ಪ ಪೀಚು. ಅಂಥವನು ಕೂಡ ತನ್ನ ನಿಶ್ಚಯ, ಹಟದಿಂದಾಗಿಯೇ ಉಳಿದೆಲ್ಲರಿಗಿಂತ ಎದುರಾಳಿ ಬ್ಯಾಟುಗಾರರಿಗೆ ಸಿಂಹಸ್ವಪ್ನವಾಗಿದ್ದ.

ಬಾರ್ಬಡಾಸ್‌ನ ಮಾಲ್ಕಂ ಮಾರ್ಷಲ್ ಇತ್ತೀಚೆಗೆ (ನವೆಂಬರ್ 4ರಂದು) ಕ್ಯಾನ್ಸರ್‌ನಿಂದಾಗಿ ಇಲ್ಲವಾದ. ನಲವತ್ತೊಂದು ಸಾಯುವಂಥ ವಯಸಲ್ಲ. ಅವನ ಕಿಬ್ಬೊಟ್ಟೆಯಲ್ಲಿ ಬೆಳೆದಿದ್ದ ಕ್ಯಾನ್ಸರ್ ಗೆಡ್ಡೆಯನ್ನು ಸ್ವಲ್ಪ ಮುಂಚೆ ಪತ್ತೆ ಹಚ್ಚಿದ್ದರೆ ಇಂಥ ಅನಾಹುತ ಜರುಗುತ್ತಾ ಇರಲಿಲ್ಲ ಎಂಬುದೂ ಇಲ್ಲಿ ಮುಖ್ಯ.

ದಕ್ಷಿಣ ಆಫ್ರಿಕಾದಲ್ಲಿ, ಅವನ ಹುಟ್ಟೂರು ಬಾರ್ಬಡಾಸ್‌ನಲ್ಲಿ ಪರೀಕ್ಷಿಸಿದ ವೈದ್ಯರು ''ಅದೇನಂಥ ದೊಡ್ಡ ಸಂಗತಿ ಅಲ್ಲ'' ಎಂದಿದ್ದರು. ಯಾರಿಗೂ ಅದು ಕ್ಯಾನ್ಸರ್ ಎಂಬುದು ಪತ್ತೆಯೇ ಆಗಲಿಲ್ಲ. ಹೆಚ್ಚೆಂದರೆ ಹೊಟ್ಟೆಯ ಯಾವುದೋ ಸ್ನಾಯು ಹೊರಳಿರಬೇಕು ಎಂದು ಸಮಾಧಾನ ಹೇಳುತ್ತಿದ್ದರು.

ಕಳೆದ ಮೇನಲ್ಲಿ ವೆಸ್ಟ್‌ಇಂಡೀಸ್ ತಂಡ ವಿಶ್ವಕಪ್ ಪಂದ್ಯಕ್ಕೆ ಮುನ್ನ ಎಜ್‌ಬಾಸ್ಟನ್‌ನಲ್ಲಿ ವಾರ್ವಿಕ್‌ಶೈರ್ ವಿರುದ್ಧ ಅಭ್ಯಾಸ ಪಂದ್ಯ ಆಡುತ್ತಾ ಇದ್ದಾಗ, ನೋವು ತಡೆಯಲಾಗದೇ ಒದ್ದಾಡುತ್ತಿದ್ದ ಆತನನ್ನು ನೋಡಲಾಗದೇ, ತಂಡದ ವೈದ್ಯ ಡಾ|| ರುಡಿ ವೆಬ್‌ಸ್ಟರ್, ಮೈದಾನದಿಂದ ಅರ್ಧ ಮೈಲಿ ದೂರದ ಪ್ರಯರಿ ಆಸ್ಪತ್ರೆಗೆ ಕರೆದೊಯ್ದರು. ತಂಡದ ಕೋಚ್ ಅಲ್ಲಿ ವಿವಿಧ ಪರೀಕ್ಷೆಗಳಿಗೆ ಒಡ್ಡಿಕೊಂಡಿದ್ದಾಗ ವೆಸ್ಟ್ ಇಂಡೀಸಿಗರು ಆರಾಮವಾಗಿ ಪಂದ್ಯ ಆಡುತ್ತಿದ್ದರು. ಪರೀಕ್ಷೆ ಮುಗಿದು ಹೊಟ್ಟೆಯೊಳಗೊಂದು ಕ್ಯಾನ್ಸರ್ ಗಡ್ಡೆ ಇದೆ ಎಂಬುದು ಪತ್ತೆಯಾಯಿತು. ಅದನ್ನು ತೆಗೆಯಲು ಸಣ್ಣ ಶಸ್ತ್ರ ಚಿಕಿತ್ಸೆಯೂ ಆಯಿತು. ಇನ್ನೇನು ಎಲ್ಲ ಮುಗಿಯಿತು ಎನಿಸಿಬಿಟ್ಟಿತು. ಕಳೆದ ಹದಿಮೂರು ವರ್ಷಗಳಿಂದ ಗೆಳತಿ ಕಾನಿ ಅರ್ಲ್ ಜೊತೆ ಮದುವೆ ನಿಶ್ಚಿತಾರ್ಥ ಕೂಡ ಮಾಡಿಕೊಂಡುಬಿಟ್ಟಿದ್ದ ಮಾರ್ಷಲ್.



ಅವನ ಸ್ವಭಾವ ಹಾಗೆ. ಯಾವುದಕ್ಕೂ ತೀರಾ ತಲೆಕೆಡಿಸಿಕೊಂಡಿದ್ದು ಇಲ್ಲ. ಕೈಲಾಗುವುದು ಮಾಡಬೇಕು. ಆಗದೇ ಇರುವುದಕ್ಕೆ ತಲೆ ಕೆಡಿಸಿಕೊಳ್ಳೋದು ಅರ್ಥವಿಲ್ಲ ಎನ್ನುತ್ತಿದ್ದ.

ಮಾರ್ಷಲ್ ಕ್ರಿಕೆಟಿಂಗ್ ಆರಂಭವಾಗಿದ್ದು 1978-79ರಲ್ಲಿ ಅದೂ ಭಾರತದ ವಿರುದ್ಧ. 265 ರನ್ ಕೊಟ್ಟು ಮೂರು ವಿಕೆಟ್ ಪಡೆದು ದುಬಾರಿ ಬೌಲರ್ ಎನಿಸಿಬಿಟ್ಟ. ಹಾಗೇ ನೋಡಿದರೆ ಮಾರ್ಷಲ್‌ಗೆ ವೆಸ್ಟಿಂಡೀಸ್ ತಂಡದಲ್ಲಿ ಸ್ಥಾನ ಸಿಕ್ಕಿದ್ದೇ ಒಂದು ಆಕಸ್ಮಿಕ. ಆಗ ಕೆರ್ರಿ ಪ್ಯಾಕರ್ ಕಾರುಬಾರಿನ ಕಾಲ. ಆತ ವೆಸ್ಟಿಂಡೀಸ್‌ನ ಆಂಡೀ ರಾಬರ್ಟ್ಸ್, ಮೈಕೇಲ್ ಹೋಲ್ಡಿಂಗ್, ಕಾಲಿನ್ ಕ್ರಾಫ್ಟ್, ಜೋಯಲಾ ಗಾರ್ನರ್ ಅವರನ್ನು ದುಬಾರಿ ಮೊತ್ತ ಕೊಟ್ಟು ತನ್ನೆಡೆ ಸೆಳೆದುಕೊಂಡಿದ್ದ. ಆದ್ದರಿಂದಲೇ ತಂಡದಲ್ಲಿ ಸ್ಥಾನ ಪಡೆದ ಮಾರ್ಷಲ್ ಬಗ್ಗೆ ಆಯ್ಕೆದಾರರಿಗೆ ಅಂಥ ಒಲವೇನೂ ಇರಲಿಲ್ಲ.

ವಿಚಿತ್ರವೆಂದರೆ ಪ್ಯಾಕರ್ ತಂಡಕ್ಕೆ ಹೋಗಿದ್ದ ವೆಸ್ಟ್ ಇಂಡೀಸ್‌ನ ದಿಗ್ಗಜಗಳು ಮರಳಿ ಬಂದ ಮೇಲೆಯೇ ಮಾರ್ಷಲ್ ತಾನು ನಿಜಕ್ಕೂ ಕಡೆಗಣಿಸಲಾಗದ ಬೌಲರ್ ಎಂದು ಸಾಧಿಸಿ ತೋರಿಸಿದ. ಬೇಟೆಗೆಳಸುವ ಕಾಡು ಪ್ರಾಣಿಯ ಹಾಗೆ ಹೊಂಚುಹಾಕುತ್ತಿದ್ದ ಮಾರ್ಷಲ್ ಬೌಲಿಂಗ್‌ಗೆ ನಿಂತನೆಂದರೆ ಬ್ಯಾಟು ಹಿಡಿದವರ ತೋಳೇ ನಡುಗುತ್ತಿತ್ತು. ''ಇವನ ಹಾಗೆ ನನ್ನ ಕಂಡರೆ ಹೆದರುವವರನ್ನು ಜಗತ್ತಿನಲ್ಲಿಯೇ ನಾನು ನೋಡಿಲ್ಲ'' ಎಂದು ಇಯಾನ್ ಸ್ಮಿತ್ ಬಗ್ಗೆ ಅವನೇ ಹೇಳುತ್ತಿದ್ದ. ಅದಕ್ಕೆ ಕಾರಣವೂ ಇತ್ತು. ಮಾರ್ಷಲ್ ಬೌಲಿಂಗ್‌ನಲ್ಲಿ ಪೆಟ್ಟು ಬಿದ್ದರೆ ನಡೆದು ಪೆವಿಲಿಯನ್‌ಗೆ ಹಿಂದಿರುಗುವುದು ಸಾಧ್ಯವೇ ಇರಲಿಲ್ಲ. ಸ್ಟ್ರೆಚರ್ ಮೇಲೇ ಹೊತ್ತು ಸಾಗಿಸಬೇಕಿತ್ತು. ಒಂದು ಸಲ ಅವನು ಮಾಡಿದ ಬೌಲಿಂಗ್‌ನ ವೇಗ ಎಂಥದಿತ್ತೆಂದರೆ ಸುನೀಲ್ ಗವಾಸ್ಕರ್‌ನ ಕೈಯಿಂದಲೇ ಬ್ಯಾಟು ಕಿತ್ತು ಹೋಗಿ ದೂರ ಬಿತ್ತು. ಹುಕ್ ಮಾಡುವಾಗ ಸ್ವಲ್ಪ ಎಚ್ಚರ ತಪ್ಪಿದ ಮೊಹಿಂದರ್ ಅಮರ್‌ನಾಥ್ ತುಟಿಯೇ ಒಡೆದು ಹೋಯಿತು. ಚೆಂಡನ್ನು ಸರಿಯಾಗಿ ಗುರುತಿಸಲಾಗದ ಆಂಡಿಲಾಯ್ಡ್ ಕಣ್ಣಿಗೆ ಚೆಂಡು ಬಡಿದು, ನೇರ ಆಸ್ಪತ್ರೆಗೆ ಸೇರಬೇಕಾಯಿತು. ಒಂಬತ್ತು ದಿನಗಳ ಆಸ್ಪತ್ರೆವಾಸದ ನಂತರವೂ ಅವನ ಕಣ್ಣು ಪೂರ್ತಿ ಸರಿ ಆಗಲೇ ಇಲ್ಲ.

ಮಾರ್ಷಲ್ ರೌಂಡ್ ದಿ ವಿಕೆಟ್ ಬೌಲಿಂಗ್‌ಗೆ ಬಂದನೆಂದರೆ, ಬ್ಯಾಟುಗಾರನಿಗೆ ಗ್ರಹಚಾರ ಎಂದೇ ನಂಬಿಕೆಯಾಗಿತ್ತು. ಒಮ್ಮೆ ಡೇವಿಡ್ ಬೂನ್‌ನಂಥ ಆಟಗಾರನಿಗೇ ''ಏನು ಔಟ್ ಆಗ್ತೀಯೋ! ಇಲ್ಲ ರೌಂಡ್ ದಿ ವಿಕೆಟ್ ಬಂದು ಬೌಲಿಂಗ್ ಮಾಡಿ ಕೊಂದು ಹಾಕಬೇಕೋ ನಿನ್ನ!'' ಎಂದು ದಬಾಯಿಸಿದ್ದ.


ಸ್ವಲ್ಪ ಕುಳ್ಳನಾಗಿದ್ದ ಮಾರ್ಷಲ್ ಚೆಂಡು ಎಲ್ಲಿಗೆ ಹಾಕುತ್ತಿದ್ದಾನೆ ಎಂದು ನಿರ್ಧರಿಸುವುದೇ ಕಷ್ಟವಾಗುತ್ತಿತ್ತು. ಅವನು ಎಷ್ಟೊಂದು ಕಷ್ಟಪಟ್ಟು ಬೌಲಿಂಗ್ ಮಾಡುತ್ತಿದ್ದನೆಂದರೆ, ಒಮ್ಮೆ ಅವನ ಬೌಲಿಂಗ್ ರೀತಿಯಿಂದಾಗಿ ಹೊಟ್ಟೆಯ ಸ್ನಾಯು ಸೆಳೆದುಕೊಂಡುಬಿಟ್ಟಿತ್ತು. ಅವನ ಬ್ಯಾಟಿಂಗ್‌ದೂ ಅದೇ ಕಥೆ. ಮಿಂಚಿನ ವೇಗದಲ್ಲಿ ಕೈ ತಿರುಗಿಸಿ 'ಬಿಡುತ್ತಿದ್ದ. ಕಣ್ಣಿಟ್ಟು ನೋಡಿದರೆ ಮಾತ್ರ ಬಾಲ್ ಎತ್ತ ಹೋಗುತ್ತದೆ ಎಂಬುದು ತಿಳಿಯುವುದು ಸಾಧ್ಯವಿತ್ತು.

ನೆಬಾಲ್‌ನ ಕೋಚ್ ಆಗಿದ್ದುಕೊಂಡು ರಾನ್ ಪೊಲಾಕ್, ಲ್ಯಾನ್ಸ್ ಕ್ಲುಸ್ನೆರ್ ಅವರಂಥ ವಿಶ್ವಮಟ್ಟದ ಆಟಗಾರರನ್ನು ತಯಾರು ಮಾಡಿದ್ದ. 1996ರಿಂದ ವೆಸ್ಟ್ ಇಂಡೀಸ್ ತಂಡದ ಕೋಚ್ ಆಗಿದ್ದ. ಅಲ್ಲಿಯೂ ಅವನಿಗೆ ಭಾರೀ ಬೆಲೆ. ಮ್ಯಾನೇಜರ್ ಆಗಿದ್ದ ಅವನ ಗುರು ಲಾಯ್ಡ್‌ಗಿಂತಲೂ ತಂಡದ ಆಯ್ಕೆಯಲ್ಲಿ ಮಾರ್ಷಲ್‌ಗೇ ಹೆಚ್ಚು ಅಧಿಕಾರ. ಏಕೆಂದರೆ ತಂಡದ ಕ್ಯಾಪ್ಟನ್ ಇದ್ದ ಹಾಗೆ ಇವನಿಗೆ ವೋಟಿನ ಹಕ್ಕು ಇತ್ತು. ಸಿಂಹದ ಹಾಗೆ ಗತ್ತಿನಿಂದ ಮೆರೆದಾಡುತ್ತಿದ್ದ ಮಾರ್ಷಲ್ ಕಳೆದ ಮೇ ತಿಂಗಳಲ್ಲಿ ಹೊಟ್ಟೆ ನೋವಿನಿಂದ ಒದ್ದಾಡುತ್ತಾ ಆಸ್ಪತ್ರೆ ಸೇರಿದ್ದೇ ಕೊನೆ. ಎಲ್ಲ ಸರಿಯಾಗಿ ಬಿಟ್ಟಿತು ಎನಿಸಿದ ಗಳಿಗೆಯಲ್ಲಿಯೇ ಏನೋ ಯಡವಟ್ಟಾಯಿತು. ಆತನ ಗೆಳೆಯ ಡೆಸ್ಮಾಂಡ್ ಹೇಯ್ನ್ಸ್, ಬಾಳಗೆಳತಿ ಕಾನೀ ಅರ್ಲ್, ವೆಸ್ಟ್ ಇಂಡೀಸ್ ತಂಡದ ಇನ್ನಿತರ ಆಟಗಾರರು ಆಸ್ಪತ್ರೆಯಲ್ಲಿ ಅವನ ಹತ್ತಿರವೇ ಉಳಿದು, ಅವನಿನ್ನು ಚೇತರಿಸಿಕೊಂಡು ಎದ್ದು ಬರುತ್ತಾನೆ ಅಂದುಕೊಂಡ ಗಳಿಗೆಯಲ್ಲೇ ಆತ ಬಾಳಿಂದಲೇ ಎದ್ದು ನಡೆದು ಹೋದ.

■ ಸುಹಾಸ

ಹೀಗೆ ಈ ಬದುಕು....

ನಮ್ಮವರಿಗೂ ಸಿಗರೇಟಿಗೂ ಬಿಡದ ನಂಟು. ಮನೆಗೆ ಹಿರಿಯರು ಬಂದರೆ ಒದ್ದಾಟ. ಸಿಗರೇಟು ಸೇದಲೆಂದೇ ಏನಾದರೂ ನೆಪ ತೆಗೆದು ಹೊರ ಹೊರಡುತ್ತಿದ್ದರು.



ಮೊನ್ನೆ ಅವರ ತಂಗಿಯ ಮದುವೆ ಮಾತುಕತೆ. ಗಂಡು ಇಲ್ಲಿನದೇ. ಅವರ ತಂದೆ, ತಾಯಿ, ಸೋದರ ಮಾವ ಎಲ್ಲ ಬಂದಿದ್ದರು. ಅವತ್ತು ರಾತ್ರಿಯ ಊಟ ಮುಗಿಸಿ ಎಲ್ಲ ಅದೂ, ಇದೂ ಮಾತಾಡುತ್ತಾ ತಾಂಬೂಲ ಸೇವನೆಗೆ ಕುಳಿತರು. ಇವರ ಸವಾರಿ ಮಾಮೂಲಿನಂತೆ ಹೊರ ಹೋಯಿತು. ಅಗ್ನಿ ಕಾರ್ಯ ಮುಗಿಸಿ ಬಂದು ಸೋದರ ಮಾವನ ಪತ್ತಿರ ಕುಳಿತರು.

ಅವರು ತೀರಾ ತಮಾಷೆ ಸ್ವಭಾವದ ವ್ಯಕ್ತಿ. ಮನೆಯವರ ಬೆನ್ನಿನತ್ತ ನೋಡುತ್ತಾ ''ಇದೇನೋ? ಸಿಗರೇಟಿಂದ ಸುಟ್ಟ ಹಾಗಿದೆ!'' ಎಂದು ಅಂಗಿಯಲ್ಲಾಗಿದ್ದ ಸುಟ್ಟ ರಂಧ್ರದತ್ತ ತೋರಿಸಿದ್ದೇ ಎಲ್ಲರ ಗಮನ ಅತ್ತ. ನಿಜಕ್ಕೂ, ಸಿಗರೇಟಿಂದ ಸುಟ್ಟಹಾಗೆ, ಅಂಗಿಯಲ್ಲಿ ಒಂದು ತೂತು. ಅಷ್ಟಕ್ಕೂ ಸುಮ್ಮನಿರದ ಆ ಮಾವ ''ನಮ್ಮೆಲ್ಲಾರ ಬೆನ್ನ ಹಿಂದೆ ಸಿಗರೇಟು ಸೇದ್ತೀಯ ಅಷ್ಟೆ ಅನ್ಕೊಂಡಿದ್ದೆವು. ನಿನ್ನ ಬೆನ್ನ ಹಿಂದೇನೇ ನೀನು ಸಿಗರೇಟು ಸೇದ್ತೀಯ ಅಂದ್ಕೊಂಡಿರಲಿಲ್ಲ'' ಎಂದಾಗ ಇವರ ಮುಖ ನೋಡಬೇಕಿತ್ತು.

- ಗಿರಿಜಾ, ಮಂಡ್ಯ.

ಗುಲ್ಬರ್ಗಾದಲ್ಲಿ ಕುಡಿಯುವ ನೀರಿಗೆ ಕಷ್ಟ. ಕುಡಿದರೆ ಏನಾದರೊಂದು ರೋಗ ಆಹ್ವಾನಿಸಿದಂತೆ ಎಂದು, ಅಲ್ಲಿಗೆ ಹೊರಡುವ ಮುಂಚೆ ಕೆಲವರು ಹೆದರಿಸಿದ್ದರು. ನಾನು ಉಡಾಫೆಯಿಂದಲೇ ಅದ್ಯಾವುದಕ್ಕೂ ಕೇರ್ ಮಾಡದೇ ಹೋಗಿದ್ದೆ.



ಅಲ್ಲಿಗೆ ಹೋದ ಬೆಳಿಗ್ಗೆ, ಹೋಟೆಲಿಗೆ ತಿಂಡಿಗೆಂದು ಹೋದೆ. ನೋಡಿದರೆ ಅಲ್ಲಿಗೆ ಬಂದವರು ಮೊದಲು 'ಬಿಸಿಲೇರಿ' ಬಾಟಲಿಗೆ ಆರ್ಡರ್ ಮಾಡುತ್ತಿದ್ದರು. ಹೋಟೆಲಿನ ಮಾಣಿ ಬಿಸಿಲೇರಿ ಬಾಟಲ್ ಜೊತೆಗೆ, ಕಜ್ಜ ಹಿಡಿದ ಅಲ್ಯುಮಿನಿಯಂ ಲೋಟಾ ಒಂದನ್ನು ತೊಳೆದು ತಂದಿಡುತ್ತಿದ್ದ. ಅಲ್ಲಿನ ಬಹುಪಾಲು ಜನ ಬಿಸಿಲೇರಿ ನೀರು ಕುಡಿಯುತ್ತಾ ಇದ್ದುದರಿಂದ ನನಗೂ ಭಯ ಆಯಿತು. ಬಿಸಿಲೇರಿ ನೀರು ತರಿಸಿಕೊಂಡಾಗ, ಮಾಣಿ ಸಹ ನೀರು ಹಾಕಿಕೊಂಡು ಕುಡಿಯಲು ಕಜ್ಜ ಹಿಡಿದ ಲೋಟಾ ತಂದಿಟ್ಟ. ''ಅಲ್ಲಪ್ಪ, ಈ ಲೋಟಾದಲ್ಲಿ ಬಿಸಿಲೇರಿ ನೀರು ಹಾಕಿ ಕುಡಿದರೂ ಅಷ್ಟೇ, ಇನ್ಯಾವುದೇ ನೀರು ಹಾಕ್ಕೊಂಡು ಕುಡಿದರೂ ಅಷ್ಟೇ. ನಿಮ್ಮ ಕೊಳಕು ನೀರಿನ ಒಂದು ಕಣ ಸೇರಿದರೆ ಸಾಕು ಬಾಟಲ್ ನೀರ್ಹಿಡೀ ಕೆಡುತ್ತೆ....'' ಎಂದಾಗ, ಪಿಳಿಪಿಳಿ ನೋಡುತ್ತಿದ್ದ ಅವನು ''ಎಲ್ಲಾರೂ ಕುಡಿಯಾಕೆ ಲೋಟಾ ಕೇಳ್ತಾರ್ರೀ.... ನನಗರೇ ಏನು ಗೊತ್ತು!'' ಎಂದು ಮುಗ್ಧತೆಯಿಂದ ನುಡಿದು ಆರ್ಡರ್ ಮಾಡಿದ ತಿಂಡಿ ತರಲು ಹೋದ.

- ಶ್ರೀನಿವಾಸರೆಡ್ಡಿ, ತುಮಕೂರು.

ಮಾತುಂಗಾ ರೈಲು ನಿಲ್ದಾಣದಿಂದ ಹೊರಗೆ ಬಂದರೆ, ಅಲ್ಲೊಂದು ಹಿಂಡು ಪಾರಿವಾಳ ಕಾಣುತ್ತವೆ. ಅವಕ್ಕೆ ಕೆಲವರು ಕಾಳು ತಂದು ಹಾಕುತ್ತಾರೆ. ಅದರಿಂದ ಪುಣ್ಯ ಬಂದೀತೆಂಬ ನಂಬಿಕೆ.



ನಾವು ನಿತ್ಯ ಸ್ಟೇಷನ್ನಿಗೆ ಹೋಗುವ ಸಮಯಕ್ಕೆ, ಹಿರಿಯರೊಬ್ಬರು ಪಾರಿವಾಳಗಳಿಗೆ ಕಾಳುಣಿಸಿ ಬಂದು ನಮ್ಮ ಜೊತೆಯೇ ರೈಲೇರುತ್ತಿದ್ದರು.

ನಮ್ಮ ಗೆಳೆಯ ಗಣೇಶನಿಗೆ, ಇದರಿಂದ ರೇಗುತ್ತಿತ್ತು. ಪಾರಿವಾಳಗಳು ಹೇಗೋ ಆಹಾರ ಹುಡುಕಿಕೊಳ್ಳುತ್ತವೆ. ಇಂಥವರೇ ಕಾಳು ಹಾಕಿ ಅವುಗಳನ್ನು ಹಾಳು ಮಾಡುತ್ತಿದ್ದಾರೆ ಎಂದು ರೇಗುತ್ತಿದ್ದ.

ಸಹ ಪ್ರಯಾಣಿಕರಾದ ಹಿರಿಯರು ಮಾತುಕಡಿಮೆ. ರೈಲಲ್ಲಿ ನಿಂತಾಗಲೂ ಅದೇನೋ ಮಣಮಣ ಜಪಿಸುತ್ತಾ ಇರುತ್ತಿದ್ದರು. ಅಂಥದರಲ್ಲಿಯೂ ಒಮ್ಮೆ ಸಮಯಸಾಧಿಸಿ ಗಣೇಶ ಕೇಳಿಯೇ ಬಿಟ್ಟ.

''ದೇಶದಲ್ಲಿ ಸಾವಿರಾರು ಜನ ಹಸಿವಿಂದ ಸಾಯ್ತಾ ಇದಾರೆ. ನೀವು ಪಾರಿವಾಳಗಳಿಗೆ ಕಾಳು ಹಾಕೋದು ದೊಡ್ಡ ಅನ್ಯಾಯ ಅಲ್ಲವೆ?'' ಅವರು ಸ್ವಲ್ಪವೂ ಸಿಟ್ಟು ಮಾಡಿಕೊಳ್ಳದೇ,

''ನನಗೆ ಪಾರಿವಾಳಗಳಿಗೆ ನಾಲ್ಕು ಕಾಳು ಹಾಕೋದಷ್ಟೆ ಸಾಧ್ಯ. ಅದನ್ನ ಮಾಡ್ತೀನಿ. ಅದಕ್ಕೂ ಮೀರಿ ಶಕ್ತಿ ಬಂದರೆ ನೋಡೋಣಂತೆ....''

ಎಂದದ್ದು ಕೇಳಿ ಗಣೇಶ ಮುಂದೆ ಮಾತು ತೋಚದಾಗಿಬಿಟ್ಟ.

- ಇನಾಯತ್ ಪಾಷಾ, ಬೆಂಗಳೂರು.

ಮಕ್ಕಳು ಮುಗ್ಧರು ಅಷ್ಟೇ ಪ್ರಾಮಾಣಿಕರು. ಈ ಒಳ್ಳೆ ಗುಣದಿಂದಲೇ ಕೆಲವು ಸಲ ದೊಡ್ಡವರು ಪೀಕಲಾಟಕ್ಕೆ ಸಿಕ್ಕಬೇಕಾಗುತ್ತದೆ. ಕಳೆದ ಬೇಸಿಗೇಲಿ ಆದದ್ದು ಹಾಗೇ.

ಬೇಸಿಗೆ ರಜೆ ಬಂದರೆ ಸಾಕು, ನಮ್ಮ ಮನೆಯಲ್ಲಿ ಮಕ್ಕಳ ಹಿಂಡೇ ಸಂತೆ ನೆರೆಯುತ್ತದೆ. ಅಕ್ಕ, ಅಣ್ಣ, ತಮ್ಮನ ಮಕ್ಕಳು ಎಂದು ಮನೆಯೇ ಒಂದು ಕೊಂಡವಾಡದ ಹಾಗಿರುತ್ತದೆ.

ಈ ಸಲ ನಮ್ಮ ಹತ್ತಿರದ ಸಂಬಂಧಿ ಗೀತಾ, ಮಗಳು ದೀಪಾನ್ನ ಕರೆದುಕೊಂಡು ಬಂದಿದ್ದಳು. ಗೀತಾ ಸ್ವಲ್ಪ ಮಿಜಿಮಿಜಿಯ ಹೆಂಗಸು. ಏನು ಮಾಡಿದರೂ, ಏನಾದರೊಂದು ಕೊಂಕು ತೆಗೆಯುವವಳು. ಮದುವೆ ಆಗಿ ಇಷ್ಟು ವರ್ಷ ಆದರೂ ಗಂಡನ ಮೇಲೆ, ಸಣ್ಣ ಪುಟ್ಟ ವಿಷಯ ದೊಡ್ಡದು ಮಾಡಿ ಹೇಳುವುದೂ ಅವಳ ಅಭ್ಯಾಸ. ಅವತ್ತು ಮಧ್ಯಾಹ್ನ ಹಾಗೇ ಹಜಾರದಲ್ಲಿ ಅಕ್ಕಿ ಹಸನು ಮಾಡುತ್ತಾ ಕುಳಿತಿದ್ದ ಅಮ್ಮನ ಹತ್ತಿರ ಇದೇ ರಾಗದ ಪುನರಾವರ್ತನೆ.


ಅದೇ ಸಮಯಕ್ಕೆ ದೀಪಾ ಇತರ ಹುಡುಗರನ್ನು ಕಟ್ಟಿಕೊಂಡು ಮನೆ ಆಟ ಆಡುತ್ತಿದ್ದಳು. ಅವಳು ಅಮ್ಮ, ಇನ್ಯಾರೋ ಹುಡುಗ ಅಪ್ಪ. ಅಪ್ಪನಾದವನು ಬೆಳಗಿನ ತಿಂಡಿ ಮುಗಿಸಿ ಆಫೀಸಿಗೆ ಹೊರಟಿದ್ದಾನೆ. ''ಇರು. ಹಾಗೇ ಹೊರಟು ಬಿಡಬಾರದು. ಮುತ್ತುಕೊಟ್ಟು ಹೋಗು'' ಎಂದಳು ದೀಪಾ.

''ನಮ್ಮ ಅಪ್ಪ ಆಫೀಸಿಗೆ ಹೋಗೋವಾಗ ಅಮ್ಮಂಗೆ ಮುತ್ತುಕೊಟ್ಟೇ ಹೋಗೋದು....''

ಎನ್ನುತ್ತಾ ಜೋರಾಗಿ ಕೂಗಿ ಹೇಳುತ್ತಿದ್ದುದು ಕಂಡು, ಅಪ್ಪನ ಪಾತ್ರದ ಹುಡುಗ ಪೆಚ್ಚು ಪೆಚ್ಚಾಗಿ ನೋಡುತ್ತಿದ್ದರೆ, ದೀಪಾಳ ಮಾತು ಕೇಳಿಸಿಕೊಂಡ ದೊಡ್ಡವರು ನಗುತ್ತಿದ್ದರು. ಗಂಡನ ವಿರುದ್ಧ ದೂರಿನ ಸರಮಾಲೆಯನ್ನೇ ಹೇಳಿದ್ದ ಗೀತಾ ಸಂಕೋಚದಿಂದಲೋ, ಸಂತಸದ ನೆನಪಿಂದಲೋ ಮುಖ ಮುಚ್ಚಿಕೊಂಡಿದ್ದಳು.

- ರವೀಂದ್ರ, ಶಿರಸಿ.

ಶಬರಿಮಲೈ ರಿಮೋಟು!



ಪಾಪದ ಕೊಡ ತುಂಬಿ
ಎರಡೆರಡು ಜನ್ಮಗಳಿಗಾಗುವಷ್ಟು
ಓವರ್ ಫ್ಲೋ ಆದವರೇ
ಅಯ್ಯಪ್ಪನಿಗೆ ಶರಣಾಗುತ್ತಾರೆಯೇ?

■ ಈರಪ್ಪ ಎಂ. ಕಂಬಳಿ

ಡಿಸೆಂಬರ್ ಬಂತೆಂದರೆ ಸಾಕು ಬೆಂಗಳೂರಿನಲ್ಲಿ ಅಯ್ಯಪ್ಪನ ಸೀಜನ್ ಶುರು. ಆಟೋ ಓಡಿಸುವ ಮುನಿಸಾಮಿಯಿರಲಿ, ತಳ್ಳುಗಾಡಿಯಲ್ಲಿ ತರಕಾರಿ ತರುವ ಮುರುಗೇಸಿಯಿರಲಿ, ಕಾರ್ಖಾನೆಗೆ ಹೋಗುವ ಹುಚ್ಚೇಗೌಡನಿರಲಿ, ಎಲ್ಲಾ ಕರಿ ಯೂನಿಫಾರ್ಮಿನಲ್ಲಿ ಕಂಗೊಳಿಸಲಾರಂಭಿಸಿಬಿಡುತ್ತಾರೆ. ಈ ರೋಗ ಬರೀ ಬೆಂಗಳೂರಿಗಷ್ಟೇ ಸೀಮಿತವೆಂದುಕೊಂಡಿದ್ದೆ. ಮೊನ್ನೆ ಈ ನಮ್ಮ ಘನ ರಾಜಧಾನಿಯಿಂದ ಐದಾರು ನೂರು ಮೈಲಿ ದೂರದ ನಮ್ಮ ಊರುಗಳಿಗೆ ಹೋದಾಗಲೂ ಈ 'ಕರಿಸೇವೆ' ಅಲ್ಲಿಯೂ ಹಠಾತ್ ಎದುರುಗೊಂಡಿತು, ಬಾಪ್‌ರೇ!

ನನ್ನ ಭಾವನೊಬ್ಬ ಮಹಾನ್ ಕುಡುಕ. ಬೆಳಿಗ್ಗೆ ರಮ್ಮಿನಲ್ಲೆ ಮುಖದೊಳೆದು ಅದನ್ನೇ ಹೊಟ್ಟೆಗಿಳಿಸಿ ಮುಂದಿನ ಕೆಲಸಕ್ಕೆ ಅಣಿಯಾಗುವ 'ರಮ್ಮೀರ'. ಅದೇನೋ ಹೇಳುತ್ತಾರಲ್ಲ ಗಾದೆ - 'ಎದ್ದೆಯಾ ಪಾಪಿ ಅಂದರೆ, ತತ್ತಾ ಎಳ್ಡು ಗಳಾಸು ಅಂದನಂತೆ'. ಏನಾದರು ಮಾಡಿ ಆತನ ಆ ಅಸಾಧ್ಯ ಕುಡಿತ ಬಿಡಿಸಬೇಕೆಂದು ನನ್ನ ತಂಗಿ ಯಾರ್‍ಯಾರಲ್ಲೋ ಅಂಗಲಾಚಿದ್ದಳು. ಕಂಡ ಕಂಡ ದೇವರಲ್ಲಿ ಹರಕೆ ಹೊತ್ತಿದ್ದಳು. ಏನೂ ಪ್ರಯೋಜನವಾಗಿರಲಿಲ್ಲ. ಆದರೆ ಇತ್ತೀಚೆಗೆ ಕೇರಳದ ಬೆಟ್ಟದ ಮೇಲಿನ ಭವರೋಗ ವೈದ್ಯ ಅಯ್ಯಪ್ಪಸ್ವಾಮಿ ರಿಮೋಟ್ ಕೃಪಾಕಟಾಕ್ಷದಿಂದ ನನ್ನ ಭಾವ ಮಾಲೆ ಹಾಕಿ, ಗಂಧ ಪೂಸಿ, ಕರಿ ಅರಿವೆ ತೊಟ್ಟು ಹಾಗೆ ಬರಿಗಾಲಿನಲ್ಲಿ ನಡೆದಾಡುವ ಪರಿಯನ್ನು ಕಂಡು ದಿಗ್ಭ್ರಾಂತಿಯಾಗಿ, ಆ ತನಕ ಪವಾಡವನ್ನು ಜರಿಯುತ್ತಿದ್ದ ನನಗೆ ಈಗ ಇದನ್ನೇ ಪವಾಡವೆಂದು ನಂಬುವಂತಾಗಿದೆ. ಅಯ್ಯಪ್ಪ ಸ್ವಾಮಿಯನ್ನು 'ಭವರೋಗ ತಜ್ಞ' ಎಂಬ ಬಿರುದಿನಿಂದ ಕೊಂಡಾಡಬೇಕು. ಯಾಕೆಂದರೆ ಮಹಾ ಮಹಾ ಡಾಕ್ಟರರಿಗೆ ಬಗ್ಗದ ರಾಕ್ಷಸೀ ಕುಡುಕರನ್ನು ಹೀಗೆ ಹಂಟರು ಬೀಳುವಂತೆ ಮಾಡುವಲ್ಲಿ ಆತನಿಗೆ ಎಂಥಾ ಶಕ್ತಿಯಿದ್ದೀತು, ಏನು ಕತೆ ವಾಹ್!

ಮಾಲೆ ಹಾಕಿದ ಕರಿದಿರಿಸಿನವರು ಪರಸ್ಪರ ಎದುರಾದರೆ ಸಾಕು ಪಿತ್ತ ಕೆರಳಿದವರಂತೆ ಒಂದೇ ಉಸಿರಿಗೆ 'ಸ್ವಾಮಿಯೇ ಶರಣು' ಎಂದು ತಾರಕ ಸ್ವರದಲ್ಲಿ ಸಾಮೂಹಿಕವಾಗಿ ಕೂಗಲಾರಂಭಿಸಿ ಪ್ರಶಾಂತ ವಾತಾವರಣದಲ್ಲಿ ಅಲ್ಲೋಲ ಕಲ್ಲೋಲ ಉಂಟು ಮಾಡಿ ಬಿಡುತ್ತಾರೆ. ಅದೇನು ಮಿಲಿಟರಿ ಶಿಸ್ತೊ ಕಾಣೆ. ಹಟ್ಟಿಯ ಬಾಗಿಲಿಗೆ ಬಂದ ತಾಯಿ ಕುರಿಗಳ ವಾಸನೆ ಹಿಡಿದ ಮರಿಕುರಿಗಳು ಬ್ಯಾ ಬ್ಯಾ ಎಂದು ಹುಯಿಲೆಬ್ಬಿಸಿದ ರೀತಿಯಿರುತ್ತದೆ - ಅವರು ತಮ್ಮ ಸ್ವಾಮಿಯನ್ನು ಕೊಂಡಾಡುವ ಪರಿ! ಸ್ವಂತ ವಾಹನ ಮಾಡಿಕೊಂಡು ಶಬರಿಮಲೈಗೆ ಹೊರಟ ಅಯ್ಯಪ್ಪನ ಭಕ್ತರು, ಹೋಗುವಾಗಲಾಗಲಿ ಅಥವಾ ಬರುವಾಗಲಾಗಲಿ ದಾರಿಯಲ್ಲಿ ಧರ್ಮಸ್ಥಳಕ್ಕೂ ಭೇಟಿ ಕೊಡುತ್ತಾರೆ. ದೇವಸ್ಥಾನದ ಆವರಣದಲ್ಲೆ ದರ್ಶನಕ್ಕೆ ಕಾದು ನಿಂತ ಸಾಲಿನಲ್ಲಿದ್ದ ಕರಿ ಸೈನ್ಯದ ಕಣ್ಣಿಗೆ ಬೇರೆ ಯಾರಾದರೂ ಕರಿ ದಿರಿಸಿನವರು ಕಣ್ಣಿಗೆ ಬಿದ್ದ ತಕ್ಷಣ ಅಭ್ಯಾಸ ಬಲದಿಂದ ಅವರಿಗರಿವಿಲ್ಲದೆ 'ಸ್ವಾಮಿಯೇ ಶರಣು' ಎಂದು ಮತ್ತದೇ ಸಾಮೂಹಿಕ ಅರಚಾಟಕ್ಕೆ ತೊಡಗಿದಾಗ, ಅಲ್ಲಿನ ಸಹಜ ಮೌನದ ಮೇಲೆ ಅವರಿಗರಿವಿಲ್ಲದೆ ಅತ್ಯಾಚಾರ ಎಸಗಿಬಿಡುತ್ತಾರೆ. ಅದನ್ನು ತಪ್ಪಿಸುವುದಕ್ಕಾಗಿಯೇ ವ್ಯವಸ್ಥಾಪಕರು ಧರ್ಮಸ್ಥಳದಲ್ಲಿ ಈಗ ಅಯ್ಯಪ್ಪನ ಭಕ್ತರಿಗಾಗಿಯೇ 'ತುಟಿ ಹೊಲಿದುಕೊಂಡು ದೇವಸ್ಥಾನ ಸುತ್ತಿ ಬರುವಂತೆ' ತಾಕೀತು ಮಾಡಿದ ಎಚ್ಚರಿಕೆಯ ಫಲಕಗಳನ್ನು ಸುತ್ತ ಬರೆದು ಅಂಟಿಸಿದ್ದಾರೆ.

ಅಲ್ಲವೇ ಮತ್ತೆ? ಎಂಥೆಂಥಾ ಪಾತಕಗಳನ್ನು ಚಿಟಿಕೆ ಹೊಡೆಯುವುದರೊಳಗಾಗಿ ಮಾಡಿ ಬಂದು ಬಿಡಬಲ್ಲ ಚಂಡಾಲ ಚೌಕುಳಿ ಮೇಳವೆಲ್ಲ ಲಕ್ಷಣವಾಗಿ ಕರಿ ಅರಿವೆ ತೊಟ್ಟು ಶ್ರೀಗಂಧ ಬಳಿದುಕೊಂಡು ರಾತ್ರಿ ಮನೆ ಮಾರು ತೊರೆದು ಹಾಗೆ ಕುರಿಮಂದೆಯ ತರವೇ ಒಂದು ಕಡೆ ಶೆಡ್ ಹಾಕಿಕೊಂಡು ವಾಸಿಸುವ ಪರಿ ನಿಜಕ್ಕೂ ದಯನೀಯವಾದುದು.

ಜನಸಂಚಾರ ತುಸು ಕಡಿಮೆಯಿರುವ ಅದೊಂದು ಕಡೆಗೆ ಫುಟ್‌ಪಾತ್ ಮೇಲೆ ಗಡದ್ದಾಗಿ ಒಂದು ಅಂತಹುದೇ 'ಶೆಡ್' ಹೊಡೆಯಲಾಗಿತ್ತು. ಮಿಲಿಟರಿಯವರ ಡಾರ್ಮಿಟೊರಿ ಹೋಲುವಂತೆ ತುಸು ದೊಡ್ಡದಾಗಿಯೇ ಇತ್ತು. ಒಂದೇ ಕಡೆ ಬಾಗಿಲು. ಬಾಗಿಲ ಮೇಲೆ ಒಂದು ಶಬರಿಮಲೈ ಅಯ್ಯಪ್ಪನ ಸಣ್ಣ ಚಿತ್ರಪಟ ನೇತಾಡುತ್ತಿತ್ತು. ಮೇಲೆ, ಬದಿಗೆ, ಸುತ್ತಲೂ ಕರಿಯ ಪ್ಲಾಸ್ಟಿಕ್ ಹಾಳೆಗಳನ್ನು ಹೊಚ್ಚಿ ಬಿಗಿದದ್ದರಿಂದಾಗಿ ಒಂದು ಕೂದಲಿನಷ್ಟೂ ಡಿಸೆಂಬರ್ ಚಳಿ ಒಳಗೆ ತೂರದಷ್ಟು ಬಂದೋಬಸ್ತು ಮಾಡಿಕೊಂಡಿದ್ದರು. ಕರಿ ದೀಕ್ಷೆ ಪಡೆದ ಅಯ್ಯಪ್ಪನ ಭಕ್ತರ ಮೇಳವು ಹಗಲು ತಂತಮ್ಮ ಕೆಲಸ ಕಾರ್ಯಗಳಿಗೆ ತೆರಳಿ, ಸಂಜೆಯಾಗುತ್ತಿದ್ದಂತೆ ತಣ್ಣೀರಿನಲ್ಲಿ ಮಿಂದು ಬಂದು, ಅಲ್ಲಿ ಭಜನೆ - ಪ್ರಸಾದ ಮುಗಿಸಿ, ರಾತ್ರಿ ಅಲ್ಲಿಯೇ ತಂಗುವ ಪರಿಪಾಟ. ಆ ಹಂಗಾಮಿ ವ್ಯವಸ್ಥೆಯಲ್ಲೂ ದೇವಸ್ಥಾನದ ಅಚ್ಚುಕಟ್ಟು ಇತ್ತು. ಶೆಡ್‌ನ ಹೊರಗಡೆ ಎರಡೂ ಬದಿಗೂ ವಿರುದ್ಧ ದಿಕ್ಕಿನಲ್ಲಿ ಎರಡು ಸ್ಪೀಕರುಗಳನ್ನು ಕಟ್ಟಿದ್ದರು. ಸಂಜೆಯಾಗುತ್ತಿದ್ದಂತೆ ಅವು 'ಸ್ವಾಮಿಯೇ ಅಯ್ಯಪ್ಪಾ, ಅಯ್ಯಪ್ಪಾ ಸ್ವಾಮಿಯೇ' ಎಂದು ಒಂದೇ ಸಮನೆ ಅವೇ ಪದಗಳನ್ನು ತಿರಗಾ ಮುರಗಾ ಅರಚುತ್ತ, ಗೀರು ಬಿದ್ದ ಗ್ರಾಮೋಫೋನು ಪ್ಲೇಟುಗಳಂತೆ ಉಲಿಯುತ್ತಿದ್ದವು. ಆ ಧಾಟಿಯೇಕೋ ನನಗೆ ಆರ್ತನಾದ ಹೊಮ್ಮಿಸಿದಂತಾಗಿ ನನ್ನಪ್ಪನ ಸಾವಿನ ದಿನ, ವಿಪರೀತ ಕಳ್ಳಿನ ನನ್ನಕ್ಕ ಒಬ್ಬಾಕೆ ಹಾಡಾಡಿಕೊಂಡು ಅಳುತ್ತಿದ್ದ ದೃಶ್ಯ ದಿಗ್ಗನೇ ಕಣ್ಣಿಗೆ ಕಟ್ಟುತ್ತಿತ್ತು. ಗೂಟಕ್ಕೆ ಬಡಿದು ಕೂರಿಸಿದ್ದ ಹೆಣದ ಮುಂದೆ ಕೂತು, ಬಾರಿ ಬಾರಿಗೂ ಹೆಣದ ಗಲ್ಲ ತಿವಿತಿವಿದು 'ಅಯ್ಯಯ್ಯಪ್ಪೊ, ನಿನ್ನಿದ್ದೆ ಅಲ್ಲಪ್ಪೋ, ಇವತ್ತೆಲ್ಲಿ ಹ್ವಾದ್ಯೋ ನಮ್ಮಪ್ಪಾ....' ಎಂದು ಒಂದೇ ಧಾಟಿಯಲ್ಲಿ ಅವೇ ಪದಗಳನ್ನು ರಾಗವಾಗಿ ರಿಪೀಟು ಮಾಡುತ್ತಿದ್ದುದರಿಂದಲೋ ಏನೋ ಪದೆ ಪದೇ 'ಅಯ್ಯಪ್ಪಾ

ಅಯ್ಯಪ್ಪಾ' ಎಂಬ ಪದಗಳೇ ನನಗೆ ಅಲರ್ಜಿಯಾಗಿ ಪರಿಣಮಿಸಿವೆ.

ಮೂರು ಸಂಜೆಯ ಹೊತ್ತು ಅಂಥದೇ ಶೆಡ್ಡಿನ ಪಕ್ಕ ಒಮ್ಮೆ ಹಾದು ಹೋಗುತ್ತಿರುವಾಗ ಸ್ಪೀಕರು, ಭಾಷೆಯ ಹಂಗಿಲ್ಲದೆ ಅಯ್ಯಪ್ಪ ಸ್ವಾಮಿಯ ಗುಣಗಾನ ಒದರುತ್ತಿರಬೇಕಾದರೆ, ಒಳಗಡೆ ಭರ್ಜರಿಯಾಗಿ ಭಜನೆ ನಡೆದಿರಬೇಕೆಂದು ಭಾವಿಸಿದ ನಾನು, ಕುತೂಹಲಿಯಾಗಿ ಒಳಗೆ ನುಗ್ಗಿದೆ. ಶೆಡ್ ಬಾಗಿಲ ಮೂಲೆಯಲ್ಲಿ ನಿರುಮ್ಮಳಾಗಿ ಪವಡಿಸಿದ್ದ ಬೀದಿ ನಾಯಿಯೊಂದು ದಿಗ್ಗನೇ ಎದ್ದು ಹೊರಗೋಡಿತು. ಒಳಗೆ ಮಾನವ ತಲೆಗಳೇ ಕಾಣಲಿಲ್ಲ. ದಿಟ್ಟಿಸಿ ನೋಡಲಾಗಿ ಎದುರು ಸಣ್ಣ ವೇದಿಕೆಯ ಮೇಲೆ ಸಾಮಿಯ ಚಿತ್ರಪಟ. ಪಕ್ಕದ ಮೂಲೆಯಲ್ಲಿ ಕ್ಯಾಸೆಟ್ ಸಿಕ್ಕಿಸಿದ್ದ ಅಂಪ್ಲಿಫೈಯರ್ ಮಾತ್ರ ಕೆಲಸ ಮಾಡುತ್ತಿತ್ತು. ವಿಚಿತ್ರ ಅನ್ನಿಸಿ ಹೊರಗೆ ಧಾವಿಸಿದರೆ, ಬಾಗಿಲಲ್ಲಿ ಕರಿ ಬಟ್ಟೆಯ (ಆ)ಸಾಮಿಯೊಂದು ಪಕ್ಕದ ಕ್ಯಾಂಟೀನಿನಿಂದ ಪ್ಲಾಸ್ಟಿಕ್ ಬಿಂದಿಗೆಯಲ್ಲಿ ನೀರು ಹೊತ್ತು ಎದುರಾಯಿತು. ನನ್ನನ್ನು ಕಂಡವನೇ ''ಏನ್ಸೋಮಿ'' ಅಂದ. ''ಏನಿಲ್ಲ ಸ್ವಾಮಿ, ಸುಮ್ಮನೇ ನೋಡಾಣಾ ಅಂತಾ ಒಳಗೆ ಬಂದೆ. ಭಜನೆ ಎಷ್ಟು ಗಂಟೆಗೆ ನಡಿಸ್ತೀರಿ ಇಲ್ಲಿ' ಅಂದದ್ದಕ್ಕೆ, 'ರಾತ್ರೀನಾಗೆ ಯೆಲ್ಲಾ ಸೇರಿದ್ಯಾಕೆ ಸೋಮ್ಯೆ'' ಅಂದಿತು. ನನ್ನನ್ನೂ ಒಬ್ಬ ಮಾಜಿ ಭಕ್ತ ಶಿಖಾಮಣಿಯಿರಬೇಕೆಂದು ಭಾವಿಸಿ, ಅಷ್ಟೇ ಸಮ್ರನಾಗಿ ಉತ್ತರಿಸಿ ನೆಲಕ್ಕೆ ನೀರು ಸಿಂಪಡಿಸಲಾರಂಭಿಸಿತು ಆ ಸ್ವಾಮಿ.

ಎಲ್ಲಾ 'ಎಣ್ಣೆ ಬಡುಕರು' ಹೀಗೆ 'ಸ್ವಾಮಿ'ಗಳಾಗಿ ದೀಕ್ಷೆ ಹೊಂದಿ, ತಾತ್ಕಾಲಿಕವಾಗಿಯಾದರೂ ಹೆಂಡ-ಖಂಡ-ಹೆಂಗಸರನ್ನೆಲ್ಲ ತೊರೆದು, ಮಡದಿಯ ಕೈಯಡುಗೆ ಬಿಟ್ಟು, ಹೀಗೆ ಸಾಮೂಹಿಕವಾಗಿ ಅಟ್ಟುಕೊಂಡು ತಿಂದು, ಭಜನೆ ಮಾಡಿಕೊಂಡು ಶೆಡ್‌ನಲ್ಲಿ ಬಿದ್ದುಕೊಳ್ಳುವ ಪರಿಗೆ ಅಚ್ಚರಿಯಾಯಿತು. ಅದಕ್ಕೆ ಕಾರಣೀಕರ್ತನಾದ ದೂರದ ಬೆಟ್ಟದ ಮೇಲಿನ ಆ ಅಯ್ಯಪ್ಪನ 'ರಿಮೋಟ್ ಕಂಟ್ರೋಲ್'ಗೆ ಇರುವ ಅಗಾಧ ಶಕ್ತಿಗೆ ಅವಾಕ್ಕಾದೆ. ಎಂಡ ಬುಟ್ಟು ಎಂಡ್ತಿ ಬುಟ್ಟು ಬರಿಗಾಲಲಿ ತಿರುಗಾಡ್ಕೊಂಡಿರೋ ಐಕ್ಳು ನನಮಕ್ಳನ್ನ ಕಂಡು ಮೆಚ್ಗೆ ಆಗ್ದೆ ಇದ್ದೀತಾ? ಯಂಡಗುಡುಕ ರತ್ನನ ಪದ ನೆನಪಾಯಿತು. 'ಅಯ್ಯನ್ನೂ ಬೆಟ್ಟಕ್ಕೂ ಬೋಲೋರೆ ಜೈ!'

★


ಹದಿನೈದು ದಿನಗಳಿಂದ ನಾಪತ್ತೆಯಾಗಿದ್ದ ಹಳೆಯ ಸ್ನೇಹಿತ ರಂಗಸ್ವಾಮಿಗೆ ದೂರವಾಣಿ ತಿರುಗಿಸಿದರೆ ಅತ್ತ ಕಡೆಯಿಂದ 'ಏಳಿ ಸಾಮಿ, ಔದು ನಾನೇಯ ಸಾಮಿ' ಎಂದು ಕೀರುಲಿಯಿತು. ಮಾತು ಮಾತಿಗೆ ಸಾಮಿ ಸಾಮಿ ಅಂದಾಗಲೇ ನನಗೆ ಗುಮಾನಿ ಮೂಡಿತು. ನಮ್ಮ ರಂಗಸ್ವಾಮಿಗೂ ಈಗ ಆ ಸಾಂಕ್ರಾಮಿಕ ರೋಗ ತಗುಲಿದೆಯೆಂದು ಭಾಸವಾಯಿತು. ಮರುದಿನವೇ ಅವನನ್ನು ಆ ಅವಸ್ಥೆಯಲ್ಲಿ ಕಂಡು ಬರಲು ಪ್ರಭಾತಫೇರಿ ಹೊರಟೆ. ಅಂಗಳದಲ್ಲಿಯೇ ಅವ ಕಾದುಕೊಂಡಿದ್ದ. ಇಪ್ಪತ್ತು ದಿನಗಳ ಕುರುಚಲ ಗಡ್ಡ - ಮೀಸೆಗಳು ಮುಖದ ಮೇಲೆ, ಕರಿ ಅಂಗಿ - ಕರಿ ಲುಂಗಿ. ಕೊರಳಲ್ಲಿ ಒಂದು ನೇತಾಡುವ ಕರಿವಸ್ತ್ರ ಬೇರೆ. ಬರಿಗಾಲು ಬಂಟ. ಗುಂಡು - ತುಂಡು ತೊರೆದು, ತಣ್ಣೀರಿನಲ್ಲಿ ಮಿಂದದ್ದಕ್ಕೇನೋ ಕಣ್ಣುಗಳು ತುಸು ಆರೋಗ್ಯದಿಂದ ಹೊಳೆಯುತ್ತಿದ್ದವು. ಬಾಗಿಲಲ್ಲಿ ನಿಂತ ಮಡದಿ ತುಂಟ ಕಣ್ಣುಗಳಿಂದ ಅವನನ್ನೇ ಅಪಾದಮಸ್ತಕ ನಿಟ್ಟಿಸುತ್ತ 'ರ್ರೀ....... ಏನ್ ಚೆಂದಾ ಕಾಣಿಸ್ತಿರ್ರೀ, ಈ ಬಟ್ಟೇಲಿ... ವರ್ಷಾಪೂರ್ತಿ ನೀವ್ ಹಿಂಗೇ ಇದ್ದು ಬಿಟ್ಟಿದ್ದಿದ್ದರೇ....' ಎಂದು ಉಮಾಶ್ರೀ ರಾಗದಲ್ಲಿ ಆಲಾಪಿಸಿದ್ದಕ್ಕೆ ಇವನಿಗೆ ಒಳಗೊಳಗೇ ಹುರುಹುರು ಶುರುವಾಗಿರಬೇಕು. ಆದರೆ ಕೊರಳಲ್ಲಿ ನೇತಾಡುತ್ತಿದ್ದ ಕರಿವಸ್ತ್ರ ಸರ್ಪದಂತೆ ಅವನನ್ನು ಎಚ್ಚರಿಸಿರಬೇಕು. 'ತಲೆ ಕೊಡವಿ ವಿಷಕಂಠನಂತೆ ಉಗುಳು ನುಂಗುತ್ತಾನೆ. ಮಾಲೆ ಹಾಕಿಕೊಂಡು ಹಾಗೆ ದೀಕ್ಷೆ ಪಡೆದ ಮೇಲೆ ಬೆಟ್ಟಕ್ಕೆ ಹೋಗಿ ಬರುವವರಿಗೆ ಅಷ್ಟೂ ದಿನ ಮಡದಿಯ ಸಂಪರ್ಕದಿಂದಲೂ ದೂರವಿರಬೇಕೆಂಬ ಕಟ್ಟುನಿಟ್ಟಾದ ನಿಯಮವಂತೆ ವಾಹ್! ಗುಂಡಿನ ಮತ್ತಿನಲ್ಲಿ ಹಿಂಸ್ರಪಶುವಿನಂತೆ ಮೈಯೇರಿ ಮಾಂಸ ಖಂಡಗಳನ್ನು ಹಿಂಜಾಡುತ್ತಿದ್ದವರಿಂದ ತಿಂಗಳೊಪ್ಪತ್ತಾದರು ಬಿಡುಗಡೆ ಪಡೆದದ್ದಕ್ಕೆ ಯಾವ ಹೆಂಗಸರಿಗೆ ತಾನೆ ಖುಷಿಯಾಗುವುದಿಲ್ಲ?

ದೀಪಾವಳಿ ಸ್ಪರ್ಧೆಯಲ್ಲಿ ಎರಡನೆ ಬಹುಮಾನ ಪಡೆದ ಪ್ರಬಂಧ

ನಮ್ಮ ರಂಗಸ್ವಾಮಿಯ ತಾಕತ್ತು ನನಗೆ ಹೊಸದೇನಲ್ಲ. ಬೆಂಕಿಕಡ್ಡಿ ಗೀರಿದರೆ ಸಾಕು ಬಾಟಲಿಯೊಳಗೆ ಬಗ್ಗನೇ ಹೊತ್ತುರಿಯಬಲ್ಲ ಭಯಂಕರ ದ್ರವವನ್ನು ಒಂದೇ ಉಸಿರಿಗೆ ಗಂಟಲಿಗೆ ಇಳಿಸಿ ಬಾಯೊರಸಿಕೊಂಡು ಬಿಡಬಲ್ಲ ಶಿವಾ-ಪರಮಾತ್ಮ! ಒಂದು ಕ್ವಾರ್ಟರ್ ಒಳಗೆ ಇಳಿಯುತ್ತಿದ್ದಂತೆ ಮೊದಲಿದ್ದ ರಂಗಸ್ವಾಮಿ ಮಾಯವಾಗಿ 'ರಾಂಗ್‌ಸ್ವಾಮಿ' ಆಗಿ ಮಾರ್ಪಾಡಾಗಿ ಬಿಡುತ್ತಿದ್ದ. ಆಗವನ ರೌದ್ರ ಅವತಾರವನ್ನು ಕಂಡು, ಮರುಗಿ ಅವನನ್ನು ಅವನ ಪಾಡಿಗೇ ಬಿಟ್ಟು ಬಿಡುವವರೇ ಹೆಚ್ಚು. ಅಂಥಾ 'ರಾಂಗ್‌ಸ್ವಾಮಿ' ಈಗ ಈ ಕರಿದಿರಿಸಿನಲ್ಲಿ ಛೇ! ಕಲ್ಪಿಸಿಕೊಳ್ಳುವುದಕ್ಕೂ ಅಸಾಧ್ಯ. ಅದನ್ನೇ ಅವನ ಮುದ್ದಿನ ಮಡದಿ ಇದೂ ಒಂದು ಛಾನ್ಸು ಎಂದುಕೊಂಡು ಅಣಕಿಸಿ ಕೆಣಕಬೇಕೆ? ಅವ ಒಳಗೊಳಗೇ ಕುದಿಯುತ್ತಿದ್ದ. 'ಏಯ್ ನಿನ್ನಕ್ಕನ್.... ಮಾಲೆ ಆಕಿವ್ನೀಂತ ಸುಮ್ಕಿದೀನಿ.... ನನ್ ಕೆಣಕಬ್ಯಾಡಾ....' ಎಂದು ಹಲ್ಲು ಕಡಿಯುತ್ತಿದ್ದರೆ, ಪಕಪಕನೇ ನಕ್ಕ ಆಕೆ 'ಬೆಟ್ಟಕ್ಕೆ ಓಗಿ ಬರಾತಂಕಾ ನನ್ನೇ ಮುಟ್ಟೂ ಅಂಗಿಲ್ಲ. ನನ್ನಕ್ಕನ್ನ ಮಾಡಕ್ಕಾಯ್ತದಾ? ಅಮಿಕ್ಕಂಡಿರು' ಎಂದು ಅವನಿಗೇ ರಿವರ್ಸ್ ಹೊಡೆಯುತ್ತಿದ್ದಳು. ಅಷ್ಟರಲ್ಲಿ ಗೇಟಿನಲ್ಲಿ ನನ್ನನ್ನು ಕಂಡ ಆಕೆ ಒಳಗೆ ನಡೆದಿದ್ದಳು. ಎಂಥಾ ಕರುಣಾಜನಕ ಸ್ಥಿತಿ ರಂಗಸಾಮಿಯದು, ಛೇ!

'ಏನಪಾ ಇದು ನಿನ್ನ ಹೊಸ ಅವತಾರ?' ಎಂದಂದು ಕುರ್ಚಿಯನ್ನು ಎಳೆದುಕೊಂಡೆ. ಇತ್ತೀಚೆಗೆ 'ಗುಂಡಣ್ಣ'ನ ಸಹವಾಸ ಮಿತಿಮೀರಿದ್ದರಿಂದಾಗಿ ಲಿವರ್‌ಗೆ ತೊಂದರೆಯಾಗಿತ್ತೆಂದೂ, ಅದನ್ನು ಬಿಡಲು ಕಷ್ಟವಾಗಿ ಕಡೆಗೆ ಅಯ್ಯಪ್ಪನ ದೀಕ್ಷೆ ಪಡೆದದ್ದೆಂದೂ ತಿಳಿಸಿದ. ಆ ನೆವದಲ್ಲಾದರು ಹಂಗಾಮಿಯಾಗಿ ಮದ್ಯ - ಮಾಂಸ - ಮಾನಿನಿಯರಿಂದ ದೂರ ಉಳಿಯಬೇಕಾಗಿ ಬಂದದ್ದನ್ನು ವಿವರಿಸಿದ. ಹೀಗಾದರೂ ಅವನ ಆರೋಗ್ಯ ಸುಧಾರಿಸಲಿ ಎಂದು ನಾನೂ ಹಾರೈಸಿ ಬೆಂಬಲಿಸಿದೆನೆನ್ನಿರಿ.

ಮತ್ತೇ ಹದಿನೈದು ದಿನ ಕಳೆದಿರಬೇಕು. ಜನೆವರಿಯಲ್ಲಿ ಒಂದು ಬೆಳಿಗ್ಗೆ ಎದ್ದು ಪತ್ರಿಕೆ ತಿರುವುತ್ತ ಕೂತಿದ್ದವನಿಗೆ ಆಘಾತಕರ ಸುದ್ದಿ ಕಣ್ಣಿಗೆ ಬಿತ್ತು. ಶಬರಿಮಲೈ ಬೆಟ್ಟಕ್ಕೆ ಅಯ್ಯಪ್ಪನ ಭಕ್ತರನ್ನು ಹೊತ್ತೊಯ್ದಿದ್ದ ಟೆಂಪೋ ಒಂದು ವಾಪಸ್ಸಾಗುವಾಗ ಕಂದಕಕ್ಕೆ ಉರುಳಿ, ಅದರಲ್ಲಿದ್ದ ಹದಿಮೂರು ಜನ ಹಾದಿಯಲ್ಲೇ 'ಹರೋಹರ' ಅಂದಿದ್ದರು. ತಕ್ಷಣ ನಮ್ಮ ರಾಂಗ್‌ಸ್ವಾಮಿಯ ನೆನಪಾಗಿ ಅವಸರವಸರವಾಗಿ ಅಸುನೀಗಿದವರ ಪಟ್ಟಿಯನ್ನು ನಿರುಕಿಸಿದೆ. ಸದ್ಯ ಅವನ ಹೆಸರಿಲ್ಲದುದನ್ನು ಖಾತ್ರಿ ಮಾಡಿಕೊಂಡು ನಿಟ್ಟುಸಿರಿಟ್ಟೆ. ಆ ವರದಿಯಲ್ಲಿದ್ದದ್ದು ಇಷ್ಟೆ: ಸ್ವಾಮಿಯ ದರ್ಶನ ಪಡೆಯುವುದೇ ತಡ ಅವರು ಮುಟ್ಟಬೇಕಾದ ತಮ್ಮ ಗುರಿ ಮುಟ್ಟಿದಂತೆ 'ಹುರ್ರಾ' ಎಂದು ಕೂಗಿ, ಕರಿ ಸಮವಸ್ತ್ರ ಕಿತ್ತೆಸೆದವರೇ ತಮ್ಮೊಂದಿಗೆ ಮೊದಲೇ ಕೊಂಡೊಯ್ದಿದ್ದ ಬಾಟಲಿಗಳನ್ನು ಬರಗಟ್ಟವರಂತೆ ಬರಿದು ಮಾಡಿ ಎಸೆದು ಕೆಳಗೆ ಇಳಿಯುತ್ತಿದ್ದವಂತೆ ಬಡಪಾಯಿಗಳು. ಚಾಲಕನೂ ಕದ್ದು ಮುಚ್ಚಿ ತುಸು ಗಂಟಲು ಒದ್ದೆ ಮಾಡಿಕೊಂಡಿದ್ದಿರಬೇಕು. ಬಹು ಕಷ್ಟಪಟ್ಟು ತಿಂಗಳಿಂದ ಕುಡಿಯದೆ ಇದ್ದ ಸಂಯಮದ ಕಟ್ಟೊಡೆದ ಪರಿಣಾಮವಾಗಿ ಬೇಕಾಬಿಟ್ಟ ಕುಡಿದು, ಬೆಟ್ಟ ಇಳಿಯುವ ದಾರಿಯಲ್ಲಿಯೇ ಅಯ್ಯಪ್ಪನ ಪಾದ ಸೇರಿದ್ದರು. ಅವರು ಒಯ್ದಿದ್ದ ವಾಹನವೋ ಗುಜರಿಗೆ ಹೋಗಬೇಕಾದ ಸ್ಥಿತಿಯಲ್ಲಿತ್ತಂತೆ. ಬೀಳ್ಕೊಡುವಾಗ ನೋಡಿದವರೇ ಹೇಳುವಂತೆ ಚಟ್ಟದಂತೆ ಸೌಂಡು ಮಾಡುತ್ತಿದ್ದ ಅದು ಸ್ವಾಮಿಯ ದರ್ಶನ ಮಾಡಿಸಿ ನಂತರ ಸೀದಾ ಸ್ಮಶಾನಕ್ಕೆ ಕರೆದೊಯ್ದಿತ್ತು. ಪಾಪ! ಆ ಅಯ್ಯಪ್ಪನೂ ಕೆಳಗಿಳಿದು ಬಂದು ಕಾಪಾಡಲಿಲ್ಲ ಅವರನ್ನು. ಕಡೆಗೆ ಕೇರಳದ ಪೊಲೀಸರೇ ಅವರ ಬಾಡಿಗಳನ್ನು ಎತ್ತಿ ತಂದರು.



ಅದ್ಯಾರೋ ಪ್ರತಿಕ್ರಿಯಿಸುತ್ತಿದ್ದ ರೀತಿ ಇನ್ನೂ ಮೋಜಿನದಾಗಿತ್ತು. 'ಪಾಪದ ಕೊಡ ತುಂಬಿ ಎರಡೆರಡು ಜನ್ಮಗಳಿಗಾಗುವಷ್ಟು ಓವರ್ ಫ್ಲೋ ಆದವರೇ ಅಯ್ಯಪ್ಪನಿಗೆ ಶರಣಾಗುತ್ತಾರೆ' ಎಂದು. 'ಬೆಟ್ಟಕ್ಕೆ ಹೋದವರೆಲ್ಲರೂ ಹಾಗೆ 'ಹರೋಹರ' ಆಗದೆ ಸುರಕ್ಷಿತವಾಗಿ ಮರಳಿ ಬಂದು ತಮ್ಮ ಹಳೆಯ ಚಾಳಿಯನ್ನು ಮತ್ತೆ ನಿರುಮ್ಮಳಾಗಿ

ಮುಂದುವರಿಸಿದವರೂ ಇದ್ದಾರಲ್ಲ ಸ್ವಾಮಿ. ಇದಕ್ಕೇನು ಹೇಳುತ್ತೀರಿ?' ಎಂದು ಪ್ರತಿಯಾಡಿದರೆ, ಪಾಪಿ ಚಿರಾಯುವಲ್ಲವೆ? ಕೆಲವರೇನೋ ಅಪರೂಪವಾಗಿ ಸ್ವಾಮಿಯ ಬೆಟ್ಟದ ಪಾದದಲ್ಲಿಯೇ ಪಾವತಿಯಾಗುತ್ತಾರೆ. ಉಳಿದವರು ಹಿಂದು ಹಿಂಡಾಗಿ ತಮ್ಮ ಮಾಮೂಲಿ ಪಾಪಕಾರ್ಯಗಳಲ್ಲಿ ತೊಡಗಲು ಮರಳಿ ಧಾವಿಸುತ್ತಾರೆ. 'ಅವರ ಲೆಕ್ಕ ಚುಕ್ತಾ ಆಗಬೇಕಲ್ಲ' ಎಂದು ಮುಂತಾಗಿ ಬದುಕು-ಸಾವಿನ ಜಿಜ್ಞಾಸೆಗೇ ತೊಡಗುತ್ತಾರೆ.

ಎಂಥಾ ದುರಂತ? ಏನೇ ಆದರು, ಆ ಬೆಟ್ಟದ ಅಯ್ಯನನ್ನು ಒಮ್ಮೆ ನಾನೂ ಕೂಡ, ಅದೂ ಕರಿ ದಿರಿಸಿನಲ್ಲಿಯೇ ಹೋಗಿ ಯಾಕೆ ನೋಡಿಕೊಂಡು ಬರಬಾರದೆಂಬ ಆಸೆ ಮನದಲ್ಲಿಯೇ ಮೊಳೆಯುತ್ತದೆ. ಹಿಂದೆಯೇ 'ನೀನ್ಯಾವ ಸೀಮೆಯ ಪಾಪಿ ತೆಪ್ಪಗಿರು' ಎಂದು ಇನ್ನೊಂದು ಮನಸ್ಸು ಅದನ್ನು ಚಿವುಟಿ ಹಾಕುತ್ತದೆ. ನನಗಿರುವ ಒಂದೇ ಒಂದು ದೌರ್ಬಲ್ಯವೆಂದರೆ, ಗುಂಡು-ತುಂಡುಗಳ ಹೊರತಾಗಿ ಇರಬಲ್ಲೆ, ಆದರೆ ಅದೂ ಚಳಿಗಾಲದಲ್ಲಿ ಮಡದಿಯ ತೊರೆದು ಜೀವಿಸುವುದೆಂದರೆ ಕಡು ಕಷ್ಟ. ಈ ಷರತ್ತಿಗಾಗಿಯೇ ಆ ಅಯ್ಯಪ್ಪನಿಗೆ ಹಿಡಿಶಾಪ ಹಾಕಬೇಕೆನ್ನುವ ಸಿಟ್ಟು ನನಗೆ. ಎಷ್ಟೇ ಆದರು ಆ ಪಾಪಿ ಕೂಡ ಸ್ತ್ರೀ ದ್ವೇಷಿಯೇ ಅಲ್ಲವೆ? ಅದಕ್ಕೆ ಕಾರಣವೂ ಇಲ್ಲದಿಲ್ಲ. ಅವನಂತೂ ಮೊದಲೇ 'ಅಕ್ರಮ ಸಂತಾನ'. ನಮ್ಮ ನಿಮ್ಮೆಲ್ಲರ ಹುಟ್ಟಿನ ಕ್ರಮದಂತೆ ಅಪ್ಪ-ಅಮ್ಮಂದಿರ ಸಂಯೋಗದಿಂದ ಹುಟ್ಟಿದ್ದರೆ ತಾನೆ? ಸ್ತ್ರೀ ಸಹವಾಸ ಎಂಥ ಸುಖಕರವಾದುದೆಂದು ಗೊತ್ತಾಗುವುದು. ಸ್ವಾಮಿಯೇ ಶರಣು, ಬೇಡ ನಿನ್ನ ಸಹವಾಸ ಎಂದು ಮನಸ್ಸಿನೊಳಗೇ ಗಟ್ಟಿ ಮಾಡಿಕೊಳ್ಳುತ್ತೇನೆ. ■

'ಕೊಹಿನೂರ್' ಮರಳಿ ಬರುವುದೇ?

ಕೊಹಿನೂರ್ ವಿಶ್ವದಲ್ಲಿಯೇ ಅತಿದೊಡ್ಡ ಹಾಗೂ ಬೆಲೆಬಾಳುವ ವಜ್ರ. ಭಾರತದಿಂದ ಕದ್ದೊಯ್ಯಲಾದ ಈ ವಜ್ರ ಈಗ ಲಂಡನ್ನಿನಲ್ಲಿದೆ. ಬಹಳ ಹಿಂದೆಯೇ ಅದನ್ನು ಇಂಗ್ಲೆಂಡಿನ ರಾಣಿಯ ಕಿರೀಟದೊಳಗೆ ಬೆಸೆಯಲಾಯಿತು.

ಈಗ ಆ ಕಿರೀಟವನ್ನು ಪ್ರವಾಸಿಗರು ದೂರದಿಂದ ನೋಡಬಹುದು. ಲಂಡನ್ ಟವರ್‌ನಲ್ಲಿ ಪ್ರದರ್ಶನಕ್ಕೆ ಇಡಲಾಗಿರುವ ಕಿರೀಟ ವೀಕ್ಷಣೆಗೆ ನಿಂತ ಪ್ರವಾಸಿಗರನ್ನು ಕನ್ವೇಯರ್ ಬೆಲ್ಟ್ ಒಂದರ ಮೇಲೆ ಸಾಗಿಸಲಾಗುತ್ತದೆ. ತಿರುಪತಿಯಲ್ಲಿ ಹಿಂದಿನವರಿಂದ ತಳ್ಳಿಸಿಕೊಂಡು, ದೇವಸ್ಥಾನದ ಸಿಬ್ಬಂದಿಯಿಂದ ಎಳೆಸಿಕೊಂಡು ತಿಮ್ಮಪ್ಪನ ದರ್ಶನ ಮಾಡಿದ ಹಾಗೇ ಇದು. ಇಂಥ ವಜ್ರ ಭಾರತಕ್ಕೆ ಮರಳಿ ತರಬೇಕೆಂಬ ವಿಚಾರ ಹಲವು ಕಾಲದಿಂದಲೂ ಇದೆ. ಆದರೆ ಅದು ಅಷ್ಟು ಸುಲಭವೂ ಅಲ್ಲ, ಸಾಧ್ಯವೂ ಅಲ್ಲ. ಈ ಮಧ್ಯೆ ಕೆನಡಾದಲ್ಲಿರುವ ಸಿಖ್ ಪಂಥೀಯರೊಬ್ಬರು ಕೊಹಿನೂರ್ ವಜ್ರ ತಮಗೆ ಸೇರಬೇಕೆಂದು ವಾದ ಮಂಡಿಸುತ್ತಿದ್ದಾರೆ. ಸಂಧನ್ ವಾಲಿಯಾ ಎಂಬುದು ಅವರ ಹೆಸರು. ತಾವು ಮಹಾರಾಜಾ ರಣಜಿತ್‌ಸಿಂಗ್ ವಂಶಸ್ಥರೆಂದು ಹೇಳಿಕೊಳ್ಳುವ ಅವರಿಗೆ, ವಜ್ರ ಪಡೆಯುವ ಅದಮ್ಯ ಭರವಸೆ ಇದೆ. ಅದಕ್ಕೆ ಬೇಕಾದ ದಾಖಲೆಗಳೆಲ್ಲ ಸ್ವಿಸ್ ಬ್ಯಾಂಕಿನ ಭದ್ರ ಖಜಾನೆಯೊಂದರಲ್ಲಿ ಇವೆ. ಅವನ್ನು ಈ ವರ್ಷದ ಆಗಸ್ಟ್‌ನಲ್ಲಿಯೇ ತೆರೆದು, ಬಹಿರಂಗಪಡಿಸಬೇಕಿತ್ತು. ಕಾರಣಾಂತರಗಳಿಂದ ಅದು ಮುಂದೆ ಹೋಗಿದೆ. ಆ ದಾಖಲೆಗಳು ಬಹಿರಂಗವಾದರೆ, ತಾವೇ ಕೊಹಿನೂರ್ ವಜ್ರದ ವಾರಸುದಾರರೆಂದು ಸಾಬೀತಾಗುತ್ತದೆ ಎಂದು ಸಂಧನ್ ವಾಲಿಯಾ ಹೇಳುತ್ತಾರೆ. ಇಷ್ಟಾಗಿ, ವಜ್ರ ಪಡೆದುಕೊಂಡು ಅದರಿಂದ ಲಾಭ ಪಡೆಯಬೇಕೆಂದಾಗಲಿ, ಶ್ರೀಮಂತಿಕೆ ಗಳಿಸಬೇಕೆಂದಾಗಲಿ ಅವರು ಆಶಿಸುತ್ತಿಲ್ಲ. ವಜ್ರ ತಮ್ಮದಾದ ಮೇಲೆ ಅದನ್ನು ಅಮೃತ್‌ಸರದ ಸುವರ್ಣ ದೇವಾಲಯಕ್ಕೆ ಒಪ್ಪಿಸುವ ಇರಾದೆ ಅವರದು.

ಆ ಕಾರಣಕ್ಕೋ ಸಿಖ್ ಪರಂಪರೆಯ ಸ್ವತ್ತು ರಕ್ಷಣೆಗಾಗಿ ಇರುವ ಮಂಡಳಿಯೂ ಕಾತರದಿಂದ ಸ್ವಿಸ್ ಖಜಾನೆ ದಾಖಲೆಗಳನ್ನು ಎದುರು ನೋಡುತ್ತಿದೆ. ಸಿಖ್‌ಪಂಥದ ಧರ್ಮಗುರು ಗುರುಗೋವಿಂದ ಸಿಂಹ ಬಳಸುತ್ತಿದ್ದ ಖಡ್ಗ, ಕಡಗಗಳೂ ಈಗ ಲಂಡನ್‌ನಲ್ಲಿ ಇವೆ. ಅವೆಲ್ಲವನ್ನೂ ಮರಳಿ ಪಡೆದು ತಮ್ಮ ಸ್ವರ್ಣಮಂದಿರಕ್ಕೆ ಒಪ್ಪಿಸಬೇಕೆಂಬ ವಿಚಾರವೂ ಈ ಮಂಡಳಿಗಿದೆ. ಅದಕ್ಕಾಗಿ ಪ್ರಯತ್ನಗಳು ನಡೆಯುತ್ತಲೇ ಇವೆ.

ಇತಿಹಾಸ ಗಮನಿಸಿದರೆ ಕೆಲವು ಸಂಗತಿ ತಿಳಿಯುತ್ತವೆ. ಬ್ರಿಟಿಷ್ ಆಳ್ವಿಕೆಯ ಕಾಲಕ್ಕೆ ಇಲ್ಲಿಂದ ಬಹುಪಾಲು ಸಂಪತ್ತನ್ನು ಅಧಿಕಾರಿಗಳು ತಮ್ಮ ದೇಶಕ್ಕೆ ಸಾಗಿಸಿದರು. ಲಂಡನ್‌ನ ವಿವಿಧ ಮ್ಯೂಸಿಯಂಗಳಲ್ಲಿ ಕೆಲವು ಪ್ರದರ್ಶನಕ್ಕಿವೆ. ಇನ್ನು ಕೆಲವು ಗೋದಾಮಿನಲ್ಲಿ ಧೂಳು ಹಿಡಿಯುತ್ತಾ ಬಿದ್ದಿವೆ.



ಮಹಾರಾಜಾ ರಣಜಿತ್ ಸಿಂಹರ ಪುತ್ರ ದಿಲೀಪ್‌ಸಿಂಗ್ ಎಂಟು ವರ್ಷದವರಿದ್ದಾಗ, ಅವರನ್ನು ಬ್ರಿಟಿಷರು ಅಪಹರಿಸಿ ಇಂಗ್ಲೆಂಡಿಗೆ ಕರೆದೊಯ್ದರು. ಜೊತೆಗೆ ಅರಮನೆಯ ಬೆಲೆಬಾಳುವ ಸಂಪತ್ತು ದೋಚಿಕೊಂಡು ಹೋದರು. ಅದರಲ್ಲಿ ಕೊಹಿನೂರ್ ವಜ್ರವೂ ಒಂದು. ಅದನ್ನು ದಿಲೀಪ್‌ಸಿಂಗ್‌ರೇ ವಿಕ್ಟೋರಿಯಾ ರಾಣಿಗೆ ಕೊಡುಗೆಯಾಗಿ ನೀಡಿದರು ಎಂದು ಬ್ರಿಟನ್ನಿನ ಇತಿಹಾಸಕಾರರು ಹೇಳುತ್ತಾರೆ.

ದಿಲೀಪ್‌ಸಿಂಗ್ ಅವರ ಪುತ್ರಿ ಕ್ಯಾಥರೀನ್ ತನ್ನ ತಂದೆಗಾದ ಅನ್ಯಾಯ, ಸಿಖ್ ಪರಂಪರೆಗೆ ಸಂಬಂಧಿಸಿದ ಹಲವಾರು ಸ್ವತ್ತುಗಳ ಬಗ್ಗೆ ದಾಖಲೆಗಳನ್ನು ಮಾಡಿ ಸ್ವಿಸ್ ಬ್ಯಾಂಕಿನ ತಿಜೋರಿಯಲ್ಲಿ ಇರಿಸಿದ್ದರು. ಮದುವೆಯಾಗದೇ ಉಳಿದಿದ್ದ ಆಕೆ 1942ರಲ್ಲಿ ನಿಧನರಾದರು.

ಆಕೆಯ ನಿಧನಾನಂತರ ತಿಜೋರಿಯಲ್ಲಿ ಇರಿಸಿದ್ದ ಪೆಟ್ಟಿಗೆ ತೆಗೆದು ಬ್ಯಾಂಕಿನ ಅಧಿಕಾರಿಗಳು ಪಟ್ಟಿ ಒಂದು ತಯಾರಿಸಿದರು. ಆಗಿನ ಅಧಿಕಾರಿಗಳಿಗಾದರೂ ದಾಖಲೆಗಳಲ್ಲಿ ಏನಿತ್ತು ಎಂಬುದು ತಿಳಿದಿರಬೇಕು. ಬೇರೆಯವರಿಗೆ ಏನೂ ತಿಳಿಯದು. ಈ ಹಂತದಲ್ಲಿ ದಾಖಲೆಗಳು ಬಹಿರಂಗವಾಗುವುದನ್ನು ಸಂಧನ್‌ವಾಲಿಯಾ ಸೇರಿದಂತೆ ಹಲವಾರು ಎದುರು ನೋಡುತ್ತಿದ್ದಾರೆ.

ಸಿಖ್ ಪರಂಪರೆಗೆ ಸಂಬಂಧಿಸಿದ ಅಮೂಲ್ಯ ವಸ್ತುಗಳನ್ನು ಮರಳಿ ಪಡೆಯಲು 'ದಿಲೀಪ್‌ಸಿಂಗ್ ಸ್ಮಾರಕ ಟ್ರಸ್ಟ್' ಒಂದು ಲಂಡನ್‌ನಲ್ಲಿ ಅಸ್ತಿತ್ವಕ್ಕೆ ಬಂದಿದೆ. ಇದರ ಜೊತೆಗೇ ಭಾರತೀಯ ಪ್ರಾಚೀನ ಕಲೆ ಮತ್ತು ಪರಂಪರೆಯ ಲಂಡನ್‌ನ ವಿವಿಧ ಮ್ಯೂಸಿಯಂನಲ್ಲಿರುವ ವಸ್ತುಗಳನ್ನು ಹಿಂದೆ ಪಡೆಯಲು ಭಾರತೀಯ ಪರಂಪರಾ ವಸ್ತು ಸಂರಕ್ಷಣಾ ಮಂಡಳಿ ಕೂಡ ಶ್ರಮಿಸುತ್ತಿದೆ. ಇದುವರೆಗೆ ನಾನಾ ರೀತಿಯ ಕಾನೂನು ಸಮರ ನಡೆಸಿದ ಈ ಮಂಡಳಿ ಎರಡನೇ ಶತಮಾನದ ಹಿತ್ತಾಳೆಯ ನಟರಾಜ ವಿಗ್ರಹವನ್ನು ಪಡೆದದ್ದೇ ಬಹು ದೊಡ್ಡ ವಿಜಯ.

ಅಂಥದರಲ್ಲಿ ಕೊಹಿನೂರ್ ವಜ್ರವನ್ನು ಅಷ್ಟು ಸುಲಭವಾಗಿ ಇಂಗ್ಲೆಂಡು ಭಾರತಕ್ಕೆ ವಾಪಸು ಕೊಡುತ್ತದೆಯೇ? ಇದೆಲ್ಲದಕ್ಕೆ ಕಲಶವಿಟ್ಟಂತೆ ಇನ್ನೊಂದು ಗಾಳಿಸುದ್ದಿಯೂ ಪ್ರಚಲಿತವಿದೆ. ಕೊಹಿನೂರ್ ವಜ್ರ ಪುರುಷರಿಗೆ ಆಗಿ ಬರುವುದಿಲ್ಲವಂತೆ, ಈವರೆಗೆ ಇಂಗ್ಲೆಂಡಿನ ವಿಕ್ಟೋರಿಯಾ ರಾಣಿ ಅನಂತರ ದ್ವಿತೀಯ ಎಲಿಜಬೆತ್ ರಾಣಿ ಮಾತ್ರ ಬಳಸುತ್ತಾ ಬಂದಿದ್ದಾರೆ. ಈಗಿರುವ ರಾಣಿಯ ನಂತರ ಅಧಿಕಾರಕ್ಕೆ ಬರುವ ಪುರುಷ ಅನಿವಾರ್ಯವಾಗಿ ಕೊಹಿನೂರ್ ಮಾಲೀಕ ಎನಿಸಿಕೊಳ್ಳಬೇಕಾಗುತ್ತದೆ. 'ಆತನಿಗೆ ಕೇಡಾಗುವುದು ಬೇಡ, ನಮಗೆ ಕೊಡಿ. ನಾವು ಅದನ್ನು ಸ್ವರ್ಣದೇಗುಲಕ್ಕೆ ವಹಿಸುತ್ತೇವೆ' ಎಂಬುದು ಸಂಧನ್‌ವಾಲಿಯಾ ಹಾಗೂ ದಿಲೀಪ್ ಸಿಂಗ್ ಸ್ಮಾರಕ ಟ್ರಸ್ಟಿನ ವಾದ.

ಆದರೂ ಕೊಹಿನೂರ್ ಭಾರತ ಸೇರುವ ಸುಳಿವಂತೂ ಸದ್ಯಕ್ಕೆ ಕಾಣುತ್ತಿಲ್ಲ. ■

ತಾಯಿ ಒಬ್ಬರ ಮನವಿ

ನನ್ನ ಮಗನಂಥ ಎಷ್ಟೋ ಎಳೆಯರನ್ನು ನಿತ್ಯ ನಾನು ಕಾರು, ಬೈಕುಗಳಲ್ಲಿ ಓಡಾಡುವುದು ಕಾಣುತ್ತೇನೆ. ಅಪಘಾತಗಳಲ್ಲಿ ಎಳೆಯರು ತೀರಿಕೊಂಡಾಗೆಲ್ಲ, ನನ್ನ ಇದ್ದ ಒಬ್ಬನೇ ಮಗನನ್ನು ಕಳೆದುಕೊಂಡಿದ್ದು ನೆನಪಾಗುತ್ತದೆ.

ನನ್ನ ಮಗ ಪೂವಯ್ಯ ತುಂಬಾ ಸುಂದರ. ಅಷ್ಟೇ ತುಂಟ. ಹೈಸ್ಕೂಲು ಓದುವಾಗಲೇ ಅವನು ನಮ್ಮ ಕಣ್ಣು ತಪ್ಪಿಸಿ ಜೀಪ್ ಓಡಿಸುತ್ತಿದ್ದ. ಅದು ತಿಳಿದ ಮೇಲೆ, ನಾನು ಹೌಹಾರಿದ್ದೆ. 'ನೋಡು ಮಗು, ಹಾಗೆಲ್ಲ ಹುಚ್ಚಾಟ ಮಾಡಬಾರದು. ನೀನು ದೊಡ್ಡವನಾದ ಮೇಲೆ ಕಾರ್, ಜೀಪ್ ಓಡಿಸುವುದು ಇದ್ದೇ ಇದೆ. ಆತುರ ಪಡಬಾರದು' ಎಂದು ಬುದ್ಧಿ ಹೇಳಿದ ಮೇಲೆ ಅವನು ಸುಮ್ಮನಾದ. ಮುಂದೆ ಎಂದೂ ಅವನು ನಮ್ಮ ಜೀಪ್ ಓಡಿಸಿದ ಬಗ್ಗೆ ದೂರು ಬರಲಿಲ್ಲ.

ಕಾಲೇಜು ಸೇರುತ್ತಿದ್ದ ಹಾಗೆ, ಪುಟ್ಟ ಮಗುವಿನಂತಿದ್ದ ಅವನು ನನ್ನ ಮತ್ತು ಅವನ ತಂದೆಯನ್ನೂ ಮೀರಿಸಿ ಎತ್ತರಕ್ಕೆ ಬೆಳೆಯತೊಡಗಿದ್ದ, ಚೆನ್ನಾಗಿ ಓದುತ್ತಿದ್ದ ಅವನಿಗೆ ಇಂಜಿನಿಯರಿಂಗ್ ಓದುವ ಬಯಕೆ. ಅದಕ್ಕಾಗಿ ಇನ್ನಿಲ್ಲದ ಪ್ರಯತ್ನವನ್ನು ಮಾಡತೊಡಗಿದ್ದ. ಗಣಿತದಲ್ಲಿ ಸ್ವಲ್ಪ ವೀಕ್ ಇದ್ದುದರಿಂದ ಅದಕ್ಕಾಗಿ ಟ್ಯೂಷನ್‌ಗೆ ಹೋಗತೊಡಗಿದ. ಹಾಗೆಂದು ಅವನೆಂದೂ ಪುಸ್ತಕದ ಹುಳುವಾಗಿರಲಿಲ್ಲ. ಬೆಳಗ್ಗೆಯೇ ಎದ್ದು ತೋಟಸುತ್ತಿ, ಆಗಬೇಕಾದ ಕೆಲಸಗಳಲ್ಲಿ ತಂದೆಗೆ ನೆರವಾಗುತ್ತಿದ್ದ. ಕಾಲೇಜಿಂದ ಬೇಗ ಬಂದರೆ, ಕೂಲಿಯಾಳುಗಳ ಉಸ್ತುವಾರಿ ನೋಡುವುದು, ಯಾಲಕ್ಕಿ ಒಣಗಿಸುವುದು ಮುಂತಾದ ಕೆಲಸ ಮಾಡುತ್ತಿದ್ದ. ಇದರ ನಡುವೆ ಕಾಲೇಜು ಹಾಕಿ ತಂಡದಲ್ಲಿಯೂ ಅವನು ಆಡುತ್ತಿದ್ದ. ಅವನಿಗೆ ತುಂಬಾ ಗೆಳೆಯರು, ಗೆಳತಿಯರು. ಎಷ್ಟೋ ವೇಳೆ ಫೋನ್‌ನಲ್ಲಿ ಅವನ ಗೆಳೆಯ, ಗೆಳತಿಯರ ಕರೆಗೆ ಉತ್ತರಿಸುತ್ತಾ ಇರುವಾಗ ಓದುವುದು ಬಿಟ್ಟು ಕಾಲಹರಣ ಮಾಡುತ್ತಿದ್ದಾನೆ ಎನಿಸಿದಾಗೆಲ್ಲ 'ಹುಡುಗ ಅಲ್ಲವೆ!' ಎಂದು ನಾನೇ ಸುಮ್ಮನಾಗುತ್ತಿದ್ದೆ. ಅಲ್ಲದೇ ಫೋನಿನಲ್ಲಿ ಒಂದೆರಡು ಮಾತಾಡಿ 'ನಾಳೆ ಸಿಗೋಣ' ಅಂತಲೋ ಕಾಲೇಜಲ್ಲಿ ಸಿಗುತ್ತೇನಲ್ಲ' ಎಂದೋ ಮಾತು ಮುಗಿಸುತ್ತಿದ್ದುದು ನಾನೇ ಕೇಳಿಸಿಕೊಂಡಿದ್ದೆ.

ಪಿಯುಸಿ ಮುಗಿದು ಇಂಜಿನಿಯರಿಂಗ್ ಸೀಟು ಕೂಡ ದೊರೆತು ಉತ್ಸಾಹದಿಂದ ಹಕ್ಕಿಯಾಗಿದ್ದ ಅವನು. ಅವನನ್ನು ಕಾಣುವುದೇ ಒಂದು ಸಂತಸದ ಸಂಗತಿ. ಇದರ ನಡುವೆ, ನಮಗೇ ತಿಳಿಯದ ಹಾಗೆ ಒಂದು ಡ್ರೈವಿಂಗ್ ಲೈಸೆನ್ಸ್ ಕೂಡ ಮಾಡಿಸಿದ್ದ. ಸೂರತ್ಕಲ್‌ನ ಇಂಜಿನಿಯರಿಂಗ್ ಕಾಲೇಜಿಗೆ ಹೋಗುವ ಮುನ್ನ ಅದನ್ನು ತೋರಿಸಿ ''ಇನ್ನಾದರೂ ನಾನು ಜೀಪ್ ಡ್ರೈವ್ ಮಾಡಬಹುದಲ್ಲವೆ!'' ಎಂದಿದ್ದ. ''ಜೀಪ್ ಏಕೋ! ನಿನಗೇ ಒಂದು ಕಾರ್ ಕೊಡಿಸೋಣ'' ಅಂದಿದ್ದರು ಅವನ ತಂದೆ.

ಅವರು ಎಂದೂ ಹಾಗೆ ಸುಮ್ಮನೆ ಕುಶಾಲಿಗೆ ಹೇಳುವವರಲ್ಲ. ಅವರು ಹೇಳಿದ ಹಾಗೇ, ಪೂವಯ್ಯ ಮೊದಲ ಸೆಮಿಸ್ಟರ್ ಪರೀಕ್ಷೆ ಮುಗಿಸಿ ರಜೆಗೆ ಬರುವಾಗ, ಅವನಿಗೆಂದೇ ಒಂದು ಮಾರುತಿ ಕಾರನ್ನು ಖರೀದಿಸಿ ತಂದು ನಿಲ್ಲಿಸಿದ್ದರು. ಅದನ್ನು ಕಂಡಿದ್ದೇ ಅವನ ಸಂತಸಕ್ಕೆ ಪಾರವುಂಟೇ! ತಂದೆಯನ್ನೇ ಎತ್ತಿಕೊಂಡು ಕುಣಿದಾಡಿಬಿಟ್ಟ.

ಅವತ್ತು ನಮ್ಮಿಬ್ಬರನ್ನೂ ಕಾರಲ್ಲಿ ಕೂರಿಸಿಕೊಂಡು ತಾನೇ ಡ್ರೈವ್ ಮಾಡಿಕೊಂಡು ಮಡಿಕೇರಿಗೆ ಕರೆದುತಂದಿದ್ದ. ಅವತ್ತು ಈಸ್ಟ್‌ಎಂಡ್ ಹೋಟೆಲಲ್ಲಿ ಊಟ ಮಾಡಿ ಹಿಂದಿರುಗುವಾಗ ತಡವಾಗಿತ್ತು. ಪೂವಯ್ಯ ಆ ತಿರುವುಗಳಲ್ಲಿ ಕಾರನ್ನು ಜೋರಾಗಿ ಓಡಿಸಿಕೊಂಡು ಬರುವಾಗ ನನ್ನ ಎದೆ ಹಾರುತ್ತಿತ್ತು. ''ಮಗಾ, ಸ್ವಲ್ಪ ಮೆಲ್ಲೇ....'' ಎಂಧು ಒಂದೆರಡು ಸಲ ಹೇಳಿದಾಗಲೂ ನಕ್ಕು ಹಾರಿಸಿ ಬಿಟ್ಟ.

ಮರುದಿನ ಬೆಳಗಾಗುತ್ತಲೇ, ತನ್ನ ಫ್ರೆಂಡ್ಸ್‌ಗೆಲ್ಲ ಒಮ್ಮೆ ಕಾರು ತೋರಿಸಿಬರುವ ಸಂಭ್ರಮ. ಬೆಳಗಿನ ನಾಷ್ಟಾ ಕೂಡ ಆತುರಾತುರ ಮುಗಿಸಿ ಹೊರಟುಬಿಟ್ಟ. ''ಹುಷಾರು ಮಗಾ... ಕಾರು ಜೋರಾಗಿ ಓಡಿಸಬಾರದು ಆಯ್ತಾ!'' ಎಂದದ್ದು ಕೂಡ ಕಿವಿಗೆ ಬೀಳದವನಂತೆ ಭರ್ರನೆ ತಿರುಗಿಸಿಕೊಂಡು ಹೋಗಿಯೇಬಿಟ್ಟ.

ಮತ್ತೆ ಅವನನ್ನು ನಾನು ನೋಡಿದ್ದು ಮಡಿಕೇರಿಯ ಆಸ್ಪತ್ರೆಯಲ್ಲೇ. ಮಂಗಳೂರು ರಸ್ತೆಯ ತಿರುವೊಂದರಲ್ಲಿ ಕಾರು ಪಲ್ಟಿ ಹೊಡೆದಿತ್ತೆಂದೂ, ಆಗ ಅವನು ತೀರಾ ಸ್ಪೀಡಾಗಿ ಕಾರು ಓಡಿಸುತ್ತಿದ್ದಿರಬೇಕು ಎಂದೂ ಅಲ್ಲಿದ್ದ ಪೊಲೀಸರು ಹೇಳಿದರು.

ನಾವು ವಾರ್ಡಿನೊಳಗೆ ಹೋಗುತ್ತಾ ಇದ್ದರೆ, ಪೂವಯ್ಯ ನಗುನಗುತ್ತಾ ಓಡೋಡಿ ಬಂದು ''ಸಾರೀ.... ಇನ್ನು ಯಾವತ್ತೂ ನಾನು ಸ್ಪೀಡಾಗಿ ಕಾರ್ ಓಡಿಸೋದಿಲ್ಲ'' ಅಂದು ಬಿಡ್ತಾನೆ ಅನ್ನಿಸುವಾಗ, ನಾವು ನೋಡಿದ್ದೇನು? ತಲೆಗೆಲ್ಲ ಕಟ್ಟಿದ ಬ್ಯಾಂಡೇಜು. ಹತ್ತಿರ ನಿಂತ ಡಾಕ್ಟರ ಮುಖ ನೋಡುತ್ತಲೇ ಇದು ತೀರಾ ಗಂಭೀರ ಪರಿಸ್ಥಿತಿ ಎನಿಸಿಬಿಟ್ಟಿತು.

ಮೆದುಳಿಗೆ ಪೆಟ್ಟು ಬಿದ್ದಿತ್ತು. ಸಪೋರ್ಟ್ ಸಿಸ್ಟಂನಿಂದಾಗಿ ಹೇಗೋ ಉಸಿರಾಡುತ್ತಿದ್ದ. ಚೆಲುವಾದ, ಸುಂದರ ಮಗನ ನಿರ್ಜೀವ ಕಣ್ಣುಗಳು ಆಸ್ಪತ್ರೆಯ ಸೂರು ನೋಡುತ್ತಿದ್ದವು. ಆಸ್ಪತ್ರೆಯ ಕಾಂಪೌಂಡಿನಲ್ಲಿ ಅವನ ಕಾಲೇಜಿನ ಗೆಳೆಯ ಗೆಳತಿಯರ ಹಿಂಡು ಆಗಲೇ ತುಂಬಿಕೊಂಡಿತ್ತು. ಯಾರ ಮುಖದಲ್ಲಿಯೂ ರಕ್ತದ ಪಸೆ ಇಲ್ಲ.

ಮರುದಿನ ಬೆಳಗಿನ ಹೊತ್ತಿಗೆ ನನ್ನ ಮುದ್ದು ಮಗನ ಉಸಿರಾಟ ನಿಂತುಬಿಟ್ಟಿತು.

ನನ್ನ ಮಗ ಅಪಘಾತಕ್ಕೀಡಾದ ತಿರುವಿನಲ್ಲೀಗ 'ನಿಧಾನವಾಗಿ ಚಲಿಸಿ' ಎಂಬ ಬೋರ್ಡು ನೆಟ್ಟಿದ್ದಾರೆ.

ನನ್ನ ಮಗನಂಥ ಎಷ್ಟೋ ಎಳೆಯರನ್ನು ನಿತ್ಯ ನಾನು ಕಾರು, ಬೈಕುಗಳಲ್ಲಿ ಓಡಾಡುವುದು ಕಾಣುತ್ತೇನೆ. ಅಪಘಾತಗಳಲ್ಲಿ ಎಳೆಯರು ತೀರಿಕೊಂಡಾಗೆಲ್ಲ, ನನ್ನ ಇದ್ದ ಒಬ್ಬನೇ ಮಗನನ್ನು ಕಳೆದುಕೊಂಡಿದ್ದು ನೆನಪಾಗುತ್ತದೆ. ವಾಹನಗಳನ್ನು ಓಡಿಸುವವರು ಮಾತ್ರ ತಾವೆಂದೂ ಇಂಥ ದುರ್ಘಟನೆಗೆ ತುತ್ತಾಗುವುದೇ ಇಲ್ಲ ಎಂದು ವಿಶ್ವಾಸದಿಂದಲೇ ಇರುತ್ತಾರೆ. ಬಹಳಷ್ಟು ಅಪಘಾತಗಳಿಗೆ ಕುಡಿತ, ವೇಗದ ಚಾಲನೆ ಕಾರಣ ಎಂದು ಕೈತೊಳೆದುಕೊಳ್ಳುವುದೇ ಜಾಸ್ತಿ. ಹಾಗೆ ನೋಡಿದರೆ, ನಮ್ಮ ಮಗ ಅವತ್ತು ಕುಡಿದಿರಲೇ ಇಲ್ಲ. ಅವನು ಯಾವತ್ತೂ ಕುಡಿದವನೂ ಅಲ್ಲ. ಬಹಳಷ್ಟು ಅಪಘಾತಗಳಿಗೆ ಅನನುಭವ ಮತ್ತು ಅತಿಯಾದ ಆತ್ಮವಿಶ್ವಾಸಗಳೇ ಕಾರಣ ಎಂದು ನನಗೀಗ ಅನ್ನಿಸುತ್ತದೆ.

ನನ್ನ ಮಗನಂಥ ಎಳೆಯರಿಗೆ ನಾನು ಹೇಳುವುದಿಷ್ಟೇ, ಡ್ರೈವಿಂಗ್ ಲೈಸೆನ್ಸ್ ಒಂದೇ ಎಲ್ಲ ಅಲ್ಲ. ವಾಹನದ ನಿಯಂತ್ರಣ ತಪ್ಪಿದಾಗ ಏನು ಮಾಡಬೇಕು, ಅನಿರೀಕ್ಷಿತ ಸನ್ನಿವೇಶಗಳಲ್ಲಿ ಹ್ಯಾಗೆ ಕ್ಷಣಾರ್ಧದಲ್ಲಿ ಪ್ರತಿಕ್ರಿಯಿಸಬೇಕು ಎಂಬುದನ್ನು ಯಾವ ಡ್ರೈವಿಂಗ್ ಲೈಸೆನ್ಸೂ ಕಲಿಸಿಕೊಡುವುದಿಲ್ಲ.


ಹೀಗಾಗಿಯೇ ನನ್ನ ಮಗನಂಥ ಎಳೆಯರು ತಪ್ಪು ತೀರ್ಮಾನಗಳಿಗೆ ಬಲಿಯಾಗುತ್ತಾರೆ. ಇಲ್ಲಿ ಇನ್ನೊಂದು ಅವಕಾಶ ಎಂಬುದು ಇರುವುದೇ ಇಲ್ಲ. ಅದೇ ದುರಂತ.

ಪೂವಯ್ಯ ಇಲ್ಲದ ಮನೆ ಬಿಕೋ ಎನ್ನುತ್ತಿದೆ. ಒಮ್ಮೆ ಅವನ ಆನಂದದ ನಗು, ಉತ್ಸಾಹಗಳಿಂದ ತುಂಬಿಕೊಂಡಿರುತ್ತಿದ್ದ ಮನೆಯಲ್ಲೀಗ ಎಂಥ ಜೀವ ಹಿಂಡುವ ಮೌನ.

ಎಲ್ಲಿಗಾದರೂ ಹೋಗಿ ಮನೆಗೆ ಬಂದನೆಂದರೆ ''ಅಮ್ಮ, ನಾನು ಬಂದೆ'' ಎನ್ನುತ್ತಿದ್ದ. ಅವನು ಇನ್ನೊಮ್ಮೆ, ಒಂದೇ ಒಂದು ಸಲವಾದರೂ ಹಾಗೆ ಬಂದು ಹೇಳಲಿ ಎಂದುಕೊಳ್ಳುತ್ತೇನೆ. ಆದರೆ....

■ ಮಾಯಾ

[ವೈಯಕ್ತಿಕ ಕಾರಣಗಳಿಂದ ಇಲ್ಲಿ ಸಂಬಂಧಿಸಿದ ಎಲ್ಲರ ಹೆಸರುಗಳನ್ನು ಬದಲಿಸಲಾಗಿದೆ]



ಎಸ್.ಶ್ಯಾಮ್‌ಸುಂದರ್ ಅವರ ಕೃತಿ

ಕರ್ನಾಟಕದ ಆಧುನಿಕ ಶಿಲ್ಪಕಲೆ ನಡೆದು ಬಂದ ಹಾದಿ

ವಿಭಿನ್ನ ಸಂಸ್ಕೃತಿಗಳ ನಡುವೆಯೂ ನಮ್ಮವರ ಆಧುನಿಕ ಶಿಲ್ಪಗಳು ಪಶ್ಚಿಮದ ಪ್ರಭಾವಗಳನ್ನು ಕರಗತಮಾಡಿಕೊಂಡು ತಾಂತ್ರಿಕ ಆವಿಷ್ಕಾರಗಳನ್ನು ಅಳವಡಿಸಿಕೊಂಡು ಇಂದು ಅಂತಾರಾಷ್ಟ್ರೀಯ ಮಟ್ಟದಲ್ಲೂ ದಿಟ್ಟವಾಗಿ ನಿಲ್ಲಬಲ್ಲ ಸಾಮರ್ಥ್ಯವನ್ನು ಹೊಂದಿದೆ.

ಕರ್ನಾಟಕದ ಶಿಲ್ಪಕಲೆ ಅತಿ ಸುಂದರ ಹಾಗೂ ಜಗತ್‌ಪ್ರಸಿದ್ಧಿಯಾದ ಕಲೆ ಎನಿಸಿಕೊಂಡಿದೆ. ಇದರ ಹುಟ್ಟು ಹಾಗೂ ಬೆಳವಣಿಗೆ ಬಗ್ಗೆ ಆಳವಾದ ಚಿಂತನೆ ಪ್ರಮುಖವಾಗಿದೆ. ಶಿಲ್ಪಕಲೆಯು ತನ್ನದೇ ಆದ ಸುಂದರ ಶಿಲ್ಪಗಳನ್ನು ಹೊಂದಿದೆ. ವಿಜಯನಗರದ ಶಿಲ್ಪಕಲೆ, ಚಾಲುಕ್ಯ, ಬಾದಾಮಿ ಹಾಗೂ ಹೊಯ್ಸಳ ಕಾಲದ ಶಿಲ್ಪಕಲೆಗಳು ಅದ್ಭುತವಾದ ಕೊಡುಗೆಯಾಗಿವೆ. ಅಂದಿನ ಶಿಲ್ಪಿಗಳು ಗ್ರಾನೈಟ್ ಶಿಲೆಯನ್ನು ಉಪಯೋಗಿಸಿದ ಹೆಗ್ಗಳಿಕೆ, ಸರಳ ಹಾಗೂ, ಸುಂದರತೆಗೆ ಒತ್ತು ಕೊಟ್ಟಿದ್ದಾರೆ. ಇಂದಿಗೂ ವಿಜಯನಗರದ ಚಿತ್ರಕಲೆಯ ಬೇರುಗಳಿಂದ ಜೀವತಳೆದ ಮೈಸೂರು, ಸುರಪುರದ ಚಿತ್ರಕಲೆಗಳಿಗೆ ಇಂದಿಗೂ ಬೇಡಿಕೆಯಿದೆ. ಮಧ್ಯಯುಗದಲ್ಲಿ ವಿನಾಶದ ಅಂಚಿನಲ್ಲಿಯೂ ಇನ್ನೂ ಹೀಗೆ ಉಳಿದುಕೊಂಡ ನಮ್ಮ ಶಿಲ್ಪಗಳು ಅದೇ ರೀತಿಯಲ್ಲಿ ಉಳಿದುಕೊಂಡಿರುವುದು ನಮ್ಮ ಸುದೈವ. ವಿಜಯನಗರ ಕಾಲದಲ್ಲಿ, ಮೊಗಲರು, ಬ್ರಿಟಿಷರ ಯುದ್ಧಗಳಿಂದ ಅಲ್ಲಿಯ ಶಿಲ್ಪಕಲೆಯನ್ನು ನಾಶಮಾಡಿದರು. ಇಂದಿಗೂ ಅವು ವಿಕಾರವಾಗಿ ಉಳಿದಿವೆ. ನಮ್ಮ ಸಂಪ್ರದಾಯ ಶಿಲ್ಪಿಗಳು ಅಷ್ಟೇನೂ ಪ್ರೋತ್ಸಾಹಕರ ವಾತಾವರಣದಲ್ಲಿರಲಿಲ್ಲ. ಬ್ರಿಟಿಷರ ಅಂತಿಮ ದಿನಗಳಲ್ಲಿ ಆದ ಶಿಲ್ಪಸೃಷ್ಟಿ ಮಾನವಾಕಾರಗಳ ಅಧ್ಯಯನ ಶೈಲಿ ಅವರು ಪ್ರಾರಂಭಿಸಿದ ಕಲಾಶಾಲೆಗಳಲ್ಲಿ ಕಲಿಸಲ್ಪಟ್ಟಿತಾದರೂ ನಮ್ಮವರಿಗೆ ಆಧುನಿಕ ಕಲ್ಪನೆಯ ಜ್ಞಾನೋದಯವಾಗಲು ಸಾಧ್ಯವಾಗಿದ್ದು.

ವಿಭಿನ್ನ ಸಂಸ್ಕೃತಿಗಳ ನಡುವೆಯೂ ನಮ್ಮವರ ಆಧುನಿಕ ಶಿಲ್ಪಗಳು ಪಶ್ಚಿಮದ ಪ್ರಭಾವಗಳನ್ನು ಕರಗತಮಾಡಿಕೊಂಡು ತಾಂತ್ರಿಕ ಆವಿಷ್ಕಾರಗಳನ್ನು ಅಳವಡಿಸಿಕೊಂಡು ಇಂದು ಅಂತಾರಾಷ್ಟ್ರೀಯ ಮಟ್ಟದಲ್ಲೂ ದಿಟ್ಟವಾಗಿ ನಿಲ್ಲಬಲ್ಲ ಸಾಮರ್ಥ್ಯವನ್ನು ಹೊಂದಿವೆ. ಇಂದಿನ ಶಿಲ್ಪಕಲೆಯಲ್ಲಿ ಆಧುನಿಕತೆಗೆ ಒತ್ತುಕೊಟ್ಟಿದ್ದಾರೆ. ಶಿಲ್ಪಿಯು ತಾನು ರಚಿಸಿದ ಶಿಲ್ಪಕಲೆಯು ಸಾಮಾನ್ಯ ಎಂಬಂತೆ ಕಂಡುಬಂದರೂ ಅದರ ನಿಗೂಢವಾದ ಅರ್ಥದೊಂದಿಗೆ ರಚಿಸುತ್ತಾನೆ. ನಮ್ಮ ಕರ್ನಾಟಕ ಹಾಗೂ ಭಾರತದಾದ್ಯಂತ ಜನಪ್ರಿಯಗೊಳ್ಳುತ್ತಿದೆ. ಇದು ಸಂತೋಷಕರ ವಿಷಯವಾಗಿದೆ. ಆಧುನಿಕ ಎಂಬ ಪದದ ಅರ್ಥ ಈಗಿನ ನವೀನ, ಹೊಸತು ಎನಿಸಿದರೂ ಈ ಪದವನ್ನು ಕಲೆಯಲ್ಲಿ ಕಲ್ಪಿಸಿಕೊಂಡ ಸಂಪ್ರದಾಯಗಳನ್ನು ಧಿಕ್ಕರಿಸಿದ ಒಂದು ಶೈಲಿಯನ್ನು ಗುರುತಿಸಲು ಹಾಗೂ ಹೊಸಕಾಲದ ಸಂದರ್ಭಗಳಿಗೆ ಸೂಕ್ತವಾದ ಆಕಾರ ಕೊಡುವುದು. ಇಂದು ಆಧುನಿಕ ಮತ್ತು ಸಾಂಪ್ರದಾಯಿಕ ಶಿಲ್ಪಕಲೆಗಳೆರಡೂ ಸಮಸಮಕ್ಕೆ ಸೃಷ್ಟಿಯಾಗಲು ಕಾರಣವಾಗುತ್ತಿರುವ ಶಿಲ್ಪಿಗಳು ಇದ್ದಾರೆ. ನಮ್ಮ ಶಿಲ್ಪಕಲೆಯ ಆಧುನಿಕತೆ ಈ ಶತಮಾನದ ಮೊದಲೆರಡು ದಶಕಗಳು ಕಾಣಿಸಿಕೊಂಡು ಆನಂತರ ಗಂಭೀರವಾಗಿ ಕಾಣಿಸಲಾರಂಭಿಸಿತು. ಪ್ರದೋಸ್‌ದಾಸ್‌ಗುಪ್ತ, ದೇವಿಪ್ರಸಾದ್ ಚೌಧರಿ, ಶಾಂಖೋಚೌಧರಿ ಮೊದಲಾದವರ ಶಿಲ್ಪಗಳು ಇತರರಿಗೂ ಸ್ಫೂರ್ತಿ ನೀಡಿದವು.

ನಮ್ಮ ರಾಜ್ಯದ ಆಧುನಿಕ ಶಿಲ್ಪಕಲೆಯು ಆರಂಭದಲ್ಲಿ ಕುತೂಹಲಕಾರಿಯಾಗಿರಲಿಲ್ಲ. ಈ ನಡುವೆ ನಮ್ಮಲ್ಲಿ ಸಾಂಪ್ರದಾಯಿಕವಾದ ಶಿಲ್ಪಗಳು ಸೃಷ್ಟಿಯಾಗುತ್ತಲೇ ಇವೆ. ಆದರೂ ಹಿಂದಿನ ನಮ್ಮ ಸಂಪ್ರದಾಯವನ್ನು ಅನುಸರಿಸಿದ ಕಲ್ಪನೆಯಾಗಿದೆ. ಪುರಾಣದ ಶಿಲ್ಪಗಳನ್ನು ಶಿಲ್ಪಿಸದೆ ಹೊಸ ಕಲ್ಪನೆಗಳನ್ನು ರೂಪಿಸುವ ಆಸೆ ಚಿಗುರೊಡೆಯಿತು. ನಂತರ ಹೊಸ ಹೊಸ ಆವಿಷ್ಕಾರ, ಸಂಯೋಜನೆಗಳು, ಚಿಂತನೆಗಳು ಆಧುನಿಕ ರೀತಿಯಲ್ಲಿ ಮುನ್ನಡೆದವು. ಬೆಂಗಳೂರು ಜಿಲ್ಲೆಯ ದೇವನಹಳ್ಳಿಯ ಸಂಪ್ರದಾಯ



'ಕುಳಿತಿರುವ ಮಹಿಳೆ' - ಎನ್.ಎಚ್.ಕುಲಕರ್ಣಿ



'ಪ್ರಯಾಣ' - ಎನ್. ಪುಷ್ಪಮಾಲ

ಶೈಲಿಯ ಶಿಲ್ಪಿ ಎಸ್.ಸಿ.ಎಚ್ ಆಚಾರ್ಯ ಪಶ್ಚಿಮ ಪ್ರಭಾವದ, ಪಿಕಾಸೋ ಸ್ಫೂರ್ತಿಯ ಕ್ಯೂಬಿಸ್ಟ್ ಶೈಲಿಯ ರವೀಂದ್ರನಾಥ ಠಾಕೋರ್ ಮತ್ತು ನೆಹರುರವರ ಶಿಲ್ಪಗಳನ್ನು ಪ್ಲಾಸ್ಟರ್ ಆಫ್ ಪ್ಯಾರೀಸ್‌ನಿಂದ ಸೃಷ್ಟಿಸಿದ್ದಾರೆ. ವೆಂಕಟಾಚಲಪತಿ ದೇವನಹಳ್ಳಿಯ ಸಾಂಪ್ರದಾಯಿಕ ಶಿಲ್ಪಿ. ಎಸ್.ಸಿ.ಎಚ್ ಆಚಾರ್ಯರಲ್ಲಿ ಕಲಿತವರು. ಅದರ ಹೊಸ ಅನ್ವೇಷಣೆಯನ್ನು ಕುತೂಹಲದಿಂದ ಕಂಡಿದ್ದರು. ಪ್ಲಾಸ್ಟರ್, ಶಿಲೆ, ಸಿಮೆಂಟ್, ಟೆರಾಕೋಟ ಕಂಚು, ಕಬ್ಬಿಣ ಫೈಬರ್‌ಗಾಜು ಮುಂತಾದ ಮಾಧ್ಯಮಗಳಲ್ಲಿ ಶಿಲ್ಪಗಳನ್ನು ಸೃಷ್ಟಿಸಿರುವ ಮತ್ತು ಹೊಸ ಮಾಧ್ಯಮಗಳಿಗೆ ಉತ್ತೇಜನ ನೀಡಿದ ವೆಂಕಟಾಚಲಪತಿಯವರು ಸಂಪ್ರದಾಯದ ಹಾದಿಯಿಂದ ಆಧುನಿಕ ಮಾದರಿಯಲ್ಲಿ ಅಳವಡಿಸಿಕೊಂಡರು. ಮೊದಲಬಾರಿಗೆ ನಮ್ಮ ಶಿಲ್ಪಿಗಳು ವೈಜ್ಞಾನಿಕತೆಯ ಫಲವಾಗಿ ಲಭ್ಯವಾಗಿರುವ ತಾಂತ್ರಿಕತೆಯನ್ನು ತಮ್ಮ ಶಿಲ್ಪಗಳ ಸೃಷ್ಟಿಗೆ ಅಳವಡಿಸಿಕೊಂಡರು. ನಮ್ಮ ಕಲಾವಿದರಾದ ಎಸ್.ಜಿ.ವಾಸುದೇವ್, ಜಿ.ಎಸ್.ಶೆಣೈ, ಭಾಸ್ಕರ್‌ರಾವ್, ಎ.ವಿ.ದೇಶಪಾಂಡೆ, ಆರ್.ರಾಜು, ಎನ್.ಎಚ್.ಕುಲಕರ್ಣಿ ಮತ್ತು ಓಂ ಪ್ರಕಾಶ್‌ರವರು ತಮ್ಮ ಕಲ್ಪನೆಗಳಿಗೆ ಹೊಸದೃಷ್ಟಿಕೋನಗಳನ್ನು ಅನ್ವೇಷಿಸಿಕೊಂಡರು. ನಮ್ಮ ಯುವ ಶಿಲ್ಪಿಗಳು ಬಹುತೇಕವಾಗಿ ಭಾರತೀಯ ಜಾನಪದ - ಪಶ್ಚಿಮದ ಆಧುನಿಕ ತತ್ವಗಳನ್ನು ಅಳವಡಿಸಿಕೊಂಡು ಸಮಕಾಲೀನ ಸೃಷ್ಟಿಗೆ ಕಾರಣರಾದರು. ಭಿನ್ನ ಮಾಧ್ಯಮ ಶೈಲಿಗಳಲ್ಲಿ ಅಭಿವ್ಯಕ್ತಿಸಿದರು. ಯೂಸೂಫ್ ಅರಕ್ಕಾಲ್, ಶ್ಯಾಮಸುಂದರ್ ಪುಷ್ಪಮಾಲ, ಮತ್ತು ಜಾನ್‌ದೇವರಾಜ್ ಇವರುಗಳ ಅಭಿವ್ಯಕ್ತಿ ಅಸಾಮಾನ್ಯವಾದುದು.

ಮಾನವನ ಪ್ರಕೃತಿಯ ಒಳನೋಟಗಳ ವಿವಿಧ ಆಯಾಮಗಳನ್ನು ಒಳಹೊಕ್ಕು ನೋಡಿದಾಗ ನಮ್ಮ ಮಧ್ಯೆ ಈ ಯುವ ಪ್ರತಿಭೆಗಳು ಸೃಷ್ಟಿಗಳ ಹಲವಾರು ಉನ್ನತ ಮೆಟ್ಟಿಲುಗಳನ್ನು ಹತ್ತುವ ಪ್ರಯತ್ನಗಳು ಕಾಣುತ್ತವೆ. ಆದರೂ ಸಹ ನಮ್ಮ ಜನರಲ್ಲಿ ಆಧುನಿಕ ದೃಷ್ಟಿಯ ಸಮಕಾಲದ ಸೃಷ್ಟಿಯ ಶಿಲ್ಪಕಲೆಯನ್ನು ಆಸ್ವಾದಿಸುವ ಅಭಿರುಚಿ ಕಡಿಮೆ ಎನ್ನಬಹುದು. ನಮ್ಮಲ್ಲಿ ಕಲಾವಿದನ ವರ್ಣಚಿತ್ರಗಳನ್ನು ಸಂಗ್ರಹಿಸುವ ಹಾಗೇ ಶಿಲ್ಪಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ನಿರತರಾದರೆ ಶಿಲ್ಪಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಇದರಿಂದ ಆಧುನಿಕ ಶಿಲ್ಪಕಲೆಗೆ ಹೆಚ್ಚಿನ ಪ್ರಾತಿನಿಧ್ಯ ನೀಡಿದಂತಾಗುತ್ತದೆ.

■ ಡಬ್ಲ್ಯು. ಬಸವರಾಜ್ ಕಂಪ್ಲಿ

ಸಾವಿಗೆ ಕಾರಣವಾದ 'ಬ್ರಾ'

ಹೆಂಗಸರು ತೊಡುವ 'ಬ್ರಾ' ಅವರ ಸಾವಿಗೆ ಕಾರಣವಾದರೆ! ಹೀಗಾಗಿದೆ. ಲಂಡನ್‌ನ ಹೈಡ್‌ಪಾರ್ಕ್‌ನಲ್ಲಿ ಮರದ ಕೆಳಗೆ ನಿಂತಿದ್ದ ಇಬ್ಬರ ಸಾವಿಗೆ ಬ್ರಾ ಕಾರಣ. ಅದರೊಳಗಿದ್ದ ವೈರ್‌ನಿಂದಾಗಿ, ಸಿಡಿಲು ಅಪ್ಪಳಿಸಿ ಅವರ ಸಾವು ಸಂಭವಿಸಿದೆ ಎಂದು ಮರಣೋತ್ತರ ಪರೀಕ್ಷೆ ತಿಳಿಸಿದೆ.

ಸಿಡಿಲು ಬಡಿದು ಸಂಭವಿಸಿದ 50,000 ಸಾವುಗಳಲ್ಲಿ ಇಂಥದ್ದು ಎರಡನೆಯದು ಎಂದು ಮರಣೋತ್ತರ ಪರೀಕ್ಷಕ ಸರ್ಟಿಫಿಕೇಟ್ ನೀಡಿದ್ದಾನೆ.


ಮಾರಕರೋಗ ಮಲೇರಿಯ

ಜ್ವರದಿಂದ ಹಾಸಿಗೆ ಹಿಡಿದಿದ್ದ ರೋಗಿಯೊಬ್ಬ ಒಮ್ಮೆಗೇ '**ಚಳಿ, ಚಳಿ**' ಎಂದು ನಡುಗುತ್ತಾ ಒದ್ದಾಡತೊಡಗಿದರೆ 'ಇದು ಮಲೇರಿಯ ಜ್ವರವೇ ಆಗಿರಬೇಕು' ಎನ್ನುವುದಿದೆ. ಇತಿಹಾಸದ ಆದಿಯಿಂದಲೂ ನಾಗರಿಕತೆಯ ಮೇಲೆ ದೈವ ಪ್ರಕೋಪದಂತಿರುವ ರೋಗಗಳಲ್ಲಿ ಮಲೇರಿಯ ರೋಗವೂ ಒಂದು. ಅಲೆಕ್ಸಾಂಡರ್ ಚಕ್ರವರ್ತಿಯು ಮಲೇರಿಯಾದಿಂದ ಮರಣ ಪಟ್ಟನೆಂದು ಶಂಕಿಸಲಾಗಿದೆ. ಇಂದಿಗೂ ಈ ರೋಗ ಪ್ರಪಂಚದ ವಿವಿಧ ಭಾಗಗಳಲ್ಲಿ ಒಂದು ಮಾರಕ ರೋಗವಾಗಿ ಹರಡಿಕೊಂಡಿದೆ.

19ನೆಯ ಶತಮಾನದ ಕೊನೆಯಲ್ಲಿಯೇ ಜರ್ಮನಿ, ಫ್ರಾನ್ಸ್ ಮತ್ತು ಬ್ರಿಟನ್ನಿನ ವಸಾಹತುಗಳಲ್ಲಿ ಜನರು ಮಲೇರಿಯ ರೋಗದಿಂದ ಸಾಯುತ್ತಿರುವುದು ಅಲ್ಲಿನ ಆಳರಸರ ಗಮನಕ್ಕೆ ಬಂದಿದ್ದು ಈ ಭಯಂಕರ ರೋಗಕ್ಕೆ ಕಾರಣ ಮತ್ತು ಪರಿಹಾರವನ್ನು ಕಂಡು ಹಿಡಿಯಲು ಪ್ರಯತ್ನಗಳಾಗುತ್ತಿದ್ದವು. 1860ರಲ್ಲಿ ಚಾರ್ಲ್ಸ್ ಲೂಯಿ ಆಲ್ಫೋನ್ಸೊ ಲೆದರನ್ ಎಂಬ ವೈದ್ಯ ಪ್ಲಾಸ್ಮೋಡಿಯಂ ಎಂಬ ಪರಾವಲಂಬಿ (Parasite) ಜೀವಿಯೇ ಮಲೇರಿಯ ರೋಗಕ್ಕೆ ಕಾರಣವೆಂದು ಪತ್ತೆ ಹಚ್ಚಿದ. ಆದರೆ ಅದು ಹೇಗೆ ಎಂಬುದು ತಿಳಿಯಲಿಲ್ಲ. ಲೆದರನ್‌ನ ಸಂಶೋಧನೆಗಳ ಫಲಿತಾಂಶವನ್ನು ತಿಳಿದ, ಭಾರತದಲ್ಲಿ ಮಿಲಿಟರಿ ಸೇವೆಯಲ್ಲಿದ್ದ ರೊನಾಲ್ಡ್ ರಾಸ್ ಎಂಬ ವೈದ್ಯನಿಗೆ ಮಲೇರಿಯದ ಕುರಿತು ಆಸಕ್ತಿಯುಂಟಾಯಿತು. ಮಲೇರಿಯ ರೋಗಪೀಡಿತರ ರಕ್ತದಲ್ಲಿ ಪ್ಲಾಸ್ಮೋಡಿಯಂ ಜೀವಿಗಳನ್ನು ಪತ್ತೆ ಹಚ್ಚುವುದು ರಾಸ್‌ಗೆ ಸಾಧ್ಯವಾಗಲಿಲ್ಲ.

ಮಲೇರಿಯ ರೋಗದ ಹರಡುವಿಕೆಯ ಕುರಿತು ಈ ಮೊದಲು ಭಿನ್ನಾಭಿಪ್ರಾಯಗಳಿದ್ದುವು. ಜರ್ಮನಿಯ ಮಲೇರಿಯ ತಜ್ಞ ರಾಬರ್ಟ್ ಕಾಕ್ ಸೊಳ್ಳೆಗಳು ಮನುಷ್ಯರ ಚರ್ಮದ ಮೇಲೆ ಮೊಟ್ಟೆಗಳನ್ನಿಟ್ಟು ರೋಗಾಣುಗಳು ದೇಹವನ್ನು ಪ್ರವೇಶಿಸುತ್ತವೆ ಎಂದು ಅಭಿಪ್ರಾಯಪಟ್ಟಿದ್ದ. ಪ್ಯಾಟ್ರಿಕ್ ಮಾನ್ಸನ್ ಅದು ಕುಡಿಯುವ ನೀರಿನಿಂದ ಹರಡುತ್ತದೆ ಎಂದಿದ್ದ. ಸೊಳ್ಳೆಗಳು ವಾಸವಾಗಿರುವ ಜವುಗು ಪ್ರದೇಶಗಳ ಗಾಳಿ ಸೇವನೆಯಿಂದ ರೋಗ ಹರಡುತ್ತದೆ ಎಂದು ಇನ್ನು ಕೆಲವರ ಅಭಿಪ್ರಾಯವಾಗಿತ್ತು. ರೊನಾಲ್ಡ್ ರಾಸ್ ಮಲೇರಿಯ ರೋಗಾಣುಗಳು ಅನಾಫೆಲಿಸ್ ಜಾತಿಯ ಸೊಳ್ಳೆಗಳ ದೇಹದಲ್ಲಿ ಬೆಳೆಯುತ್ತವೆ ಎಂದು ಪತ್ತೆಹಚ್ಚಿದ. ರೋಗಾಣುಗಳನ್ನು ಹೊಂದಿದ ಸೊಳ್ಳೆ ಮನುಷ್ಯರನ್ನು ಕಚ್ಚಿದಾಗ ರೋಗಾಣುಗಳು ಜೊಲ್ಲಿನೊಂದಿಗೆ ಮನುಷ್ಯರ ರಕ್ತ ಸೇರಿ ವಂಶಾಭಿವೃದ್ಧಿಯಾಗುತ್ತದೆ. ಸೊಳ್ಳೆ ರೋಗಪೀಡಿತ ಮನುಷ್ಯನ ರಕ್ತ ಹೀರಿದಾಗ ಅವು ಸೊಳ್ಳೆಯ ದೇಹವನ್ನು ಸೇರಿಕೊಳ್ಳುತ್ತವೆ. ರೋಗಾಣುವಿನ ಜೀವನ ಚಕ್ರ ಪೂರ್ತಿಯಾಗಲು ಸೊಳ್ಳೆ ಮತ್ತು ಮನುಷ್ಯನ ಸಂಪರ್ಕ ಅವಶ್ಯ ಎಂಬುದನ್ನು ರಾಸ್ 1898ರಲ್ಲಿ ದೃಢಪಡಿಸಿದ. ಈ ಸಂಶೋಧನೆಗೆ 1902ರಲ್ಲಿ ನೊಬೆಲ್ ಪಾರಿತೋಷಕ ನೀಡಲಾಯಿತು. ಸೊಳ್ಳೆಗಳನ್ನು ನಾಶ ಮಾಡುವುದರಿಂದ ಮಲೇರಿಯ ರೋಗವನ್ನು ತಡೆಗಟ್ಟಬಹುದೆಂದು ರಾಸ್ ಸಲಹೆಯಿತ್ತ.

ಈ ಮೊದಲೇ ದಕ್ಷಿಣ ಅಮೆರಿಕದಲ್ಲಿ ಸಿಂಕೋನ ಮರದ ತೊಗಟೆಯ ಕಷಾಯವನ್ನು ಮಲೇರಿಯ ಜ್ವರಕ್ಕೆ ಪ್ರತ್ಯೌಷಧವಾಗಿ ನೀಡಲಾಗುತ್ತಿತ್ತು. ಈ ತೊಗಟೆಯಲ್ಲಿರುವ 'ಆಲ್ಕಲ್ವಾಡ್' ರೋಗ ನಿವಾರಣೆಗೆ ಕಾರಣವಾಗಿತ್ತು. ನಂತರ ಸಿಂಕೋನದ ತೊಗಟೆಯಿಂದ 'ಕ್ವಿನಿನ್' ಎಂಬ ಔಷಧಿ ತಯಾರಿಸಿ ಎಲ್ಲಾ ಕಡೆ ಬಳಸಲಾಯಿತು. 1938ರಲ್ಲಿ 'ಕ್ಲೋರೋಕ್ವಿನ್' ನನ್ನು ಕಂಡು ಹಿಡಿಯಲಾಯಿತು. 1940-50ರ ದಶಕದಲ್ಲಿ 'ಪ್ರಿಮಾಕ್ವಿನ್', 'ಕ್ಲೊರೋಕ್ವಿನ್ವಾಡ್', 'ಎಮೆಡಿಯಾಕ್ವಿನ್' ಮೊದಲಾದ ಔಷಧಿಗಳು ಮಾರುಕಟ್ಟೆಗೆ ಬಂದುವು.



ಕೋಟ್ಯಾಂತರ ಜನರ ಮರಣಕ್ಕೆ ಕಾರಣವಾದರೂ ಮಲೇರಿಯಾವನ್ನು ಬಡವರ ರೋಗ ಎಂದೇ ಪರಿಗಣಿಸಲಾಗಿದೆ !

ಈ ಔಷಧಿಗಳ ಉಪಯೋಗದಿಂದಲೂ ಮಲೇರಿಯ ರೋಗದ ಹಾವಳಿ ಕಡಿಮೆಯಾಗಲಿಲ್ಲ. 1955ರಲ್ಲಿ ಜಾಗತಿಕ ಆರೋಗ್ಯ ಸಂಸ್ಥೆ (WHO) ಮಲೇರಿಯಾ ನಿರ್ಮೂಲನ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿತು. ಡಿ.ಡಿ.ಟಿ. ಕೀಟನಾಶಕದ ಸಿಂಪರಣೆಯನ್ನು ಕೈಗೆತ್ತಿಕೊಳ್ಳಲಾಯಿತು. ಕೀಟನಾಶಕ ಸಿಂಪರಣೆ ಉತ್ತಮ ಫಲಿತಾಂಶ ನೀಡಿ 1967ನೇ ಇಸವಿಯ ಸಮಯಕ್ಕೆ ಮಲೇರಿಯ ನಿಯಂತ್ರಣಕ್ಕೆ ಬಂತು. ಆದರೆ ಈ ಸ್ವಾಸ್ಥ್ಯಭಾವ ಬಹುಕಾಲ ಉಳಿಯಲಿಲ್ಲ. ಡಿ.ಡಿ.ಟಿ ಕೀಟನಾಶಕಕ್ಕೆ ಸೊಳ್ಳೆಗಳು ನಿರೋಧಶಕ್ತಿ ಹೊಂದಿದುವು. ಡಿಡಿಟಿ ಆಹಾರದ ಸರಪಳಿಯಲ್ಲಿ ಸೇರಿಕೊಂಡು ಪರಿಸರ, ಸಸ್ಯ ಮತ್ತು ಪ್ರಾಣಿ ವರ್ಗಗಳ ಮೇಲೆ ದುಷ್ಪರಿಣಾಮ ಬೀರಿತು. ಡಿಡಿಟಿಯ ಉಪಯೋಗದ ಕುರಿತು ವಿರೋಧ ವ್ಯಕ್ತವಾಯಿತು. 1970ನೆಯ ಇಸವಿಯೊಳಗೆ ಕೇಂದ್ರ ಮುಂದುವರಿದ ರಾಷ್ಟ್ರಗಳು ಡಿಡಿಟಿಯ ಉಪಯೋಗವನ್ನು ನಿಷೇಧಿಸಿದುವು. ಮಲೇರಿಯಾ ರೋಗಾಣು, ಪ್ಲಾಸ್ಮೋಡಿಯಂ ನಿರೋಧ ಶಕ್ತಿಯನ್ನು ಹೊಂದಿ ಔಷಧಿಗಳಿಗೆ ಜಗ್ಗಲಿಲ್ಲ. ಬಡತನ, ಸ್ವಚ್ಛತೆಯ ಕೊರತೆ, ಅಂತರ್ಯುದ್ಧಗಳಿಂದಾಗಿ ಆಫ್ರಿಕಾ ಮತ್ತು ಏಶಿಯಾದ ಭಾಗಗಳಲ್ಲಿ ಮಲೇರಿಯ ಮತ್ತೆ ತಲೆ ಎತ್ತಿಕೊಂಡಿತು.

ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯಕ್ರಮದಂತೆ ಮಲೇರಿಯ ಸಂಶೋಧನಾ ಕೇಂದ್ರವೊಂದನ್ನು 1977ರಲ್ಲಿ ಭಾರತದಲ್ಲಿ ಸ್ಥಾಪಿಸಲಾಯಿತು. ಈ ಕೇಂದ್ರ ಸಮಗ್ರ ಹತೋಟಿ ಕ್ರಮಗಳತ್ತ ಗಮನ ಹರಿಸಿತು. ಸೊಳ್ಳೆಯ ಮರಿಗಳು 7 ದಿವಸಗಳ ತನಕ ನೀರಿನಲ್ಲಿ ಜೀವಿಸುತ್ತವೆ. ಸೊಳ್ಳೆ ಮರಿಗಳನ್ನು ತಿನ್ನುವ ಗಪ್ಪಿ (Poecilia reticulata) ಮತ್ತು ಸೊಳ್ಳೆ ಮೀನು (Gamburia offiris) ಎಂಬ ಎರಡು ಜಾತಿಯ ಮೀನುಗಳನ್ನು ಸೊಳ್ಳೆ ಮರಿಗಳು ಬೆಳೆಯುವ ನೀರಿನಲ್ಲಿ ಬಿಡುವ ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು. ತಗ್ಗು ಪ್ರದೇಶಗಳಲ್ಲಿ ನೀರು ನಿಲ್ಲದಂತೆ ಅವುಗಳನ್ನು ಮುಚ್ಚುವುದು, ನೀರಿನ ಮೇಲೆ ತೇಲಾಡುವ ಪಾಚಿಯನ್ನು ತೆಗೆಯುವುದು, ಉಪಯೋಗಿಸದೆ ಇದ್ದ ಬಾವಿಗಳ ನೀರಿನ ಮೇಲೆ ಪ್ಲಾಸ್ಟಿಕ್ ಮಣಿಗಳನ್ನು (0.6 - 2.5 ಮಿ.ಮೀ) ತೇಲಿಬಿಡುವುದು ಇತ್ಯಾದಿ ಕ್ರಮಗಳನ್ನು ಈಗ ಪ್ರೋತ್ಸಾಹಿಸಲಾಗುತ್ತಿದೆ. ಚೀನಾ ದೇಶದಲ್ಲಿ ಉಪಯೋಗಿಸುತ್ತಿರುವ ಆರ್ಟಿಮೆಸಿನ್ (Artimesin) ಎಂಬ ಔಷಧಿಯನ್ನು ಉಪಯೋಗಿಸಬಹುದಾದ ಸಾಧ್ಯತೆಯತ್ತ ಗಮನ ಹರಿಸಲಾಗಿದೆ. ಕೊಲಂಬಿಯಾದಲ್ಲಿ ಸಿದ್ಧ ಪಡಿಸಿದ Spf66 ಎಂಬ ಲಸಿಕೆಯನ್ನು ಪರೀಕ್ಷಿಸಲಾಗುತ್ತಿದೆ. ಮನುಷ್ಯರಿಂದ ರೋಗಾಣುಗಳನ್ನು ವರ್ಗಾಯಿಸಲಾರದ ಸೊಳ್ಳೆ ಜಾತಿಯನ್ನು ವಂಶವಾಹಿ ಇಂಜಿನಿಯರಿಂಗ್ ತಂತ್ರಜ್ಞಾನದಿಂದ ಉತ್ಪಾದಿಸಲು ಸಾಧ್ಯವಿದೆ ಎಂಬ ಅಭಿಪ್ರಾಯವೂ ಇದೆ.

ಮಲೇರಿಯ ಮಿಲಿಯಗಟ್ಟಲೆ ಜನರ ಮರಣಕ್ಕೆ ಕಾರಣವಾದರೂ ಅದನ್ನೊಂದು 'ಬಡವರ ರೋಗ' ಎಂದೇ ಪರಿಗಣಿಸಲಾಗಿದೆ. ರೋಗದ ಹತೋಟಿಯ ಬಗ್ಗೆ ಸಂಶೋಧನೆಗಳನ್ನು ಕೈಗೊಳ್ಳಲು ಔಷಧಿ ತಯಾರಿಕಾ ಕಂಪೆನಿಗಳು ಲಾಭದ ದೃಷ್ಟಿಯಿಂದ ಒಲವು ತೋರಿಸುತ್ತಿಲ್ಲ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಮಲೇರಿಯ ರೋಗದ ಹಾವಳಿ ಕಡಿಮೆ. ವಿಜ್ಞಾನವೊಂದೇ ಮಲೇರಿಯ ರೋಗವನ್ನು ಕಿತ್ತೆಸೆಯಲಾರದು. ಜಾಗತಿಕ ಮಟ್ಟದ ಸಹಕಾರ ಮತ್ತು ಧನ ಸಹಾಯದ ಅವಶ್ಯಕತೆಯಿದೆ.

■ ಪಿ.ಎಸ್.ರೈ



ಒಬ್ಬಾಕೆ ಪತಿ ! ಮತ್ತೊಬ್ಬಾಕೆ ಪತ್ನಿ !

ದೆಹಲಿಯಲ್ಲಿ ಪಟೇಲನಗರಕ್ಕೆ ಹೋಗಿ ಚಾವ್ಲಾಭಾಯ್ ಬಗ್ಗೆ ಕೇಳಿದರೆ ಯಾರಾದರೂ ಆ ಮನೆ ತೋರಿಸುತ್ತಾರೆ. ಕೈಗಾರಿಕಾ ವ್ಯಾಪಾರಿ ವಾಡೆಯಾಗಿ ಹೆಸರು ವಾಸಿಯಾದ ಪಟೇಲನಗರಕ್ಕೆ ದಾದಾ ಚಾವ್ಲಾಭಾಯ್ ರಾಜಕೀಯ ನಾಯಕರೊಂದಿಗೆ ಇತರ ಅನೇಕರು ಸಹಾಯಕ್ಕಾಗಿ ಹತ್ತಿರ ಬರುತ್ತಾರೆ. ಇಂತಹ ದಾದಾಗಳು ಪ್ರತಿ ನಗರ, ಪಟ್ಟಣಗಳಲ್ಲೂ ಇರುತ್ತಾರೆ. ಇದರಲ್ಲಿ ಯಾವುದೇ ರೀತಿಯ ವಿಶೇಷವಿಲ್ಲ.

ಆದರೆ ಈ ಚಾವ್ಲಾಭಾಯ್‌ಗೆ ಮಾತ್ರ ಒಂದು ವಿಶೇಷತೆ ಇದೆ. ಭಾಯ್ ಎಂದು ಎಲ್ಲರೂ ಭಯದಿಂದಲೇ ಗೌರವಿಸುವ ಚಾವ್ಲಾ ನಿಜವಾಗಿಯೂ ಪುರುಷನಲ್ಲ; ಮೂವತ್ತೆರಡು ವರ್ಷ ವಯಸ್ಸಿನ ಸಂತೋಷ ಚಾವ್ಲಾ ಎನ್ನುವ ಹೆಸರಿನ ಹೆಂಗಸು.

ಆದರೆ ಈ ಭಯ್ಯಾ ಹೆಂಗಸು ಎಂದರೆ ಯಾರೂ ನಂಬುವುದಿಲ್ಲ. ಜೀನ್ಸ್ ಪ್ಯಾಂಟ್-ಶರ್ಟ್, ಕೊರಳಲ್ಲಿ ಬಂಗಾರದ ಎಳೆಯೊಂದಿಗೆ ನಿಜವಾದ ದಾದಾನಂತೇ ಇದ್ದಾಳೆ. ಇದರೊಂದಿಗೆ ಸಿಗರೇಟ್ ಕೂಡಾ ಸೇದುತ್ತಾಳೆ.

ಗಂಡಸರ ಲಕ್ಷಣಗಳಾದ ಮೀಸೆ, ಗಡ್ಡಗಳಿಲ್ಲವಾದರೂ ಉಳಿದಂತೆ ಗಂಡಸರ ಕೆಲಸಗಳನ್ನೆಲ್ಲಾ ನಿರ್ವಹಿಸುತ್ತಾಳೆ. ಇಷ್ಟೇ ಅಲ್ಲ. ಸಂತೋಷ ಚಾವ್ಲಾ ಮತ್ತೊಬ್ಬ ಹೆಂಗಸನ್ನು ಮದುವೆ ಮಾಡಿಕೊಂಡು ಸಂಸಾರ ನಡೆಸಿದ್ದಾಳೆ!

ಗಂಡಸರ ಲಕ್ಷಣಗಳಾದ ಮೀಸೆ, ಗಡ್ಡಗಳಿಲ್ಲವಾದರೂ ಉಳಿದಂತೆ ಗಂಡಸರ ಕೆಲಸಗಳನ್ನೆಲ್ಲಾ ನಿರ್ವಹಿಸುತ್ತಾಳೆ. ಇಷ್ಟೇ ಅಲ್ಲ. ಸಂತೋಷ ಚಾವ್ಲಾ ಮತ್ತೊಬ್ಬ ಹೆಂಗಸನ್ನು ಮದುವೆ ಮಾಡಿಕೊಂಡು ಸಂಸಾರ ನಡೆಸಿದ್ದಾಳೆ!

ಕಾಲೇಜಿನ ದಿನಗಳಲ್ಲಿ : ಚಾವ್ಲಾ ಭಾಯ್ ಹೆಂಡತಿಯ ಹೆಸರು ಮಂಜು. ಅವಳ ವಯಸ್ಸು 35 ವರ್ಷಗಳು. ಅವರದು ಪ್ರೇಮವಿವಾಹ. ಅವಳು ಹುಟ್ಟಿದಾರಭ್ಯ ಎಂದೂ ತಾನೊಬ್ಬ ಹೆಂಗಸೆಂದು ತಿಳಿದುಕೊಂಡಿಲ್ಲವಂತೆ. ಕಾಲೇಜ್ ದಿನಗಳಲ್ಲೆ ಪ್ಯಾಂಟ್-ಶರ್ಟ್ ಹಾಕಿಕೊಂಡು ಹುಡುಗರ ಮಧ್ಯದಲ್ಲಿಯೇ ತಿರುಗಾಡುತ್ತಿದ್ದಳಂತೆ. ತನ್ನನ್ನು ಹುಡುಗನೆಂದೇ ತಿಳಿದುಕೊಂಡು ಹುಡುಗಿಯರು ಇವಳ ಹಿಂದೆಯೇ ಸುತ್ತುತ್ತಿದ್ದರಂತೆ.

ನರ್ಸಿಂಗ್ ಕಾಲೇಜಿನಲ್ಲಿ ಓದುತ್ತಿದ್ದ ದಿನಗಳಲ್ಲಿ ಚಾವ್ಲಾನನ್ನು ಪ್ರೇಮಿಸಿದಳು ಮಂಜು. ತಾನು ಹುಡುಗನಲ್ಲವೆಂದೂ, ಹುಡುಗಿ ಎಂದು ತಿಳಿದರೂ ಕೂಡಾ ತನ್ನ ಪ್ರೇಮದಲ್ಲಿ ವ್ಯತ್ಯಾಸವಿಲ್ಲವೆಂದಳು ಮಂಜು. ಈ ರೀತಿಯಾಗಿ 1984ರಲ್ಲಿ ಪ್ರಾರಂಭವಾದ ಅವರ ಪ್ರೇಮ ಕ್ರಮೇಣ ಮದುವೆಗೆ ಹಾದಿ ಮಾಡಿಕೊಟ್ಟಿತು. ಮದುವೆಯ ನಂತರ ಇವರು ಹರ್ಯಾಣದ ರೋಹತಕ್‌ದಿಂದ ದೆಹಲಿಗೆ ಪ್ರಯಾಣ ಬೆಳೆಸಿದರು. ಮಂಜು ಆಸ್ಪತ್ರೆ ಒಂದರಲ್ಲಿ ನರ್ಸ್ ಉದ್ಯೋಗ ಹಿಡಿದರೆ, ಸಂತೋಷ ಚಾವ್ಲಾ ಮಾತ್ರ ಹುಡುಗರಂತೆ ಸ್ಥಾನಿಕ ರೌಡಿಗಳೊಂದಿಗೆ ಬೆರೆತು, ಕೊನೆಗೆ ದಾದಾ ಹಂತಕ್ಕೆ ತಲುಪಿದಳು.

ತಪ್ಪೇ ಇಲ್ಲ : ಈಗ ಎಷ್ಟೋ ರೌಡಿಗಳು ಸಂತೋಷ ಚಾವ್ಲಾ ಹತ್ತಿರ ಕೆಲಸ ಮಾಡುತ್ತಿದ್ದಾರೆ. ಅವರ್ಯಾರೂ ಭಾಯ್ ಅನ್ನು ಹೆಂಗಸೆಂದು ಭಾವಿಸುವುದಿಲ್ಲ. ಪರೋಕ್ಷವಾಗಿ ಕೂಡಾ ಆ ವಿಷಯದ ಬಗ್ಗೆ ಮಾತಾಡುವುದಕ್ಕೆ ಅಷ್ಟಾಗಿ ಇಷ್ಟ ಪಡೋಲ್ಲ. ತನ್ನ ಗ್ಯಾಂಗಿನಲ್ಲಿ ಅವರನ್ನು ಅಷ್ಟೇ ಹುಷಾರಾಗಿ ನೋಡಿಕೊಳ್ಳುತ್ತಾಳೆ.

ಚಾವ್ಲಾಭಾಯ್, ಮಂಜುರ ಸಂಸಾರ ನೋಡುವಂತೆ ಇದೆ. ತಾನು ದಾದಾ ಸ್ಥಿತಿಗೆ ಬೆಳೆದ ಮೇಲೆ ಹೆಂಡತಿ ಹೊರಗೆ ಹೋಗಿ ಕೆಲಸ ಮಾಡಬೇಕಾದ ಅವಶ್ಯಕತೆ ಇಲ್ಲವೆಂದು ತಿಳಿಸಿದಳು ಚಾವ್ಲಾ. ಅಷ್ಟೇ.... ಕೆಲಸಕ್ಕೆ ರಾಜೀನಾಮೆ ನೀಡಿ ತನ್ನ ಪತಿಭಕ್ತಿಯನ್ನು ಪ್ರದರ್ಶಿಸಿದಳು ಮಂಜು.

ಮಂಜುಳಂತಹ ಹೆಂಡತಿ ದೊರಕಿರುವದು ತನ್ನ ಅದೃಷ್ಟವೆನ್ನುತ್ತಾಳೆ ಚಾವ್ಲಾ. ಮನೆಗೆಲಸಗಳು ತನಗೆ ಗೊತ್ತಿಲ್ಲ, ಕೇವಲ ಹಣ ತಂದು ಹೆಂಡತಿಗೆ ಕೊಡುವುದೇ ತನ್ನ ಕರ್ತವ್ಯವೆನ್ನುತ್ತಾಳೆ. ಚಾವ್ಲಾ ಹೊರಗೆ ಹೋಗುವಾಗ ಡ್ರೆಸ್ ತೆಗೆದಿರಿಸುವುದು, ಪಾದರಕ್ಷೆ ತೊಡಿಸುವುದು, ಮೊದಲಾದವುಗಳನ್ನು ಮಂಜುಳಾಳೇ ಮಾಡುತ್ತಾಳೆ. ಅವರದು ಅಸಲೀ 'ಗಂಡ-ಹೆಂಡತಿಯರ ದಾಂಪತ್ಯ ಜೀವನದಂತೆ ಪ್ರವರ್ತನೆ ಇದೆ.' ಚಾವ್ಲಾ ಗಟ್ಟಿಯಾಗಿ ಚೀರಿ ಆರ್ಡರ್ ಮಾಡುತ್ತಿದ್ದರೆ, ಮಂಜು ತುಟಿ ಪಿಟಕ್ಕೆನ್ನದೆ ಕೆಲಸ ಮಾಡುತ್ತಾಳೆ. ಬೈಗುಳನ್ನು ತಿಂದರೂ ಎದುರುತ್ತರ ನೀಡುವುದಿಲ್ಲ. ಪತಿಯಾದವನು ಹಾಗೆ ಅನ್ನುವುದರಲ್ಲಿ ತಪ್ಪೇನಿಲ್ಲ ಎನ್ನುತ್ತಾಳೆ ಮಂಜು.

ಪತಿಯ ಆಯುರಾರೋಗ್ಯಕ್ಕಾಗಿ ಮಂಜು ಶ್ರಾವಣ ಮಾಸದಲ್ಲಿ ವ್ರತಗಳು, ವರಲಕ್ಷ್ಮಿ ವ್ರತಗಳಂತಹ ಇತರ ವ್ರತಗಳನ್ನು ಮಾಡುತ್ತಾಳೆ. ಹಬ್ಬದ ದಿನದಂದು ಅನೇಕ ಮುತ್ತೈದೆಯರನ್ನು ಕರೆಯಿಸಿ ಸೀರೆ-ಕಣಗಳನ್ನು ಕೊಡುತ್ತಾಳೆ. ಚಾವ್ಲಾ ಅದೆಲ್ಲವನ್ನು ಒಂದು ಕೊಠಡಿಯಲ್ಲಿ ಕುಳಿತು ಅಭಿಮಾನದಿಂದ ನೋಡುತ್ತಾಳೆಯೇ ಹೊರತು ಹೆಂಗಸರೊಂದಿಗೆ ಬೆರೆಯಬೇಕೆಂದು ಅವಳಿಗೆ ಅನ್ನಿಸುವುದಿಲ್ಲವಂತೆ.

ವಿಭಿನ್ನವಾದ ಸಂಸಾರ : ಅವರಿಗಿರುವ ಏಕೈಕ ಚಿಂತೆ ಎಂದರೆ ಸಂತಾನ ಇಲ್ಲದಿರುವುದು. ಸಂತಾನಕ್ಕಾಗಿ ಪತಿಗೆ ಮೋಸ ಮಾಡುವುದಿಲ್ಲವೆನ್ನುತ್ತಾಳೆ ಮಂಜು. ಯಾವುದೋ ಒಂದು ಅನಾಥ ಮಗುವನ್ನು ತಂದುಕೊಂಡು, ಆ ಆನಂದವನ್ನು ಕೂಡಾ ಹಂಚಿಕೊಳ್ಳಬೇಕೆಂದು ಆಲೋಚಿಸುತ್ತಿದ್ದಾರೆ.

ಇಬ್ಬರು ಹೆಂಗಸರು ಕೂಡಿಕೊಂಡು ಸಂಸಾರ ಮಾಡುವುದೇ ವಿಚಿತ್ರ. ದೈಹಿಕ ಸುಖ ದೊರೆಯದ ಸಂಸಾರ ಹೆಚ್ಚುಕಾಲ ಮುಂದುವರೆಯೋಲ್ಲವೆನ್ನುತ್ತಾರೆ. ಈ ವಾದಕ್ಕೆ ಭಿನ್ನವಾದ ಸಂಸಾರ ಮಂಜು-ಚಾವ್ಲಾಭಾಯ್‌ರದ್ದು.

ಬಾಲ್ಯದಲ್ಲಿ ತಂದೆ ತಾಯಿಗಳ ಪ್ರೇಮಕ್ಕೆ ಎರವಾದವರಲ್ಲಿ ಸಲಿಂಗ ಪ್ರೇಮ ಹುಟ್ಟಿಕೊಳ್ಳುತ್ತದೆ ಎನ್ನುತ್ತಾರೆ ಮನಶಾಸ್ತ್ರಜ್ಞರು. ಈ ಸಂಗತಿ ಮಂಜು ಚಾವ್ಲಾಭಾಯ್‌ರ ವಿಷಯದಲ್ಲಿ ಸತ್ಯವಾಗಿದೆ. ತಮ್ಮ ಸಂಸಾರ ಪ್ರಕೃತಿ ವಿರುದ್ಧವೆಂದು ಆ ಜೋಡಿ ಒಪ್ಪುವುದಿಲ್ಲ. ಸಾಮಾಜಿಕ ವಿರುದ್ಧವಾಗಿರಬಹುದು ಎನ್ನಬಹುದಂತೆ.

ಸಾಮಾಜಿಕ ಕಟ್ಟುಪಾಡುಗಳನ್ನು ಧಿಕ್ಕರಿಸಿದವರು ತೊಂದರೆಗಳನ್ನು ಎದುರು ಹಾಕಿಕೊಳ್ಳುವುದು ಅನಿವಾರ್ಯ. ಈ ತೊಂದರೆಗಳು ಆರಂಭದಲ್ಲಿ ಅವರಿಗೆ ಎದುರಾದರೂ ಎದುರಿಸಿ ನಿಂತುಕೊಂಡೆವು ಎನ್ನುತ್ತಾರೆ. ಚಾವ್ಲಾ ಕಳೆದ ಚುನಾವಣೆಯಲ್ಲಿ ದೆಹಲಿ ಶಾಸನಸಭಾ ಚುನಾವಣೆಯಲ್ಲಿ ಸಮಾಜವಾದಿ ಪಾರ್ಟಿ ಅಭ್ಯರ್ಥಿ ಎಂದು ಸ್ಪರ್ಧಿಸಿ ಸೋಲನ್ನು ಅನುಭವಿಸಿದ್ದಾಳೆ. ಪ್ರಸ್ತುತ ಈ ಸಲಿಂಗ ದಂಪತಿಗಳು ಕಾಂಗ್ರೆಸ್ ಪಾರ್ಟಿ ಕಾರ್ಯಕರ್ತರಾಗಿ ಪಟೇಲ ನಗರದಲ್ಲಿ 'ಬಿಜಿ'ಯಾಗಿದ್ದಾರೆ.

■ ಕೆ.ಬಿ.ಬೊಮ್ಮನಾಳ

ಇಲ್ಲೊಂದು ಸದ್ದಿಲ್ಲದ ಪರಿವರ್ತನೆ



ಯುವಕರು ಡಿಗ್ರಿ, ಉದ್ಯೋಗ ಎಂದೆಲ್ಲ ಹಪಹಪಿಸುತ್ತಾ ಇರುವ ಇಂದಿನ ದಿನಗಳಲ್ಲಿ, ತಮ್ಮ ಬದುಕನ್ನೇ ಒಂದು ಸಣ್ಣ ಗುಂಪಿನ ಗಿರಿಜನರ ಅಭಿವೃದ್ಧಿಗೆ ಮೀಸಲಿಟ್ಟ ಯುವಕನೊಬ್ಬ ಇನ್ನೇನು ಅಲ್ಲವಾದರೂ, ತಮಗೇ ತೃಪ್ತಿ ನೀಡುವಂತಹ ಕೆಲಸದಲ್ಲಿ ತೊಡಗಿದ್ದು ಕಾಣುತ್ತದೆ. ಅಂಥ ಕೆಲಸ ಕನಕಪುರ ತಾಲೂಕಿನ ಹೂಳ್ಯ ಕಾಲನಿಯಲ್ಲಿ ಸದ್ದಿಲ್ಲದೇ ನಡೆದಿದೆ.

ನಮ್ಮಲ್ಲಿ ಹಲವು ಹತ್ತು ಸ್ವಯಂ ಸೇವಾ ಸಂಸ್ಥೆಗಳು ಸದ್ದಿಲ್ಲದೇ ದುಡಿಯುತ್ತವೆ. ಕೆಲವು ಸಲ ಇದ್ದಕ್ಕಿದ್ದ ಹಾಗೆ ಇಂಥ ಸಂಸ್ಥೆಗಳ ಮೇಲೆ ಯಾರದೋ ಹದ್ದಿನ ಕಣ್ಣು ಬೀಳುತ್ತದೆ. ಇಲ್ಲದ ಗದ್ದಲ ಏಳುತ್ತದೆ. ಅದರಿಂದಾಗಿಯೇ ಇಂಥ ಸ್ವಯಂ ಸೇವಾ ಸಂಸ್ಥೆಗಳಿಗೆ ಬರುವ ವಿದೇಶೀ ಹಣದ ಬಗ್ಗೆ ಈಗಾಗಲೇ ಕರೆಕರೆ ಆರಂಭವಾಗಿದೆ. ಇವೆಲ್ಲ ಏನೇ ಇರಲಿ. ಬಹುಪಾಲು ಇಂಥ ಸ್ವಯಂ ಸೇವಾ ಸಂಸ್ಥೆಗಳಲ್ಲಿ ತನ್ಮಯತೆಯಿಂದ ದುಡಿಯುವ ತೊಡಗಿಸಿಕೊಳ್ಳುವ ಜನ ಇದ್ದಾರೆ. ಇಡೀ ಜೀವನ ಇಂಥ ಕೆಲಸದಲ್ಲಿ ತೊಡಗಿಸಿಕೊಳ್ಳುವ ಎಷ್ಟೋ ಜನ ಸದ್ದಿಲ್ಲದೇ ಮರೆಯಾಗಿಬಿಡುತ್ತಾರೆ. ಅಪರೂಪಕ್ಕೊಂಬಂತೆ ಅಂಥವರಿಗೂ ಒಮ್ಮೊಮ್ಮೆ ಮಾನ್ಯತೆ, ಸಾರ್ವಜನಿಕರಿಂದ ಮನ್ನಣೆಯೂ ದೊರೆತುಬಿಡುತ್ತದೆ.

ಅಂಥ ಅಪರೂಪದ, ಅರ್ಹ ಸಾಮಾಜಿಕ ಸೇವಾಕರ್ತ ಡಾ. ಸುದರ್ಶನ್. ಅವರು ಸ್ವತಃ ಇಂಥ ಕಾರ್ಯದಲ್ಲಿ ತೊಡಗಿದ್ದೂ ಅಲ್ಲದೇ, ಹಲವರನ್ನು ತೊಡಗಿಸಿ ಸಾರ್ಥಕ ಕೆಲಸ ಮಾಡುತ್ತಿದ್ದಾರೆ.

ಹಾಗೆ ಡಾ. ಸುದರ್ಶನ್ ಅವರಿಂದ ಸ್ಫೂರ್ತಿಗೊಂಡು ಕೆಲಸದಲ್ಲಿ ತೊಡಗಿದವರು ಶಿವರಾಜೇಗೌಡ. ಅವರೀಗ ಕನಕಪುರ ತಾಲೂಕಿನಲ್ಲಿ ಬುಡಕಟ್ಟು ಜನಾಂಗದಲ್ಲಿ ಅಕ್ಷರಜ್ಞಾನ, ಅರಿವು ತುಂಬುವ ಕಾರ್ಯದಲ್ಲಿ ಯಶಸ್ವಿಯಾಗಿ ನಿರತರಾಗಿದ್ದಾರೆ.

ಚನ್ನಪಟ್ಟಣ ತಾಲೂಕಿನ ಬ್ಯಾಡರಹಳ್ಳಿ ಅವರ ಹುಟ್ಟಿದೂರು. ಎಂ.ಎಸ್.ಡಬ್ಲ್ಯು ವ್ಯಾಸಂಗ ಸಮಯದಲ್ಲಿ ಕ್ಷೇತ್ರಕಾರ್ಯಕ್ಕೆ ಚುಂಚನಕುಪ್ಪೆ ಗ್ರಾಮ ಆರಿಸಿಕೊಂಡಿದ್ದರು. ಆಗಿಂದಲೇ ಇಂಥ ಜನರ ಬದುಕು ಹಸನಾಗಿಸಬೇಕೆಂಬ ಗೀಳು. ಮನೆಯವರಿಂದ ಸಹಜ ವಿರೋಧ. ಒಂದು ಸಂಜೆ ಉಟ್ಟಬಟ್ಟೆಯ ಜೊತೆಗೊಂದು ದುಪ್ಪಟಿ ಹಿಡಿದು ಮನೆಬಿಟ್ಟರು. ಬಂದಿದ್ದು ಬಿಳಿಗಿರಿ ರಂಗನ ಬೆಟ್ಟಕ್ಕೆ. ಒಂದು ವರ್ಷ ಅವರ ಜೊತೆ ಇರುವುದಾಗಿ ಕರಾರು. ಆದರೆ ಶಿವರಾಜ್ ಎಂಟು ವರ್ಷಕಾಲ ಅವರ ಜೊತೆ ಇದ್ದು ಬೆಳೆದರು. ಮಲೆ ಮಹದೇಶ್ವರ ಬೆಟ್ಟದ ಗಿರಿಜನರ ಪ್ರತಿಯೊಂದು ಪೋಡೂ ಚಿರಪರಿಚಿತವಾಯಿತು. ಆ ಸಮಯಕ್ಕೆ ಅನಿರೀಕ್ಷಿತವಾಗಿ ಒಂದು ಕರೆ ಬಂತು. ಕನಪುರ ತಾಲೂಕಿನ ಹೂಳ್ಯಕಾಲನಿಯ ಗಿರಿಜನರು ತಮ್ಮಲ್ಲೊಂದು ಸ್ವಯಂ ಸೇವಾ ಕೇಂದ್ರ ಆರಂಭಿಸುವಂತೆ ಡಾ. ಸುದರ್ಶನ್ ಅವರನ್ನು ಕೋರಿದ್ದರು. ಸಹಜವಾಗಿಯೇ ಈ ಕೇಂದ್ರಕ್ಕೆ ಶಿವರಾಜೇಗೌಡರನ್ನು ಡಾ. ಸುದರ್ಶನ್ ಆರಿಸಿಕಳಿಸಿದರು.

ಹುಣಸೂರಿನ ಡೆವಲೆಪ್‌ಮೆಂಟ್ ಥ್ರೂ ಎಜುಕೇಷನ್ ಅಂಗಸಂಸ್ಥೆಯಾಗಿ ಕನಕಪುರದ ಕರ್ನಾಟಕ ಇಂಟಿಗ್ರೇಟೆಡ್ ಟ್ರೈಬಲ್ ಡೆವೆಲಪ್‌ಮೆಂಟ್ ಪ್ರಾಜೆಕ್ಟ್ ಅಸ್ತಿತ್ವಕ್ಕೆ ಬಂತು.

ಕನಕಪುರದ ಎಸ್‌ಎಲ್‌ಎನ್ ರಸ್ತೆಯ ಬಾಡಿಗೆ ಮನೆಯಲ್ಲಿ ವಾಸ್ತವ್ಯ. ಜೊತೆಗೆ ಒಂಬತ್ತು ಜನ. ಇವರಲ್ಲಿ ನಾಲ್ಕು ಜನ ಸಂಘಟಕರು. ಮೂರು ಜನ ಅನೌಪಚಾರಿಕ ಶಿಕ್ಷಕರು. ಆಫೀಸು ನೋಡಿಕೊಳ್ಳಲು, ಗಿರಿಜನ ಮಹಿಳೆಯರ ಉಳಿತಾಯ ಯೋಜನೆ ನಿಗಾಕ್ಕೆ ಒಬ್ಬರು. ಶಿವರಾಜ್ ನೇತೃತ್ವದ ತಂಡದ ಮೊದಲ ವರ್ಷದ ಸಾಧನೆಯೇ ಅಪೂರ್ವ. ಇದನ್ನು ಗಮನಿಸಿದ ಹುಣಸೂರಿನ ಮಾತೃಸಂಸ್ಥೆ ಅನುದಾನದ ಮೊತ್ತ ದ್ವಿಗುಣಗೊಳಿಸಿತು.

ಕನಕಪುರದ ಕಾಡುಗಳಲ್ಲಿ ಗಿರಿಜನರೇ ಇಲ್ಲವೆಂದು ವಾಸಿಸುತ್ತಿದ್ದ ಅರಣ್ಯ ಇಲಾಖೆ ಕಣ್ಣು ತೆರೆಸಬೇಕಾದರೆ ಒಂದು ದೊಡ್ಡ ಸಾಹಸವೇ ಆಯಿತು. ಇಲ್ಲಿನ ಗಿರಿಜನರಲ್ಲಿ ಹೆಚ್ಚಿನವರು ಇರುಳಿಗರು. ಕೆಲವರು ಸೋಲಿಗರು. ಕಾಡಿನಲ್ಲಿ ಐದಾರು ಕಿಲೋಮೀಟರ್‌ಗೆ ಒಂದರಂತೆ ಅವರ ಒಂಟಿ ಮನೆಗಳು, ರಸ್ತೆಗಳೇ ಇಲ್ಲದ ಕಗ್ಗಾಡಿನ ನಡುವೆ ಸುತ್ತಾಡುತ್ತಾ ಗಿರಿಜನರನ್ನು ಪತ್ತೆ ಹಚ್ಚಿ, ಆರು ಸಾವಿರಕ್ಕೂ ಹೆಚ್ಚು ಜನ ದಟ್ಟಡವಿಯ ನಡುವೆ ಜೀವಿಸುತ್ತಿದ್ದಾರೆ ಎಂದು ಸರ್ವೆ ಮಾಡಿ ಇವರೇ ಹೇಳಬೇಕಾಯಿತು. ಹಾವನೂರು ವರದಿಯಲ್ಲೇ ಇಡೀ ರಾಜ್ಯದಲ್ಲಿ ಕೇವಲ 8187 ಜನ ಇರುಳಿಗರಿದ್ದಾರೆ ಎಂದು ದಾಖಲಾಗಿದ್ದು, ಅದೇ ಸರ್ಕಾರದ ಪಾಲಿಗೆ ವೇದವಾಕ್ಯ. ಅಂಥದರಲ್ಲಿ ಕನಕಪುರ ತಾಲ್ಲೂಕು ಒಂದರಲ್ಲೇ ಆರುಸಾವಿರ ಇರುಳಿಗರಿದ್ದಾರೆ ಎಂದು ಸಾಬೀತುಮಾಡುವುದು ಎಷ್ಟು ಕಷ್ಟ ಆಗಿರಬಹುದು.


ಸರ್ಕಾರ ಇರಬೇಕಾದ್ದು ಜನಕ್ಕಾಗಿ. ಕಾಡನ್ನೇ ನಂಬಿ ಬದುಕುವ ಇರುಳಿಗರು ಅಲ್ಲಿ ಬೆಳೆದಿದ್ದ ಹುಣಸೇಮರ ಕಾಯ್ದುಕೊಂಡು, ಅದರ ಉತ್ಪನ್ನ ಬಳಸುತ್ತಿದ್ದರು. ಅದಕ್ಕೂ ಸರ್ಕಾರ ಕಲ್ಲು ಹಾಕಿತು. ಕೊನೆಗೆ ಕಾಡಿನ 125 ಹುಣಸೇಮರಗಳನ್ನು ಗಿರಿಜನರ ಒಡೆತನದ ಗಿರಿಜನ ಅಭಿವೃದ್ಧಿ ಸಂಘಕ್ಕೆ ವಹಿಸಿಕೊಡುವ ತೀರ್ಮಾನ ಆಗಬೇಕಾದರೆ ಹರ ಸಾಹಸವೇ ಆಗಬೇಕಾಯಿತು. ಅಕ್ಷರ, ಅರಿವು ಗಿರಿಜನರಲ್ಲಿ ಮೂಡಿಸುವುದು ಮೊದಲ ಕೆಲಸ. ಸರ್ಕಾರದ ಸವಲತ್ತು ಪಡೆಯಲು ನೆರವಾಗುವುದು ಇನ್ನೊಂದು. ಶಿವರಾಜ್ ಇಂಥ ಕೆಲಸದಲ್ಲಿ ತೊಡಗಿದಾಗ ನಾನಾ ಅಡ್ಡಿಗಳು. ಗಿರಿಜನರು ಬುದ್ಧಿವಂತರಾದರೆ ತಮಗೇ ನಷ್ಟ ಎಂದು ಅರಿತ ಕೆಲವರು ಬುದ್ಧಿವಂತರ ಒಡರು ಹುಟ್ಟಿಸಲು ನೋಡಿದರು. ಸರ್ಕಾರ ಎಲ್ಲಾ ಮಾಡುವಾಗ ಇವರು ಮಧ್ಯೆ ಯಾಕೆ ಬೇಕು? ಎಂದು ತಕರಾರು ತೆಗೆದರು. ಶಿವರಾಜ್ ಗಿರಿಜನರ ಮನಸ್ಸು ಗೆದ್ದಿದ್ದರು. ಅವರ ಮನೆಗಳಲ್ಲೇ ಊಟ ಮಾಡುತ್ತಾ, ಅವರಲ್ಲಿ ಒಬ್ಬನಂತೆ ನಡೆದುಕೊಂಡ ಅವರು, ಕುಟುಂಬದ ವ್ಯಕ್ತಿಯಂತೆ ಆಯಾ ಕುಟುಂಬಗಳ ಉದ್ಧಾರಕ್ಕೆ ಜನರ ಮನ ಒಲಿಸಿದರು.

ಇದರ ಪರಿಣಾಮ ನಿಧಾನ ಕಾಣಿಸಿತು. ಊರಿನ ಜನ, ಅದರಲ್ಲೂ ಸರ್ಕಾರೀ ಅಧಿಕಾರಿಗಳೆಂದರೆ ಕಾಡುಬಿದ್ದು ಓಡುತ್ತಿದ್ದ ಜನ, ಅಧಿಕಾರಿಗಳನ್ನೇ ಹುಡುಕಿ ಬಂದು ಇಂತಿಂಥ ಕೆಲಸ ಆಗಬೇಕಿದೆ, ಯಾಕೆ ಆಗಿಲ್ಲ ಎಂದು ಪ್ರಶ್ನಿಸುವ ಮಟ್ಟಕ್ಕೆ ಬಂದಿದ್ದಾರೆ.

ಅವರ ಹಿತಾಸಕ್ತಿಗಾಗಿ ಅವರೇ ರೂಪಿಸಿಕೊಂಡ ಗಿರಿಜನ ಅಭಿವೃದ್ಧಿ ಸಂಘ ಇದೆ. 1700 ಮನೆ ಆಗಬೇಕಿದ್ದ ಕಡೆ ಇನ್ನೂರಾದರೂ ಮನೆಗಳಾಗಿವೆ. ಇದೆಲ್ಲದರ ಪರಿಣಾಮವೆಂದರೆ ಗ್ರಾಮ ಪಂಚಾಯ್ತಿಗಳಲ್ಲಿ ಒಂಬತ್ತು ಜನ ಇರುಳಿಗ ಮಹಿಳೆಯರು ಸದಸ್ಯೆಯರಾಗಿ ಆಯ್ಕೆಯಾಗಿದ್ದಾರೆ. ಒಬ್ಬರು ತಾಲೂಕು ಪಂಚಾಯ್ತಿ ಸದಸ್ಯೆಯಾಗಿದ್ದಾರೆ.

ಕನಕಪುರದ ಹೂಳ್ಯ ಕಾಲನಿಯಲ್ಲಿ ಸಣ್ಣಗೆ ಹಚ್ಚಿಸಿಟ್ಟ ಹಣತೆಯೊಂದು ಸದ್ದಿಲ್ಲದೇ ಬೆಳಕು ಚೆಲ್ಲುವ ಕೆಲಸ ಆರಂಭಿಸಿದೆ. ಇದನ್ನು ಮಾಡಿದವರು ಶಿವರಾಜೇಗೌಡ. ಅದರ ಹಿಂದೆ ಹದಿಮೂರು ವರ್ಷಗಳ ಅವಿರತ ಶ್ರಮ ಇದೆ ಎಂದು ಅರಿವಾದಾಗ, ಸ್ವಯಂ ಸೇವಾ ಸಂಸ್ಥೆಯೊಂದರ ಸಾರ್ಥಕತೆ ಕಣ್ಣಿಗೆ ಕಟ್ಟುತ್ತದೆ.

■ ಗಿರೀಶ್, ರಾಮನಗರ



ಇನ್ನೊಬ್ಬರ ರತಿಕ್ರೀಡೆ ಇಣುಕಿ ನೋಡಿ ಆನಂದಿಸುವ ವ್ಯಕ್ತಿಗೆ ಇಂಗ್ಲಿಷ್‌ನಲ್ಲಿ 'ಪೀಪಿಂಗ್ ಟಾಂ' ಎನ್ನುತ್ತಾರೆ. ಮೆಕ್ಸಿಕೋದ ಜೈಲೊಂದರಲ್ಲಿ ಕೈದಿಯೊಬ್ಬನಿಗೆ ತನ್ನ ಪ್ರಿಯತಮೆಯ ಜೊತೆಗೂಡಲು ಅವಕಾಶ ನೀಡಿತ್ತು. ಅವರಿಬ್ಬರ ರತಿ ಮಹೋತ್ಸವ ನೋಡಲು ಲೈಟುಕಂಬ ಏರಿದ ವ್ಯಕ್ತಿಯೊಬ್ಬ ಅಲ್ಲಿಂದ ಜಾರಿಬಿದ್ದು ನೇರವಾಗಿ ಸ್ವರ್ಗ ಸೇರಿದ್ದಾನೆ.

ಈ ರೀತಿಯಾದರೂ ಅವನು ಸ್ವರ್ಗಸುಖ ಕಂಡ ಎಂದು ಸಿನಿಕರು ಈಗ ಹೇಳಬಹುದು.

★

'**ಬೆ**ತ್ತಲಾಗದೆ ಬಯಲು ಸಿಕ್ಕದಿಲ್ಲಿ'

ಎನ್ನುತ್ತದೆ ಕವಿ ವಾಣಿ. ಬೆತ್ತಲಾಗದೇ ಛಾನ್ಸ್ ಸಿಗದು ಇಲ್ಲಿ ಎಂದು ಪಾಶ್ಚಿಮಾತ್ಯ ಜಾಹೀರಾತು ಸಂಸ್ಥೆಗಳು ಸಾರಿ ಹೇಳುತ್ತಿವೆ.

ಇಟಲಿಯ ಪಿರೆಲಿ ಟೈರ್ ಕಂಪೆನಿ ಮುದ್ರಿಸುವ ಕ್ಯಾಲೆಂಡರ್‌ಗಳು ಜಗತ್‌ಪ್ರಸಿದ್ಧ. ಮುಂದಿನ ಸಹಸ್ರಮಾನದ ಪಿರೆಲಿ ಕ್ಯಾಲೆಂಡರ್‌ನಲ್ಲಿ ಕಾಣಿಸಿಕೊಳ್ಳುವ ಲಲನೆಯರೆಲ್ಲ ಈ ಬಾರಿ ಬರೀ ಬೆತ್ತಲೆ.

ಪಿರೆಲಿ ಟೈರ್‌ಗೆ ಇದರಿಂದ ಬೇಡಿಕೆ ಬರುತ್ತದೋ ಇಲ್ಲವೋ ತಿಳಿಯದು; ಕ್ಯಾಲೆಂಡರ್‌ಗೆ ಬೇಡಿಕೆ ಬರುವುದಂತೂ ಖಂಡಿತ.

★



ಈ ಚಿತ್ರದಲ್ಲಿ ಇರುವವರು ಯಾರು ಗೊತ್ತೇ? ನಿಮಗೆ ಆಶ್ಚರ್ಯವಾಗಬಹುದು. ಈಕೆ ಕುಮಾರಿ ಜಯಲಲಿತಾ. ರಾಜಕೀಯ ಪ್ರವೇಶಿಸುವ ಮುನ್ನ ಸಿನಿಮಾದಲ್ಲಿ ಅಭಿನಯಿಸುವಾಗಿನ ಒಂದು ಭಂಗಿ.

ಇವತ್ತಿನ ಸಿನಿಮಾಗಳಲ್ಲಿನ ಪ್ರಣಯ ದೃಶ್ಯ ಪ್ರಣಯವೇ ಅಲ್ಲ ಎಂದು ಹೇಳಿರುವ ಆಕೆ, ನೂರಾರು ಜನ ಸಹನರ್ತಕರ ಜೊತೆ ಕುಣಿಯುವುದೇ ಪ್ರಣಯವಾಗಿದೆ ಎಂದು ಗೇಲಿ ಮಾಡಿದ್ದಾರೆ.

ಅಷ್ಟೇ ಅಲ್ಲ, ತಾವು ಎಂಥದ್ದೇ ದೃಶ್ಯವಾಗಲಿ ಒಂದೇ ಟೇಕ್‌ನಲ್ಲಿ ಮುಗಿಸುತ್ತಿದ್ದ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ.

ಹಾಗೇ ಎಲ್ಲವನ್ನೂ ರಾಜಕೀಯದಲ್ಲಿ ಒಂದೇ ಟೇಕ್‌ನಲ್ಲಿ ಮುಗಿಸುವ ಹಾಗೆ ಇದ್ದಿದ್ದರೆ!

★

ಜೀಸಸ್ ಸಸ್ಯಾಹಾರಿಯಾಗಿದ್ದನೇ?

ಹೌದು ಎನ್ನುತ್ತದೆ ಅಮೆರಿಕಾದ ಪ್ರಾಣಿದಯಾ ಸಂಘ ಒಂದು. ಬ್ರಿಟನ್ನಿನಲ್ಲಿ ಇತ್ತೀಚೆಗೆ ಪ್ರಚಾರ ಆರಂಭಿಸಿದ ಈ ಸಂಸ್ಥೆಯ ಘೋಷಣೆ.

'ಜೀಸಸ್ ಸಸ್ಯಾಹಾರಿ ಆಗಿದ್ದ'

ಈ ಘೋಷಣೆಯಿಂದಾಗಿ ಕ್ರೈಸ್ತರು, ಯಹೂದ್ಯರಿಬ್ಬರಿಗೂ ಮುಜುಗರವಾಗಿದೆಯಂತೆ.

★

ಮೈಸೂರಿನಲ್ಲಿ ಇಂಟಿಗ್ರೇಟ್ - 1999 ಎಂಬ ಕೈಗಾರಿಕಾ ವಸ್ತು ಪ್ರದರ್ಶನ ನಡೆಯಿತು. ಉದ್ಘಾಟಿಸಿದವರು ರಾಜ್ಯದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ.

ಆಗ ಮಾತಾಡುತ್ತಾ ಮೈಸೂರಿಗೆ ಮೊದಲು ದೊಡ್ಡ ಕಾರ್ಖಾನೆ ತಂದ ಐಡಿಯಲ್ ಜಾವಾ ಕಾರ್ಖಾನೆ ಸ್ಥಾಪಿಸಿದ ಎಫ್.ಕೆ. ಇರಾನಿ ನಮ್ಮ ಎದುರೇ ಇದ್ದಾರೆ. ಅವರು ಅಭಿನಂದನಾರ್ಹರು ಎಂದು ಎದುರು ಸಾಲಲ್ಲಿ ಕುಳಿತಿದ್ದ ಹಿರಿಯರೊಬ್ಬರತ್ತ ತೋರಿದರು.

ವಿಚಿತ್ರವೆಂದರೆ ಜಾವಾ ಕಾರ್ಖಾನೆ ಸ್ಥಾಪಿಸಿದ ಇರಾನಿ ನಿಧನರಾಗಿ ಕೇವಲ ಕೆಲವೇ ವರ್ಷಗಳಾಗಿವೆ.

★

ಕಾಂಬೋಡಿಯಾದ ಆದಿವಾಸಿಗಳು ಅವರ ವೈದ್ಯನನ್ನೇ ಕೊಂದು ತಿಂದ ಪ್ರಕರಣ ವರದಿಯಾಗಿದೆ.

ಮಾಟಗಾರನೂ ಆಗಿದ್ದ ಈ ವೈದ್ಯ ಬುಡಕಟ್ಟಿನ ಕೆಲವರ ಮೇಲೆ ಮಾಟ ಮಾಡಿ ಕೇಡು ತಂದಿದ್ದನೆಂದು ಅವರ ಆರೋಪ.

ಮಾಟಗಾರನ ವರ್ತನೆಯಿಂದ ಬೇಸತ್ತ ಕೆಲವರು ಅವನನ್ನು ಗುಂಡಿಟ್ಟುಕೊಂದು ತಾವು ಕುಡಿಯುತ್ತಿದ್ದ ಹೆಂಡದ ಜೊತೆ ಸತ್ತವನ ಶ್ವಾಸಕೋಶ ಭಕ್ಷಿಸಿದರೆಂದು ವರದಿಗಳು ಹೇಳಿವೆ.

★

ಇಟಲಿಯಿಂದ ಬಂದಿರುವ ಸೊಸೆಯ ಬಗ್ಗೆ ಇಲ್ಲಿ ನಾನಾ ರೀತಿಯ ವಿವಾದಗಳು ಇವೆ. ಆದರೆ ಬ್ರಿಟನ್ನಿಗರ ಪಾಲಿಗೆ ಇಟಲಿಯ ಅರವತ್ತೈದರ ಸೋಫಿಯಾ ಲೋರೆನ್ ಜಗತ್ ಸುಂದರಿಯಂತೆ.

ಬ್ರಿಟನ್ನಿನಲ್ಲಿ ನಡೆದ ಸರ್ವೆಯೊಂದರಲ್ಲಿ ಈ ವಿಚಾರ ವ್ಯಕ್ತವಾಗಿದೆ. ಅಮೆರಿಕಾದ ಅತ್ಯಂತ ಜನಪ್ರಿಯ ಸುಂದರಿ 69 ವರ್ಷದ ರಾಕ್ವೆಲ್ ವೆಲ್ಷ್‌ಗೆ ಏಳನೇ ಸ್ಥಾನ ನೀಡಿದ್ದಾರೆ ಬ್ರಿಟನಿಗರು.

ಎಷ್ಟಾದರೂ ಬ್ರಿಟಿಷರು ತೀರಾ ಸಂಪ್ರದಾಯಸ್ಥರಲ್ಲವೇ! ಅಮೆರಿಕಾದವರು ಮರ್ಲಿನ್ ಮನ್ರೋ ಅಪ್ರತಿಮ ಸುಂದರಿ ಎನ್ನುತ್ತಿರುವಾಗ, ಬ್ರಿಟನ್ ಬೇರೆ ನಿಲುವು ತಳೆದಿರುವುದು ತೀರಾ ಸರಿ ಎಂದು ಅಲ್ಲಿನವರು ಹೇಳುತ್ತಾರೆ. ಯಾಕೆಂದರೆ ಸೋಫಿಯಾಳಲ್ಲಿ ಸೌಂದರ್ಯದ ಜೊತೆಗೆ ಪ್ರಬುದ್ಧತೆ ಕೂಡ ಇದೆ ಎನ್ನುತ್ತಾರೆ ಅವರು.

★

ರೇಷ್ಮೆ ಮೃದು, ನಾಜೂಕಿಗೆ ಹೆಸರಾದುದು. ಇಂಥ ನಯವಾದ ರೇಷ್ಮೆ ಎಳೆಗಳಿಂದ ಗುಂಡು ನಿರೋಧಕ ಜಾಕೆಟ್ ನಿರ್ಮಿಸಿದರೆ!

ಹೌದು. ಅದನ್ನು ಥೈಲ್ಯಾಂಡಿನ ಸಂಶೋಧಕರೊಬ್ಬರು ಸಾಧ್ಯವಾಗಿಸಿದ್ದಾರೆ. ಅಲ್ಲಿನ ರಾಜಮಂಗಲ ತಂತ್ರಜ್ಞಾನ ಸಂಸ್ಥೆಯಲ್ಲಿ ಸುಜರ್ ಖೊಜಿಮತೆ ಒಬ್ಬ ಸಂಶೋಧಕ. ಅವರು ಕಂಡು ಹಿಡಿದ ಗುಂಡು ನಿರೋಧಕ ಬಟ್ಟೆ ತಯಾರಿಸುವ ರೇಷ್ಮೆ ಎಳೆ ತಂತ್ರಕ್ಕೆ ಇತ್ತೀಚೆಗೆ ಬಹುಮಾನ ದೊರೆತಿದೆ. ಏಷಿಯಾದ ಬಹುದೊಡ್ಡ ಸಾಧಕ ಎಂದು ಬೆಳ್ಳಿ ಪದಕ ನೀಡಲಾಗಿದೆ.

ಅವರು ಸಂಶೋಧಿಸಿದ ತಂತ್ರಜ್ಞಾನದಿಂದ ನಿರ್ಮಿಸಿದ ಗುಂಡು ನಿರೋಧಕ ವಸ್ತ್ರ ಆಮದು ಮಾಡಿಕೊಳ್ಳುವ ವಸ್ತ್ರಗಳಿಗಿಂತ ತುಂಬಾ ಅಗ್ಗ. ಅದಕ್ಕಾಗೇ ಅವರಿಗೆ ಪದಕದ ಪ್ರಶಸ್ತಿ.

★

'**ಇ**ದ್ದದ್ದು ಇದ್ದ ಹಾಗೆ ಹೇಳಿದರೆ ಎದ್ದು ಬಂದು ಎದೆಗೆ ಒದ್ದರು' ಎನ್ನುವುದು ಗಾದೆ. ಸತ್ಯ ಹೇಳಿ ಬದುಕುವುದು ಕಷ್ಟ. ಅದನ್ನು ಸ್ಟಾಕ್‌ಹೋಂನಲ್ಲಿ ಇತ್ತೀಚೆಗೆ ಮಹಿಳೆಯರ ತಂಡ ಒಂದು ಸಾಬೀತು ಮಾಡಿತು.

ಸ್ಟಾಕ್‌ಹೋಂ ಚಿತ್ರೋತ್ಸವಕ್ಕೆ 'ಸೆಕ್ಸ್- ದಿ ಅನಾಬೆಲ್ ಚಾಂಗ್ ಸ್ಟೋರಿ' ಎಂಬ ಚಿತ್ರ ಆರಿಸಿದ್ದೇ ಇವರ ಸಿಟ್ಟಿಗೆ ಕಾರಣ. ದಂಡು ಕಟ್ಟಿಕೊಂಡು ಬಂದ ಮಹಿಳಾ ತಂಡವೊಂದು ಚಲನಚಿತ್ರ ಮಂದಿರದ ಮೇಲೆ'ದುರ್ವಾಸನೆ ಚೆಲ್ಲುವ

ಬಾಂಬ್‌ಗಳನ್ನು ಎಸೆಯಿತು.

ಪೋಲಿ ತಾರೆ ಎಂದೇ ಹೆಸರಾಗಿದ್ದ ಗ್ರೇಸ್ ಕ್ವಿಕ್ ಅಲಿಯಾಸ್ ಅನಾಬೆಲ್ ಚಾಂಗ್, ಹತ್ತು ತಾಸಿನ ಅವಧಿಯಲ್ಲಿ 251 ಪುರುಷರ ಜೊತೆ ಮಲಗಿ ಇತಿಹಾಸ ನಿರ್ಮಿಸಿದ್ದಳು. ಆದರೆ ಈಕೆಯ ಬದುಕಿನ ಚಿತ್ರ ತೋರುವುದರಿಂದ ಮಹಿಳೆಯರಿಗೆ ಅಪಮಾನವಾಗುತ್ತದೆ ಎಂದು ಸ್ವೀಡನ್‌ನ ಮಹಿಳೆಯರ ವಾದ. ಹಾಗಾಗಿ ಪ್ರತಿಭಟನೆ.

★

ಮದುವೆ ಮಾಡಿಸುತ್ತಿದ್ದಾತನೇ ಮದುವೆ ಇಲ್ಲದೆ ಸತ್ತರೆ! ವಿಚಿತ್ರ ಸತ್ಯ ಇದು. ಗಂಡು ಹೆಣ್ಣು ಹುಡುಕಿ, ಅವರ ಜಾತಕ ತಾಳೆ ನೋಡಿ, ಹತ್ತು ಸಾವಿರಕ್ಕೂ ಹೆಚ್ಚು ಮದುವೆ ಮಾಡಿಸಿದ್ದ ಆತ. ಇತ್ತೀಚೆಗೆ ಆತ ಸತ್ತಾಗ, ಅವನೇ ಮದುವೆ ಆಗದೇ ಇದ್ದುದು ಪತ್ತೆಯಾಯಿತು.

ಪೂರ್ವ ಬಾಂಗ್ಲಾದ ನಸೀರ್ ನಗರದ ಮೋನು ಮಿಯಾ ಇಂಥ ವ್ಯಕ್ತಿ. ಬಹಳ ಕಾಲ ಮದುವೆಗೆ ಗಂಡು ಹೆಣ್ಣು ಹೊಂದಿಸುವುದೇ ಕಸುಬಾಗಿಸಿ ಕೊಂಡಿದ್ದ. ಹತ್ತು ಸಾವಿರ ಜೊತೆ ಕೂಡಿಸಿದರೂ, ಇವನಿಗೇ ತಾಳೆಯಾಗುವ ಹೆಣ್ಣು ಸಿಗಲಿಲ್ಲವೋ! ಅಥವಾ ಇತರರ ಮದುವೆ ಮಾಡಿ ತಮಾಷೆ ನೋಡುವುದೇ ಇವನ ಚಟವಾಗಿತ್ತೋ! ತಿಳಿಯದು. ತನ್ನ 87 ವರ್ಷದ ಜೀವಿತಾವಧಿಯನ್ನು ಈ ಮದುವೆ ದಲ್ಲಾಳಿ ಬ್ರಹ್ಮಚಾರಿಯಾಗಿಯೇ ಕಳೆದಿದ್ದು ವಿಪರ್ಯಾಸ.












★


ಅಮಿತಾಬ್ ಆಯ್ಕೆ ಮಾಡಿದ ಹತ್ತು ಜನ ಸುಂದರಿಯರ ಪಟ್ಟಿಯಲ್ಲಿ ಮಾಧುರಿ ದೀಕ್ಷಿತ್ ಕೂಡ ಸ್ಥಾನ ಪಡೆದಿದ್ದಾಳೆ.

ಇಂಗ್ಲಿಷ್ ಪತ್ರಿಕೆಯೊಂದಕ್ಕೆ ಅಮಿತಾಬ್ ಆರಿಸಿದ ಹತ್ತು ಜನರ ಪಟ್ಟಿಯಲ್ಲಿ ಇಪ್ಪತ್ತನೇ ಶತಮಾನದ ಸುಂದರಿಯರನ್ನು ಹೆಸರಿಸಿದ್ದಾನೆ.

ಆತನ ದೃಷ್ಟಿಯಲ್ಲಿ ರಾಜಮಾತೆ ಗಾಯತ್ರಿದೇವಿ, ಜೆಮಿನಿ ಗಣೇಶನ್ ಹೆಂಡತಿ ಸಾವಿತ್ರಿ ಕೂಡ ಈ ಶತಮಾನದ ಸುಂದರಿಯರಂತೆ.

ಇತ್ತೀಚೆಗೆ ಸಿನಿಮಾದಲ್ಲಿಯೂ ಜನಪ್ರಿಯತೆ ಪಡೆಯುತ್ತಿರುವ ವಿಶ್ವಸುಂದರಿ ಐಶ್ವರ್ಯ‌ರೈ ಕೂಡ ಅಮಿತಾಬ್‌ನ ಸುಂದರಿಯರ ಪಟ್ಟಿಯಲ್ಲಿ ಇದ್ದಾಳೆ.





ಇಗೋ ಇದು ಆಧುನಿಕ ಮೇಕಪ್



ಶೃಂಗಾರ ಒಂದು ಕಲೆ. ಮೇಕಪ್ ಅದಕ್ಕೊಂದು ಸಾಧನ. ಮನೆಯ ನಾಲ್ಕು ಗೋಡೆಗಳಾಚೆ, ಹೊರಗಿನ ಪ್ರಪಂಚಕ್ಕೆ ಕಾಲಿಟ್ಟ ಹೆಣ್ಣಿಗೆ ಮೇಕಪ್ ಅನಿವಾರ್ಯವಾಯಿತು. ತನ್ನ ಸೌಂದರ್ಯವನ್ನು ಸಾರಿ ಹೇಳುವ ಜೊತೆಗೇ, ತನ್ನ ವ್ಯಕ್ತಿತ್ವವನ್ನೂ ಪ್ರತಿಪಾದಿಸುವ ಸಾಧನವಾಗಿದೆ ಮೇಕಪ್.

ಭಾರತೀಯರಿಗೆ ಮೇಕಪ್ ಚಿರಪರಿಚಿತ. ನಾನಾ ರೀತಿಯ ಮುಖಚೂರ್ಣ ತಯಾರಿಕೆ ಇಲ್ಲಿ ಜನಪ್ರಿಯ. ಅರಿಸಿನ, ಚಂದನ ಮುಂತಾದ ಗಿಡ ಮೂಲಿಕೆಗಳಿಂದ ದೇಹ ಸೌಂದರ್ಯ ವೃದ್ಧಿಸಿಕೊಳ್ಳುವ ಕಲೆ ಅವರಿಗೆ ಪರಂಪರಾಗತ ಕೊಡುಗೆ.

ಇಂಥ ಶೃಂಗಾರ ಸಾಧನಗಳ ವಿಚಾರದಲ್ಲಿ ಪ್ರಾಚೀನ ಈಜಿಪ್ಟ್ ನಾಗರಿಕತೆ ಕೂಡ ಗಮನಾರ್ಹ ಸಾಧನೆ ಮಾಡಿತ್ತು. ಜಗದ್ವಿಖ್ಯಾತ ಕ್ಲಿಯೋಪಾತ್ರಾಳ ಹಾಲಿನ ಸ್ನಾನ, ನಾನಾ ಮುಖವರ್ಣಿಕೆಗಳನ್ನು ಇತಿಹಾಸ ದಾಖಲಿಸಿದೆ.

ಮನೆಯ ನಾಲ್ಕು ಗೋಡೆಗಳಾಚೆ ಕಾಲಿಡುವಂತೆ ಮಾಡಿದ ನಾಗರೀಕತೆ ಹೆಣ್ಣಿಗೆ ತನ್ನ ವ್ಯಕ್ತಿತ್ವದ ಪರಿಚಯವನ್ನೂ ಮಾಡಿತು. ಕೇವಲ ಗಣಿಕೆಯರು, ವೇಶ್ಯಾ ಸ್ತ್ರೀಯರಿಗೆ ಮಾತ್ರ ಮೀಸಲಾಗಿದ್ದ ಪ್ರಸಾಧನ ಸಾಮಗ್ರಿಗಳು ವಿದ್ಯಾವಂತ, ಆಧುನಿಕ ಹೆಣ್ಣಿನ ಸಂಗಾತಿಗಳಾದವು. ತನ್ನ ಮುಖ, ಮೈಯ ಚೆಲುವನ್ನು ಕಾಣುವಂತೆ ಮಾಡುವುದು ಇದರ ಮುಖ್ಯ ಉದ್ದೇಶ. ಇಂಥ ಸೌಂದರ್ಯ ಪಡೆಯದ ಹೆಣ್ಣುಗಳು ಏನು ಮಾಡಬೇಕು? ಚಿಂತೆ ಬೇಡ ಎಂದರು ಪ್ರಸಾಧನ ತಜ್ಞರು.

ಚಪ್ಪಟೆ ಮೂಗು, ಮಾಟವಾಗಿ ಕಾಣಿಸುವಂತೆ, ಕಣ್ಣ ಹುಬ್ಬು ಕಮಾನಾಗಿ ಕಣ್ಸೆಳೆಯುವಂತೆ ಮಾಡಬಲ್ಲ ಕಲೆಯೇ ರೂಢಿಗೆ ಬಂತು. ಈ ಶತಮಾನದ ಆರಂಭದಲ್ಲಿ ಹೆಚ್ಚು ಶ್ರೀಮಂತ, ಹೆಚ್ಚು ಪ್ರತಿಷ್ಠಿತ ಎಂದು ಭಾವಿಸಿದ ಹೆಣ್ಣುಗಳಿಗೆಲ್ಲ ಈ ಪ್ರಸಾಧನದ ಗೀಳು ಬೆಳೆಯಿತು. ಅತಿಯಾದ ಪ್ರಸಾಧನ ಬಳಕೆ ಮುಂದುವರಿಯಿತು. ಐವತ್ತು, ಅರವತ್ತರ ದಶಕದಲ್ಲಿ ಕೂಡ ಕ್ಲಿಯೋಪಾತ್ರಾಳ ಪಾತ್ರ ನಿರ್ವಹಿಸಿದ ಎಲಿಜಬೆತ್ ಟೇಲರ್ ಆರಾರು ಪದರು, ಮೇಕಪ್ ಬಳಸುತ್ತಿದ್ದಳು. ಕಣ್ಣಿಗೆ ನಾನಾ ಥರದ ಮ್ಯಾಸ್ಕರ್ ಬಳಕೆಯಾಗುತ್ತಿತ್ತು.


ಅದೇ ಸುಮಾರಿಗೆ ಸ್ತ್ರೀ ವಿಮೋಚನಾವಾದಿಗಳು ಪ್ರಸಾಧನಗಳ ವಿರುದ್ಧ ಬಂಡೆದ್ದರು. ಪ್ರಸಾಧನ ಬಳಸಿ ಶೃಂಗರಿಸಿಕೊಂಡು, ತಾನು ಗಂಡಸನ್ನು ಸೆಳೆಯಲೆಂದೇ ಸೃಷ್ಟಿಯಾದ ಸಾಮಗ್ರಿ ಎಂಬಂತೆ ಬಿಂಬಿಸುವುದು ಬೇಡ. ನಾವು ಹೇಗಿದ್ದೇವೋ ಹಾಗಿರೋಣ ಎಂಬುದು ಇವರ ವಾದ.

ಇಂಥವರ ಪಾಲಿಗೆ 'ಬ್ರಾ' ಕೂಡ ಒಂದು ಕೃತ್ರಿಮ ಸಾಧನ ಎನಿಸಿ, ಮಹಿಳೆಯರು 'ಬ್ರಾ' ಧರಿಸುವುದನ್ನು ಬಹಿಷ್ಕರಿಸಿದರು. ತಮ್ಮ ಪ್ರತಿಭಟನೆ ಸೂಚಿಸಲು 'ಬ್ರಾ'ಗಳನ್ನು ಬಹಿರಂಗವಾಗಿ ಸುಟ್ಟರು. ಇದರಿಂದ ಶೃಂಗಾರ ಪ್ರಿಯ ಹೆಣ್ಣುಗಳ ನಿಲುವಿನಲ್ಲಿ ಹೆಚ್ಚಿನ ಬದಲಾವಣೆ ಏನೂ ಆಗಲಿಲ್ಲ. ಬದಲಿಗೆ ಮೇಕಪ್ ಸಾಮಗ್ರಿ ಬಳಕೆ ಇನ್ನಷ್ಟು ವೈಜ್ಞಾನಿಕ ರೀತಿಯಲ್ಲಿ ತಲೆ ಎತ್ತಿತು. ಬ್ಯೂಟಿ ಪಾರ್ಲರ್‌ಗಳು ಜನಪ್ರಿಯವಾದವು.

ರೂಜ್, ಲಿಪ್‌ಸ್ಟಿಕ್, ಕಾಡಿಗೆಗಳಂಥ ಸಾಮಗ್ರಿಗಳು ಸ್ತ್ರೀಯರ ಕೈಚೀಲದಲ್ಲಿ ಸ್ಥಾನ ಪಡೆದವು. ಒಂದು ಕಾಲಕ್ಕೆ ಕಾಡಿಗೆ ಬಳಿದ ಕಣ್ಣುಗಳ ಹೆಂಗಸರೇ ಮಹಾ ಸುಂದರಿಯರು ಎನ್ನುವಂತೆ ಚಿತ್ರಕಾರರು ಚಿತ್ರ ಬಿಡಿಸುತ್ತಾ ಹೋದರು.

ನಾನಾ ಮೂಲಿಕೆಗಳ ಎಲೆಯನ್ನು ತುಪ್ಪದಲ್ಲಿ ಅದ್ದಿ ಉರಿಸಿ, ಅದರ ಬೂದಿಯನ್ನು ಬೆಣ್ಣೆಯೊಂದಿಗೆ ಬೆರೆಸಿ ಕಾಡಿಗೆ ತಯಾರಿಸಲಾಗುತ್ತಿತ್ತು. ಹಚ್ಚಿಕೊಂಡಾಗ ಕಣ್ಣಿಗೆ ಸ್ವಲ್ಪ ಉರಿ. ಆನಂತರ ತಂಪಾಗುತ್ತದೆ ಎಂದು ಪ್ರಚಾರವಾಯಿತು. ಎಲ್ಲೋ ಸಂಜೆಯ ಪಾರ್ಟಿಗಳಿಗೆ, ಮದುವೆ ಮನೆಗಳಿಗೆ ಕೆಲ ತಾಸು ಹೋಗಿ ಬರುವ ಮಹಿಳೆಗೇನೋ ಇದು ಸರಿ. ದಿನವೆಲ್ಲ ಹೊರಗೆ ದುಡಿಯಬೇಕಾದ ಮಹಿಳೆಗೆ ಕಾಡಿಗೆ ಶಾಪ ಎನಿಸಿತು. ಸ್ವಲ್ಪ ಹೊತ್ತಿನಲ್ಲಿ ಕಾಡಿಗೆ ಕರಗಿ ಆಚೀಚೆ ಹರಡಿಕೊಳ್ಳುತ್ತದೆ. ಗೊತ್ತಿಲ್ಲದೇ ತಿಕ್ಕಿಕೊಂಡರೆ ಮುಖಕ್ಕೂ ಮೆತ್ತಿಕೊಳ್ಳುತ್ತದೆ.

ಅಂಥ ಮಹಿಳೆಯರಿಗೆ ಐ ಲೈನರ್‌ಗಳು ಬಂದವು. ಕಣ್ಣ ರೆಪ್ಪೆಯ ಕೂದಲು ತಿದ್ದಿ ನೀಟುಗೊಳಿಸುವ ಪೆನ್ಸಿಲ್ ತರಹದ ಕುಂಚಗಳು ಪ್ರತ್ಯಕ್ಷ ಆದವು.



ಐವತ್ತು, ಅರವತ್ತರ ದಶಕದಲ್ಲಿಯೇ ನಾನಾ ಬಗೆಯ ಮ್ಯಾಸ್ಕರ್ ಕಣ್ಣ ರೆಪ್ಪೆಗೆ ಬಳಸಲಾರಂಭಿಸಿದರು. ಚಿನ್ನದ ಬಣ್ಣ, ಗಾಢ ನೀಲಿಯ ರೆಪ್ಪೆಯ ಬಣ್ಣದೊಡನೆ ಕೆನ್ನೆಯ ಕೆಂಪು ಎದ್ದುಕಾಣುವಂತೆ ಮಾಡಲಾಗುತ್ತಿತ್ತು.

ಅದಾದ ಮೇಲೆ ಕೃತಕ ರೆಪ್ಪೆಗಳನ್ನು



ಜನ ಬಳಸಲಾರಂಭಿಸಿದರು. ಹುಬ್ಬಿನ ಆಕೃತಿ ಕೂಡ ಬದಲಾಗುತ್ತಾ ಹೋಯಿತು. ದಟ್ಟ ಹುಬ್ಬಿನ ಬದಲು ಗೆರೆ ಎಳೆದಂತೆ ಕಮಾನಾಗಿ ಕಾಣುವ ಹುಬ್ಬುಗಳನ್ನು ತಿದ್ದಿ ತೀಡಲಾಯಿತು. ಹೆಚ್ಚಾದ ಹುಬ್ಬಿನ ಕೂದಲು ಕಿತ್ತು ತೆಗೆಯಲು ಟ್ವೈಜಿಂಗ್, ವ್ಯಾಕ್ಸಿಂಗ್ ಮುಂತಾದ ತಂತ್ರಗಳ ಬಳಕೆ ಆಯಿತು. ಲಿಪ್‌ಸ್ಟಿಕ್ ಅಥವಾ ತುಟಿ ರಂಗಿನ ವಿಚಾರವನ್ನೇ ನೋಡಿ. ಒಂದು ಕಾಲಕ್ಕೆ ತುಟಿ ರಂಗು ಪಡೆಯಲು ತಾಂಬೂಲ ಒಂದೇ ಸುಲಭದ ಉಪಾಯವಾಗಿತ್ತು. ಆಮೇಲೆ ಗುಲಾಬಿ ತುಟಿರಂಗು ಬಂತು. ಬಹಳಕಾಲ ಗುಲಾಬಿ, ಕೆಂಪು ತುಟಿರಂಗುಗಳದ್ದೇ ಸಾಮ್ರಾಜ್ಯ. ಇವಿಷ್ಟೇ ಯಾಕಾಗಬೇಕು? ಬೇರೆ ಗಾಢವರ್ಣ ಇದ್ದರೇನು ತಪ್ಪು? ಅಲ್ಲದೆ ತೊಡುವ ಬಟ್ಟೆಗಳಿಗೂ ತುಟಿರಂಗುಗಳು ಹೊಂದಿಕೆ ಆಗಬೇಕಾದರೆ ಅವುಗಳು ಗಾಢವಾಗಿ, ನಾನಾ ವರ್ಣದಲ್ಲಿ ಬಳಸಬೇಕೆಂಬ ವಿಚಾರ ಜನಪ್ರಿಯವಾಯಿತು.

ಆದರ ಜೊತೆಗೇ ಪೌಡರ್ ಬಳಕೆ ಬೆಳೆಯುತ್ತಾ ಹೋಯಿತು. ರೇಷ್ಮೆ ಬಟ್ಟೆಗಳಲ್ಲಿ ಹಲವಾರು ಸಲ ಜರಡಿಯಾಡಿ ಪಡೆದ ಫೇಸ್‌ಪೌಡರ್ ವ್ಯಾನಿಟಿ ಬ್ಯಾಗ್‌ನಲ್ಲಿ ಜಾಗಪಡೆಯಿತು. ಅಂದ ಮುಖದಲ್ಲಿ ಮೂಗಿನ ಮೇಲೆ ಕಾಣಿಸುವ ಬೆವರ ಹನಿ ತಿದ್ದಿಕೊಂಡಾಗ ಪೌಡರ್ ಅಳಿಸುತ್ತಿತ್ತು. ಅದನ್ನು ಮರು ಲೇಪಿಸಲು ಲೇಡೀಸ್ ರೂಂಗಳಿಗೆ ಹೋಗಿ ಬರುವುದೇ ಒಂದು ಫ್ಯಾಷನ್ ಆಯಿತು.

ಇಂಥ ಪೌಡರ್ ಪುಟ್ಟ ಪೆಟ್ಟಿಗೆಯಲ್ಲಿ ಇಡಲು ನಾನಾ ವಿನ್ಯಾಸಗಳು ಹುಟ್ಟಿಕೊಂಡವು. ಗಂಧ, ಮರ, ಆಮೆಚಿಪ್ಪು, ಪೌಡರ್ ಪೆಟ್ಟಿಗೆಯ ತಯಾರಿಕೆಗೆ ಸಾಲುಗಟ್ಟಿ ನಿಂತವು. ಮುಚ್ಚಿದಾಗ ಠಪ್ಪೆಂದು ಸದ್ದು ಮಾಡುವ ಕೊಂಡಿ ತಗುಲಿಸಲಾಯಿತು. ತೆರೆದಾಗ ಮುಖವಷ್ಟೇ ಕಾಣಿಸುವ ಪುಟ್ಟ ಕನ್ನಡಿಗಳನ್ನು ಅಳವಡಿಸಲಾಯಿತು.

ಮುತ್ತು, ಚಿನ್ನದ ಆಕೃತಿ, ವಜ್ರಹಚ್ಚಿದ ಪೌಡರ್ ಪೆಟ್ಟಿಗೆಗಳನ್ನು ಪಾರಿತೋಷಕವಾಗಿ ಕೊಡುವ ಪರಿಪಾಠ ಆರಂಭವಾಯಿತು. ಇಷ್ಟೆಲ್ಲ ಆದ ಮೇಲೆ ತಲೆಗೂದಲು ಬದಲಾಗದಿದ್ದರೆ ಹೇಗೆ? ಗೌರಮ್ಮನ ಹಾಗೆ ಬಿಗಿಯಾಗಿ ಕೂದಲು ಗಂಟು ಕಟ್ಟುತ್ತಿದ್ದ, ಜಡೆ ಹೆಣೆಯುತ್ತಿದ್ದ ಪರಿಪಾಠ ತಪ್ಪಿ, ಉದ್ದ ಕೂದಲಿಗಿಂತ ನಿರ್ವಹಿಸಲು ಸುಲಭವಾಗುವಂತೆ ಬಾಬ್‌ಕಟ್, ಬಾಯ್‌ಕಟ್ ಮುಂತಾದವು ತಲೆ ಎತ್ತಿದವು. ಇಂಥ ಮಾರ್ಪಾಡಿಗೆಂದೇ ಮಹಿಳೆಯರ ಪಾರ್ಲರ್‌ಗಳು ಜನಪ್ರಿಯವಾಗತೊಡಗಿದವು.

ನೇರ ಕೂದಲು ಗುಂಗುರುಗೊಳಿಸುವ, ಗುಂಗುರುಕೂದಲು ನೇರಗೊಳಿಸುವ ತಂತ್ರ, ಲೋಷನ್‌ಗಳೂ ಬಂದಿವೆ.

ಮೇಕಪ್ ಎನ್ನುವುದು ಕೇವಲ ಅಂದವಾಗಿ ಕಾಣುವ ಸಾಧನವಲ್ಲ ಅದೊಂದು ವ್ಯಕ್ತಿತ್ವದ ಅಭಿವ್ಯಕ್ತಿ ಎನ್ನುವ ಹಂತಕ್ಕೆ ಈಗ ಬಂದಾಗಿದೆ. ಮೇಲು ನೋಟಕ್ಕೆ ಶೃಂಗಾರದ ರೀತಿಯಲ್ಲಿ ನಾನಾ ಬದಲಾವಣೆ ಕಾಣುತ್ತವಾದರೂ ಅಂದವಾಗಿ ಕಾಣಬೇಕು, ತನ್ನ ವ್ಯಕ್ತಿತ್ವವೊಂದನ್ನು ಪ್ರತಿಪಾಲಿಸಬೇಕೆಂಬ ಛಲವೇ ಹೆಣ್ಣಿನ ಮೇಕಪ್‌ಗೆ ಮೂಲ ಪ್ರೇರಣೆ.

■ ರಜನಿ ಶರ್ಮಾ

ಬಾಡಿಗೆದಾರರಿಗೆ ಕಿರುಕುಳ ಕೊಡುವ ಓನರ್‌ಗಳು

ನನ್ನ ತೀರಾ ಪರಿಚಯದ ಸ್ನೇಹಿತೆಯೊಬ್ಬರು ಅಂದು ನಮ್ಮ ಮನೆಗೆ ಬಂದಾಗ ನನಗೇಕೋ ಆಕೆಯನ್ನು ನೋಡಿ ದಿಗಿಲಾಯಿತು. ಕಾರಣ ಕೆಂಪು, ಕೆಂಪಾದ ಅವರ ಮುಖ ಕೆದರಿದ ಕೂದಲು ಅಸ್ತವ್ಯಸ್ತ ಸೀರೆ ''ನೀರು ಬೇಕು'' ಎಂದು ನಾನು ಕೇಳುವ ಮೊದಲೇ ನನ್ನನ್ನೇ ಕೇಳಿ ಕುರ್ಚಿಯ ಮೇಲೆ ಕುಕ್ಕರಿಸಿದರು. ''ಏನಾಯ್ತು.... ಇವರೆ'' ನೀರಿನ ಲೋಟ ಕೈಗೆ ಕೊಡುತ್ತ ಕೇಳಿದೆ. ಸ್ವಲ್ಪ ಹೊತ್ತು ಆಕೆಯ ಬಾಯಿಂದ ಮಾತುಗಳು ಬಾರದೇ ಇದ್ದುದರಿಂದ ನಾನೇ ಪ್ರಶ್ನಿಸಿದೆ. ''ಯಾಕೇ ನಿಮ್ಮ ನಾದಿನಿಗೆ ಯಾವ್ದೂ ಗಂಡು ಗೊತ್ತಾಗ್ಲಿಲ್ವೆ, ಅಥ್ವ ಗಂಡು ಗೊತ್ತಾಗೀನೂ ಗಂಡಿನೋರ್ದು ಏನಾದ್ರು ತರಲೇ ಇದ್ಯ. ಇಲ್ಲಾ ನಿಮ್ಮನೇಯೋರಿಂದ ನಿಮ್ಗೇನಾದ್ರು ಅಂಥ ಕಿರುಕುಳ ಇಲ್ಲಾ ತಾನೆ. ಏನಿದ್ರೂ ಹೇಳಿ ಯೋಚ್ನೆ ಮಾಡೋಣ. ಪ್ಲೀಸ್'' ಎಂದೆ. ಅಷ್ಟರಲ್ಲಿ ಆಕೆ ಭೋರೆಂದು ಅತ್ತುಕೊಂಡೇ ಹೇಳಿದ್ರು ''ಇಲ್ಲಾ ಕಣ್ರೀ ನೀವು ಹೇಳಿದ ಯಾವ ಪ್ರಾಬ್ಲಮ್ಮೂ ನನಗಿಲ್ಲಾ. ಇದೆಲ್ಲದಕ್ಕಿಂತ ದೊಡ್ಡ ಪ್ರಾಬ್ಲಮ್ ಒಂದಿದೆ ಕಣ್ರೀ, ಅದು ನಮ್ಮನೇ ಓನರ್‌ದು ಕಣ್ರೀ, ಮೊನ್ನೆ ನಮ್ಮ ತಾಯಿ ನಂಗೆ ಮುತ್ತಿನ ಸೆಟ್ ಮಾಡ್ಸಿ ಕಳ್ಸಿದಾರೆ ರೀ ಅದಕ್ಕೆ ಹಬ್ಬದ ದಿನ ಅದನ್ನ ನಾ ಹಾಕ್ಕೊಂಡಿದ್ದನ್ನ ಆಕೆ ನೋಡ್ಬಿಟ್ರು ರೀ.... ಸರಿ ಮಾರನೇ ದಿನವೇ ಬಾಡಿಗೆ ಜಾಸ್ತಿ ಮಾಡ್ಬಿಡೋದೇ! ಬಾಡಿಗೆ ಕೊಡಿ ಇಲ್ಲಾ ಮನೆ ಬಿಡಿ ಅಂತಿದಾರೆ. ಅವತ್ನಿಂದ ನಂದು ಈ ವೇಷ ಆಗ್ಹೋಗಿದೆ ಸದ್ಯಕ್ಕೆ ಮನೆ ಕಟ್ಟೋ ಚೈತನ್ಯ ನಮಗಿಲ್ಲ. ಬೇರೆ ಮನೇಗ್ಹೋಗೋಣ ಅಂದ್ರೆ ಅಲ್ಲೂ ಇಂಥಾ ಓನರ್‍ರೇ ಇದ್ರೆ ಏನು ಮಾಡೋದು ಗೊತ್ತಾಗ್ತಾನೆ ಇಲ್ಲ. ನಾನಂತೂ ಮಾನಸಿಕವಾಗಿ ಬಹಳ ನೊಂದಿದೀನಿ ಎಂದು ಕೈ ಹಿಸುಕಿಕೊಂಡರು. ನನಗಂತೂ ಅಯ್ಯೋ ಪಾಪದ ಹೆಂಗಸೇ ಎನ್ನಿಸದಿರಲಿಲ್ಲ. ಆದರೆ ಈ ಸಮಸ್ಯೆ ಮಾತ್ರ ಬಹಳ ನಿಜ.

ಮೊನ್ನೆ ನನಗೂ ಸುಮಾರಾಗಿ ಇದೇ ತರಹ ಒಂದು ಅನುಭವ. ನೋಡಿ ಬರೋಣ ಅಂತ ನನ್ನ ತಂಗಿ ಮನೆಗೆ ಹೊರಟೆ. ಅವ್ಳು ಇರೋದು ಅಪ್‌ಸ್ಟೇರ್‌ನಲ್ಲಿ. ಗೇಟು ತೆಗೆಯುತ್ತಿರುವಾಗಲೇ ಮನೆಯ ಹೆಣ್ಣು ಓನರ್ ಬಾಗಿಲಲ್ಲಿ ನನ್ನನ್ನು ನೋಡಿಯೂ ನೋಡದ ಹಾಗೆ ನಿಂತುಕೊಂಡರು ''ಏನು, ಚೆನ್ನಾಗಿದೀರ, ತುಂಬಾದಿನ ಆಯ್ತು ನಿಮ್ಮನ್ನ ನೋಡಿ'' ಊಹೂಂ.... ಏನೂ ಪ್ರಯೋಜನವಾಗ್ಲಿಲ್ಲ ಎಂದುಕೊಂಡು ''ನಮ್ಮ ಉಷ ಇದಾಳ'' ಎಂದೆ ನಂಗೇನ್ ಗೊತ್ತು. ನಮ್ಗೂ 'ಬೇರೆ ಕೆಲ್ಸಗಳಿರುತ್ತೆ'' ಬಾಣದಂತೆ, ಖಾರವಾಗಿ ಬಂದಿತ್ತು ಮಾತು. ಇದ್ಯಾಕೋ ಸರಿಯಾಗಲಿಲ್ಲ ಎಂದುಕೊಂಡು ಸರ, ಸರನೆ ಮೆಟ್ಟಲು ಹತ್ತಿದೆ, ''ನಿಧಾನ ಮೊನ್ನೆ ತಾನೆ ರಿಪೇರಿ ಮಾಡ್ಸಿದೀವಿ ಎಂದಿತ್ತು ಹಿಂದಿನಿಂದ ಅದೇ ಹೆಣ್ಣು ಓನರ್‌ಧ್ವನಿ, ''ದೇವರೇ ಉಷಾಳನ್ನು ಕಾಪಾಡು'' ಎಂದುಕೊಂಡೆ ಮನಸ್ಸಿನಲ್ಲೇ. ನಂತರ ಉಷಾಳಿಂದ ತಿಳಿದ ವಿಷಯವೆಂದರೆ ನಾನು ಓನರ್‌ರವರ ಮನೆಯ ಎದುರು ಮನೆಯವರನ್ನು ಮಾತಾನಾಡಿಸಿದ್ದೇ ಅವರ ಅಂದಿನ ಆ ರೀತಿಯ ವರ್ತನೆಗೆ ಕಾರಣವಂತೆ. ಏಕೆಂದರೆ ಓನರ್ ಮನೆಯ ಎದುರಿನವರಿಗೂ ಇವರಿಗೂ ಎಣ್ಣೆ ಸೀಗೇಕಾಯಿ ಲಕ್ಷಣವಂತೆ. ಹೀಗೆ ಸಾಮಾನ್ಯವಾಗಿ ಓನರ್‌ಗಳ ಕಾಟ ಇತ್ತೀಚೆಗಂತೂ ಬಹಳ ಜಾಸ್ತಿಯಾಗಿದೆ. ಮೊನ್ನೆ ಅಂತೂ ನನ್ನ ಇನ್ನೊಬ್ಬಳು ಸ್ನೇಹಿತೆಗೆ ಬಟ್ಟೆ ಒಗೆಯುತ್ತಿದ್ದಾಗ ಓನರ್‌ಳ ಮಗ ಮರಿ ಓನರ್ ನೋಡಲು ಬುದ್ಧಿಮಾಂದ್ಯನಂತಿದ್ದರೂ ಮಹಡಿಮೇಲಿನಿಂದ ನೀರು ಆಕೆಯೇ ಮೇಲೇ ಸುರಿದು ಹ್ಹಿ... ಹ್ಹಿ... ಎಂದು ಹಲ್ಲು ಬಿಟ್ಟನಂತೆ. ಆ ಬುದ್ಧಿಯಿರುವ ಮದಾಂಧ. ಇದು ತೀರಾ ಅಮಾನುಷ. ಅಷ್ಟೇ ಅಲ್ಲ ಬಾಡಿಗೆದಾರರು ಕಲರ್ ಟಿ.ವಿ.ತೆಗೆದುಕೊಳ್ಳಬಾರದು, ಒಡವೆ ವಸ್ತ್ರ ಕೊಳ್ಳಬಾರದು ಇನ್ನು ಸೈಟು, ಗೀಟು ಕೊಂಡರಂತೂ ಆ ಬಾಡಿಗೆದಾರರ ಕತೆ ಮುಗಿದಂತೆಯೇ. ಬಾಡಿಗೆ ಅಡ್ವಾನ್ಸ್ ಕೊಟ್ಟು ಕೂಡ ಈ ರೀತಿಯ ಹಿಂಸೆಗಳನ್ನೆಲ್ಲ ತಾಳಬೇಕೆಂದರೆ ತೀರ ಕಷ್ಟವೇ ಸರಿ. ಇಂತಹ ವಿಷಯಗಳನ್ನು ಧೈರ್ಯವಹಿಸಿ ಕೂಡಲೇ ಸಂಬಂಧಪಟ್ಟವರಿಗೆ ತಿಳಿಸಿದರೆ ಈ ರೀತಿಯ ಕಿರುಕುಳ ಕೊಡುವ ಓನರ್‌ಗಳ ಸಂಖ್ಯೆ ಸ್ವಲ್ಪ ಮಟ್ಟಿಗೆ ಹತೋಟಿಗೆ ಬರಬಹುದು. ಏನೆನ್ನುತ್ತೀರಿ ಬಾಡಿಗೆದಾರರೆ?!

■ ಸಿ.ಎಸ್.ಭಾರತಿ

ವಿದ್ಯುತ್ ಉತ್ಪತ್ತಿ ಮಾಡುವ ಮೀನುಗಳು

ಪ್ರಾಣಿ ಸಂಕುಲದಲ್ಲಿ ಜಲಚರವಾಸಿಗಳು ನಾನಾ ರೀತಿಯಿಂದ ವಿಶಿಷ್ಟವಾಗಿವೆ. ಅವುಗಳಲ್ಲಿ ವಿವಿಧ ಪ್ರಭೇದದ ಮೀನುಗಳು ನಾನಾ ಕಾರಣಗಳಿಂದ ವಿಶ್ವದ ಗಮನ ಸೆಳೆದಿವೆ. ಮತ್ಸ್ಯ ಲೋಕದಲ್ಲಿ 250 ಪ್ರಭೇದದ ಮೀನುಗಳು ವಿದ್ಯುತ್ ಉತ್ಪತ್ತಿ ಮಾಡುತ್ತವೆ. ಆದರೆ, ಕೆಲವೇ ಕೆಲವು ಪ್ರಭೇದದ ಮೀನುಗಳು ಪರಿಗಣಿಸಲ್ಪಡುವಂತಹ ಮತ್ತು ಬೇರೆ ಪ್ರಭೇದದ ಜಲವಾಸಿಗಳಿಗೆ ಜೀವ ಭಯ ಹುಟ್ಟಿಸುವ ರೀತಿಯಲ್ಲಿ ವಿದ್ಯುತ್ ಉತ್ಪತ್ತಿ ಮಾಡುವ ಸಾಮರ್ಥ್ಯ ಪಡೆದಿರುವ ಬಗ್ಗೆ ಉಲ್ಲೇಖಗಳಿವೆ.

ಪುರಾತನ ಕಾಲದಿಂದಲೂ ಶಾರ್ಕ್ ಪ್ರಭೇದದ ಮೀನುಗಳು ವಿದ್ಯುತ್ ಉತ್ಪತ್ತಿಮಾಡುವ ಸಾಮರ್ಥ್ಯ ಪಡೆದಿದ್ದವೆಂದು ಉಲ್ಲೇಖವಾಗಿದೆ. ಅಂಡರಸನ್ ಎಂಬ ವಿಜ್ಞಾನಿ 18ನೇ ಶತಮಾನದಲ್ಲಿ ಶಾರ್ಕ್ ಮೀನುಗಳು ವಿದ್ಯುತ್ ಹೊರಹಾಕುತ್ತವೆ ಎಂಬುದನ್ನು ಕಂಡುಕೊಂಡಿದ್ದರು. ಖ್ಯಾತ ಭೌತಶಾಸ್ತ್ರಜ್ಞ ಫ್ಯಾರಡೆ 'ಗ್ಯಾಯವನೋಮೀಟರ್' ಉಪಯೋಗಿಸಿ ವಿದ್ಯುಚ್ಛಕ್ತಿ ಉತ್ಪಾದಿಸುವ ಗುಣ ಶಾರ್ಕ್‌ಗಳಲ್ಲಿರುವುದು ಕಂಡುಹಿಡಿದಿದ್ದನು. ನಂತರ 19ನೇ ಶತಮಾನದಲ್ಲಿ ವಿದ್ಯುತ್‌ಚ್ಛಕ್ತಿ ಉತ್ಪತ್ತಿಮಾಡುವ ಮೀನುಗಳ ಬಗ್ಗೆ ಹೆಚ್ಚಿನ ಗಮನ ಹರಿಸಲಾಯಿತು. ಇದರ ಪರಿಣಾಮವಾಗಿ ವಿವಿಧ ಜಾತಿಯ ವಿದ್ಯುಚ್ಛಕ್ತಿ ಉತ್ಪತ್ತಿಮಾಡುವ ಮೀನುಗಳ ಬಗ್ಗೆ ವಿಜ್ಞಾನ ಪ್ರಪಂಚಕ್ಕೆ ಪರಿಚಯವಾಯಿತು.

ಎಲೆಕ್ಟ್ರಿಕ್ ಮೀನುಗಳು ಪ್ರಪಂಚದ ವಿವಿಧ ಸಮುದ್ರದಲ್ಲಿ ತಮ್ಮ ಜೀವ ಜಾಲವನ್ನು ಹರಡಿಕೊಂಡಿವೆ. ಉಷ್ಣವಲಯ ಮತ್ತು ಸಮಶೀತೋಷ್ಣ ವಲಯದ ವಿವಿಧ ಸಾಗರ-ಸಮುದ್ರಗಳಲ್ಲಿ ವಾಸಿಸುತ್ತವೆ. ಉದಾಹರಣೆಗೆ ಪಶ್ಚಿಮ ಆಫ್ರಿಕ ದೇಶಗಳ ಸಮುದ್ರದಲ್ಲಿ ವಾಸಿಸುವ ಗ್ಯಾಮ್ನ ರಕಸ್, ದಕ್ಷಿಣ ಆಫ್ರಿಕದ ಸಮಶೀತೋಷ್ಣವಲಯದ ಸಮುದ್ರದಲ್ಲಿ ವಾಸಿಸುವ ಮೊರಮ್ಯರಸ್ ಮತ್ತು ಮಾಲ್ಪಾಟರುರಸ್ ಎಲೆಕ್ಟ್ರಿಕ್ ಮೀನುಗಳು. ಅದೇ ರೀತಿ ಮಧ್ಯ ಮತ್ತು ದಕ್ಷಿಣ ಅಮೇರಿಕದಲ್ಲಿ ವಾಸಿಸುವ ಗೈಮಿನೋಟಸ್, ಪಶ್ಚಿಮ ಮತ್ತು ದಕ್ಷಿಣ ಅಮೇರಿಕದಲ್ಲಿ ನೆಲಸಿರುವ ಎಲೆಕ್ಟ್ರಿಕೊಫೋರಸ್ ಜಾತಿಯ ಮೀನುಗಳು ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಮಹಾಸಾಗರದ ಕೋಸ್ಟ್‌ಗಳಲ್ಲಿ ಉತ್ತರ ಅಮೇರಿಕದ ದಕ್ಷಿಣ ಭಾಗದಲ್ಲಿ ವಾಸಿಸುತ್ತವೆ. ಎಲೆಕ್ಟ್ರಿಕ್‌ರೇಸ್ ಮೀನುಗಳು ಎಲ್ಲಾ ತರಹದ ಸಮುದ್ರದ ನೀರಿನಲ್ಲಿ ವಾಸಿಸುವ ಪರಿಪೂರ್ಣ ಜಲಚರಿಗಳು. ಸ್ಕೇಟ್ಸ್ ಮೀನು ಶೀತವಲವಯದ ಸಾಗರ-ಮಹಾಸಾಗರಲ್ಲಿ ವಾಸಿಸುತ್ತವೆ.

ವಿದ್ಯುತ್ ಉತ್ಪತ್ತಿಯಲ್ಲಿ ಸಹಾಯ ಮಾಡುವ ಎಲೆಕ್ಟ್ರಿಕ್ ಅಂಗವು ಕೆಲವು ಜಾತಿಯ ಮೀನಿನಲ್ಲಿ ವಿಭಿನ್ನವಾಗಿರುತ್ತವೆ. ದೇಹದ ವಿವಿಧ ಕೋಶಗಳ ಅಂಗಾಂಶಗಳಿಗಿಂತ ರಚನೆ ಮತ್ತು ಭೌತಿಕ ಮಟ್ಟದಲ್ಲಿ ಬೇರೆ ರೀತಿಯ ಚಿತ್ರಣವನ್ನೊಳಗೊಂಡಿವೆ. ಆದರೆ, ಅಂಗರಚನೆಯಲ್ಲಿ ಯಾವುದೇ ಬದಲಾವಣೆ ಇಲ್ಲದೆ ಒಂದನ್ನೊಂದು ಹೋಲುತ್ತವೆ. ಪ್ರತಿ ಎಲೆಕ್ಟ್ರಿಕ್ ಅಂಗವು ಬಹು ಸಂಖ್ಯೆಯ ತಟ್ಟೆಗಳನ್ನು ಅಂದರೆ ಎಲೆಕ್ಟ್ರೋಪ್ಲೇಟ್ಸ್‌ಗಳನ್ನು ಹೊಂದಿರುತ್ತವೆ. ಈ ಎಲ್ಲಾ ತಟ್ಟೆಗಳು ಕ್ರಮವಾಗಿ ಹೊಂದಿಸಲ್ಪಟ್ಟಿರುವುದರಿಂದ ಎಲ್ಲಾ ತಟ್ಟೆಗಳ ಮುಖವು ಒಂದೇ ದಿಕ್ಕಿನಲ್ಲಿರುತ್ತದೆ. ಅಂಟುದ್ರವದಂತಹ ವಸ್ತುವಿನಲ್ಲಿ ಪ್ರತಿ ಎಲೆಕ್ಟ್ರೋಪ್ಲೇಟ್ ಸೇರಿಕೊಂಡು ಕನೆಕ್ಟಿವ್ ಟಿಶ್ಯೂನಲ್ಲಿ ಮುಚ್ಚಿಕೊಂಡಿರುತ್ತವೆ. ಈ ಎಲ್ಲಾ ಎಲೆಕ್ಟ್ರೋಪ್ಲೇಟ್‌ಗಳಿಗೆ ನರವ್ಯೂಹ ಮಂಡಲದ ನರಗಳು ಬೆಸೆದುಕೊಂಡಿರುತ್ತವೆ. ಈ ನರ ಮಂಡಲದಿಂದ ಹೊರ ಬಂದ ನರಗಳ ಸಂಪರ್ಕ ಎಲ್ಲಾ ಜಾತಿಯ ಮೀನುಗಳಲ್ಲಿ ಒಂದೇ ರೀತಿ ಇರುವುದಿಲ್ಲ. ಅಂಟು ದ್ರವವು ರಕ್ತನಾಳಗಳಿಂದ ಸಂಪರ್ಕ ಹೊಂದಿರುತ್ತದೆ. ಪ್ರತಿ ಎಲೆಕ್ಟ್ರೋಪ್ಲೇಟ್ ಏಕ ಕೋಶದಿಂದ ಕೂಡಿದ್ದು ಬಹು ಸಂಖ್ಯೆಯ ನ್ಯೂಕ್ಲಿಯಸ್‌ಗಳನ್ನು ಹೊಂದಿರುವುದರ ಜೊತೆಗೆ ಪಾರದರ್ಶಕ ಸೈಟೋಪ್ಲಾಸ್ಮದಂತಹ ದ್ರವವನ್ನು ಹೊಂದಿರುತ್ತದೆ.

ಗ್ರಂಥಗಳಲ್ಲಿ ಉಲ್ಲೇಖದನ್ವಯ ಬಹುದಿನಗಳಿಂದ ತಿಳಿದಂತೆ, ವಿದ್ಯುತ್ ಅಂಗಗಳು ಮಾಂಸ ಖಂಡಗಳಲ್ಲಿ ದಾರಗಳಿಂದ ಮಾರ್ಪಾಡು ಹೊಂದಿ ಬೆಳೆದಿವೆ ಎಂಬ ನಂಬಿಕೆ ಇದೆ. ವಿದ್ಯುತ್ ಅಂಗಗಳು ವಿವಿಧ ಜಾತಿಯ ಮೀನುಗಳಲ್ಲಿ ವಿವಿಧ ನಮೂನೆಯ ಮಾಂಸ ಖಂಡಗಳಿಂದ ತಯಾರಾಗಿವೆ. ವಿದ್ಯುತ್ ಹೇಗೆ ಉತ್ಪತ್ತಿಯಾಗುತ್ತದೆ ಎಂದು ಹೇಳುವುದು ಕಷ್ಟ, ಆದರೆ ವೈಜ್ಞಾನಿಕ ಆಧಾರಗಳನ್ನು ಉಲ್ಲೇಖಿಸಿ ವರದಿಯಾಗಿರುವಂತೆ, ವಿಶಿಷ್ಟವಾದ ನರ ಮಂಡಲದ ರಚನೆಯುಳ್ಳ ಕೆಲವೇ ಕೆಲವು ವಿಶೇಷವಾದ ಅಂಗಗಳು ವಿದ್ಯುತ್ ಉತ್ಪತ್ತಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆಯಂತೆ. ವಿದ್ಯುತ್ ಅಂಗಗಳು ಟೊರಪೆಡೋ ಮೀನಿನಲ್ಲಿ ಎರಡು ರೀತಿಯ ವಿಭಿನ್ನ ರಚನೆಯುಳ್ಳವುಗಳಾಗಿವೆ. ಒಂದು ಜೊತೆ ದೊಡ್ಡ ಗಾತ್ರದ ಮತ್ತು ಇನ್ನೊಂದು ಜೊತೆ ಸಣ್ಣ ಗಾತ್ರದ ಅಂಗಗಳು ತಲೆಯ ಭಾಗದಲ್ಲಿವೆ. ದೊಡ್ಡ ಅಂಗವು ಸಣ್ಣ ಗಾತ್ರದ ಅಂಗವನ್ನು ಸೇರಿಕೊಂಡು ಪ್ರತಿ ಅಂಗವು ಸುಮಾರು 500 ಉದ್ದನೆಯ ಷಟ್ ಕೋನಾಕೃತಿಯ ಕಂಬಗಳನ್ನು ಒಳಗೊಂಡಿರುತ್ತವೆ. ಪ್ರತಿ ಕಾಲಂನಲ್ಲಿ 470 ರಿಂದ 476 ತಟ್ಟೆಗಳಿರುತ್ತವೆ. ಪ್ರತಿ ಕಾಲಂನ ಋಣ ವಿದ್ಯುತ್‌ನ್ನು ಒಂದು ಭಾಗದಲ್ಲಿ ಮತ್ತು ಇನ್ನೊಂದು ಭಾಗದಲ್ಲಿ ಧನ ವಿದ್ಯುತ್ ಹೊಂದಿರುತ್ತವೆ. ವಿದ್ಯುತ್ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹರಿಯುತ್ತದೆ. ಪ್ರತಿ ಬಾರಿ ಹೊರಹಾಕುವ ವಿದ್ಯುತ್ ಸುಮಾರು 30 ವೋಲ್ಟ್ ಇರುತ್ತದೆ ಎಂದು ತಿಳಿದುಕೊಳ್ಳಲಾಗಿದೆ. ಕೆಲವು ವೇಳೆ 50 ವೋಲ್ಟ್‌ನಷ್ಟು ವಿದ್ಯುತ್‌ನ್ನು ಹೊರ ಹಾಕುವ ಬಗ್ಗೆ ಕಂಡುಕೊಳ್ಳಲಾಗಿದೆ. ಮೊರಪೆಡೊ ಮೀನು ಪ್ರತಿ ಸೆಕೆಂಡಿಗೆ 150 ವೋಲ್ಟ್ಸ್ ವಿದ್ಯುತ್‌ನ್ನು ಹೊರಹಾಕುತ್ತದೆಯಂತೆ!!.

ಶಾರ್ಕ್ ತುಂಬಾ ಶಕ್ತಿಯುತವಾಗಿದ್ದು, ಬೇರೆ ಜಾತಿಯ ಮೀನುಗಳನ್ನು ಕೊಲ್ಲುವ ಸಾಮರ್ಥ್ಯ ಹೊಂದಿರುತ್ತದೆ ಎಂದು ಸಂಶೋಧನೆಯಿಂದ ತಿಳಿದು ಬಂದಿದೆ. ಪರಿಣಾಮವಾಗಿ ವಿದ್ಯುತ್ ಉತ್ಪತ್ತಿಮಾಡುವ ಈ ಪ್ರಭೇದದ ಮೀನುಗಳು 4 ರಿಂದ 5 ಕೆ.ಜಿ. ತೂಕದ ಮೀನುಗಳನ್ನು ಕೊಲ್ಲುತ್ತವೆ ಎಂದು ತಿಳಿದುಕೊಳ್ಳಲಾಗಿದೆ.

ವೈಜ್ಞಾನಿಕವಾಗಿ ಎಲೆಕ್ಟ್ರೋಫೋರಸ್ ಮೀನನ್ನು ಸಾಮಾನ್ಯವಾಗಿ ವಿದ್ಯುತ್ ಹೀಲ್ ಎನ್ನುತ್ತಾರೆ. ಇದು 8 ಅಡಿ ಉದ್ದವಿದ್ದು, ಬಹಳ ಶಕ್ತಿಯುತ ಶಾಕ್ ಕೊಡುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಬಹುದೊಡ್ಡ ವಿದ್ಯುತ್ ಅಂಗಗಳು ತಲೆಯ ಅಕ್ಕಪಕ್ಕದಲ್ಲಿರುತ್ತವೆ. ಈ ರೀತಿ ನಾನಾ ಬಗೆಯ ಎಲೆಕ್ಟ್ರಿಕ್ ಮೀನುಗಳು ಮತ್ಸ್ಯ ಲೋಕದಲ್ಲಿ ವಿದ್ಯುತ್ ಉತ್ಪತ್ತಿ ಮಾಡುವ ಮೂಲಕ ಪ್ರಾಣಿ ಪ್ರಪಂಚದಲ್ಲಿ ವಿಶೇಷವಾದ ಸ್ಥಾನ-ಮಾನವನ್ನು ಗಳಿಸಿವೆ. ಹೀಗೆ ನಾನಾ ಜಾತಿಯ ಮೀನುಗಳು ವಿದ್ಯುತ್ ಉತ್ಪತ್ತಿಮಾಡುವ ಮೂಲಕ ತಮ್ಮ ಶಕ್ತಿ ಪ್ರದರ್ಶನ ನೀಡಿ, ಜೀವ ಸಂಕುಲದಲ್ಲಿ ಬದುಕಿ-ಬಾಳುವ ಬಗ್ಗೆ ತಿಳಿಸಿವೆ. ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಮತ್ತು ಉಳಿವಿಗಾಗಿ ಹೋರಾಡಲು ಮತ್ಸ್ಯ ಸಂಕುಲಕ್ಕೆ ಪ್ರಕೃತಿ ನಿರ್ಮಿಸಿದ ನೈಸರ್ಗಿಕ ಸಹಜ ಕ್ರಿಯೆ ಅಲ್ಲವೆ!?


■ ಡಾ. ಬಸವರಾಜಪ್ಪ ಎಸ್.



ಭರವಸೆಯ ಯುವ ಗಾಯಕಿ

ಅರ್ಚನಾ ಉಡುಪ

“ ನಗರದ ನನ್ನ ಮನೆಯ ಸಂಗೀತ ವಾತಾವರಣವೇ ನಾನು ಗಾಯಕಿಯಾಗಲು ಮೂಲ ಪ್ರೇರಣೆ. ಸ್ವತಃ ಅಪ್ಪ ಹಾಡುವವರು. ದಿನವೂ ಮನೆಯಲ್ಲಿ ಭಜನೆ, ಹಾಡುಗಾರಿಕೆ ಇದ್ದೇ ಇರೋದು. ಮನೆಯಲ್ಲಿ ಮಾತು ಕಡಿಮೆ. ಹಾಡೇ ಹೆಚ್ಚು. ಹೀಗಾಗಿಯೇ ನನಗೂ ನಾದದ ಗುಂಗು ಆವರಿಸಿದ್ದು. ”



‘‘ಓ.... ಪುಟಾಣಿ ನೀಲಿ ಹಕ್ಕಿ; ಹಾಡು ಹಾಡು ಹಾಡೂ....’’ ಅಂತ ಕನ್ನಡ ಕವಿವಾಣಿಗೆ ಕೋಮಲ ಕಂಠದ ಧ್ವನಿಮಾಧುರ್ಯ ತುಂಬಿ ಹಾಡುತ್ತಲೇ ಮಾತಿಗಿಳಿದ ಕು. ಅರ್ಚನಾ ಉಡುಪ, ಸಂದರ್ಶನದುದ್ದಕ್ಕೂ ಮುಗ್ಧತೆಯೇ ಮೈವೆತ್ತಂತೆ ಮಾತಾಡಿದ್ದೊಂದು ವಿಶೇಷ.

ರಾಜಸ್ಥಾನದ ಜೈಪುರದಲ್ಲಿ ಸಂಗೀತ ಕಾರ್ಯಕ್ರಮ ಒಂದನ್ನು ನೀಡಲು ಬೆಂಗಳೂರಿಂದ ಹೆತ್ತಮ್ಮನೊಡನೆ ಹೊರಟಾಗ ದಾರಿಮಧ್ಯ ಕಲಬುರ್ಗಿಯಲ್ಲಿ ಇಳಿಯಬೇಕಾದ ಪ್ರಸಂಗ ಎದುರಾಯ್ತು. ಕೊನೇ ಘಳಿಗೆಯಲ್ಲಿ ಜೈಪುರ ಕಾರ್ಯಕ್ರಮ ಮುಂದೂಡಿದ ಮಾಹಿತಿ ದೂರವಾಣಿ ಮೂಲಕ ಅರ್ಚನಾರ ಮನೆಗೆ ತಲುಪುವಷ್ಟರಲ್ಲಿ ಇವರಾಗಲೇ ಕೆಲಗಂಟೆ ರೈಲಿನಲ್ಲಿ ಪ್ರಯಾಣಿಸಿಯಾಗಿತ್ತು. ತಂದೆ ನಗರ ಶ್ರೀನಿವಾಸ ಉಡುಪರು ತತ್‌ಕ್ಷಣ ಕಲಬುರ್ಗಿಯಲ್ಲಿರುವ ಸಂಬಂಧಿಕರಿಗೆ ಫೋನಾಯಿಸಿ ರೈಲಿನ ಮಾಹಿತಿ ನೀಡಿ ಪತ್ನಿ, ಮಗಳನ್ನಿಳಿಸಿಕೊಂಡು ಬೆಂಗಳೂರಿಗೆ ಮರಳಿ ಕಳುಹಿಸಲು ಸೂಚಿಸಿದರು. ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ನಗರದಲ್ಲಿದ್ದ ಅರ್ಚನಾ ಉಡುಪರೊಂದಿಗೆ ಒಂದಷ್ಟು ಕಾಲ ಮಾತಾಡುವ ಅವಕಾಶ ನನಗೆ ಒದಗಿ ಬಂತು.

ಗುಲಬರ್ಗಾದ ಮೋಡಗಳಿಗೂ ಕೆಲವೊಮ್ಮೆ ಎಲ್ಲಿಲ್ಲದ ರೋಷ, ಆವೇಶ. ಮುಕ್ಕಾಲು ಗಂಟೆ ಕಾಲ ಧೋ.... ಅಂತ ಮಳೆ ಸುರಿಯಿತು. ಸಮಯವೇ ಇಲ್ಲ. ನೆನೆಸಿಕೊಂಡೇ ನಾನು ಬರಬೇಕಾಯ್ತು. ನನ್ನ ಪರಿಚಯಿಸಿಕೊಳ್ಳುತ್ತ ಅಮ್ಮ ಮಗಳೊಂದಿಗೆ ಸ್ವಲ್ಪ ಸಮಯ ಅನೌಪಚಾರಿಕವಾಗಿ ಮಾತಾಡಿದ ನಂತರವೇ ಗಾಯಕಿಯೊಂದಿಗೆ ಮಾತು ಆರಂಭಿಸಿದೆ.

ಹಾಡಲು ಪ್ರೇರಣೆ ಮತ್ತು ಯಾವಾಗ ಹಾಡಲು ಶುರು ಮಾಡಿದಿರಿ ಅನ್ನುವ ನನ್ನ ಪ್ರಶ್ನೆಗೆ ಅರ್ಚನಾ ಪ್ರತಿಕ್ರಿಯಿಸಿದ್ದು ಹೀಗೆ;

‘‘ನಗರ (ಹುಟ್ಟೂರು) ದ ನನ್ನ ಮನೆಯ ಸಂಗೀತ ವಾತಾವರಣವೇ ನಾನು ಗಾಯಕಿಯಾಗಲು ಮೂಲ ಪ್ರೇರಣೆ. ಸ್ವತಃ ಅಪ್ಪ ಹಾಡುವವರು. ದಿನವೂ ಮನೆಯಲ್ಲಿ ಭಜನೆ, ಹಾಡುಗಾರಿಕೆ ಇದ್ದೇ ಇರೋದು. ಮನೆಯಲ್ಲಿ ಮಾತು ಕಡಿಮೆ. ಹಾಡೇ ಹೆಚ್ಚು. ಹೀಗಾಗಿಯೇ ನನಗೂ ನಾದದ ಗುಂಗು ಆವರಿಸಿದ್ದು. ನಾನು ಮೂರು ವರ್ಷದ ಮಗುವಾಗಿರುವಾಗಲೇ ಪಲ್ಲವಿ ಗುನುಗಲು ಶುರು ಮಾಡ್ದೆ. ಒಂದರ್ಥದಲ್ಲಿ ಅಪ್ಪನೇ ನನ್ನ ಪ್ರಥಮ ಗುರುಗಳು. ಮುಂದೆ ಕೂರಿಸಿಕೊಂಡು ತಾವು ಹಾಡೋರು, ನನ್ನ ತೊದಲು ನುಡಿ ಕೇಳಿ ‘ಭೇಶ್’ ಅಂತ ಬೆನ್ನು ತಟ್ಟೋರು. ಈವತ್ತಿನ ನನ್ನ ಈ ಬೆಳವಣಿಗೆಗೆ ಅಪ್ಪ ಅಮ್ಮರೇ ಪ್ರೇರಕ ಶಕ್ತಿ’’.

ಕರ್ನಾಟಕ ಬ್ಯಾಂಕಿನಲ್ಲಿ ಅಧಿಕಾರಿಯಾಗಿರುವ ನಗರ ಶ್ರೀನಿವಾಸ ಉಡುಪರಿಗೆ ಬೆಂಗಳೂರಿಗೆ ವರ್ಗವಾದುದೇ ಅರ್ಚನಾರ ಹಾಡುಗಾರಿಕೆಯ ರಹದಾರಿಗೆ ಕಾರಣವಾಯ್ತು. ಇವರಿಗಾಗಿನ್ನೂ ಒಂಭತ್ತರ ಎಳೆಯ ಪ್ರಾಯ. ಹಾಗೆ ನೋಡುವುದಾದರೆ ಅರ್ಚನಾ ಅಧಿಕೃತವಾಗಿ ಸಂಗೀತದ ವಿದ್ಯಾರ್ಥಿಯಾಗಿ ಪಾಠ ಆರಂಭಿಸಿದ್ದು ತಮ್ಮ ಹಳ್ಳಿ 'ನಗರ'ದಲ್ಲೇ. ಆಗಿನ್ನೂ ಒಂದನೇ ತರಗತಿಯ ಬಾಲೆ. ಈ ಪುಟ್ಟ ಕೋಗಿಲೆಗೆ ಕರ್ನಾಟಕಿ ಹಾಡುಗಾರಿಕೆ ಹೇಳಿಕೊಟ್ಟ ಮೊಟ್ಟಮೊದಲ ಅಧಿಕೃತ ಗುರುಗಳೆಂದರೆ ಬಾಲಕೃಷ್ಣ ಅವರು. ಅನಂತರ ಬೆಂಗಳೂರಿಗೆ ಬಂದ ಮೇಲೆ ಡಾ.ದಾವಣಗೆರೆ ರಾಧಾಕೃಷ್ಣ ಮತ್ತು ಡಿ.ವಿ.ಹರೀಂದ್ರ ಅವರಲ್ಲಿ ಹಿಂದುಸ್ತಾನಿ ಸಂಗೀತ ಕಲಿಕೆಯ ಪ್ರಾರಂಭ. ಸಂಗೀತದ ಪ್ರಾರಂಭದ ಮೆಟ್ಟಿಲುಗಳು ಯಶಸ್ವಿಯಾಗಿ ಹತ್ತಿದ ನಂತರ 1994ರಿಂದ ಡಾ. ಶಕುಂತಲಾ ನರಸಿಂಹನ್ ಅವರಲ್ಲಿ ಸಂಗೀತಾಭ್ಯಾಸ ಮುಂದುವರಿಸಿದ ಅರ್ಚನಾ, ಉತ್ತಮ ಗಾಯಕಿಯಾಗುವ ಎಲ್ಲಾ ಲಕ್ಷಣಗಳೂ ತೋರಿದರು.

ಪ್ರ : ಕರ್ನಾಟಕಿಯಿಂದಲೇ ಸಂಗೀತಾಭ್ಯಾಸ ಶುರುಮಾಡಿದವರು ಹಿಂದುಸ್ತಾನಿಯತ್ತ ಹೆಚ್ಚು ಒಲವು ತೋರಿಸಿದ್ದು ಯಾಕೆ?

ಅರ್ಚನಾ : ಅಪ್ಪಂಗೆ ಹಿಂದುಸ್ತಾನಿ ಅಂದ್ರೆ ಅಚ್ಚುಮೆಚ್ಚು. ಸಹಜವಾಗಿಯೇ ನಾನು ಈ ಶೈಲಿಯನ್ನೇ ನೆಚ್ಚಿಕೊಂಡೆ. ಸುಗಮ ಸಂಗೀತಕ್ಕೂ ಇದು ತುಂಬಾ ಪೂರಕವಾಗಿರುವುದರಿಂದ ಇದಕ್ಕೆ ಹೆಚ್ಚಿನ ಗಮನ ಹರಿಸಿದೆ.

ಹಾಡಿನೊಂದಿಗೆ ಆಟವಾಡುತ್ತ ಬೆಳೆದ ಅರ್ಚನಾ ಮೊಟ್ಟ ಮೊದಲ ಬಾರಿ ಕನ್ನಡ ಚಲನಚಿತ್ರಕ್ಕಾಗಿ ಹಾಡಿದಾಗ ಕೇವಲ ಐದು ವರ್ಷಗಳ ಮಗು ಅಂದರೆ ಯಾರಿಗೆ ತಾನೆ ಆಶ್ಚರ್ಯವಾಗದು? ನಂಜುಂಡೇಗೌಡರ ''ಚುಕ್ಕಿ ಚಂದ್ರಮ''ದಲ್ಲಿ ರಂಗಗೀತೆಯೊಂದನ್ನು ತುಂಬಾ ಎತ್ತರದ ಸ್ವರದಲ್ಲಿ ಹಾಡಿದ್ದನ್ನು ನೆನಪಿಸಿಕೊಂಡು ಈಗಲೂ ರೋಮಾಂಚನಗೊಳ್ಳುತ್ತಾರಿವರು.

ಪ್ರ : ಸಿನಿಮಾಕ್ಕೆ ಹಾಡುವಾಗ ಆತಂಕ, ಗಾಬರಿ ಆಗಲಿಲ್ಲವೆ?

ಅರ್ಚನಾ : ಖಂಡಿತ ಇಲ್ಲ. ಏಕೆಂದರೆ ಅದಕ್ಕೂ ಮೊದಲೇ 'ನಗರ'ದಲ್ಲಿರುವಾಗಲೇ ನಾನು ಡಾ. ಎನ್.ಎಸ್.ಲಕ್ಷ್ಮಿನಾರಾಯಣ ಭಟ್ ಅವರ ''ಕಿನ್ನರಿ'' ಧ್ವನಿಸುರುಳಿಗೆ ಹಾಡಿದ್ದರಿಂದ ನನಗೇನು ಭಯವಾಗ್ಲಿಲ್ಲ.

ಇದಾದ ನಂತರ ಪ್ರೇರಕ ಶಕ್ತಿಯಾದದ್ದು ಹಿರಿಯ ಜೀವ ಸಿ.ಅಶ್ವಥ್. ಅವರನ್ನು ಪದೇ ಪದೇ ಸ್ಮರಿಸಿಕೊಳ್ಳುವ ಅರ್ಚನಾ ಇವರ ಕುರಿತು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಹೈದರಾಬಾದ್ ಮತ್ತು ಬೇರೆ ಬೇರೆ ಸ್ಥಳಗಳಿಗೆ ತಮ್ಮೊಂದಿಗೆ ಕರೆದುಕೊಂಡು ಹೋಗುವ ಅಶ್ವಥ್ ಅವರು ರಾಷ್ಟ್ರಪ್ರಶಸ್ತಿ ವಿಜೇತ ಕನ್ನಡ ಚಲನಚಿತ್ರ ''ಚಿನ್ನಾರಿ ಮುತ್ತ'' ಮತ್ತು ಈಗ ''ಮಾಯಾಮೃಗ''ಕ್ಕೂ ಹಾಡಲು ನನಗೆ ಅವಕಾಶ ಕಲ್ಪಿಸಲು ಅವರು ನನ್ನ ಮೇಲೆ ಇಟ್ಟ ನಂಬಿಕೆಯೇ ಕಾರಣ ಅಂತಲೂ ಹೇಳುತ್ತಾರೆ.

ಪ್ರ : ನಿಮಗೆ ಯಾವ ಶೈಲಿಯ ಸಂಗೀತ ತುಂಬಾ ಇಷ್ಟ?

ಅರ್ಚನಾ : ಖಂಡಿತ ಸೀಮಾರೇಖೆ ಇಲ್ಲ. ಸಂಗೀತದ ಎಲ್ಲಾ ಶೈಲಿ ಮತ್ತು ಪ್ರಕಾರಗಳೂ ಸಹ ನನಗಿಷ್ಟವೇ. ಪಾಪ್ ಸಂಗೀತವೂ ನಾನು ಲೈಕ್ ಮಾಡ್ತೀನಿ. ಹೆಚ್ಚಿನ ಒಲವು ಮಾತ್ರ ಹಿಂದುಸ್ತಾನಿ ಕಡೆಗೆ. ಯಾಕೆ ಅಂದ್ರೆ, ಇಲ್ಲಿ ಏನು ಮಾಡಲೂ ನಮಗೆ ಸ್ವಾತಂತ್ರ್ಯ ಇರುತ್ತೆ.

ಗಾಯಕಿ ಅರ್ಚನಾರ ಇನ್ನೊಂದು ವೈಶಿಷ್ಟ್ಯ ಅಂದ್ರೆ ಇವರು ಇಂಥದ್ದಕ್ಕೆ ಅಂತ ಬ್ರ್ಯಾಂಡ್ ಆದವರಲ್ಲ. ಅದು ಇವರಿಗೆ ಇಷ್ಟವೂ ಇಲ್ಲ. ಯಾವುದೇ ಸಂಗೀತಕ್ಕೂ ಕ್ಲಾಸಿಕಲ್ ಬೇಸ್ ಅವಶ್ಯ ಮತ್ತು ಅನಿವಾರ್ಯ. ಹಾಗಂತ ಎಲ್ಲ ಶ್ರಮವೂ ಇದಕ್ಕೆ ಮೀಸಲಿಡುವ ಜಾಯಮಾನವದವರಲ್ಲ. ಹಾಡುಗಾರಿಕೆಯಲ್ಲಿ ವೈವಿಧ್ಯ ಬಯಸುವ; ವಯಸ್ಸಿನಲ್ಲಿ ಇಪ್ಪತ್ತರ ಗಡಿಯೂ ದಾಟಿಲ್ಲದ ಅರ್ಚನಾ ಈಗಾಗಲೇ 80ಕ್ಕೂ ಅಧಿಕ ಧ್ವನಿಸುರುಳಿಗಳಿಗೆ ಹಾಡಿದ್ದೇನು ಕಡಿಮೆ ಸಾಧನೆಯೆ?

ಪ್ರ : ರಾಷ್ಟ್ರಮಟ್ಟದ ಸಂಗೀತ ಸ್ಪರ್ಧೆ 'ಟೀವಿಎಸ್ ಸಾರೆಗಮ'ದಲ್ಲಿ ಭಾಗವಹಿಸಿ ಉತ್ತಮ ಗಾಯಕಿ ಪ್ರಶಸ್ತಿ ತಗೊಂಡ್ರಲ್ಲ, ಈ ಕುರಿತು ಹೇಳಿ.

ಅರ್ಚನಾ : ಧ್ವನಿಪರೀಕ್ಷೆಯಾಗಿ ಸ್ಪರ್ಧೆಯಲ್ಲಿ ಭಾಗವಹಿಸಲು ಡೆಲ್ಲಿ ಮತ್ತು ಮುಂಬೈಗೆ ಕರೆದಾಗಲಂತೂ ನನಗೆ ಸಂತೋಷ ಆತಂಕ ಒಟ್ಟೊಟ್ಟಿಗೇ ಆದದ್ದು. ನನಗೆ ಪ್ರಶಸ್ತಿ ಬಂದಾಗಲಂತೂ ನಿಜಕ್ಕೂ ನಾನು ಗದ್ಗದಿತಳಾಗಿದ್ದೆ. ಯಾಕೆ ಅಂದ್ರೆ ಅಲ್ಲಿ ತೀರ್ಪುಗಾರರಾಗಿ ಅನೇಕ ಜನ ಹಿರಿಯ ಸಂಗೀತ ದಿಗ್ಗಜರಿದ್ದರು. ರಾಷ್ಟ್ರಮಟ್ಟದಲ್ಲಿ ತುಂಬಾ ಅಚ್ಚುಕಟ್ಟಾಗಿ, ಪ್ರಾಮಾಣಿಕವಾಗಿ ನಡೆಯುವಂಥಾ ಸಂಗೀತ ಸ್ಪರ್ಧೆಯದು.

ಪ್ರ : ನೀವು ನೀಡಿರುವ ಸಂಗೀತ ಕಾರ್ಯಕ್ರಮಗಳು?

ಅರ್ಚನಾ : ಅನೇಕ ಕಡೆ ಭಾಗವಹಿಸಿದ್ದೀನಿ. ಬಹುತೇಕ ಅಪ್ಪನ ಜೊತೆ ಮತ್ತು ಇತರ ಗಾಯಕ/ಕಿಯರೊಂದಿಗೆ. ಈಚೆಗೆ, 17.9.1999ರಂದು ಶಿವಮೊಗ್ಗದಲ್ಲಿ ಮೂರುಗಂಟೆ ಕಾಲ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟಿದ್ದೇ ನನ್ನ ಮೊಟ್ಟ ಮೊದಲ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ.

ಸಂಗೀತದ ವಿಷಯದಲ್ಲಿ ವಿಶಾಲ ಮನೋಭಾವ ಹೊಂದಿರುವ ಅರ್ಚನಾ ಮೆಚ್ಚಿನ ಗಾಯಕರ ಬಗ್ಗೆ ಕೇಳಿದಾಗ ಪಂಡಿತ ಪರಮೇಶ್ವರ ಹೆಗಡೆ, ವಿನಾಯಕ ತೊರವಿ, ವೆಂಕಟೇಶಕುಮಾರ ಅವರ ಬಗ್ಗೆ ಒತ್ತಿ ಹೇಳುತ್ತಲೇ ಮೈಸೂರು ಅನಂತಸ್ವಾಮಿ, ಸಿ.ಅಶ್ವಥ್, ರತ್ನಮಾಲಾ ಪ್ರಕಾಶ ಮೊದಲಾದ ಸುಗಮ ಸಂಗೀತಗಾರರ ಪಟ್ಟಿಯೇ ಒಪ್ಪಿಸುತ್ತಾರೆ.

ಪ್ರ : ಈ ಸಂಗೀತ, ಸುತ್ತಾಟದಿಂದ ನಿಮ್ಮ ಓದಿಗೆ ತೊಂದ್ರೆ ಆಗಲ್ಲವೆ?

ಅರ್ಚನಾ : ಖಂಡಿತ ಆಗುತ್ತೆ. ಹ್ಯಾಗೋ ಹೊಂದಿಸ್ಕೋತೀನಿ.

ಪ್ರ : ನಿಮ್ಮ ಮುಖ್ಯವಾದ ಗುರಿ?

ಅರ್ಚನಾ : ಓದಿನಲ್ಲೊಂದು ಡಿಗ್ರಿ, ಸಂಗೀತದಲ್ಲೊಂದು ಸ್ಥಾನ.

ನನ್ನೆಲ್ಲ ಬೆಲವಣಿಗೆಗೆ ಅಪ್ಪ ಅಮ್ಮರ ಪ್ರೋತ್ಸಾಹವೇ ಮುಖ್ಯ ಅನ್ನುವ ಅರ್ಚನಾ ಮುಗ್ಧವಾಗಿ ನಗುತ್ತಲೇ ನನಗೆ ಪರ್‌ವೀನ್ ಸುಲ್ತಾನಾರಂತೆ ಸಂಗೀತಗಾರಳಾಗಲೂ ಇಷ್ಟ, ಲತಾ ಮಂಗೇಶಕರ್ ಮತ್ತು ಎಸ್. ಜಾನಕಿಯವರ ಹಾಗೆ ಗಾಯಕಿಯಾಗಲೂ ಬಯಸ್ತೀನಿ ಅನ್ನುತ್ತಾರೆ.




ಹಾಡಿನೊಂದಿಗೆ ಆಟವಾಡುತ್ತ ಬೆಳೆದ ಅರ್ಚನಾ ಮೊಟ್ಟ ಮೊದಲ ಬಾರಿ ಕನ್ನಡ ಚಲನಚಿತ್ರಕ್ಕಾಗಿ ಹಾಡಿದಾಗ ಕೇವಲ ಐದು ವರ್ಷಗಳ ಮಗು ಅಂದರೆ ಯಾರಿಗೆ ತಾನೆ ಆಶ್ಚರ್ಯವಾಗದು?

ಇದೀಗ ಬೆಂಗಳೂರಿನ ಎನ್‌ಎಮ್‌ಕೆಆರ್‌ವಿ ಪದವೀ ಕಾಲೇಜಿನಲ್ಲಿ ಅಂತಿಮ ವರ್ಷದಲ್ಲಿ ಓದುತ್ತಿರುವ ಭರವಸೆಯ ಗಾಯಕಿ ಅರ್ಚನಾ ಉಡುಪ ಯಶಸ್ಸಿನ ಒಂದೊಂದೇ ಮೆಟ್ಟಿಲುಗಳನ್ನು ಹತ್ತಲೆರಿಬುದೇ ನಮ್ಮೆಲ್ಲರ ಆಶಯ ಮತ್ತು ಹಾರೈಕೆ ಕೂಡ.

■ ಮಹಿಪಾಲ ರೆಡ್ಡಿ

ಇಷ್ಟೊಂದು ನಾಚಿಕೆ ಇದ್ದರೆ ಹೇಗೆ?

> ನಾಚಿಕೆ, ಸಂಕೋಚಗಳು ಬಿಡಿಸಿಕೊಳ್ಳಲಾರದಂತಹ ದೊಡ್ಡ ಸಮಸ್ಯೆಗಳೇನೂ ಅಲ್ಲ. ತಮ್ಮಲ್ಲಿ ಏನೋ ಕೊರತೆ ಇದೆ ಎಂಬ ಆಲೋಚನೆಯಿಂದಲೇ ಈ ನಾಚಿಕೆ ಸಂಕೋಚ ಆಗಾಗ್ಗೆ ತಲೆ ಎತ್ತುತ್ತದೆ ಎಂದು ಮೊದಲು ತಿಳಿದುಕೊಳ್ಳಬೇಕು. ಆಮೇಲೆ ಆ ಲೋಪದೋಷವನ್ನು ಸರಿಪಡಿಸಿಕೊಳ್ಳಬೇಕೆಂಬ ಬಲವಾದ ಇಚ್ಛಾಶಕ್ತಿಯನ್ನು ಮನದಲ್ಲಿ ಬೆಳೆಸಿಕೊಳ್ಳಬೇಕು.



ಕೆಲವು ಜನರಿಗೆ ಹೊಸಬರ ಮಧ್ಯೆ ನಾಚಿಕೆ, ಭಿಡೆ, ಸಂಕೋಚಗಳು ಮುತ್ತಿಕೊಂಡಂತಾಗುತ್ತದೆ. ಇನ್ನು ಬಾಯಿಬಿಚ್ಚಿ ಮಾತಾಡೋಣವೆಂದರೆ ನಾಲಿಗೆ ಸರಿಯಾಗಿ ಹೊರಳುವುದೇ ಇಲ್ಲ. ಇದರಿಂದ ಅವರು ಬಹಳ ಇಬ್ಬಂದಿತನ ಅನುಭವಿಸುತ್ತಾ, ಜನರ ಮಧ್ಯದಿಂದ ಯಾವಾಗ ಹೊರಬೀಳುತ್ತೇವೂ ಎನ್ನುವಷ್ಟು ಕಂಗಾಲಾಗಿ ಬಿಡುತ್ತಾರೆ.

ಇಂತಹ ಪರಿಸ್ಥಿತಿ ದೊಡ್ಡವರಿಗಿಂತ ಚಿಕ್ಕವರಲ್ಲೇ ಹೆಚ್ಚಾಗಿ ಕಂಡುಬರುತ್ತದೆ. ಆದರೆ ಕೆಲವು ಬಾರಿ ಇಂತಹ ತಿಳಿದೂ ತಿಳಿಯದ ವಯಸ್ಸಿನಲ್ಲಿ ನಾಚಿಕೆಪಡುವುದು, ಹೊಸಬರನ್ನು ನೋಡುತ್ತಲೇ ಕಂಗಾಲಾಗುವ ಸ್ಥಿತಿ ಬಹಳ ಸಹಜ ವಿಷಯವೆಂದು ಪಾಲಕರು, ತಂದೆತಾಯಿಗಳು ಒಪ್ಪುವುದಿಲ್ಲ.

ಅಂಜುಬುರುಕರಂತಿರುವ ಮಕ್ಕಳಿಗೆ ತಂದೆತಾಯಿ ತಾವೇ ಎಂದು ಹೇಳಿಕೊಳ್ಳುವದು ಸಣ್ಣತನವೆಂದು ಭಾವಿಸುತ್ತಾರೆ. ಆದ್ದರಿಂದ ಸಮಸ್ಯೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದೇ ಬಲವಂತವಾಗಿ ಅವರಲ್ಲಿ ಧೈರ್ಯ ತುಂಬಲು ಪ್ರಯಾಸದಿಂದ ಯತ್ನಿಸುತ್ತಿರುತ್ತಾರೆ.

ಇತರರ ಹತ್ತಿರಕ್ಕೆ ಹೋಗಲು ಭಯಪಡುವ ಹುಡುಗರನ್ನು ತಂದೆ-ತಾಯಿಗಳು ಬಲವಂತವಾಗಿ ಬೇರೆಯವರೊಂದಿಗೆ ಬೆರೆಯಲು ಒತ್ತಾಯಿಸುತ್ತಾರೆ. ಆಗ ಹೊಸಬರನ್ನು ಭೇಟಿಯಾಗುವುದಕ್ಕೆ ನಾಚಿಕೆಪಡುವ ಹುಡುಗರು ಹಿಡಿದು ಎಳೆದುಕೊಂಡು ಬಂದವರಂತೆ ವರ್ತಿಸುತ್ತಾರೆ.

ಇಂತಹ ಪರಿಸ್ಥಿತಿಯಲ್ಲಿ ಹುಡುಗರು ಅತ್ತರೂ, ಗಲಾಟೆಮಾಡಿದರೂ ತಂದೆ ತಾಯಿಗಳು ಶಿಕ್ಷೆನೀಡಲೂ ಹಿಂದು ಮುಂದು ನೋಡುವುದಿಲ್ಲ. ಸಾಮಾನ್ಯವಾಗಿ ಶಿಕ್ಷೆ ಬೈಗುಳ ರೂಪದಲ್ಲಿರುತ್ತದೆ. ಕೆಲವೊಮ್ಮೆ ದೈಹಿಕ ದಂಡನೆಯೂ ಇರಬಹುದು. ಅಂಜುಬುರುಕರನ್ನು ತೆಗಳುತ್ತಾರೆ. ತಮ್ಮ ಮರ್ಯಾದೆ ತೆಗೆದು ಬಿಡುತ್ತೀರೆಂದು ಮೂದಲಿಸುತ್ತಾರೆ. ಇದರಿಂದಲೂ ಹುಡುಗರಲ್ಲಿ ಬಯಸಿದ ಬದಲಾವಣೆ ಬಾರದೇ ಹೋದರೆ ಅವರ ವರ್ತನೆ ಮತ್ತಷ್ಟು ಜಟಿಲವಾಗುತ್ತದೆ.

ಅರ್ಥಮಾಡಿಕೊಳ್ಳಬೇಕು : ಸಣ್ಣವರಿರುವಾಗಿನಿಂದಲೂ ಸಂಕೋಚ ಪಡುವ ಹುಡುಗರು ಬೆಳೆದ ನಂತರವೂ ಸರಿಯಾಗಿ ವರ್ತಿಸುವುದಿಲ್ಲವೆಂಬ ಭಯ ದೊಡ್ಡವರದು. ಆದರೆ ಬಹಳ ಜನಕ್ಕೆ ವಯಸ್ಸು ಬೆಳೆದಂತೆ ಭಯ, ನಾಚಿಕೆ, ಸಂಕೋಚಗಳು ಮಾಯವಾಗುತ್ತವೆ. ತಂದೆತಾಯಿಗಳು ಬಲವಂತವಾಗಿ ಅವುಗಳನ್ನು ತೊಲಗಿಸಲು ಪ್ರಯತ್ನಿಸುವುದರಿಂದ ಆ ಗುಣಗಳು ವಯಸ್ಸಾದ ಮೇಲೆಯೂ ಬಿಟ್ಟುಹೋಗುವುದಿಲ್ಲ.

ಹುಡುಗರಲ್ಲಿ ಸಾಮಾನ್ಯವಾಗಿರುವ ಸಹಜ ನಾಚಿಕೆಯನ್ನು ಅರ್ಥಮಾಡಿಕೊಳ್ಳಬೇಕು. ಈ ಲೋಕದ ಬಗ್ಗೆ ಅರ್ಥಮಾಡಿಕೊಳ್ಳುವ ಪ್ರಯತ್ನಕ್ಕೆ ತಕ್ಕಂತೆ ಹುಷಾರಿನಲ್ಲಿ ಹುಡುಗರಿರುತ್ತಾರೆ. ಯಾರಿಂದ ಎಂತಹ ಅಪಾಯವಾಗುತ್ತೋ ಎನ್ನುವ ಭಯ, ಯಾರ ಬಾಯಿಯಿಂದ ಯಾವ ಮಾತು ಕೇಳಬೇಕಾಗಿ ಬರುತ್ತದೆಯೋ ಎಂಬ ತಾಕಲಾಟ ಅವರಲ್ಲಿರುತ್ತದೆ. ಇದೆಲ್ಲಾ ಹೊರಬೀಳದಂತೆ ತಡೆಯುವುದಕ್ಕೆ ಮಕ್ಕಳು ನಾಚಿಕೆ ಪ್ರದರ್ಶಿಸುತ್ತಾರೆ.

ಒಂದು ವಯಸ್ಸು ಮುಟ್ಟುತ್ತಲೇ ಲೋಕದ ಬಗ್ಗೆ, ಮನುಷ್ಯರ ಬಗ್ಗೆ ತಿಳಿದುಕೊಳ್ಳುವುದರೊಂದಿಗೆ ಕ್ರಮೇಣ ನಾಚಿಕೆ, ಭಿಡೆ, ಸಂಕೋಚಗಳು ಬಿಟ್ಟುಹೋಗುತ್ತವೆ. ಆದರೆ ಬಾಲ್ಯದಲ್ಲಿ ಎದುರಾದ ಕೆಲವು ಕಹಿ ಅನುಭವಗಳಿಂದ ಕೆಲವರಲ್ಲಿ ಈ ನಾಚಿಕೆ, ಸಂಕೋಚಗಳು ಅಷ್ಟು ತ್ವರಿತವಾಗಿ ಬಿಟ್ಟುಹೋಗುವುದಿಲ್ಲ.

ಬಾಲ್ಯದಲ್ಲಿ ಬಲವಂತವಾಗಿ ಹೊಸಬರೊಂದಿಗೆ ಬೆರೆಸುವುದು, ಚಿಟಿಗೆ ಮುಟಿಗೆ ನಾಲ್ಕು ಜನರಲ್ಲಿ ಬೇಸರಕ್ಕೆ ಒಳಗಾಗುವುದು, ಪದೇ ಪದೇ ಅವರ ತಪ್ಪನ್ನು ಎತ್ತಿ ತೋರಿಸುತ್ತಾ ದಂಡಿಸುವುದರಿಂದ ಹುಡುಗರು ಭಯ, ನಾಚಿಕೆ ಬಿಡದಂತಾಗುತ್ತಾರೆ. ವಯಸ್ಸು ಬೆಳೆದರೂ ನಾಚಿಕೆ ಸ್ವಭಾವ ಬಿಡದಿದ್ದರೆ ವಿಚಿತ್ರ ಇಕ್ಕಟ್ಟಿಗೆ ಸಿಲುಕಿದಂತಾಗುತ್ತದೆ. ಯಾರೊಂದಿಗೂ ಸ್ನೇಹಕ್ಕೆ ಮುಂದಾಗುವುದಿಲ್ಲ. ಮನದಲ್ಲಿರುವ ಸಂದೇಹಗಳನ್ನು ಪರಿಹರಿಸಿಕೊಳ್ಳಲಾರರು. ತಮಗೆ ಬೇಕಾದ್ದನ್ನು ಕೇಳಲು ಸಾಧ್ಯವಾಗುವುದಿಲ್ಲವಲ್ಲದೆ, ಹಕ್ಕುಗಳೆಂದು ಪಡೆಯ



ಬೇಕಾದವುಗಳನ್ನು ಸಹ ಅನುಭವಿಸಲಾರದೇ ಹೋಗುತ್ತಾರೆ.

ಹತ್ತು ಜನ ಒಂದೆಡೆ ಸೇರಿ ಹರಟೆ ಹೊಡೆಯುತ್ತಿದ್ದರೆ ಅವರೊಂದಿಗೆ ಸೇರಿಕೊಳ್ಳಲೂ ಆಗುವುದಿಲ್ಲ. ಹೋಗಿ ಅವರೊಂದಿಗೆ ಸೇರಿಕೊಳ್ಳಬೇಕು, ತನ್ನ ಅಭಿಪ್ರಾಯ ಹೇಳಬೇಕೆಂದೆನ್ನಿಸಿದರೂ ಏನೂ ಹೇಳದಂತಹ ಸಂಕೋಚ ಪ್ರವೃತ್ತಿ ಅವರನ್ನು ಹಿಂದಕ್ಕೆ ಎಳೆಯುತ್ತಿರುತ್ತದೆ. ಇದರಿಂದ ಆತ್ಮಸ್ಥೈರ್ಯಕ್ಕೆ ಹೊಡೆತ ಬೀಳುತ್ತದೆ.

ಇವರು ಇಡುವ ಪ್ರತಿಯೊಂದು ಹೆಜ್ಜೆಯೂ ಸಂದೇಹಾತ್ಮಕವಾಗಿ ಬಿಡುತ್ತದೆ. ತನ್ನ ಮಾತಿನ ಮೇಲೆ, ತಾನು ಧರಿಸಿದ ಡ್ರೆಸ್ಸಿನ ಮೇಲೆ ತನಗೇ ನಂಬಿಕೆ ಇರುವುದಿಲ್ಲ. ಹೊಸ ಡ್ರೆಸ್ ಹಾಕಿಕೊಂಡರೆ ನಾಲ್ಕು ಜನರಲ್ಲಿ ತಿರುಗಾಡುವುದಕ್ಕೆ ನಾಚಿಕೆಪಡುತ್ತಾರೆ. ಮಾತುಗಳಲ್ಲಿ ಸ್ಪಷ್ಟತೆ ಇಲ್ಲದಂತಾಗುತ್ತದೆ. ಇತರರಿಗೆ ಸರಿಯಾಗಿ ಯಾವ ವಿಷಯವನ್ನು ಹೇಳಲಾಗುವುದಿಲ್ಲ.

ಓದಿನಲ್ಲಿ ಹಿಂದೆ ಬೀಳುವ ಹುಡುಗರಲ್ಲಿ ಸಹ ನಾಚಿಕೆ ಸ್ವಭಾವ ಹೆಚ್ಚಾಗಿರುತ್ತದೆ. ಶಿಕ್ಷಕರನ್ನು ಇವರು ತಮ್ಮ ಸಂದೇಹಗಳ ಬಗ್ಗೆ ಪ್ರಶ್ನಿಸುವುದಿಲ್ಲ. ತನಗೆ ಪಾಠ ಅರ್ಥವಾಗಿಲ್ಲದಿರುವುದು ಪಕ್ಕದವರಿಗೆ ತಿಳಿದು ಬಿಡುತ್ತದೇನೋ ಎಂಬ ಆತಂಕ ಸುರುವಾಗಿಬಿಡುತ್ತದೆ.

ಆಫೀಸಿನಲ್ಲಿ ಕೆಲಸ ತಿಳಿಯದಿದ್ದರೆ ಸಹೋದ್ಯೋಗಿಗಳನ್ನು ಕೇಳಿ ತಿಳಿದುಕೊಳ್ಳಲೂ ಆಗುವುದಿಲ್ಲ. ಮೇಲಾಧಿಕಾರಿಗಳ ಹತ್ತಿರಕ್ಕೆ ಹೋಗುವುದನ್ನು ನೆನಪಿಸಿಕೊಂಡೇ ಇಂತಹವರು ನಡುಗತೊಡಗುತ್ತಾರೆ. ಇದರಿಂದ ಕೆಲವು ಸಾರಿ ಒಳ್ಳೆಯವರೂ ಇತರರ ತಪ್ಪುಗಳನ್ನು ತಮ್ಮ ತಲೆಯ ಮೇಲೆ ಹಾಕಿಕೊಳ್ಳುವ ಪ್ರಸಂಗಗಳೂ ಬಾರದಿರಲಾರವು. ಮಾಡಿದ ಕೆಲಸವನ್ನೇ ಮತ್ತೆ ಮತ್ತೆ ಮಾಡುತ್ತಾ ಇವರು ಕುಳಿತುಬಿಡುತ್ತಾರೆ.

ಗಂಡಸರಲ್ಲಿನ ಡಿಪ್ರೆಷನ್ : ಪ್ರತಿಕ್ಷಣವೂ ಸಂಕೋಚದಿಂದ ಮನಸ್ಸಿನಲ್ಲಿನ ಭಾವನೆಗಳನ್ನು ಬಲವಂತವಾಗಿ ಅಡಗಿಸಿಡಬೇಕಾಗುತ್ತದೆ. ಇದರಿಂದ ಮಾನಸಿಕ ಆರೋಗ್ಯವೂ ಕೆಡುತ್ತದೆ. ಬಲವಂತವಾಗಿ ಅದುಮಿಟ್ಟ ಅಂಶಗಳು ಕ್ರಮೇಣ ಒತ್ತಡವನ್ನು ಹೆಚ್ಚಿಸಿ ರಕ್ತದೊತ್ತಡಕ್ಕೆ ದಾರಿ ಮಾಡಿಕೊಡಬಹುದು.

ಸ್ತ್ರೀಯರ ಡಿಪ್ರೆಷನ್‌ಗೆ ಕಾರಣ ಅವರಲ್ಲಿರುವ ಈ ಅತಿ ನಾಚಿಕೆಯ ಪ್ರವೃತ್ತಿಯೇ. ಇದರಿಂದ ಪತಿ, ಅತ್ತೆ-ಮಾವನವರ ಕೈಯಲ್ಲಿ ನಲುಗಿ ಹೋಗುತ್ತಾರೆ. ಅವರ ಮಾತುಗಳ, ಹೇಳುವ ಕೆಲಸದ ಬೇಗೆಗೆ ತಡೆದುಕೊಳ್ಳಲಾರದೇ, ಎದುರು ಹೇಳುವ ಧೈರ್ಯವನ್ನೆಲ್ಲಾ ಸಂಕೋಚ ಅಪ್ಪಿಹಿಡಿಯುವುದರಿಂದ ಏನೂ ತೋಚದ ಸ್ಥಿತಿ ಉಂಟಾಗಿ ಬರಬರುತ್ತಾ ಆತ್ಮಹತ್ಯೆಯ ಕಡೆ ಆಲೋಚನೆಗಳು ಹೊರಳಬಹುದು.

ನಾಚಿಕೆ, ಸಂಕೋಚಗಳು ಬಿಡಿಸಿಕೊಳ್ಳಲಾರದಂತಹ ದೊಡ್ಡ ಸಮಸ್ಯೆಗಳೇನೂ ಅಲ್ಲ. ತಮ್ಮಲ್ಲಿ ಏನೋ ಕೊರತೆ ಇದೆ ಎಂಬ ಆಲೋಚನೆಯಿಂದಲೇ ಈ ನಾಚಿಕೆ ಸಂಕೋಚ ಆಗಾಗ್ಗೆ ತಲೆ ಎತ್ತುತ್ತದೆ ಎಂದು ಮೊದಲು ತಿಳಿದುಕೊಳ್ಳಬೇಕು. ಆಮೇಲೆ ಆ ಲೋಪದೋಷವನ್ನು ಸರಿಪಡಿಸಿಕೊಳ್ಳಬೇಕೆಂಬ ಬಲವಾದ ಇಚ್ಛಾಶಕ್ತಿಯನ್ನು ಮನದಲ್ಲಿ ಬೆಳೆಸಿಕೊಳ್ಳಬೇಕು.

ಅದಕ್ಕೆ ತಕ್ಕಂತೆ ಆತ್ಮಸ್ಥೈರ್ಯ ಮುಂದೆ ಹೆಚ್ಚಿಸಿಕೊಳ್ಳುತ್ತಾ ಸಾಗಿದರೆ, ಒಂದರ ನಂತರ ಮತ್ತೊಂದು ಅಡಿ ಇಡುತ್ತಾ ಧೈರ್ಯವಾಗಿ ಪ್ರಯಾಣಮಾಡುವ ಹೊಸ ಮನುಷ್ಯರಾಗಿ ಪರಿವರ್ತಿತರಾಗುತ್ತೀರಿ.

ಏನು ಮಾಡಬೇಕೆಂಬುದನ್ನು ಮೊದಲೇ ನಿರ್ಧರಿಸಿಕೊಳ್ಳಿ, ನಿಮ್ಮಲ್ಲಿ ನಾಚಿಕೆ, ಸಂಕೋಚ, ಭಿಡೆ ಮುಂತಾದವುಗಳು ಇವೆ ಎಂಬ ವಿಷಯ ಮೊದಲೇ ಗುರುತಿಸಿಕೊಳ್ಳಿ, ಅವು ಯಾವ ಯಾವ ಕಾರಣಗಳಿಂದ ಬಹಿರಂಗಗೊಳ್ಳುತ್ತವೆ ಎಂಬುದನ್ನು ಆತ್ಮಪರಿಶೀಲನೆ ಮಾಡಿಕೊಳ್ಳಿ, ಇದನ್ನೆಲ್ಲಾ ತಿಳಿದುಕೊಂಡ ಬಳಿಕ ಆ ಕಾರಣಗಳು ಎಷ್ಟರಮಟ್ಟಿಗೆ ಸರಿಯಾದವು ಎಂಬುದನ್ನು ತಿಳಿದುಕೊಳ್ಳಿ.

ಕೇವಲ ಇನ್ಫಿರಿಯಾರಿಟೀ ಕಾಂಪ್ಲೆಕ್ಸ್ (ಅಲ್ಪತ್ವಭಾವನೆ) ದಿಂದಲೇ ನಾಚಿಕೆ, ಸಂಕೋಚಗಳು ಉಂಟಾಗುತ್ತವೆ ಎಂಬುದನ್ನು ಮೊದಲು ಅರ್ಥಮಾಡಿಕೊಳ್ಳಿ, ಇನ್ನು ಈ ರೀತಿಯ ಆಲೋಚನೆಗಳನ್ನು ತೊಲಗಿಸುವುದಕ್ಕೆ ಏನು ಮಾಡಬೇಕೆಂಬುದನ್ನು ಆಲೋಚಿಸಿ.

ನಿಮ್ಮಲ್ಲಿನ ಧನಾತ್ಮಕ, ಋಣಾತ್ಮಕ ಗುಣಗಳನ್ನು ಅರಿತುಕೊಳ್ಳಿ : ನಿಮ್ಮಲ್ಲಿರುವ ಕೀಳರಿಮೆ ತೊಡೆದುಹೋಗುವುದಕ್ಕೆ ಮೊದಲು ನಿಮ್ಮ ಲೋಪದೋಷಗಳ ಬಗ್ಗೆ ಸರಿಯಾದ ಅವಗಾಹನೆ ಇರಬೇಕು. ಇದಕ್ಕೆ ಒಂದು ದಾರಿ ಎಂದರೆ ಸುನಿಶ್ಚಿತವಾದ ಆತ್ಮಮಂಥನ. ನೀವು ಯಾರಿಗಿಂತಲೂ ಕಡಿಮೆ ಅಲ್ಲವೆಂದೂ, ಯಾರೂ ನಿಮಗೆ ಸಾಟಿ ಇಲ್ಲವೆಂಬ ನಂಬಿಕೆಯನ್ನು ಬೆಳೆಸಿಕೊಳ್ಳಿ, ''ಪರಿಪೂರ್ಣ'' ಮಾನವರು ಈ ಭೂಮಿಯ ಮೇಲೆ ಎಲ್ಲೂ ಇರುವುದಿಲ್ಲ.

ಪ್ರತಿಯೊಬ್ಬರಿಗೂ ಏನೋ ಒಂದು ಕೊರತೆ ಇದ್ದೇ ಇರುತ್ತದೆ. ಎಲ್ಲರಿಗೂ ತಮ್ಮ ತಮ್ಮ ಅಭಿಪ್ರಾಯಗಳನ್ನು, ಮನೋಭಾವನೆಗಳನ್ನು ತಮ್ಮಿಷ್ಟದಂತೆ ರೂಪಿಸಿಕೊಳ್ಳುವ ಅಧಿಕಾರ ಇರುತ್ತದೆ. ನೀವು ಖಚಿತವಾಗಿ 'ರೈಟ್' ಅಂದುಕೊಂಡದ್ದನ್ನು ಹೇಗಾದರೂ ಮಾಡಿ ಮುಗಿಸಬಹುದು. ಆದರೆ ಅದು ನೂರಕ್ಕೆನೂರು ರೈಟ್ ಎನ್ನುವ ಅವಗಾಹನೆ ನಿಮಗೆ ಖಾತ್ರಿ ಇರಬೇಕು.

ನಿಮ್ಮಲ್ಲಿರುವ ಕೀಳರಿಮೆಯನ್ನು ಪೂರ್ತಿಯಾಗಿ ತೊಡೆದು ಹಾಕಲು ಎಲ್ಲಾ ವಿಧಾನಗಳಿಂದಲೂ ಪ್ರಯತ್ನಿಸಿ. ಆದಾಗ ಮಾತ್ರ ನೀವು ಯಾವ ಸಂದರ್ಭದಲ್ಲಾದರೂ ಪರಿಸ್ಥಿತಿಯನ್ನು ಎದುರಿಸಲು ಸಾಧ್ಯವಾಗುತ್ತದೆ.

ಧನಾತ್ಮಕವಾಗಿ ಆಲೋಚಿಸಿ : ನಿಮ್ಮ ಆಲೋಚನೆಗಳನ್ನೆಲ್ಲಾ ಒಂದು ವಿಧದಲ್ಲಿ ಪಾಜಿಟಿವ್ ಹಾದಿಗೆ ತಿರುಗಿಸಿ. ನೀವು ಮಾಡುವ ಕೆಲಸದ ಬಗ್ಗೆ, ನಿಮ್ಮ ಭವಿಷತ್ತಿನ ಬಗ್ಗೆಯಾಗಲಿ ಎಂಥ ಸಂದರ್ಭದಲ್ಲಾದರೂ ನಿರಾಶೆ ನಿಸ್ಪೃಹಗಳನ್ನು ತೋರಿಸಿಕೊಳ್ಳಬೇಡಿ. ಅಂತಹ ಋಣಾತ್ಮಕ ಭಾವನೆಗಳು ಪ್ರಕಟವಾಗುತ್ತಲೇ ನಿಮ್ಮ ಮನಸ್ಥಿತಿ ಆಕಡೆಗೆ ತಿರುಗುತ್ತದೆಯೇ ಹೊರತು ಪಾಜಿಟಿವ್ ಪಾರ್ಶ್ವವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ನಿಮ್ಮೊಳಗಿನ, ನಿಮ್ಮ ಸುತ್ತಲಿನ ನೆಗೆಟಿವ್ ವಾತಾವರಣವನ್ನು ಹೊಡೆದೋಡಿಸಲು ಪ್ರಯತ್ನಿಸಿ.

ಇದಕ್ಕಾಗಿ ನೀವು ಒಳ್ಳೆಯ ಸ್ನೇಹಿತರ ಸಹಕಾರವನ್ನು ಪಡೆಯಬಹುದು. 'ಒಳ್ಳೆಯ' ಎಂದರೆ ಜೀವನದಲ್ಲಿ ಧನಾತ್ಮಕ ಕೋನದಲ್ಲಿ ಆಲೋಚಿಸುವ ಲಕ್ಷಣ ಉಳ್ಳವರು ಎಂದರ್ಥ.

ಮಾನಸಿಕ ವ್ಯಾಯಾಮ ಅವಶ್ಯಕ : ಮಾನಸಿಕವಾಗಿ ನಿಮ್ಮನ್ನು ನೀವು

ಒಮ್ಮೊಮ್ಮೆ

ನಲ್ಲೆ
ನಿನ್ನೊಡಲು ಪ್ರೀತಿಯ
ಕಡಲು
ಒಮ್ಮೊಮ್ಮೆ ಬೆಂಕಿಯ
ಮಡಿಲು!

■ ಡಿ.ಎಸ್. ಶ್ರೀನಾಥ್

ಗಟ್ಟಿಯಾಗಿ ನಿಂತುಕೊಳ್ಳುವಂತೆ ಮಾಡಲು ತಕ್ಕುದಾದಂತಹ ವ್ಯಾಯಾಮದ ಅಗತ್ಯವಿದೆ. ನಿಮ್ಮ ಭಾವನೆಗಳು ಧನಾತ್ಮಕವಾಗಿರುವ ಅಂಶಗಳಿಗೆ ಅನುಗುಣವಾಗಿ ಸಾಗಲು ತಕ್ಕ ಮಾರ್ಗ ನಿರ್ಮಿಸಬೇಕು. ಉದಾಹರಣೆಗೆ ನಿಮ್ಮಲ್ಲಿ ವಿಪರೀತ ನಾಚಿಕೆ, ಸಂಕೋಚ, ಭಿಡೆಗಳಿವೆ ಎಂದುಕೊಳ್ಳಿ, ''ನನ್ನಲ್ಲಿ ನಾಚಿಕೆ, ಸಂಕೋಚ, ಭಿಡೆಗಳೇ ಇಲ್ಲ. ನಾನು ಪರಾಜಯ ಭಾವನೆಗಳಿಗೆ ತಲೆಬಾಗುವುದಿಲ್ಲ.'' ಎಂದು ನಿಮ್ಮನ್ನು ನೀವು ಮಾನಸಿಕವಾಗಿ ಸಿದ್ಧಗೊಳಿಸಿಕೊಳ್ಳಿ.



ಹೊಸ ವ್ಯಕ್ತಿಗಳೊಡನೆ, ಹೊಸ ಸಂದರ್ಭಗಳಿಗೆ ತಕ್ಕಂತೆ ವ್ಯವಹರಿಸುವುದನ್ನು ಅರಿತುಕೊಳ್ಳಿ. ಇದಕ್ಕಾಗಿ ನಡವಳಿಕೆ ಅಲ್ಲಾ, ನಡಿಗೆಯಲ್ಲೂ ಬದಲಾವಣೆ ತಂದುಕೊಳ್ಳಬೇಕು. ಧೈರ್ಯವಾಗಿ ಎದೆಸೆಟೆದು ನಿಲ್ಲುವುದು, ಶಾರೀರಿಕವಾಗಿ ಮಾನಸಿಕವಾಗಿಯೂ ವಿಶ್ವಾಸದಿಂದ ಇರುವುದು.... ಇವೆಲ್ಲಾ ಸ್ವಲ್ಪ ಸ್ವಲ್ಪ ಸಾಧನೆಯ ಮೂಲಕವೇ ಮೈಗೂಡಿಸಿಕೊಳ್ಳಬೇಕು.

ಒಂದು ಕನ್ನಡಿಯ ಮುಂದೆ ನಿಂತು ದಿನಾಲು ಸ್ವಲ್ಪ ಹೊತ್ತು ನಿಮ್ಮೊಂದಿಗೆ ನೀವು ಮಾತಾಡಿಕೊಳ್ಳಿ. ದಿನದಿನವೂ ನಿಮ್ಮನ್ನು ನೀವು ತಾಜಾತನದಿಂದ ಇರಿಸುವುದಕ್ಕೆ ಬೇಕಾದ ಹಾದಿಗಳ ಬಗ್ಗೆ ಮನದಲ್ಲೇ ಮಂಥನ ಮಾಡಿಕೊಳ್ಳಿ. ನಿಮ್ಮ ದೇಹವನ್ನು, ನಿಮ್ಮ ಮನಸ್ಸನ್ನು ಅರ್ಥಮಾಡಿಕೊಳ್ಳಲು 'ಯೋಗ' ಕ್ಲಾಸಿಗೆ ಭೇಟಿ ಕೊಡಬಹುದು.

ಹೊಸ ವಿಚಾರ, ಹೊಸ ಉತ್ಸಾಹ : ನೀವು ಯಾವ ಕೆಲಸಕ್ಕೆ ಕೈಹಾಕಿದರೂ ಅದನ್ನು ನಿಮ್ಮದೇ ಪ್ರತ್ಯೇಕತೆಯೊಂದಿಗೆ, ನೈಪುಣ್ಯದೊಂದಿಗೆ ಪೂರ್ಣಗೊಳಿಸಿ. ಆದರೆ ಯಾವುದೇ ಕೆಲಸದ ಬಗ್ಗೆ ನಿರುತ್ಸಾಹ ಬೆಳೆಸಿಕೊಳ್ಳಬೇಡಿ. ಉದಾಹರಣೆಗೆ- ನೀವು ಪ್ರಸ್ತುತ ಮಾಡುತ್ತಿರುವ ಉದ್ಯೋಗದಲ್ಲಿ ಅಸಂತೃಪ್ತಿ ನಿಮ್ಮನ್ನು ಬಾಧಿಸುತ್ತಿದೆ ಎಂದುಕೊಳ್ಳಿ, ಆಗ ನೀವು ಯಾವುದೇ ಒಂದು ರಿಫ್ರೆಷರ್ ಕೋರ್ಸಿನಲ್ಲಿ ಸೇರಿಕೊಳ್ಳಿ. ನಿಮ್ಮ ನೈಪುಣ್ಯ ಇನ್ನೊಂದಿಷ್ಟು ಹೆಚ್ಚಿಸಿಕೊಳ್ಳಿ. ಇಲ್ಲವೆ ನೂತನ ಉದ್ಯೋಗಾವಕಾಶಗಳು ಉತ್ತಮವಾದವುಗಳೇನಾದರೂ ಇದ್ದರೆ ಪ್ರಯತ್ನಿಸಿ. ಯಾವ ಕೆಲಸದಲ್ಲಿದ್ದರೂ, ಯಾವ ಕ್ಷೇತ್ರದಲ್ಲಿದ್ದರೂ ನೀವು ನಿಮ್ಮ ಸೃಜನಾತ್ಮಕ ಶಕ್ತಿಗೆ, ನಿಮ್ಮದೇ ಆದ ವಿಶಿಷ್ಟತೆಗೆ ಭಂಗ ತಂದುಕೊಳ್ಳಬೇಡಿ. ಪ್ರತಿದಿನವೂ ನಿಮ್ಮ ಬಗ್ಗೆ, ನಿಮ್ಮ ಕೆಲಸದ ಬಗ್ಗೆ, ನಿಮ್ಮ ಸಾಮರ್ಥ್ಯದ ಬಗ್ಗೆ ಅಂದಾಜು ಮಾಡಿಕೊಳ್ಳಲು ತಕ್ಕಂತಹ ವಾತಾವರಣವನ್ನು ನಿರ್ಮಿಸಿಕೊಳ್ಳಿ. ಒಂದು ಪ್ರಶಾಂತವಾದ, ಪ್ರಕೃತಿ-ಸಹಜವಾದ ವಾತಾವರಣದಲ್ಲಿ ಕುಳಿತುಕೊಂಡು ನಿಮ್ಮ ಬಗ್ಗೆ ನೀವೇ ಆಲೋಚನೆ ಮಾಡಿಕೊಳ್ಳಿ.

ನೀವು ನಿಮ್ಮ ಆಚರಣೆ : ಒಂದು ಸ್ಥಿತಿಯನ್ನು ಮಾನಸಿಕವಾಗಿ ತಲುಪಿದ ಮೇಲೆ ಇನ್ನು ನೀವು ಮಾಡಬೇಕಾದ್ದೆಲ್ಲಾ ಆಚರಣೆಗೆ ಇಳಿಯುವುದು. ನಿಮ್ಮಲ್ಲಿನ ನಾಚಿಕೆ, ಸಂಕೋಚಗಳನ್ನು ತೊಲಗಿಸಲು ಮಾರ್ಗಗಳು ಭೌತಿಕವಾಗಿ ಏನೇನು ಇವೆಯೋ ಗಮನಿಸಿರಿ. ಒಂದು ಕ್ಲಬ್‌ನಲ್ಲೋ ಅಸೋಸಿಯೇಷನ್‌ನಲ್ಲೋ ಸೇರಿಕೊಳ್ಳಿ, ಲೈಬ್ರರಿಗೆ ಹೋಗುವ ಅಭ್ಯಾಸ ಬೆಳೆಸಿಕೊಳ್ಳಿ, ನಿಮಗೆ ಸಮೀಪವಿರುವ ಸ್ಪೋರ್ಟ್ಸ್‌ಗಳಿಗೆ ಹೋಗಿ. ಇದರಿಂದ ನಿಮ್ಮಲ್ಲೊಂದು ಹೊಸ ಉತ್ಸಾಹ, ಚೈತನ್ಯ ಮೊಳಕೆಯೊಡೆಯುತ್ತದೆ.

ಅದೆಷ್ಟೋ ಜನ ಹೊಸದಾಗಿ ಪರಿಚಯವಾಗುತ್ತಾರೆ. ಅವರೊಂದಿಗಿನ ಸಂಭಾಷಣೆ, ಅನುಭವಗಳು ನಿಮಗೆ ಹೊಸ ಸ್ಫೂರ್ತಿಯನ್ನು ನೀಡುತ್ತವೆ. ನಿರಂತರವಾಗಿ ಸಾಗುವ ಈ ಪ್ರಕ್ರಿಯೆ ನಿಮ್ಮಲ್ಲಿರುವ ಕೀಳರಿಮೆಯನ್ನು ಸಹ ತೊಲಗಿಸುತ್ತದೆ. ಕ್ರಮೇಣ ನಿಮ್ಮಲ್ಲಿ ಎಂತಹ ಬದಲಾವಣೆ ಉಂಟಾಗುತ್ತದೆಂಬುದನ್ನು ನೀವೇ ನೋಡಬಹುದು.

ಉತ್ತಮ ಹವ್ಯಾಸ ರೂಢಿಸಿಕೊಳ್ಳಿ : ಯಾರಿಗೆ ಯಾವ ಹವ್ಯಾಸ ಇಷ್ಟವೋ ಅದನ್ನು ಅವರು ಆಯ್ದುಕೊಳ್ಳಬಹುದು. ಆದರೆ ಈ ಹವ್ಯಾಸ ಒಂಟಿಯಾಗಿ ಕುಳಿತುಕೊಳ್ಳುವುದು ಆಗಬಾರದು. ನಾಲ್ಕು ಜನರೊಂದಿಗೆ ಹೊಂದಿಕೊಂಡು ಮಾಡುವುದಾಗಿರಬೇಕು. ದೈಹಿಕ ವ್ಯಾಯಾಮ, ಬುದ್ಧಿ ಹೆಚ್ಚಿಸುವುದು ಯಾವುದಿದ್ದರೂ ಪರವಾಯಿಲ್ಲ.

ವಾಕಿಂಗ್ ಕ್ಲಬ್ಬಿನಲ್ಲಿ ಸೇರಿದರೆ ವಿವಿಧ ವಯಸ್ಸಿನವರು ಪರಿಚಯ ವಾಗುತ್ತಾರೆ. ಜಿಮ್‌ಗೆ ಹೋಗುವುದೂ ಒಳ್ಳೆಯದೇ. ನೀವೇ ಮುಂದಾಗಿ ಅಲ್ಲಿರುವವರೊಡನೆ ಮಾತು ಪ್ರಾರಂಭಿಸಿ. ಅಲ್ಲಿರುವವರಲ್ಲಿ ಚೆನ್ನಾಗಿ ಮಾತಾಡುವವರೊಂದಿಗೆ ಸ್ನೇಹ ಬೆಳೆಸಿದರೆ, ಅವರು ತಮ್ಮ ಸಂಭಾಷಣಾ ಚಾತುರ್ಯದಿಂದ ನಿಮಗೆ ಇನ್ನೊಂದು ಹೊಸ ಲೋಕವನ್ನು ಪರಿಚಯಿಸುತ್ತಾರೆ. ಮನಸ್ಸಿನಲ್ಲಿ ಅಡಗಿಕುಳಿತ ಸಂಕೋಚವನ್ನು ತೊಲಗಿಸಿದ್ದಾದರೆ ನಿಮ್ಮ ನಾಚಿಕೆ ಇಬ್ಬಂದಿಗಳೆಲ್ಲಾ ಕ್ರಮೇಣ ಹೊರಟು ಹೋಗುತ್ತವೆ.

ನಿಮ್ಮ ರೂಮಿನಲ್ಲಿ ನೀವು ಯಾವುದೇ ಒಂದು ಪುಸ್ತಕದಲ್ಲಿ ತಲೆ ಇಟ್ಟು ಕಾಲಕ್ಷೇಪ ಮಾಡುವುದಕ್ಕಿಂತಲೂ, ನಾಲ್ಕು ಜನ ಬರು-ಹೋಗುವ ಲೈಬ್ರರಿಯೇ ನಿಮಗೆ ಹೆಚ್ಚು ಉತ್ಸಾಹವನ್ನು ನೀಡುತ್ತದೆ. ಅಲ್ಲಿನ ಪರಿಚಯಗಳು, ಸಂಭಾಷಣೆಗಳು, ಸಾಮಾನ್ಯ ಅಭಿರುಚಿಗಳು ನಿಮ್ಮೊಳಗಿನ ವಿಶ್ವಾಸವನ್ನು ಹೆಚ್ಚಿಸುತ್ತವೆ.

ಹಾಗೇನೆ ಯಾವುದಾದರೂ ಒಂದು ಆಟ, ಟೇಬಲ್ ಟೆನ್ನಿಸ್, ಲಾನ್ ಟೆನ್ನಿಸ್ ಯಾವುದಿದ್ದರೂ ಸರಿಯೇ. ಕ್ರಮ ತಪ್ಪದಂತೆ ಪ್ರಾಕ್ಟೀಸು ಮಾಡಿ. ವಾರಕ್ಕೆ ಒಂದು ಬಾರಿ ಜಿಮ್‌ಗೋ, ಸ್ಪೋರ್ಟ್ಸ್ ಕ್ಲಬ್ಬಿಗೋ ಹೋಗಿ ಬರುವುದು ಒಳ್ಳೆಯದು.

ಇದರೊಂದಿಗೆ ನಾಲ್ಕಾರು ಜನರ ಮಧ್ಯ ಇರುವುದು ಎಷ್ಟು ಮುಖ್ಯವೋ, ಆ ನಾಲ್ಕು ಜನರ ಕಷ್ಟಸುಖಗಳನ್ನು ಕೇಳಿ, ಅವರ ವ್ಯಕ್ತಿತ್ವ ಎತ್ತಿ ಹಿಡಿಯುವ-ಸಮಾಧಾನಪಡಿಸುವ ಪ್ರಯತ್ನ ಮಾಡುವುದು ಇನ್ನೂ ಮುಖ್ಯ ಸಂಗತಿ. ಹೀಗೆ ಮಾಡುವುದರಿಂದ ನೀವು ನಿಮ್ಮ ಸಮಸ್ಯೆಗಳನ್ನೆಲ್ಲಾ, ಸಂಕ್ಷೋಭೆಗಳನ್ನೆಲ್ಲಾ ಕಟ್ಟಿ ಆಚೆ ಎಸೆಯಲು ಧೈರ್ಯ ದೊರೆಯುತ್ತದೆ. ಹಾಗೇನೆ ನಿಮ್ಮೊಳಗೆ ಇರುವ ಅಭದ್ರತಾ ಭಾವನೆ ಹೊರಟು ಹೋಗುತ್ತದೆ.

ನಿಜವಾಗಿಯೂ ಇವೆಲ್ಲಾ ಮಾನಸಿಕ ಸ್ಥಾಯಿಯಲ್ಲಿ ನಿಮ್ಮೊಳಗೇ ಬರಬೇಕಾದ ಬದಲಾವಣೆಗಳೇ! ಆದರೆ ಯಾವುದಕ್ಕೂ ಸಾಧನೆಯೇ ಮುಖ್ಯ.... ಸಾಧನೆ ಇಲ್ಲದಿದ್ದರೆ ಯಾವುದೂ ಸಾಧ್ಯವಾಗುವುದಿಲ್ಲ.

ನಿಮ್ಮೊಳಗೇ ಇರುವ ಅಕುಂಠಿತವಾದ ಆತ್ಮವಿಶ್ವಾಸ ತುಂಬಿಕೊಂಡು ಬೆಳಕಿನಂತೆ ಹೊರಚಿಮ್ಮಬೇಕಾದ್ದೇ!! ಈ ದಿಶೆಯಲ್ಲಿ ನೀವೇ ಮೊಟ್ಟಮೊದಲಿಗೆ ಎದುರಿಸಬೇಕಾದ ಶತ್ರುಗಳೆಂದರೆ ಕೀಳರಿಮೆ, ನಾಚಿಕೆ, ಸಂಕೋಚಗಳು!

■ ಕೆ.ಬಿ.ಬಿ.

ನಿಲುವಂಗಿ

ನಿಮ್ಮವಳು ನಿಮಗೆ
ಅರ್ಧಾಂಗಿ
ನನ್ನವಳು ನನಗೆ
ನಿಲುವಂಗಿ!

■ ಡಿ.ಎಸ್. ಶ್ರೀನಾಥ್

ಸಾಹಿತ್ಯಾಸಕ್ತರಿಗೆ ಸುವರ್ಣಾವಕಾಶ

ಅಂಕುರ ಪ್ರಕಾಶನದ ಪುಸ್ತಕಗಳಿಗೆ ವಿಶೇಷ ರಿಯಾಯಿತಿ

ಶೀರ್ಷಿಕೆ	ಲೇಖಕರು	ಮುಖ ಬೆಲೆ	ರಿಯಾಯಿತಿಬೆಲೆ
ಚಕ್ರತೀರ್ಥ [ಕವನ ಸಂಕಲನ]	-ವಿವಿಧ ಕವಿಗಳು	ರೂ. 12	ರೂ. 10
ಶಿಬಿರದ ದಾರಿಯಲ್ಲಿ [ಅನು. ಕಥೆಗಳು]	-ಜಿ.ಎಸ್. ಸದಾಶಿವ	ರೂ. 45	ರೂ. 30
ಒಳಗೆ ಬಾ, ಅತಿಥಿ [ಕಾದಂಬರಿ]	-ಉಷಾ ನವರತ್ನರಾಮ್	ರೂ. 60	ರೂ. 36
ನೀರು [ಕಾದಂಬರಿ]	-ನಾ. ಡಿಸೋಜ	ರೂ. 48	ರೂ. 28
ಕಲ್ಲರಳಿ ಹೂವಾಗಿ [ಕಾದಂಬರಿ]	-ರೇಖಾ ಕಾಖಂಡಕಿ	ರೂ. 45	ರೂ. 25
ನಕ್ಷತ್ರ ಕಡ್ಡಿ [ಹನಿಗವನ ಸಂಗ್ರಹ]	-ಗೋಪಾಲಕೃಷ್ಣ ವಂಡ್ಸೆ	ರೂ. 35	ರೂ. 20
ಕೆ.ಎ.ಎಸ್. ಮಾರ್ಗದರ್ಶಿ	-ಮಾಧವ ಐತಾಳ್	ರೂ. 125	ರೂ. 90
ಗರ್ಭಿಣಿಯರ ಕೈಪಿಡಿ	-ಡಾ. ಸುನಂದಾ ಕುಲಕರ್ಣಿ	ರೂ. 40	ರೂ. 28
ಮೋಜಿನ ಗಣಿತ	-ಪಿ.ಎನ್. ವೆಂಕಟಾಚಲ ಶೆಟ್ಟಿ	ರೂ. 25	ರೂ. 17
ಲವ್ ಅಫೇರ್ [ಹಾಸ್ಯ ಸಂಗ್ರಹ]	-ಡಾ. ಎಚ್.ಎಸ್. ವೆಂಕಟೇಶ್	ರೂ. 38	ರೂ. 25
ಕುಣಿಯಿತೆಂದರೆ ನಂದೀಕೋಲು [ಕಥಾಸಂಕಲನ]	-ಕೆ. ಜಗದೀಶ್	ರೂ. 45	ರೂ. 25
ಕಪ್ಪು ಮರಿ ಮೀನು [ಮಕ್ಕಳ ಮನೋವಿಕಾಸ ಕಾದಂಬರಿ]	-ಕೇಶವ ಮಳಗಿ	ರೂ. 28	ರೂ. 20
ಮನೀಷೆ [ಕಥಾ ಸಂಕಲನ]	-ಎಸ್. ವಸುಧೇಂದ್ರ	ರೂ. 45	ರೂ. 30

ಡಿ.ಡಿ. ಅಥವಾ ಎಂ.ಓ. ಕಳಿಸಬೇಕಾದ ವಿಳಾಸ:

ಅಂಕುರ ಪ್ರಕಾಶನ

473, 1ನೇ ಬ್ಲಾಕ್, 3ನೇ ಸ್ಟೇಜ್, ಬಸವೇಶ್ವರನಗರ, ಬೆಂಗಳೂರು-560 079. ✆: 33078 10

ಹೊಸ ಪುಸ್ತಕಗಳು

1. ಗೆಳೆಯ ಗೆಳತಿಯರಲ್ಲಿ ಜೋಕುಗಳು
2. ಶಾಲಾ ಕಾಲೇಜುಗಳಲ್ಲಿ ಜೋಕುಗಳು
3. ದಾಂಪತ್ಯದಲ್ಲಿ ಜೋಕುಗಳು
4. ಆಸ್ಪತ್ರೆಗಳಲ್ಲಿ ಜೋಕುಗಳು
5. ಕಛೇರಿಗಳಲ್ಲಿ ಜೋಕುಗಳು
6. ನ್ಯಾಯಾಲಯಗಳಲ್ಲಿ ಜೋಕುಗಳು
7. ಹೋಟೆಲುಗಳಲ್ಲಿ ಜೋಕುಗಳು
8. ಬಸ್ಸು, ರೈಲು, ವಿಮಾನಗಳಲ್ಲಿ ಜೋಕುಗಳು
9. ಅಂಗಡಿಗಳಲ್ಲಿ ಜೋಕುಗಳು
10. ಪ್ರೇಮಿಗಳ ಜೋಕುಗಳು

ಪ್ರತಿಯೊಂದು ಪುಸ್ತಕದ ರಿಯಾಯಿತಿ ಬೆಲೆ : ರೂ. 15

WANTED SALES EXECUTIVES

For Official Publishers of Telephone Directory with Yellow pages

Male/Female, Graduates/Undergraduates
Fresh/Experienced


WALK IN INTERVIEW

with your bio-data at our office or send your bio-data by post

TELE NEEDS Information Directory

No.32, Ist Floor, Shastrinagar, SP Circle, BELLARY- 583 103. Ph : (08392) 31802

Attractive salary and incentives.Free accommodation





ತುಂಟಿ ಮಹಿಮಾ


ತುಂಟಾಟ, ತರಲೆ ಮಾಡುವುದರಲ್ಲಿ ಎತ್ತಿದ ಕೈ. ಅಷ್ಟೇ ಹಟಮಾರಿ. ಯಾರೊಂದಿಗಾದರೂ ಜಗಳಕ್ಕೆ ಸಿದ್ಧ. ಷೋಮ್ಯಾನ್ ಸುಭಾಷ್ ಘ್ಯಾ ಜೊತೆಯಲ್ಲೂ ಜಗಳ ಮಾಡಿಕೊಂಡ ಹುಡುಗಿ. ಹೆಸರು ಮಹಿಮಾ ಚೌಧುರಿ.

ಒಂದು ಕಾಲಕ್ಕೆ ಜನಪ್ರಿಯಳೆನಿಸಿದ್ದ ಮುಮ್ತಾಜ್‌ಳ ಹಾಗೆ ಕಾಣುವ ಮಹಿಮಾ ಬಿಡುವಿಲ್ಲದ ನಟಿ. ಅಷ್ಟೇ-ತಿರುಗಾಟ. ವಿದೇಶ ಪ್ರವಾಸ ಹೆಚ್ಚು ಕಡಿಮೆ ನಿತ್ಯದ ಸಂಗತಿ. ಬಿಡುವಿನ ವೇಳೆಯಲ್ಲಿ ಜೀನ್ಸ್, ಟಿ-ಶರ್ಟ್ ಧರಿಸಿ ಅಡ್ಡಾಡುವುದು ಇಷ್ಟ. ಮಾತು ನೇರ, ದಿಟ್ಟ, ಅರಳು ಹುರಿದಂತೆ.

'ಪರದೇಸ್' ಚಿತ್ರದಿಂದ ಬೆಳಕಿಗೆ ಬಂದ ಮಹಿಮಾ ಇತ್ತೀಚೆಗೆ, ಪ್ರಕಾಶ್‌ಝಾನಂಥ ಸಂವೇದನಾಶೀಲ ನಿರ್ದೇಶಕನ ಚಿತ್ರದಲ್ಲಿ ನಾಯಕಿಯಾಗಿ ಅಭಿನಯಿಸಿದವಳು.

ಇಷ್ಟೆಲ್ಲದರ ನಡುವೆಯೂ ಈಚೆಗೆ ಆಕೆ ದೆಹಲಿಗೆ ಹೋಗಿ ಕಾಂಗ್ರೆಸ್ ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರ ಮಾಡ ಮತ್ತೊಂದು ರೀತಿ ಸುದ್ದಿಯ ಕೇಂದ್ರವಾದವಳು.

ಮಹಾ ತಂಟೆಕೋರಳಂತೆ ಕಾಣುವ ಮಹಿಮಾ ಹಲವಾರು ವಿಷಯಗಳ ಬಗ್ಗೆ ಮಂಡಿಸುವ ತನ್ನದೇ ವಿಚಾರಗಳ ತುಣುಕುಗಳು ಇಲ್ಲಿವೆ.



ಪಾತ್ರದ ಆಯ್ಕೆ

ಸಿನಿಮಾ ಒಪ್ಪುವ ಮುಂಚೆ ಮುಖ್ಯ ಎನ್ನಿಸೋದು ಕಥೆ. ಕಥೇಲಿ ನನ್ನ ಪಾತ್ರ, ಅದರ ಮಹತ್ವ ಪರಿಗಣಿಸ್ತೀನಿ. ಈ ಪಾತ್ರಾನೇ ಇಲ್ಲದೇ ಇದ್ದರೆ ಕಥೆ ಹ್ಯಾಗಿರುತ್ತೆ ಅಂತಲೂ ಚಿಂತಿಸ್ತೀನಿ. ಆಮೇಲೇ ಒಂದು ಸಿನಿಮಾ, ಪಾತ್ರ ಒಪ್ಪಿಕೊಳ್ಳೋದು.

ಎಷ್ಟೋ ಸಲ ಕಥೇಲಿ ಹೇಳಿದ್ದ ಹಾಗೆ ಪಾತ್ರ ಮೂಡಿ ಬರೋದಿಲ್ಲ. ಪಾತ್ರ ಹ್ಯಾಗೆ ರೂಪುಗೊಳ್ಳುತ್ತಾ ಇದೆ ಅಂತ ಶೂಟಿಂಗ್ ಸಮಯದಲ್ಲಿ ನಮಗೆ ಗೊತ್ತಾಗೋದೂ ಇಲ್ಲ. ಎಷ್ಟೋ ಸಲ ನಾವು ತುಂಬಾ ಚೆನ್ನಾಗಿ ಅಭಿನಯಿಸಿರೋ ಸನ್ನಿವೇಶಾನೇ ಎಡಿಟಿಂಗ್ ಮಾಡೋವಾಗ ಕತ್ತರಿಸಿ ಬಿಸಾಡಬಹುದು. ಕತೆ ದೃಷ್ಟಿಯಿಂದ ಅದು ಅನಿವಾರ್ಯ ಆಗಿರಲೂಬಹುದು.

ಒಂದು ಸಿನಿಮಾ ನಾನು ಒಪ್ಪೋದು, ಜನ ಆ ಸಿನಿಮಾ ಒಪ್ಪಿಕೊಳ್ಳೋದು ಬೇರೆ ಬೇರೆ. ಉಳಿದವರಿಗಿಂತ ಹೆಚ್ಚು ಯಶಸ್ವೀ ಚಿತ್ರ ಕೊಟ್ಟಿದೀನಿ ಅನ್ನೋದೇ ನನಗೆ ಹೆಮ್ಮೆ.



❑

ಗಾಸಿಪ್

ಪತ್ರಕರ್ತರು ಇದರ ಸೃಷ್ಟಿಕರ್ತರು. ಇದೊಂಥರಾ ಚೀನಾದ ಕಾಗೆ ಕತೆ ಥರ. 'ಯಾರೋ ಕಪ್ಪಗೆ ವಾಂತಿ ಮಾಡಿಕೊಂಡರಂತೆ' ಅನ್ನೋದು ಕಿವಿಯಿಂದ ಕಿವಿಗೆ ಹೋಗುತ್ತಾ ಕೊನೆಗೆ 'ಯಾರೋ ಕಾಗೆ ವಾಂತಿ ಮಾಡಿಕೊಂಡರಂತೆ' ಅನ್ನೋ ಹಾಗೆ ಇದೂನೂ. ನಾನು ಆ ವಿಚಾರ ತಲೆ ಕೆಡಿಸಿಕೊಳ್ಳೋದಿಲ್ಲ.

❑

ರಾಜಕೀಯ

ನಮ್ಮದು ರಾಜಕೀಯ ಹಿನ್ನೆಲೆಯ ಕುಟುಂಬ. ಎಲ್ಲ ರಾಜಕೀಯ ಪಕ್ಷಗಳಲ್ಲಿ ನನಗೆ, ನನ್ನ ತಂದೆಗೆ ಆತ್ಮೀಯರಾದವರು ಇದ್ದಾರೆ. ಅಂಥವರ ಪರ ಪ್ರಚಾರಕ್ಕೆ ಹೋದರೆ ತಪ್ಪೇನು? ನಾನು ಯಾವುದೋ ಒಂದು ರಾಜಕೀಯ ಪಕ್ಷದ ಪರವಾಗಿ ಪ್ರಚಾರಕ್ಕೆ ಹೋಗಿರಲಿಲ್ಲ.

❑

ಹವ್ಯಾಸ

ನಾನಾ ಹವ್ಯಾಸಗಳು ಇವೆ. ಓದೋದು, ಟಿ.ವಿ. ನೋಡೋದು, ನಾನಾ ರೀತಿ ಚಟುವಟಿಕೆ ನನಗೆ ಇಷ್ಟ. ಒಂದೇ ದಿನದಲ್ಲಿ ಒಂದು ಕಡೆ ಫಿಲಂ ಒಂದಕ್ಕೆ ಡಬ್ ಮಾಡಿ, ಅದೇ ದಿನ ಇನ್ನೊಂದು ಫಿಲಂ ಶೂಟಿಂಗ್‌ನಲ್ಲಿ ಪಾಲ್ಗೊಂಡು ಮತ್ತೊಂದು ಸಿನಿಮಾದ ಸ್ಟೋರಿ ಸೆಷನ್‌ನಲ್ಲಿ ಪಾಲ್ಗೊಂಡಿರೋದೂ ಉಂಟು. ಚಿಕ್ಕವಳಿದ್ದಾಗಿಂದಲೂ ಆಟಗಳಲ್ಲಿ ತುಂಬಾ ಇಷ್ಟ. ಸ್ಕೂಲಲ್ಲಿ ನಾನೇ ಯಾವತ್ತೂ ಫಸ್ಟ್. ಅದಕ್ಕೆ ನಾನು ಮೋಸ ಮಾಡ್ತಾ ಇದ್ದುದೇ ಕಾರಣ. ಎಲ್ಲರೂ ಲೈನ್ ಹಿಂದೆ ನಿಂತುಕೊಂಡರೆ, ನಾನು ಎಲ್ಲರ ಕಣ್ಣು ತಪ್ಪಿಸಿ ಲೈನ್ ದಾಟಿ ಒಂದು ಹೆಜ್ಜೆ ಮುಂದೆ ಇಟ್ಟುಕೊಂಡಿರ್ತಾ ಇದ್ದೆ. ಹೀಗೆ ಸಣ್ಣಪುಟ್ಟ ಮೋಸ ಮಾಡೋದು ಭಾರೀ ಮಜಾ ಇರುತ್ತೆ. ಇದೆಲ್ಲ ನಾನು ಕಲಿತಿದ್ದು ನನ್ನ ತಂದೆಯಿಂದ. ಇದುವರೆಗೂ ಇಂಥ ಮೋಸದಾಟದಲ್ಲಿ ನಮ್ಮ ತಂದೇನ ಮೀರಿಸೋಕ್ಕೆ ಆಗೇ ಇಲ್ಲ. ನಾವು ನೋಡ್ತಾ ಇರೋ ಹಾಗೇ ಅವರು ಚೆಸ್ ಬೋರ್ಡ್‌ನಲ್ಲಿ ಮೆತ್ತಗೆ ಯಾವುದೋ ಒಂದು ಸರಿಸಿ ಇಟ್ಟು ಬಿಟ್ಟಿರ್ತಾರೆ. ■

ಹಿಮಖಂಡದಲ್ಲಿ ಕಳೆದ ಆರು ತಿಂಗಳ ರೋಚಕ ಕತೆ

ದೀಪಾವಳಿ ವಿಶೇಷಾಂಕಕ್ಕೆ ವಿಶಿಷ್ಟ ಲೇಖನ
■ ಟಿ.ಆರ್. ಅನಂತರಾಮು



ಭಾರತೀಯ ತಂಡದ ಕುಡಿಯುವ ನೀರಿನ ಆಸರೆಯಾದ ಪ್ರಿಯದರ್ಶಿನಿ ಸರೋವರ

1995ರಲ್ಲಿ ಭಾರತದ ಹದಿನೈದನೇ ಅಂಟಾರ್ಕ್‌ಟಿಕ ಯಾತ್ರೆಯಲ್ಲಿ ಪಾಲ್ಗೊಂಡಿದ್ದ ಭೂವಿಜ್ಞಾನಿ ಕೆ.ವಿ.ಕೃಷ್ಣಮೂರ್ತಿ ಅವರೊಡನೆ ನಡೆಸಿದ ಸಂದರ್ಶನವನ್ನು ಆಧರಿಸಿದ ರೂಪಕ

ಬ್ಯಾಂಡ್‌ಸೆಟ್ಟಿನಲ್ಲಿ ರಾಷ್ಟ್ರಗೀತೆ ನುಡಿಸುತ್ತಲೇ ಮೈ ಜುಮ್ಮೆನ್ನುತ್ತಿತ್ತು. ಹಿಂದೆಂದಿಗಿಂತಲೂ ನರನಾಡಿಯಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ನನ್ನ ಎದೆಯ ಡವಡವ ನನಗೇ ಕೇಳಿಸುತ್ತಿತ್ತು. ಮರ್ಮಗೋವದ ತೀರದಲ್ಲಿ ಲಂಗರು ಹಾಕಿದ್ದ ನೌಕೆ 'ಬ್ರಿಂಕ್‌ನೆಸ್' ದಿವ್ಯ ಮೌನವಹಿಸಿ ನಮ್ಮನ್ನು ಕನಸಿನ ಲೋಕಕ್ಕೆ ಕೊಂಡೊಯ್ಯಲು ಸಿದ್ಧವಾಗಿ ನಿಂತಿತ್ತು. ಮಿಲಿಟರಿ ಪಡೆಯ ಕೆಲವು ಮಂದಿಯನ್ನು ಬಿಟ್ಟರೆ ಅಲ್ಲಿ ನಾವೇ ನಾವು. ಸಪ್ತಸಾಗರ ದಾಟಿ ಭೂಮಿಯ ದಕ್ಷಿಣ ತಲ ಮುಟ್ಟುವ ಗುರಿ ನಮ್ಮದಾಗಿತ್ತು. ಜೀವವಿಜ್ಞಾನಿಗಳು, ಭೂವಿಜ್ಞಾನಿಗಳು, ಭೌತವಿಜ್ಞಾನಿಗಳು, ಸಸ್ಯ-ಪ್ರಾಣವಿಜ್ಞಾನದ ಪರಿಣತರು, ವೈದ್ಯರು, ಆಹಾರ ಸಂಶೋಧಕರು, ವಾತಾವರಣ ವಿಜ್ಞಾನಿಗಳು, ಹೀಗೆ ನಮ್ಮ ಪಡೆ ಸಜ್ಜಾಗಿತ್ತು. ಅದು ಸಮರ ಸಿದ್ಧತೆ ಎಂದರೂ ಆದೀತು. ನಾವು ಯಾವ ಶತ್ರುವಿನ ಜೊತೆ ಹೋರಾಡಬೇಕೆಂಬ ಸ್ಪಷ್ಟ ಕಲ್ಪನೆ ನಮಗಿತ್ತು. ಅದು ಕೇವಲ ಮಾನಸಿಕ ಯುದ್ಧವಲ್ಲ; ನಿಜಕ್ಕೂ ದೈಹಿಕವಾದದ್ದು. ಅಗ್ನಿಪರೀಕ್ಷೆಯಲ್ಲ; ಕಡುಶೈತ್ಯ ಪರೀಕ್ಷೆ. ನಿಸರ್ಗದೊಡನೆ ಸೆಣಸಲೇಬೇಕೆಂದಿದ್ದೆವು. ಎದೆ ಗಟ್ಟಿಮಾಡಿಕೊಂಡಿದ್ದೆವು.

ಈಗಿನ ನನ್ನ ಯಾತ್ರೆ ನಾನು ಬಯಸಿದ್ದೇ. ದೂರದ, ಬಹುದೂರದ ಆ ಅಜ್ಞಾತಖಂಡಕ್ಕೆ ಹೋಗಲೇ ಬೇಕು, ನಿಸರ್ಗದ ರೌದ್ರ ಅವತಾರವನ್ನು ನೋಡಿ ನನ್ನೆದೆಯಲ್ಲಿ ತುಂಬಿಕೊಳ್ಳಬೇಕು ಎಂದು ತಹತಹಿಸುತ್ತಿದ್ದೆ. ಅಮೈತೂರಿನ ಈ ಹೈದನಿಗೆ ಇನ್ನೆಲ್ಲಿ ಇಂತಹ ಅವಕಾಶ? ಎಣ್ಣೆ ಬಂದಾಗ ಯಾಕೆ ಕಣ್ಣು ಮುಚ್ಚಿಕೊಳ್ಳಬೇಕು? ನನ್ನ ಆತ್ಮ ಸಂವಾದವೇ ನನ್ನನ್ನು ಹುರಿದುಂಬಿಸಿತ್ತು. ಮದುವೆಯಾದವನು, ಎಡೆಬಿಡದೆ ಕಾಡುಮೇಡಲ್ಲಿ ನನ್ನನ್ನು ಅನುಸರಿಸಿದ ಪತ್ನಿಗೆ ನನ್ನ ಅಂತರ್ಯವನ್ನು ಹೇಳಿ ಒಪ್ಪಿಸಿದ್ದೆ. ಆಗಂತುಕ ನಾಡಿನ ಬಗ್ಗೆ ಎಲ್ಲವನ್ನೂ ಬೇಕೆಂದೇ ಹೇಳಿರಲಿಲ್ಲ. ಯಾವ ಭಾರತೀಯ ಹೆಣ್ಣು ತನ್ನ ಗಂಡ ಸಾವು ಬದುಕಿನ ನಡುವೆ ಹೋರಾಡಬೇಕಾದ ಕ್ಷಣಗಳನ್ನು ಆಹ್ವಾನಿಸುವುದನ್ನು ಮೆಚ್ಚುತ್ತಾಳೆ. ಅದಕ್ಕೇ ನನ್ನ ಅಂತರಂಗವನ್ನು ಪೂರ್ತಿ ಬಿಟ್ಟುಕೊಟ್ಟಿರಲಿಲ್ಲ. ಹಾಗೇನಾದರೂ ಎಡವಿದ್ದರೆ ನನಗೆ ಗ್ರೀನ್ ಸಿಗ್ನಲ್ ಎಂದೂ ಸಿಕ್ಕುತ್ತಿರಲಿಲ್ಲ.


ನಮ್ಮ ನೌಕೆಯ ಒಡಲು ತುಂಬಿತ್ತು. ಆರು ತಿಂಗಳಿಗೆ ಬೇಕಾಗುವಷ್ಟು ಸಾಮಾನು ಸರಂಜಾಮು, ಬೆಂಕಿಪೊಟ್ಟಣ ಮೊದಲ್ಗೊಂಡು ತುಂಬಿಕೊಂಡಿದ್ದೆವು. ಅದು ನಾರ್ವೆ ದೇಶದ ನೌಕೆ, ರಿಜಿಸ್ಟ್ರೇಶನ್ ಆಗಿದ್ದು ಮಾತ್ರ ಮನಿಲಾದಲ್ಲಿ. ಇದು ಸಾಧಾರಣಾ ನೌಕೆಯಲ್ಲವಾದ್ದರಿಂದ, ಜೊತೆಗೆ ನಾರ್ವೆ ದೇಶದಿಂದ ಈ ಕೆಲಸಕ್ಕಾಗಿ ತರಿಸಿಕೊಂಡಿದ್ದರಿಂದ ನೌಕೆಯ ಕ್ಯಾಪ್ಟನ್ ಕೂಡ ನಾರ್ವೆ ದೇಶದವನೇ. ಮೊದಲ ಅಂಟಾರ್ಕ್‌ಟಿಕಾ ಯಾತ್ರೆಯಿಂದ ತೊಡಗಿ ನಮ್ಮ ಮತ್ತು ನಾರ್ವೆ ದೇಶದ ಈ ಕ್ಷೇತ್ರದ ವಿನಿಮಯ ಈ ತನಕ ಮುಂದುವರಿದೇ ಇದೆ. ಮೊತ್ತ ಮೊದಲ ಅಂಟಾರ್ಕ್‌ಟಿಕ ಯಾತ್ರೆಗೆ ಆ ದೇಶದ 'ಪೋಲಾರ್ ಸರ್ಕಲ್' ಎಂಬ ನೌಕೆಯನ್ನು ಬಳಸಿದ್ದರು. ಇಂಥ ನೌಕೆಗಳು ಆಧುನಿಕ ಯಂತ್ರೋಪಕರಣಗಳಿಂದ ಸಜ್ಜಾಗಿರುತ್ತವೆ. ಈ ನೌಕೆಯೂ ಅಷ್ಟೇ. ಹಿಮಗಡ್ಡೆಯನ್ನು ಸೀಳಬಲ್ಲ ಯಂತ್ರದಿಂದ ಇದು ಸಜ್ಜಾಗಿತ್ತು. ಮರ್ಮಗೋವಕ್ಕೆ ಕೈಬೀಸಿ ನೌಕೆ ಲಂಗರು ಬಿಚ್ಚಿದಾಗ ನನ್ನ ಕನಸಿನಲೋಕದ ಪಯಣ ಪ್ರಾರಂಭಿಸಿಬಿಟ್ಟಿತ್ತು. ನೌಕೆ ಮೆಲ್ಲಮೆಲ್ಲನೆ ನೀರನ್ನು ಹಾಯುವಾಗ ಅದರ ಚಲನೆಯೇ ನಮ್ಮ ಅರಿವಿಗೆ ಬರಲಿಲ್ಲ. ಸತತ ಒಂದು ತಿಂಗಳ ಪ್ರಯಾಣ, ನೇರ ದಕ್ಷಿಣಕ್ಕೆ - ಭೂಮಿಯ ದಕ್ಷಿಣ ತುದಿಯ ಕಟ್ಟಕಡೆಯ ನೆಲ ಅಂಟಾರ್ಕ್‌ಟಿಕ್ ಖಂಡ. ಕಾಡಿಲ್ಲದ ನಾಡಿಗೆ, ಜನರಿಲ್ಲದ ಬೀಡಿಗೆ,

ದೇಶವಲ್ಲದ ವಿದೇಶಕ್ಕೆ, ಪ್ರಕೃತಿಯೊಡನೆ ಸೆಣಸಲು, ಬದುಕಿ ಬರುವೆವೆಂಬ ಭರವಸೆಯೊಂದಿಗೆ. ಹಿಂದೂ ಮಹಾಸಾಗರದ ಜಲರಾಶಿ ಸಂಜೆಯಾಗುತ್ತಲೇ ಕಪ್ಪಿಟ್ಟಿತು. ನಮ್ಮ ಮುಂದೆ ಹನ್ನೊಂದು ಸಾವಿರ ಕಿಲೋಮೀಟರು ದೂರದ ಪ್ರಯಾಣವಿತ್ತು. ಮಾರಿಷಸ್ ದ್ವೀಪ ಬಿಟ್ಟರೆ ನಾವೆಲ್ಲೂ ನಿಲ್ಲುವಂತಿರಲಿಲ್ಲ. ಮಾರಿಷಸ್ ಇಂಧನ ಭರ್ತಿ ಮಾಡುವ ಜಾಗ. ಇದನ್ನು ದಾಟಿಯೇ ನಾವು ಮುಂದೆ ಹೋಗಬೇಕು.

ಮಾರಿಷಸ್ ದ್ವೀಪ ತಲಪಲು, ಹೊರಟ ದಿನದಿಂದ ನಮಗೆ ಏಳು ದಿನ ಹಿಡಿಯಿತು. ಖಂಡದ ಕಲ್ಪನೆಯಲ್ಲಿ ನಮಗೆ ಸಾಗರಯಾನ ತಿಳಿಯಲೇ ಇಲ್ಲ. ಹಿಂದೂ ಮಹಾಸಾಗರ ಶಾಂತವಾಗಿತ್ತು. ದಾರಿಯುದ್ದಕ್ಕೂ ತಿಮಿಂಗಿಲಗಳ ದರ್ಶನ ಎದೆಯಲ್ಲಿ ಪುಲಕ ತಂದಿತು. ನೀಲವರ್ಣದ ಜಲರಾಶಿಯನ್ನು ಕಣ್ಣೆವೆಯಿಕ್ಕದೆ ನೋಡುತ್ತ, ಕಾಲದ ಹಗಲಿರುಳುಗಳ ವ್ಯಾಪಾರದಲ್ಲಿ ನಾವೂ ಭಾಗಿಯಾಗಿದ್ದೆವು. ನಾವಿನ್ನೂ ಮಾರಿಷಸ್ ತಲುಪಿರಲಿಲ್ಲ. ಸಾಗರದ ಮಧ್ಯದಲ್ಲಿ ರೈಲಿನ ಸೀಟಿ ಹೊಡೆದಂತೆ ಹಡಗಿನ ಮುಂಭಾಗದಿಂದ ಸೈರನ್ ಮೊರೆತವಾಯಿತು. ಆ ನಿಶ್ಯಬ್ದ ವಾತಾವರಣದಲ್ಲಿ ಹೆಬ್ಬಲೆಗಳ ಕುಲುಕು ಬಿಟ್ಟರೆ ಮತ್ತೇನೂ ಕೇಳಿಸುತ್ತಿರಲಿಲ್ಲ. ಸೈರನ್ ಮೊರೆತ ಎದೆಯನ್ನು ಡವಗುಟ್ಟುವಂತೆ ಮಾಡಿತು. ನೌಕೆ ತಲುಪಿದ್ದ ಜಾಗದ ಬಗ್ಗೆ ಕ್ಯಾಪ್ಟನ್‌ಗೆ ಸ್ಪಷ್ಟ ತಿಳಿವಿತ್ತು. ಅದು 0^0 ರೇಖಾಂಶ. ಅರ್ಥಾತ್ ನಾವು ಸಮಭಾಜಕ ವೃತ್ತವನ್ನು ದಾಟುವುದರಲ್ಲಿದ್ದೆವು. ಈ ಭಾಗವನ್ನು ಹಾಯುವಾಗ ಯಾವುದೇ ದೇಶದವರಾಗಿರಲಿ ಅನೂಚಾನವಾಗಿ ಒಂದು ಪದ್ಧತಿ ಬೆಳೆದು ಬಂದಿದೆ; ಸಮುದ್ರರಾಜನ ಅಥವಾ ವರುಣನ ಕೃಪೆ ಪಡೆಯಬೇಕಾಗುತ್ತದೆ. ಅವನ ಅಪ್ಪಣೆಯಿಲ್ಲದೆ ಮುಂದೆ ಸಾಗುವಂತಿಲ್ಲ. ಈ ಪೌರಾಣಿಕ ಕಲ್ಪನೆ ಈ ಯುಗದಲ್ಲೂ ಇನ್ನೂ ಜೀವಂತವಾಗಿದೆ. ಲಗುಬಗೆಯಿಂದ ನಮ್ಮಲ್ಲಿ ಒಬ್ಬನಿಗೆ ಹತ್ತಿಯ ಗಡ್ಡಮೀಸೆ ಅಂಟಿಸಿದೆವು. ಕೊರಳಿಗೆ ಮಾಲೆ ಹಾಕಿದೆವು. ನಾವಿಕನನ್ನಾಗಿ ಮಾಡಿದೆವು. ಉಪ್ಪು ನೀರಿನಲ್ಲಿ ಅವನನ್ನು ಅದ್ದಿ ತೆಗೆದೆವು. ವರುಣನಿಗೆ ತೃಪ್ತಿಯಾಗುವಂತೆ ಶಿಕ್ಷೆ ನೀಡಿದೆವು. ತನ್ನೆಲ್ಲ ತಪ್ಪುಗಳನ್ನು ಮನ್ನಿಸುವಂತೆ ಆತ ಕ್ಷಮೆ ಕೋರಿದ. ಸಾಗರ ಮಧ್ಯದ ಈ ಆಟವನ್ನು ನಾರ್ವೆಯವರು ಮನಸಾರೆ ಬಿಟ್ಟ ಕಣ್ಣಿನಿಂದ ನೋಡಿದರು. ನಮ್ಮೊಂದಿಗೆ ಈ ನಾಟಕದಲ್ಲಿ ಅವರೂ ಭಾಗಿಯಾದರು. ಚೋದ್ಯವೆಂದರೆ ಇದಾದ ನಂತರ ನೌಕೆಯ ಕ್ಯಾಪ್ಟನ್ ನಮ್ಮೆಲ್ಲರಿಗೂ ತಲಾ ಒಂದೊಂದು ಸರ್ಟಿಫಿಕೆಟ್ ಕೊಟ್ಟೇಬಿಟ್ಟ. ಸಮಭಾಜಕ ವೃತ್ತವನ್ನು ದಾಟಿದರೆ ಅತ್ಯಗತ್ಯವಾಗಿ ಈ ಪ್ರಮಾಣ ಪತ್ರವನ್ನು ಹೊಂದಿರಲೇಬೇಕಂತೆ. ನಮಗೆ ನಿಜವಾಗಿಯೂ ಸಾಗರದ ಕೃಪೆ ಬೇಕಾಗಿದ್ದದ್ದು ಈ 0^0 ರೇಖಾಂಶ ಹಾಯುವಾಗ ಅಲ್ಲ, ಅಲ್ಲಿಂದ ಮುಂದಕ್ಕೆ. ಒಮ್ಮೆ 0^0 ಹಾಯ್ದವೆಂದರೆ ಅವ್ಯಕ್ತ ಕಾತರ, ನಿರೀಕ್ಷೆ, ಪುಲಕಗಳು ನಮ್ಮ ಅರಿವಿಗೆ ಬಾರದೆ ನಮ್ಮನ್ನು ಕಾಡಿಬಿಡುತ್ತವೆ. ಮಾರಿಷಸ್ ದ್ವೀಪ ತಲಪುವ ಹೊತ್ತಿಗೆ ನಮ್ಮ ಒಡನಾಡಿಗಳಾಗಿ, ಮಾರ್ಗದರ್ಶಿಗಳಾಗಿ ನಮ್ಮ ನೌಕೆಯ ಮೂತಿಯ ನೇರಕ್ಕೆ ಡಾಲ್ಫಿನ್‌ಗಳು ಪ್ರಯಾಣ ಮಾಡಿದ್ದವು.

ಡಿಸೆಂಬರ್ ತಿಂಗಳ ಹದಿನೇಳರವರೆಗೆ ಮಾರಿಷಸ್‌ನಲ್ಲೇ ಇದ್ದೆವು. ಮತ್ತೆ ನಮ್ಮ ಪ್ರಯಾಣ ಮುಂದುವರೆಯಿತು. ಸಾಗರದ ಲಕ್ಷಣ ಬದಲಾಗುತ್ತ ಬಂತು. ಸಾಗರಕ್ಕೂ ಒಂದು ಭಾಷೆ ಇದೆ ಎಂದು ನನಗೆ ಅರಿವಾದ್ದೇ ಇಲ್ಲಿ. ಈಗ ಹಿಂದೂ ಮಹಾಸಾಗರ ಬರೀ ಶೂನ್ಯ ಜಲರಾಶಿ.

ನಾವೀಗ ಸಾಗರದ ನರ್ತನಕ್ಕಷ್ಟೇ ತಾಳ ಹಾಕುತ್ತಿರಲಿಲ್ಲ; ಮೈ ಕೂಡ ಕುಣಿಯುತ್ತಿತ್ತು. ಇಡೀ ನೌಕೆಯೇ ತೂಗುಯ್ಯಾಲೆಯಾಡಿ ಒಳಗಿರುವ ವಸ್ತುಗಳು ಎಲ್ಲಿ ಪಟಪಟನೆ ಉರುಳಿ ನಮ್ಮ ಮೇಲೆ ಬೀಳುತ್ತವೋ ಎಂಬ ದುಗುಡ ಕಾಡುತ್ತಿತ್ತು. ಸಾಗರವೇ ಅಲ್ಲೋಲಕಲ್ಲೋಲವಾಗಿತ್ತು. ಎತ್ತ ನೋಡಿದರು ಹೆಬ್ಬಲೆಗಳೇ ಕುಣಿದು ಕುಪ್ಪಳಿಸುತ್ತಿದ್ದವು. ಸಿಂಹದ ಬೋನಿಗೆ ನುಗ್ಗಿದ ಇಲಿಯ ಪಾಡು ನಮ್ಮದಾಗಿತ್ತು. ಬಾತ್‌ರೂಮಿನ ಬಾಗಿಲು ತೆಗೆಯಲೂ ಕೂಡ ನಾವು ಹೆಣಗಬೇಕಾಗಿ ಬಂತು. ಇಡೀ ಸಾಗರವೇ ಜೋಗುಳವಾಡುತ್ತಿದ್ದಂತೆ ನಮಗೆ ಭಾಸ. ಈ ಕುರಿತು ಹಿಂದಿನ ತಂಡ ನಮಗೆ ಸಾಕಷ್ಟು ಎಚ್ಚರಿಕೆ ನೀಡಿತ್ತು, ಎಚ್ಚರಿಕೆ ನೀಡಿದರೂ ಅಷ್ಟೇ, ನಾವು ಈ ಹಂತವನ್ನು ಹಾಯಲೇಬೇಕಾಗಿತ್ತು. ಮನಸ್ಸನ್ನು ಮೊದಲೇ ಸಿದ್ಧಗೊಳಿಸಿದ್ದೆವು. ಆದರೆ ಸಾಗರ ಅಷ್ಟೊಂದು ರಾದ್ಧಾಂತ ಮಾಡುತ್ತದೆ ಎಂದು ತಿಳಿದದ್ದು ಅಲೆಯ ಹೊಡೆತಕ್ಕೆ ಸಿಕ್ಕಿದಾಗಲೇ. ನೆಲದ ಮೇಲಾದರೆ ಒಂದಲ್ಲ ಒಂದು ಗುರುತು ಇರುತ್ತದೆ; ನಾವೆಲ್ಲಿದ್ದೇವೆ ಎಂದು ಸುಲಭವಾಗಿ ಹೇಳಬಹುದು, ಜಲರಾಶಿಯ ಮಧ್ಯ ನಮಗೇನಿದ್ದರೂ ಕ್ಯಾಪ್ಟನ್ ಹೇಳಬೇಕು. ಅದೇ ನಮಗೆ ವೇದವಾಕ್ಯ. ನೌಕೆ ಯಾವ ಯಾವ ಸಮಯದಲ್ಲಿ ಯಾವ ಅಕ್ಷಾಂಶ, ರೇಖಾಂಶಗಳನ್ನು ದಾಟುತ್ತದೆ ಎಂಬುದನ್ನು ಸೆಟಲೈಟ್‌ಗಳ ನೆರವಿನಿಂದ ಮಾಹಿತಿ ಪಡೆದು ಕ್ಯಾಪ್ಟನ್ ನಮಗೆ ತಿಳಿಸುತ್ತಾನೆ. ಹಾಗೆ ನೋಡಿದರೆ ಈ ಮಾಹಿತಿಯನ್ನು ಆತ ಹೇಳಬೇಕಾಗಿಯೇ ಇರಲಿಲ್ಲ. ನೌಕೆಯ ಥಕಧಿಮಿಯಿಂದಲೇ ನಮಗೆ ತಿಳಿಯುತ್ತಿತ್ತು. ಜಗತ್ತಿನ ಯಾವ ಭಾಗದಿಂದಲೇ ಅಂಟಾರ್ಕ್‌ಟಿಕ ಪ್ರವೇಶಿಸಲಿ, ಸಾಗರದ ಈ ಭಾಗವನ್ನಂತೂ ದಾಟಿ ಹೋಗಲೇಬೇಕು. ಭೂಮಿ ಗುಂಡಗಿದೆ ಅಂದಮೇಲೆ ಅಕ್ಷಾಂಶ ರೇಖಾಂಶಗಳು ಎಲ್ಲರಿಗೂ ಒಂದೇ. ಸಾಗರ ಏಕೆ ಈ ಕರಡಿ ಕುಣಿತ ಕುಣಿಯುತ್ತದೆ ಎಂದು ನೀವು ಪ್ರಶ್ನಿಸುವ ಮೊದಲೇ ನಾನೇ ಹೇಳಿಬಿಡುತ್ತೇನೆ. ಈ ಜಾಗದಲ್ಲಿ ಭಯಂಕರ ಬಿರುಗಾಳಿ ಏಳುತ್ತದೆ. ಅದು ಚಂಡಮಾರುತಗಳ ತವರು. ಹೆಬ್ಬಲೆಗಳನ್ನು ಏಳಿಸುತ್ತದೆ. ಹುಣ್ಣಿಮೆ, ಅಮಾವಾಸ್ಯೆಗಳಲ್ಲಿ ಸಾಗರದಲ್ಲಿ ಏಳುವ ಅಲೆಗಳು ಇವುಗಳ ಮುಂದೆ ಏನೇನೂ



ಅಂಟಾರ್ಕ್‌ಟಿಕ ತೀರದಲ್ಲಿ ತೇಲುತ್ತಿರುವ ಭಾರಿ ಹಿಮಗಡ್ಡೆ

ಅಲ್ಲ. ಇವು ಎಷ್ಟು ದೀರ್ಘವಾಗಿರುತ್ತವೆಂದರೆ ಇವನ್ನು ತಡೆಯುವ ಯಾವ ಶಕ್ತಿಯೂ ಅಲ್ಲಿರುವುದಿಲ್ಲ. ಸ್ತಬ್ಧವಾಗಬೇಕೆಂದರೆ ಅವು ಆಸ್ಟ್ರೇಲಿಯ ತೀರಕ್ಕೆ ಬಡಿಯಬೇಕು. ನಮ್ಮ ರಕ್ಷಣೆಗಿಂತ ಮುಖ್ಯವಾದದ್ದು ಇನ್ನೊಂದಿತ್ತು, ನಾವು ಕೊಂಡೊಯ್ದಿದ್ದ ಅತಿ ಸೂಕ್ಷ್ಮ ಉಪಕರಣಗಳು. ಯಾವೊಂದಕ್ಕಾದರೂ ಧಕ್ಕೆಯಾಗಿದ್ದರೆ ಇಡೀ ನಮ್ಮ ಯೋಜನೆಯೇ ತಲೆಕೆಳಗಾಗುತ್ತಿತ್ತು. ಈ ಭಾಗಕ್ಕೆ 'ಘರ್ಜಿಸುವ ನಲವತ್ತು ಅಕ್ಷಾಂಶ' ಎಂದೇ ನಾವಿಕರು ಹೆಸರು ಕೊಟ್ಟಿದ್ದಾರೆ. ಈಗಂತೂ ಬಿಡಿ, ಸುಸಜ್ಜಿತ ನೌಕೆಗಳಿವೆ. ಹಿಂದೆ ಸಾಧಾರಣ ನೌಕೆಗಳಲ್ಲಿ ಈ ಭಾಗವನ್ನು ಹಾಯುವವರ ಪಾಡು - ನಾನಂತೂ ಊಹಿಸಲಾರೆ. ತೂಗುಯ್ಯಾಲೆಯಾಡುತ್ತಲೇ ನಾವು ಮುಂದುವರೆದೆವು. ಇದನ್ನು ದಾಟಿದರೆ ಮತ್ತೊಂದು ಅಪಾಯಕಾರಿ ವಲಯ - ಅದು 60^0 ರೇಖಾಂಶ. ಇದು ಸಮೀಪಿಸುತ್ತಿದ್ದಂತೆ ಸಾಗರದ ವಿಭಿನ್ನ ಪ್ರಪಂಚದ ವಾಸನೆ, ನೋಟ ನಮಗೆ ಸಿಕ್ಕುತ್ತಾ ಹೋಯಿತು. ದುರ್ಬೀನು ಹಾಕಿ ನೋಡಿದೆವು. ರಾಡಾರ್ ನಿರಂತರವಾಗಿ ಹದ್ದಿನ ಕಣ್ಣಿಟ್ಟು ಸಾಗರದ ಮೇಲೆ ನಿಗಾ ವಹಿಸಿತು. ಯಾವ ಶತ್ರು ಎದುರಿಗೆ ಯಾವಾಗ ಎರಗಬಹುದು ಎಂಬ ಉದ್ವೇಗದಲ್ಲಿ ನಾವು ನಿರೀಕ್ಷಿಸುವಂತಾಯಿತು. ನೋಡನೋಡುತ್ತಲೇ ಆ ಕ್ಷಣ ಎದುರಾಗಿಬಿಟ್ಟಿತು. ಸಾಗರದಲ್ಲಿ ಹಿಂದಿನ ಪರದೆಯಿಂದ ಮೆಲ್ಲಮೆಲ್ಲನೆ ತೇಲಿ ಬಿಳಿಬೆಟ್ಟಗಳು ನಮ್ಮನ್ನು ಸಮೀಪಿಸತೊಡಗಿದವು. ನಮ್ಮ ಹಡಗಿಗಿಂತಲೂ ಎತ್ತರ; ಅವುಗಳು ಮೆಲ್ಲನೆ ಸರಿಯುತ್ತಿದ್ದರೆ ಎದೆ ಧಸಕ್ಕೆನ್ನುತ್ತಿತ್ತು. ಈ ಎಲ್ಲವೂ ಪರಿಶುಭ್ರ ಹಿಮಗಡ್ಡೆಯ ಬೆಟ್ಟಗಳು. ಅವು ನೌಕೆಗೆ ಅಡ್ಡ ಬರದಂತೆ ಎಚ್ಚರ ವಹಿಸಿ ಅವಕ್ಕೆ ದಾರಿ ತಪ್ಪಿಸಿ ನೌಕೆಯನ್ನು ಕ್ಯಾಪ್ಟನ್ ಬೇರೆ ದಿಕ್ಕಿಗೆ ನಡೆಸುತ್ತಿದ್ದ.

ನೋಟವೇನೋ ಬೀಭತ್ಸವಾಗಿತ್ತು. ಆದರೆ ಮನದಲ್ಲಿ ಅದಮ್ಯ ಚೆಲುವು ಅಚ್ಚೊತ್ತಿಬಿಟ್ಟಿತು. ಹೌದು; ಅಂಟಾರ್ಕ್‌ಟಿಕ ಖಂಡ ಹಿಮದ ಸಾಮ್ರಾಜ್ಯ. ಅದರ ಅಂಚಿನಿಂದ ಕಿತ್ತು ಬಂದು ವರ್ಷದಲ್ಲಿ ಇಂಥ ಐದು ಸಾವಿರ ಬೆಟ್ಟಗಳು ಸಾಗರದ ಪಾಲಾಗುತ್ತವೆ. ಅವು ಕಳಚಿಬಿದ್ದಾಗ ಇಡೀ ಸಾಗರವೇ ಅಲ್ಲೋಲಕಲ್ಲೋಲವಾಗಿ ನೀರು ಕಿರುಚಾಡುತ್ತದೆ ನರಳುತ್ತದೆ, ಅಬ್ಬರಿಸುತ್ತದೆ, ಅರ್ಭಟಿಸುತ್ತದೆ, ಹತಾಶವಾಗಿ ಹಿಮದ ಗುಡ್ಡಕ್ಕೆ ಅಭಿಷೇಕ ಮಾಡುತ್ತದೆ. 1976ರಲ್ಲಿ ಒಂದು ಬರ್ಫದ ಗುಡ್ಡ ಖಂಡದ ಅಂಚಿನಿಂದ ಕಳಚಿಬಿದ್ದು ಸಾಗರದ ಪಾಲಾಯಿತು. ಅದರ ವಿಸ್ತೀರ್ಣ 3,600 ಚ.ಕಿ.ಮೀ. ನಮ್ಮ ಕೊಡಗು ಜಿಲ್ಲೆಯನ್ನು ಇದರ ಮೇಲೆ ಕೂಡಿಸಿದ್ದರೆ ಸಲೀಸಾಗಿ ಅದು ಹೊತ್ತು ಅಂಟಾರ್ಕ್‌ಟಿಕದ ಸುತ್ತ ಗಸ್ತು ಹೊಡೆಸುತ್ತಿತ್ತು. ಪ್ರತಿವರ್ಷವೂ ತೀರದಿಂದ ಸಾಗರಕ್ಕೆ 600 ರಿಂದ 2000 ಘನ ಕಿ.ಮೀ. ಹಿಮಗಡ್ಡೆ ಕಳಚಿ ಬೀಳುತ್ತದೆ. ಈ ಪ್ರಮಾಣದ ಹಿಮಗಡ್ಡೆ ಸಾಗರದ ಲಕ್ಷಣಗಳನ್ನೆಲ್ಲ ತಾತ್ಕಾಲಿಕವಾಗಿಯಾದರೂ ಬದಲಾಯಿಸುತ್ತದೆ. ಇವು ಅಲ್ಲಿಂದ ಉತ್ತರಕ್ಕೆ ಸರಿದಷ್ಟೂ ಅವುಗಳ ಆಯುಷ್ಯ ಕಡಿಮೆ. ನಿಧಾನಗತಿಯಲ್ಲಿ ಕರಗಿಬಿಡುತ್ತವೆ. ಶೈತ್ಯದ ನೀರಾಗಿ ಪರಿವರ್ತನೆಗೊಂಡು ಹರಿದು ಹಿಂದೂ ಮಹಾಸಾಗರದ ತಳವನ್ನು ಸ್ಪರ್ಶಿಸುತ್ತವೆ. ಅಲ್ಲೇ ಕಡಲ ಅಲೆಗಳೇಳುತ್ತವೆ. ನಾವಿಕರು ಇದನ್ನು ದೆವ್ವದ ನರ್ತನ ಶಾಲೆ ಎನ್ನುತ್ತಾರೆ. ಇಲ್ಲಿ ಉಷ್ಣಜಲ ಶೈತ್ಯ ಕಲದೊಡನೆ ಬೆರೆಯುವುದರಿಂದ ಲವಣಾಂಶವೂ ವಿನಿಮಯವಾಗುತ್ತದೆ, ನೀರಿನಲ್ಲಿ ಭಾರಿ ರಾಸಾಯನಿಕ ಬದಲಾವಣೆಯಾಗುತ್ತದೆ. 60° ರೇಖಾಂಶದಲ್ಲಿ ಸದ್ದುಗದ್ದಲವಿಲ್ಲದೆ ಕಣ್ಣಿಗೆಟುಕದೆ ಈ ಅಗೋಚರ ವಿದ್ಯಮಾನ ಸಾಗರ ತಳದಲ್ಲಿ ನಡೆಯುತ್ತಲೇ ಇರುತ್ತದೆ. ಅಂಟಾರ್ಕ್‌ಟಿಕ ಖಂಡ ತಲುಪಲು ಈ ಅಕ್ಷಾಂಶಗಳ ಪರೀಕ್ಷೆಯೇ 'ಎಂಟ್ರೆನ್ಸ್ ಪರೀಕ್ಷೆ' ನಿಸರ್ಗ ಯಾರಿಗೂ ಎಂದೂ ಸುಲಭವಾಗಿ ಒಲಿಯುವುದಿಲ್ಲ. ನಮ್ಮ ನರನಾಡಿಗಳನ್ನು ಅಲ್ಲಾಡಿಸಿಯೇ ಅದು ಪರೀಕ್ಷೆ ಒಡ್ಡುತ್ತದೆ. ಹಿಲೇರಿ ಮತ್ತು ತೇನಸಿಂಗ್ ಎವರೆಸ್ಟ್ ಶಿಖರ ತಲಪುವ ಮುನ್ನ ಇಂಥದೇ ಅನುಭವಕ್ಕೊಳಗಾಗಿದ್ದರು. ಅದು ಬೆಟ್ಟ, ಇದು ಸಾಗರ. ವ್ಯತ್ಯಾಸ ಅಷ್ಟೇ. ನಮ್ಮ ಪಾಡು ಇಲ್ಲಿ ಅದೇ ಆಗಿತ್ತು. ಎದುರಾಗುತ್ತಿದ್ದ ಆ ಹಿಮದ ಬೆಟ್ಟಗಳು ಒಂದುವೇಳೆ ನಮ್ಮ ಹಡಗುಗಳಿಗೆ ಬಡಿದಿದ್ದರೆ ಶಾಶ್ವತವಾಗಿ ನಮ್ಮ ನೌಕೆ ತಳಕಚ್ಚಿಬಿಡುತ್ತಿತ್ತು, ಟೈಟಾನಿಕ್ ನೌಕೆಯಂತೆ. ಈ ದಿನಗಳಲ್ಲಿ ಇಂಥ ಅಪಘಾತಗಳು ಸಂಭವಿಸುವುದು ತುಂಬ ವಿರಳ. ರಾಡಾರ್ ಬಳಕೆಯಿಂದಾಗಿ ಹಿಮಗಡ್ಡೆಗಳು ಯಾವ ಸ್ವರೂಪದವು, ಎತ್ತ ಚಲಿಸುತ್ತಿದೆ, ಎಷ್ಟು ದೂರದಲ್ಲಿದ್ದೇವೆ ಎಂಬ ಮಾಹಿತಿಯನ್ನು ಮೊದಲೇ ಅರಿಯುವುದು ಸುಲಭ. ಒಂದೊಂದು ಹಿಮಗಡ್ಡೆಯ ಭಾವಭಂಗಿಯೇ ಬೇರೆ ಬೇರೆ.

ಈ ಬರ್ಫದ ಬೆಟ್ಟಗಳು ಉತ್ತರಕ್ಕೆ ಸರಿಯುವವರೆಗೆ ಇಡೀ ಖಂಡದ ಸುತ್ತ ಗಸ್ತು ಹೊಡೆಯುತ್ತಲೇ ಇರುತ್ತವೆ, ನಭೋ ಮಂಡಲಕ್ಕೆ ನಾವು ಕಳುಹಿಸಿದ ಉಪಗ್ರಹಗಳು ಭೂಮಿಯನ್ನು ಸುತ್ತುವಂತೆ. ಪ್ರಪಂಚದಲ್ಲಿ ವಿಶೇಷವಾಗಿ ಮರುಭೂಮಿಗಳಲ್ಲಿ ಕುಡಿಯುವ ನೀರಿಗೆ ಬರ ಬಂದರೆ ಈ ಬರ್ಫದ ಬೆಟ್ಟಗಳನ್ನು ಹಡಗುಗಳಿಗೆ ಕಟ್ಟಿ ಯಾಕೆ ತರಬಾರದು ಎಂಬ ಯೋಜನೆಗಳು ಇತ್ತೀಚೆಗೆ ಮೊಳೆತಿವೆ. ಬರಗಾಲಕ್ಕೇನೋ ಇದು ಒಳ್ಳೆಯ ಉಪಾಯವೇ. ಆದರೆ ಇಷ್ಟೆಲ್ಲ ನಿಭಾಯಿಸಲು ದುಡ್ಡಿಗೂ ಬರ ಬರುತ್ತದಲ್ಲ! ಸಾಧಾರಣ ದೇಶಗಳು ಇಂಥ ವೆಚ್ಚವನ್ನು ಭರಿಸಲಾರವು. ಎಂದೇ ಈ ಭಗೀರಥ ಪ್ರಯತ್ನಕ್ಕೆ ಯಾವ ದೇಶವೂ ಕೈ ಹಾಕಿಲ್ಲ.

ಇಡೀ ಅಂಟಾರ್ಕ್‌ಟಿಕ ಖಂಡ ವಿಸ್ತೀರ್ಣದಲ್ಲಿ ಭಾರತ ಮತ್ತು ಚೀನ ಎರಡೂ ದೇಶಗಳಿಗಿಂತಲೂ ದೊಡ್ಡದು. ಆದರೆ ನೆಲ? ಶೇಕಡ 5 ಭಾಗ ಮಾತ್ರ ತೆರೆದಿದೆ. ಅದೂ ಪೂರ್ವ ಭಾಗದಲ್ಲಿ ಮಾತ್ರ. ಉಳಿದಂತೆ ದಪ್ಪ ಹಿಮದ ಸ್ತರ ಇಡೀ ಖಂಡವನ್ನೇ ಹೊದಿಕೆಯಂತೆ ಮುಚ್ಚಿಬಿಟ್ಟಿದೆ. ಅದರಲ್ಲೂ ಖಂಡದ ಮಧ್ಯಭಾಗದಲ್ಲಿ ಮೂರು ಕಿಲೋಮೀಟರು ದಪ್ಪದ ಹಿಮದ ಸ್ತರವಿದೆ. ಇದರಡಿಯಲ್ಲಿ ಕಾಲಗರ್ಭದ ನೂರಾರು ಘಟನೆಗಳು ಸಜೀವ ಸಮಾಧಿಯಾಗಿ ಹೂತು ಹೋಗಿವೆ. ವರ್ಷವರ್ಷವೂ ತೆಳು ಹಿಮದ ಪದರ ಖಂಡವನ್ನು ಮುಚ್ಚುತ್ತಲೇ ಬರುತ್ತಿದೆ. ಅವನ್ನು ನಾವು ಎಣಿಸಬಹುದು. ಚಾಣಕ್ಯ ಅರ್ಥಶಾಸ್ತ್ರ ಬರೆದಾಗ ಇಲ್ಲಿ ಬಿದ್ದ ಹಿಮ ಎಷ್ಟು ದಪ್ಪವಿದೆ? ಬಸವಣ್ಣ ವಚನ ಬರೆದಾಗ ಹನ್ನೆರಡನೇ ಶತಮಾನದಲ್ಲಿ ಇಲ್ಲಿ ಎಷ್ಟು ಹಿಮ ಬಿತ್ತು? ಬ್ರಿಟಿಷರನ್ನು ಭಾರತದಿಂದ ಹೊರ ದಬ್ಬಿದಾಗ ಇಲ್ಲಿ ಬಿದ್ದಿದ್ದ ಹಿಮದ ಲೆಕ್ಕ ಬೇಕೆ? ಎಲ್ಲವೂ ಇದೆ. ಹಿಮದ ಗರ್ಭವನ್ನು ಬಗೆದು ತಿರುಳು ತೆಗೆದು ನಾವು ಸ್ತರಗಳನ್ನು 1, 2, 3 ಎಂದು ಎಣಿಸುತ್ತ ಹಿಂದಕ್ಕೆ ಹೋಗಬೇಕು ಅಷ್ಟೇ. ಅಂಟಾರ್ಕ್‌ಟಿಕ ಖಂಡದ ಪೂರ್ವಾಪರ ನಮ್ಮನ್ನು ದಿಗಿಲುಗೊಳಿಸುತ್ತದೆ. 40 ದಶಲಕ್ಷ ವರ್ಷಗಳ ಹಿಂದೆ ಮೊದಲು ಇದು ಹಿಮಾಕ್ರಮಣ ಎದುರಿಸಿತು. ಅನಂತರ 20 ಲಕ್ಷ ವರ್ಷಗಳ ಹಿಂದೆ ಇಡೀ ಭೂಮಿ ಘೋರ ಹಿಮಾಕ್ರಮಣಕ್ಕೆ ಬಲಿಯಾಯಿತು. ಮೊದಲಿನ ಸ್ತರದ ಮೇಲೆ ಮತ್ತಷ್ಟು ಸ್ತರಗಳು ಬೆಳೆಯುತ್ತಲೇ ಹೋದವು. ಈಗ್ಗೆ ಹತ್ತು ಸಾವಿರ ವರ್ಷಗಳ ಹಿಂದೆ ಭೂಮಿ ಕೊನೆಯ ಬಾರಿಗೆ ಹಿಮಾಕ್ರಮಣಕ್ಕೆ ಸಿಲುಕಿತು. ಅಂದು ಹಿಮಕ್ಕೆ ಬಲಿಯಾದ ಈ ಖಂಡಕ್ಕೆ ಇಂದಿಗೂ ಬಿಡುಗಡೆಯೇ ಇಲ್ಲ. ಮುಂದೆ ನೆಲ ಅನಾವರಣಗೊಳ್ಳುತ್ತದೆ ಎಂಬ ಬಗ್ಗೆ ಕಿಂಚಿತ್ತೂ ಸುಳಿವಿಲ್ಲ.

ನಮ್ಮ ಪ್ರಯಾಣ ಮುಂದುವರೆದಂತೆ ಅಂಟಾರ್ಕ್‌ಟಿಕ ಹತ್ತಿರ ಹತ್ತಿರವಾಗುತ್ತಿತ್ತು. ನಾವಿದ್ದ ಜಲರಾಶಿ ಆಗಲೇ ದಕ್ಷಿಣ ಸಾಗರ ಎಂದು ಕರೆಸಿಕೊಂಡಿತ್ತು. ಬೆಚ್ಚನೆಯ ಉಣ್ಣೆ ಉಡುಪಿಗಾಗಿ ಕೈಗಳು ತಡಕುತ್ತಿದ್ದವು. ಬರುಬರುತ್ತಾ ಹಿಮಗಡ್ಡೆಯ ಸಂಖ್ಯೆ ಹೆಚ್ಚಾಗಿ, ಕೊನೆಗೆ ಇಡೀ ಸಾಗರವೇ ಹೆಪ್ಪುಗಟ್ಟಿದಂತೆ ಕಾಣುತ್ತಿತ್ತು. ಬ್ರಿಂಕ್‌ನೆಸ್ ನೌಕೆ ಹಿಮಗಡ್ಡೆಯಲ್ಲಿ ಮೂತಿ ತೂರಿಸುತ್ತ, ಸೀಳುತ್ತಾ ಹೆದ್ದಾರಿ ನಿರ್ಮಿಸಿಕೊಳ್ಳುತ್ತ ಸಾಗರದಲ್ಲಿ ಮುಂದುವರೆಯುತ್ತಲೇ ಇತ್ತು. ನಮ್ಮ ಕನಸಿನ ಸಾಮ್ರಾಜ್ಯದ ಅಂಚನ್ನು ಸಮೀಪಿಸಿದಾಗ ಡಿಸೆಂಬರ್ ತಿಂಗಳ 31. ಆ ವರ್ಷಕ್ಕೆ ವಿದಾಯ ಹೇಳುತ್ತಾ ಮುಂದಿನ ವರ್ಷವನ್ನು ಸ್ವಾಗತಿಸುತ್ತಾ ನಾವು ತೀರಕ್ಕೆ ಕಾಲಿಟ್ಟೆವು, ಇದೀಗ ನಾವು ಹಿಮಮಾನವರಾಗಿದ್ದೆವು. ಸೂಕ್ತ ನೀರಿರುವ ಜಾಗ, ಭದ್ರವಾದ ನೆಲೆ ಇವೆರಡರನ್ನೂ ಹುಡುಕಿ ನೌಕೆ ಲಂಗರು ಹಾಕಿತು. ಇಲ್ಲಿ ನಾವೇ ಧಣಿ, ನಾವೇ ಮಾಲೀಕರು, ನಾವೇ ಕೂಲಿಗಳು, ವಿಜ್ಞಾನಿಗಳು, ಮಾರ್ಗದರ್ಶಕರು,

ನಾಶವಾದ ದೇವರು!

ಮೈತ್ರಿ ಕೇಂದ್ರವೇ ನಮ್ಮ ಸರ್ವಸ್ವ, ಅದೇ ಕೇಂದ್ರ ಕಚೇರಿ. ಅಲ್ಲಿಂದಲೇ ಎಲ್ಲ ಹುಕುಂ ಜಾರಿ - ಅದೇ ನಮ್ಮ ಜೀವನಾಡಿ. ಎಲ್ಲ ಗೆಳೆಯರ ಕೂಟವೂ ಅಲ್ಲೇ. ಮನರಂಜನೆಗೆ ಎಲ್ಲ ಬಗೆಯ ಸವಲತ್ತುಗಳೂ ಅಲ್ಲಿದ್ದವು. ಅಷ್ಟೇ ಅಲ್ಲ, ಚರ್ಚು, ಮಸೀದಿ ದೇವಮಂದಿರ ಅದೊಂದು ತ್ರಿಮತಸ್ಥರ ತಾಣ. ಮಾರುತಿ ಅಲ್ಲಿನ ಉದ್ಭವಮೂರ್ತಿ ಏನೋ ಎನ್ನಿಸುವಷ್ಟು ಪ್ರಸಿದ್ಧಿ. ಗಾಳಿಯ ದೇವತೆ ಎಂತಲೋ ಅಥವಾ ಧೈರ್ಯದ ಪ್ರತೀಕ ಎಂತಲೋ ಹನುಮಂತರಾಯ ನಮ್ಮ ಎದೆಯಲ್ಲಿ ಕುಳಿತೇಬಿಟ್ಟಿದ್ದ ಆರಾಧ್ಯ ದೈವವಾಗಿ. ಪ್ರತಿ ಮಂಗಳವಾರವೆಂದರೆ ಅದು ಮಾರುತಿ ದಿನ. ಸಂಜೆ ಭಜನೆಯಾಗಲೇಬೇಕು; ಸಂಕಟ ಬಂದಾಗ ವೆಂಕಟ ರಮಣನಲ್ಲದೆ ಇನ್ನಾರು? ದೇವರು ಮತ್ತು ವಿಜ್ಞಾನದ ನಡುವೆ ನಾವು ಕಂದಕ ಏರ್ಪಡಿಸುವ ಸ್ಥಿತಿಯಲ್ಲಿರಲಿಲ್ಲ; ನಮಗೆ ಆಸರೆ ಬೇಕಾಗಿತ್ತು. ಮಾರುತಿ ಅದನ್ನು ಪೂರೈಸಿದ್ದ. ಬಗೆಬಗೆಯ ಇಷ್ಟ ದೈವಗಳು ಫೋಟೋ ರೂಪದಲ್ಲಿ ಸಾಲಾಗಿ ದೇವಸ್ಥಾನದ ಗೋಡೆಯನ್ನು ಅಲಂಕರಿಸಿದ್ದವು. ಬಂಗಾಳಿ, ಬಿಹಾರಿ, ಕಾಶ್ಮೀರಿ, ಕರ್ನಾಟಕ, ಆಂಧ್ರದ ಮಂದಿಗೆ ಅವರವರ ಇಷ್ಟ ದೈವಗಳು. ಒಂದು ದಿನ ಮೇಜರ್ ಮೀನಾ ಎಂಬುವರು ಗುಂಡಿನ ಗಮ್ಮತ್ತಿನಲ್ಲಿ ದೇವಾಲಯದೊಳಕ್ಕೆ ಸೀದಾ ಗೂಳಿಯಂತೆ ನುಗ್ಗಿ ಅಲ್ಲಿದ್ದ ನಲವತ್ತು ದೇವರ ಚಿತ್ರಗಳನ್ನು ನಿಮಿಷಾರ್ಧದಲ್ಲಿ ಕಿತ್ತೆಸೆದುಬಿಟ್ಟರು. ನಮ್ಮ ಎದೆಗೆ ಗುಂಡಿಕ್ಕಿದಂತಾಗಿತ್ತು. ಆ ನಿರ್ಜೀವ ಖಂಡದಲ್ಲಿ ಫೋಟೋಗಳು ಇನ್ನು ಎಲ್ಲಿ ಬರಬೇಕು. ನಮ್ಮ ಜಂಘಾಬಲವೇ ಉಡುಗಿದಂತಾಯಿತು. ಆ ಆಘಾತದಿಂದ ಚೇತರಿಸಿಕೊಳ್ಳಲು ಹಲವು ದಿನಗಳೇ ಬೇಕಾಯಿತು.

ಶೋಧಕರು ಎಲ್ಲವೂ ನಾವೇ. ಸಾಮಾನು ಸರಂಜಾಮುಗಳನ್ನೆಲ್ಲಾ ತೀರಕ್ಕೆ ಇಳಿಸಿ, ನೌಕೆಯನ್ನು ಖಾಲಿ ಮಾಡಬೇಕಾದರೆ ಕೆಲವು ದಿನಗಳೇ ಉರುಳಿದವು. ತಂಡ ತಂಡಗಳಲ್ಲಿ ನಮ್ಮನ್ನು ಸ್ವಾಗತಿಸಲು ಕುಬ್ಜರ ಕುಬ್ಜರು ಕಾದಿದ್ದರು; ಅಂಟಾರ್ಕ್‌ಟಿಕದ ಪಕ್ಷಿಗಳ ಪ್ರತಿನಿಧಿಗಳಾದ ಪೆಂಗ್ವಿನ್‌ಗಳು ಗುಂಪು ಗುಂಪಾಗಿ ಎದುರು ಬಂದವು; ಥೇಟ್ ಮರಿ ಲಾಯರ್ ಗೌನ್ ಹಾಕಿಕೊಂಡು ಬಂದಂತೆ, ಗರ್ಭವತಿ ಹೆಣ್ಣು ಅತ್ತಿತ್ತ ತೊನೆಯುತ್ತ ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು ನಡೆಯುತ್ತಿದ್ದಂತೆ. ಒಕ್ಕಣ್ಣನಿಂದಲೇ ನೋಡುತ್ತಿದ್ದ ಈ ಶುಕ್ಲಾಚಾರ್ಯರು ತೀರದಲ್ಲಿ ಲಕ್ಷಗಟ್ಟಳೆ ವಾಸಿಸುತ್ತಿದ್ದವು. ಕಣ್ಣಿಗೆ ದೃಷ್ಟಿ ಹಾಯುವವರೆಗೆ ಬರೀ ಪೆಂಗ್ವಿನ್‌ಗಳದ್ದೇ ಕೂಟ. ನನಗೆ ಕುಂಭಮೇಳ ನೆನಪಿಗೆ ಬಂತು.

ಒಮ್ಮೆ ಅಲ್ಲಿ ಉಷ್ಣತೆ -83°ಸೆ.ಗೆ ಇಳಿದಿತ್ತು. ಇದಕ್ಕೆ ಹೊಂದಿಕೊಂಡಿದ್ದ ಅಲ್ಲಿಯ ಯಾತ್ರಿಗಳು ಉಷ್ಣತೆ -30°ಸೆ.ಗೆ ತಲಪಿದರೂ ಅವರು ಬೆವರುತ್ತಾರೆ.

ಹಾಗೆ ನೋಡಿದರೆ ನಮಗೆ ಅಲ್ಲಿ ಎಲ್ಲವೂ ಅಣಿಯಾಗಿತ್ತು. 1981ರಲ್ಲಿ ಭಾರತದ ಮೊದಲ ತಂಡ ಅಲ್ಲಿಗೆ ಹೋದಾಗ 'ಕ್ವೀನ್ಸ್‌ಮಾಡ್‌ಲ್ಯಾಂಡ್' ಎಂಬ ಭಾಗದಲ್ಲಿ (ಈ ಭಾಗವನ್ನು ಹಿಂದೆ ನಾರ್ವೆ ದೇಶದವರು ತಮ್ಮದೆಂದು ಗುರುತಿಸಿಕೊಂಡಿದ್ದರು, ಈಗ ಯಾವ ದೇಶವೂ ಅಲ್ಲಿ ಒಡೆತನವನ್ನು ಘೋಷಿಸುವಂತಿಲ್ಲ) ಒಂದು ಪುಟ್ಟ ಸಂಶೋಧನಾ ಕೇಂದ್ರ ತೆರೆದಿತ್ತು. ಸಂಪೂರ್ಣವಾಗಿ ನಾರಿನ ಗಾಜಿನಿಂದ ಅದನ್ನು ನಿರ್ಮಿಸಲಾಗಿತ್ತು. ಒಂದೆರಡು ವರ್ಷಗಳ ಕಾಲ ಅಲ್ಲಿ ಸಂಶೋಧನೆ ಮಾಡಲು ಯಾವ ತೊಂದರೆಯೂ



ಲಕ್ಷಗಟ್ಟಲೇ ಗುಂಪಿನಲ್ಲಿ ವಾಸಿಸುವ ಕಿಂಗ್ ಪೆಂಗ್ವಿನ್‌ಗಳು

ಅವುಗಳಿಗಾಗಲೇ ಮನುಷ್ಯರ ಸಹವಾಸ ರೂಢಿಯಾಗಿಬಿಟ್ಟಿತ್ತು. ಮೈಸೂರಿನ ಉಪ್ಪಿಟ್ಟನ್ನು ಅವು ತಿಂದಿದ್ದವು. ಕೇಂದ್ರ ಆಹಾರ ಸಂಶೋಧನಾ ಸಂಸ್ಥೆ ನೀರು ತೆಗೆದ ಶುಷ್ಕ ಆಹಾರದ ಡಬ್ಬಗಳನ್ನು ಪೂರೈಸಿತ್ತು. ಈಗ ನಮ್ಮನ್ನು ಕಂಡರೆ ಅವುಗಳಿಗೆ ಹೆದರಿಕೆಯೇ ಇರಲಿಲ್ಲ. ಒಂಟಿಯಾಗಿ ನಾವು ಸಮೀಕ್ಷೆ ಮಾಡಲು ಹೋದಾಗಲೆಲ್ಲ ಅವುಗಳದ್ದೇ ನಮಗೆ ಒಡನಾಟ. ಸಾಕಿದ ನಾಯಿಗಳ ಮೇಲೆ ನಮಗೆ ಎಷ್ಟು ಪ್ರೀತಿ ಇರುತ್ತದೋ ಅಷ್ಟೇ ಅವುಗಳ ಮೇಲೆ.

ಡಿಸೆಂಬರ್ ತಿಂಗಳಲ್ಲೇ ನಾವು ಈ ಖಂಡಕ್ಕೆ ಯಾತ್ರೆ ಹೊರಟಿದ್ದುದಕ್ಕೆ ಸ್ಪಷ್ಟವಾದ ಕಾರಣವಿದೆ. ನವೆಂಬರ್ ತಿಂಗಳಿಂದ ಮಾರ್ಚ್ ತಿಂಗಳವರೆಗೆ ಅಂಟಾರ್ಕ್‌ಟಿಕದಲ್ಲಿ ಕಡು ಬೇಸಗೆ. ನಾವು ಯಾವುದೇ ಕಾರ್ಯವನ್ನು ಹಮ್ಮಿಕೊಂಡರೂ ಅದು ಬೇಸಗೆಯಲ್ಲೇ. ಬೇಸಗೆ ಎಂದರೆ ಇಲ್ಲಿನ ಉಷ್ಣತೆ -25°ಸೆ. ಇರುತ್ತದೆ. ಹಿಮಾಲಯದಲ್ಲಿ ಚಳಿಗಾಲದಲ್ಲೂ ನಾನಿಷ್ಟು ಶೈತ್ಯ ಅನುಭವಿಸಿರಲಿಲ್ಲ. ಉಸಿರಾಡುವ ಗಾಳಿಯೇ ಹಿಮದ ಧೂಳಾದರೆ? ನೀರಲ್ಲಿ ನೆನೆಸಿದ ಬಟ್ಟೆಯೇ ತಗಡಿನಂತೆ ಬಳುಕಿದರೆ ನಮ್ಮ ಗತಿ? ನಮಗೆ ನಿಸರ್ಗವನ್ನು ನಿಂದಿಸಲು ಹಕ್ಕೇ ಇರಲಿಲ್ಲ. ಇದನ್ನು ಆಯ್ಕೆ ಮಾಡಿಕೊಂಡವರೂ ನಾವೇ. ಬಿಳಿ ಹಿಮದ ಹಾಳೆಯಿಂದ ಪ್ರತಿಫಲಿಸುವ ಬೆಳಕು ಎಷ್ಟಿರುತ್ತದೆಂದರೆ ಕಣ್ಣು ಕೋರೈಸುತ್ತದೆ, ಕನ್ನಡಕ ಹಾಕಿಕೊಳ್ಳುವುದು ಅನಿವಾರ್ಯ. ದಕ್ಷಿಣ ಧ್ರುವದ ಬಳಿ ರಷ್ಯದ ವೊಸ್ಟಾಕ್ ಎಂಬ ಸಂಶೋಧನಾ ಕೇಂದ್ರವಿದೆ. ಚಳಿಗಾಲದಲ್ಲಿ


ಇರಲಿಲ್ಲ. ವಾಸ್ತವವಾಗಿ ಈ ಕೇಂದ್ರವಿದ್ದದ್ದು ಅಸ್ಥಿರವಾದ ಹಿಮಗಡ್ಡೆಯ ಮೇಲೆ. ಹಿಂದೆಲ್ಲ ಅಮೆರಿಕದ ಇಂತಹ ಸಂಶೋಧನಾಲಯಗಳು ಇಲ್ಲಿ ಸ್ಥಾಪಿಸಿದ ಮರುವರ್ಷವೇ ಸಾಗರದ ಪಾಲಾಗಿ ಹಿಮಗಡ್ಡೆಯ ಮೇಲೆ ಕುಳಿತು ಜಂಬೂ ಸವಾರಿ ಹೊರಟೇಬಿಟ್ಟಿದ್ದವು. ಇನ್ನು ಕೆಲವು ಕೇಂದ್ರಗಳ ನೆಲೆ ಎಲ್ಲಿಗೆ ಎಂದು ಪತ್ತೆ ಮಾಡಲು ಉಪಗ್ರಹಗಳ ನೆರವನ್ನು ಪಡೆಯಬೇಕಾಯಿತು. ನಮ್ಮ 'ದಕ್ಷಿಣ ಗಂಗೋತ್ರಿ'ಯ ಪಾಡೂ ಅದೇ ಆಗಿತ್ತು. ಒಂದೇ ಒಂದು ಚಳಿಗಾಲದಲ್ಲಿ ಅದು ಮುಚ್ಚಿಕೊಳ್ಳುವಷ್ಟು ಹಿಮ ಬಿದ್ದು ಫಜೀತಿಯಾಗಿತ್ತು. ಹೀಗಾಗಿ ಅಲ್ಲಿಂದ ನೂರು ಕಿಲೋಮೀಟರ್ ಆಚೆ ಮತ್ತೊಂದು ಸಂಶೋಧನಾ ಕೇಂದ್ರವನ್ನು ತೆರೆದು ಅದಕ್ಕೆ 'ಮೈತ್ರಿ' ಎಂದು ಹೆಸರಿಟ್ಟರು. ಇದು ಭಾರತದ ಶಾಶ್ವತ ಸಂಶೋಧನಾ ಕೇಂದ್ರ. ಸರ್ವ ಋತುವಿನಲ್ಲಿ ಅದು ಚಟುವಟಿಕೆಯ ಕೇಂದ್ರವಾಗೇ ಉಳಿದಿದೆ. ನಾವು ಹೊರಟಿದ್ದು ಅಲ್ಲಿಗೇ. ನಮ್ಮ ಸಾಮಾನು ಸರಂಜಾಮು ಸಾಗಿಸಲು ನೌಕಾಪಡೆಯ ಹೆಲಿಕಾಪ್ಟರುಗಳಿದ್ದವು, ಹಿಮದ ಮೇಲೆ ಹಾಯಲು ಸ್ಕೂಟರುಗಳಿದ್ದವು. ಹಿಮದ ಟ್ರಾಕ್ಟರುಗಳಿದ್ದವು, ತಾತ್ಕಾಲಿಕವಾಗಿ ಬಿಡಾರ ಹೂಡಲು ನೈಲಾನ್ ಟೆಂಟುಗಳಿದ್ದವು. ಮೈತ್ರಿ ಕೇಂದ್ರ ಎಷ್ಟು ಸುಸಜ್ಜಿತವಾಗಿದೆಯೆಂದರೆ ಅಲ್ಲಿ ಪ್ರತಿವರ್ಷವೂ ಜನವರಿ 26ರಂದು ಗಣರಾಜ್ಯ ಆಚರಿಸುತ್ತಾರೆ. ಅಕ್ಕಪಕ್ಕದ ಬೇರೆ ಬೇರೆ ದೇಶಗಳ ಸಹಯಾತ್ರಿಗಳು, ಸಂಶೋಧಕರು ಅತಿಥಿಗಳಾಗಿ ಬರುತ್ತಾರೆ. ಇಲ್ಲಿ ವಿದ್ಯುತ್ ಪೂರೈಕೆಗಾಗಿ

ಜನರೇಟರುಗಳಿವೆ. ನಿತ್ಯ ಬಳಕೆಗಾಗಿ ಅಡುಗೆ ಮನೆಗೆ ಗ್ಯಾಸ್ ಪೂರೈಕೆಯೂ ಇದೆ. ಹತ್ತಿರದಲ್ಲಿ ಇರುವ ತಿಳಿನೀಲ ಕೊಳ ಪ್ರಿಯದರ್ಶಿನಿಯಿಂದ ನೀರು ಪೂರೈಕೆ ಮಾಡಲು ಪೈಪುಗಳ ಜಾಲವೇ ಇದೆ. ಹಸುರು ಗೃಹಗಳನ್ನು ನಿರ್ಮಿಸಿ ಪ್ರಾಯೋಗಿಕವಾಗಿ ನಿಯಂತ್ರಿತ ಪರಿಸರದಲ್ಲಿ ನಮ್ಮ ಕೃಷಿ ತಜ್ಞರು ಟೊಮ್ಯಾಟೋ, ಮೆಂತ್ಯ, ಆಲೂಗಡ್ಡೆ, ಮೆಣಸಿನಕಾಯಿ, ಸೌತೆಕಾಯಿ ಮುಂತಾದವನ್ನು ಬೆಳೆದಿದ್ದಾರೆ. ಸಸ್ಯಗಳೂ ಹೇಳ ಹೆಸರಿಲ್ಲದೆ ಇರುವ ಕಾಡಿಲ್ಲದ ಈ ಬೋಳುನಾಡಿನ ಹಿಮದ ಬೆಂಗಾಡಿನಲ್ಲಿ ಮೈತ್ರಿಯಲ್ಲಿ ಹಸುರು ನಳನಳಿಸುತ್ತದೆ.

ಮೈತ್ರಿ ಕೇಂದ್ರದಿಂದ ನಮ್ಮ ಯೋಜನೆಗಳೆಲ್ಲವನ್ನೂ ನಿಯಂತ್ರಿಸಲಾಗುತ್ತಿತ್ತು. ಈ ಬಾರಿಯ ಯಾತ್ರೆಯ ನೇತಾರ ಅರುಣ ಚತುರ್ವೇದಿ. ನಮ್ಮ ಸಂಸ್ಥೆಯಲ್ಲಿ ನಮ್ಮ ಸಹೋದ್ಯೋಗಿ. ನಮ್ಮ ಹೊಣೆಯೆಂದರೆ ಪೂರ್ವ ಅಂಟಾರ್ಕ್‌ಟಿಕದ 'ಹಂಬೋಲ್ಟ್' ಎಂಬ ಬೆಟ್ಟ ಸಾಲಿನ ಸಮೀಕ್ಷೆ. ಹಿಂದಿನ ತಂಡ ಎಲ್ಲಿ ಕೆಲಸವನ್ನು ನಿಲ್ಲಿಸಿತ್ತೋ ಅಲ್ಲಿಂದಲೇ ನಾವು ಪ್ರಾರಂಭಿಸಿದೆವು. ಭಾರತದ ಶಿಲೆಗಳೊಡನೆ ಈ ಖಂಡದ ಶಿಲೆಗಳಿಗಿರುವ ನಿಕಟ ಹೋಲಿಕೆ, 200 ಮಿಲಿಯನ್ ವರ್ಷಗಳ ಹಿಂದೆ ಇವು ಒಂದುಗೂಡಿ ಅನಂತರ ನಿಧಾನಗತಿಯಲ್ಲಿ ಖಂಡಗಳು ಬೇರೆ ಬೇರೆಯಾಗಿ ಸರಿದ ಪರಿ, ಇವೆಲ್ಲವನ್ನೂ ನಾವು ಆಧಾರಸಹಿತ ಪ್ರತಿಪಾದಿಸಬೇಕಾಗಿತ್ತು. ನಿಜಕ್ಕೂ ಇದು ದೊಡ್ಡ ಭೂವೈಜ್ಞಾನಿಕ ಸಮಸ್ಯೆಯೇ ಆಗಿತ್ತು. ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಕಾಲ್ನಡಿಗೆ, ಉಳಿದಂತೆ ಹಿಮದ ಸ್ಕೂಟರು, ಟ್ರಾಕ್ಟರು, ಹೆಲಿಕಾಪ್ಟರ್ ಬಳಸುತ್ತಿದ್ದೆವು. ಕೆಲವೆಡೆಗೆ ನಮ್ಮನ್ನು ಬಿಟ್ಟು ವಾಹನಗಳು ಮರಳಿ ಮೈತ್ರಿಗೆ ಬರುತ್ತಿದ್ದವು. ಜನವರಿ ತಿಂಗಳ ಮೊದಲ ವಾರದಲ್ಲಿ ನಮಗೆ ಸ್ವಲ್ಪ ಹಿಡಿತ ಸಿಕ್ಕಿತು ಎನ್ನಬಹುದು. ನಮ್ಮ ಹಿಮಪರ್ವ ಆರಂಭವಾಗಿತ್ತು. ಈ ಶ್ವೇತ ಖಂಡದಲ್ಲಿ ರಾತ್ರಿಗಳಿಗೆ ಅಲ್ಲಿ ಕೆಲಸವಿರುತ್ತಿರಲಿಲ್ಲ. ಏನಿದ್ದರೂ ಹಗಲಿನ ದರ್ಬಾರು, ದಿನದ ಇಪ್ಪತ್ನಾಲ್ಕು ಗಂಟೆಯೂ ಸೂರ್ಯ ಬಾನಿನಲ್ಲಿ ಪ್ರತ್ಯಕ್ಷ. ಬಾನಲ್ಲಿ ರವಿ, ನೆಲದಲ್ಲಿ ಹಿಮ, ಅಲ್ಲಲ್ಲೇ ಹಿಮದಲ್ಲಿ ಮಿಂದು ಮುಳುಗಿ ಎದ್ದಂತೆ ಕಾಣುವ ಮೊನಚು ತುದಿಯ ಬೋಳು ಶಿಖರಗಳು. ತೀರ ಒಳಭಾಗಕ್ಕೆ ಬಂದರೆ ಅಲ್ಲಿ ಪೆಂಗ್ವಿನ್‌ಗಳ ಓಡಾಟವೂ ಇರಲಿಲ್ಲ. ಬರುಬರುತ್ತ ಈ ಏಕಾಂತತೆ ನಮ್ಮನ್ನು ದಟ್ಟೈಸಿಬಿಟ್ಟಿತು. ರಾತ್ರಿಯೇ ಇಲ್ಲವೆಂದರೆ ನಮ್ಮ ನಿದ್ರೆಯ ಪಾಡು? ನಮ್ಮ ಜೈವಿಕ ಗಡಿಯಾರ ಅಂದರೆ ನಮ್ಮ ದೇಹದ ಚಟುವಟಿಕೆ ಹಂತ ಹಂತವಾಗಿ ಈ ಪರಿಸರಕ್ಕೆ ಹೊಂದಿಕೊಂಡಿತು. ಹಸಿವಾದಾಗ ಹೊಟ್ಟೆಗಿಷ್ಟು ಸುರಿದುಕೊಳ್ಳುವುದು, ಸುಸ್ತಾದಾಗ ಎಲ್ಲಿದ್ದರೆ ಅಲ್ಲೇ ಒರಗುವುದು, ಮಲಗಿದಾಗ ರಾತ್ರಿ, ಎಚ್ಚರವಾದರೆ ಬೆಳಗು, ಅದೇ ನಮ್ಮ ದಿನಚರಿ. ಹೆಸರಿಗೇನೋ ಕೈಯಲ್ಲಿ ವಾಚುಗಳಿದ್ದವು, ಅವಕ್ಕೂ ಹೇಳಿಕೊಳ್ಳುವಂತಹ ಕೆಲಸವಿರಲಿಲ್ಲ. ಗುಡ್‌ನೈಟ್, ಗುಡ್‌ಮಾರ್ನಿಂಗ್ ಇಲ್ಲದ ಮೇಲೆ ಕಾಲಕ್ಕೆ ಅರ್ಥವಿಲ್ಲ ಎನಿಸಿತು.

ಸಮೀಕ್ಷೆಯ ಒಂದು ಹಂತದಲ್ಲಿ ಮೈತ್ರಿ ಕೇಂದ್ರದಿಂದ 160 ಕಿ.ಮೀ. ಆಚೆ ಉಳಿಯಬೇಕಾಗಿ ಬಂತು. ಹೆಲಿಕಾಪ್ಟರಿನಲ್ಲಿ ನಮ್ಮ ಪ್ರಯಾಣ. ಅಲ್ಲಿ ನಮ್ಮನ್ನು ಉದುರಿಸಿ ಕೆಲಸದ ನಂತರ ಮತ್ತೆ ಮೈತ್ರಿಗೆ ಹಿಂದಿರುಗುವ ಯೋಚನೆ. ಒಮ್ಮೊಮ್ಮೆ ಇಂಥ ಕಾರ್ಯ ಎರಡು ಮೂರು ದಿನಗಳವರೆಗೆ ಸಾಗುತ್ತಿತ್ತು. ನನ್ನೊಡನೆ ಹೈದರಾಬಾದಿನ ನ್ಯಾಷನಲ್ ಜಿಯೋಫಿಸಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನ ಇಬ್ಬರು ಭೂಭೌತವಿಜ್ಞಾನಿಗಳಿದ್ದರು. ಸಾಗರಾಭಿವೃದ್ಧಿ ಸಂಸ್ಥೆಯ ಒಬ್ಬ ಮೇಲ್ವಿಚಾರಕರು ಮತ್ತು ನಾನು. ಅಜಯ ಧನರಾಜ್ ಮತ್ತು ನಾನು ಒಂದೆಡೆ, ಇನ್ನೊಂದು ತಂಡದಲ್ಲಿ ಹತ್ತಿರದಲ್ಲೇ ಉಸ್ಮಾನಿಯಾ ವಿಶ್ವವಿದ್ಯಾಲಯದ ಜ್ಞಾನೇಶ್ವರ ಮತ್ತು ಶಿವರಾಜ್. ಅವರಿಬ್ಬರ ಆಸಕ್ತಿ ಭೂಮಿಯ ಕಾಂತತ್ವವನ್ನು ಅಳೆಯುವುದು. ಇದನ್ನು ಎಲ್ಲಿ ಬೇಕಾದರೂ ಅಳೆಯಬಹುದು. ಆದರೆ ಅಂಟಾರ್ಕ್‌ಟಿಕದಲ್ಲಿ ಇದಕ್ಕೆ ವಿಶೇಷವಾದ ಮಹತ್ವವಿದೆ. ಏಕೆಂದರೆ ಭೂಕಾಂತ ಕ್ಷೇತ್ರ, ಭೂಮಿಯ ಒಡಲಾಳದಲ್ಲಿ ಹುಟ್ಟಿದರೂ ಭೂಮಿಯ ಹೊರಗೂ ಕೊಡೆಕಡ್ಡಿಗಳಂತೆ ಅದು ವಿಸ್ತರಿಸಿರುತ್ತದೆ; ನಮಗೆ ಗೋಚರವಾಗುವುದಿಲ್ಲ. ಬಾಹ್ಯಾಕಾಶದಿಂದ ಕೆಲವು ಕಣಗಳು ತೂರಿಬಂದಾಗ ಇವು ಕಾಂತಕ್ಷೇತ್ರದ ಮೇಲೆ ಉರುಳಿ ಶಕ್ತಿಪಾತವಾಗುತ್ತದೆ. ಈ ಆಘಾತದಲ್ಲಿ ರಂಗುರಂಗಿನ ಅರೋರಾ ಆಕಾಶದಲ್ಲಿ ಕಾಣಿಸಿಕೊಳ್ಳುತ್ತದೆ. ಇದರ ಅಧ್ಯಯನಕ್ಕೆ ಅಂಟಾರ್ಕ್‌ಟಿಕ ಖಂಡವೇ ಪ್ರಶಸ್ತ. ಜ್ಞಾನೇಶ್ವರ ಮತ್ತು ಶಿವರಾಜ್‌ನ ತಮ್ಮ ಪಾಲಿನ ಸಂಶೋಧನೆಯನ್ನು ಮುಗಿಸಿ ಟೆಂಟಿನೊಳಗೆ ನುಸುಳಿದರು. ನಾವೂ ಅದೇ ಕೆಲಸ ಮಾಡಿದೆವು. ಸೂರ್ಯ ಇದ್ದುದರಿಂದ ಅದನ್ನು ರಾತ್ರಿ ಎಂದು ಹೇಳಲಾಗದು. ಟೆಂಟಿನೊಳಗಡೆ ತಾತ್ಕಾಲಿಕವಾಗಿ ತಂದಿದ್ದ ಅಡುಗೆ ಸಾಮಾನು, ತಿಂಡಿತೀರ್ಥದ ಪೆಟ್ಟಿಗೆ, ನಮ್ಮ ನಕ್ಷೆ, ಸ್ಲೀಪಿಂಗ್‌ಬ್ಯಾಗ್ ಮುಂತಾದವು ಇದ್ದವು. ಕರ್ನಾಟಕದ ಯಾವುದಾದರೂ ಹಳ್ಳಿಯ ಬಳಿ ಇಂತಹ ಟೆಂಟ್‌ಗಳಿದ್ದರೆ ಸುಲಭವಾಗಿ ನಮ್ಮನ್ನು ಹೆಳವರೋ, ಸಿಳ್ಳೇಕ್ಯಾತರೋ, ಹಕ್ಕಿಪಿಕ್ಕಾರೋ, ಬುಡುಬುಡಿಕೆಯವರೋ ಎಂದು ಗುರುತಿಸುತ್ತಿದ್ದರೋ ಏನೋ, ಒಂದು ಲೆಕ್ಕದಲ್ಲಿ ನಾವು ಈ ಬುಡಕಟ್ಟಿನ ಜನರೇ ಎಂದು ಹೇಳಬಹುದು. ಆದಿನ ಆದದ್ದೂ ಹಾಗೆಯೇ. ಸ್ಲೀಪಿಂಗ್ ಬ್ಯಾಗಿನೊಳಗೆ ತೂರುತ್ತಲೇ ನಿದ್ದೆ ಆವರಿಸಿಬಿಟ್ಟಿತು. ಅಜಯ್ ಕೂಡ ಗಾಢ ನಿದ್ದೆ ಹೋದ. ಒಂದು ಹೊತ್ತಿನಲ್ಲಿ ಆ ನಿಶ್ಶಬ್ದದ ನಡುವೆ ಚೀರಾಟ ಕೇಳಿಸುತ್ತಿದೆ. ಬರುಬರುತ್ತ ಧ್ವನಿ ದೊಡ್ಡದಾಯಿತು, ಯಾರೋ ಸಾವಿನೊಡನೆ ಹೋರಾಟವಾಡುತ್ತಿರುವಂತೆ ಭಾಸವಾಯಿತು. ಮೊದಲು ಕನಸೇ ಎಂಬ ಭ್ರಮೆ ನಮಗೆ, ಅಜಯ ಕೂಡ ಎದ್ದುಬಿಟ್ಟ. ಮರ್‍ರೋ ಎಂದು ಬಿರುಗಾಳಿ ಒಂದೇ ಸಮನೆ ತೀಡುತ್ತಿದೆ, ಹಿಮದ ಕಣಗಳು ರಾಶಿ ರಾಶಿ ಟೆಂಟಿನ ಮೇಲೆ ಕಲ್ಲಿನಂತೆ ಬೀಳುತ್ತಿವೆ. ನಾವು ಬಿಗಿದಿದ್ದ ನೈಲಾನ್ ಹಗ್ಗ ಸಡಿಲವಾಗುತ್ತ ಬಂತು. ಟೆಂಟು ಹರಿಯಲೊಲ್ಲದು, ಗಾಳಿ ನಿಲ್ಲಲೊಲ್ಲದು. ಇಂತಹ ಬಿರುಗಾಳಿ ಅಂಟಾರ್ಕ್‌ಟಿಕದಲ್ಲಿ ಹೊಸದೇನಲ್ಲ. ಆದರೆ ಒಬ್ಬಂಟಿಯಾಗಿ ಎದುರಿಸಬೇಕಾಗಿ ಬಂದದ್ದು ಅದೇ ಮೊದಲು. ಗಂಟೆಗೆ 130 ಕಿ.ಮೀ. ಹೆಚ್ಚು ವೇಗದಲ್ಲಿ ಅದು ಎರಗುತ್ತಿತ್ತು, ಬಟಾಬಯಲೆಂದ ಮೇಲೆ ಕೇಳಬೇಕೇ? ನಮಗೆ ಕ್ಷಣಕಾಲ ದಿಕ್ಕು ತೋಚದಾಯಿತು. ಕಣ್ಣು ಬಿಟ್ಟ ಎರಡೇ ನಿಮಿಷದಲ್ಲಿ ಆ ಧ್ವನಿ ಯಾರದೆಂಬುದು ಸ್ಪಷ್ಟವಾಯಿತು. ಉಸ್ಮಾನಿಯಾ ವಿಶ್ವವಿದ್ಯಾಲಯದ ಜ್ಞಾನೇಶ್ವರ ಒಂದೇ ಸಮನೇ ನರಳುತ್ತಿದ್ದಾನೆ. ಶಿವರಾಜ್ ಕ್ಷೀಣ ಸ್ವರದಲ್ಲಿ ಕಿರುಚುತ್ತಿದ್ದ. ಜ್ಞಾನೇಶ್ವರನ ಸ್ವರ ಬರುಬರುತ್ತಾ ತಾರಕಕ್ಕೇರಿ ಅಯ್ಯೋ, ಅಮ್ಮಾ, ಅಪ್ಪಾ, ಸತ್ತೆ ಎಂದು ಜೋರಾಗಿ ಬಡಿದುಕೊಳ್ಳಲು ಶುರುಮಾಡಿದ. ನಾವಿಬ್ಬರೂ ಸ್ಲೀಪಿಂಗ್ ಬ್ಯಾಗ್ ಕಿತ್ತೆಸೆದು ಆ ಬಿರುಗಾಳಿಯಲ್ಲೇ ದೌಡಾಯಿಸಿದೆವು. ಅವರ ಟೆಂಟಿಗೆ ನುಗ್ಗಿದಾಗ ಅದು ಅವರ ತಲೆಯ ಮೇಕೆ ಕವುಚಿಕೊಂಡು ಗಾಳಿ ಇನ್ನೂ ಅದರ ಆಟ ನಡೆಸೇ ಇತ್ತು. ಆ ಗಾಳಿಯಲ್ಲೂ ಇವರ ನರಳಾಟ ನಡೆದೇ ಇತ್ತು. ಮೈ ಮುಟ್ಟಿದರೂ ಇಲ್ಲ, ತಲೆ ಸವರಿದರೂ ಇಲ್ಲ, ಜ್ಞಾನೇಶ್ವರ ಬಿಕ್ಕಳಿಸಿ ಬಿಕ್ಕಳಿಸಿ ಅಳುತ್ತಿದ್ದಾನೆ. ಮನೆಮಂದಿಯ ಎಲ್ಲ ಹೆಸರನ್ನೂ ಕೂಗಿ ಕೂಗಿ ತೆಲುಗಿನಲ್ಲಿ ಇನ್ನೇನನ್ನೋ ಬಡಬಡಿಸುತ್ತಿದ್ದ. ನಾವು ಏನು ಆಶ್ವಾಸನೆ ಕೊಟ್ಟರೂ ಅವನು ಮಾನಸಿಕವಾಗಿ ಕುಗ್ಗಿಬಿಟ್ಟಿದ್ದ. ಎರಡೂ ಕೈಯ್ಯಲ್ಲಿ ಆಂಜನೇಯನ ಫೋಟೋ ಎದೆಗೊತ್ತಿ ಕಾಪಾಡು ಕಾಪಾಡು ಎನ್ನುತ್ತಿದ್ದ. ನಮ್ಮನ್ನು ದೃಷ್ಟಿಸುವ ಸ್ಥಿತಿಯಲ್ಲೂ ಅವನಿರಲಿಲ್ಲ. ವಿಶ್ವವಿದ್ಯಾಲಯದ ಲ್ಯಾಬೋರೇಟರಿಯ ಆಚೀಚೆ ಬಂದಿರದ ಈ

ಆಸರೆ



ಹೆಮ್ಮರದಲ್ಲು
ಗೂಡನು ಕಟ್ಟಲು
ಸಂಸಾರವ ಹೂಡಲು
ಹಕ್ಕಿಗೆ ಬೇಕು
ಪುರಲೆ ಕಡ್ಡಿಗಳು;
ಅರಮನೆಯಲ್ಲು
ನಿಂತಿದ್ದರು ಕಂಬ
ಹೆಬ್ಬಾಗಿಲು ತೊಲೆಗಳು
ರಾಜ್ಯವ ಆಳಲು
ತೂಗಲು ಬೇಕು
ಬಿದಿರಿನ ತೊಟ್ಟಿಲು

■ ಜರಗನಹಳ್ಳಿ ಶಿವಶಂಕರ್



ಕುಡಿಯುವ ನೀರಿಗಾಗಿ ಹಿಮಗಡ್ಡೆಯನ್ನು ಒಲೆಯ ಮೇಲಿಟ್ಟು ಕರಗಿಸುತ್ತಿರುವುದು

ಪ್ರಾಣಿ ಧೈರ್ಯಮಾಡಿ ಅಂಟಾರ್ಕ್‌ಟಿಕ ಬಯಲು ಆಲಯಕ್ಕೆ ಬಂದಿದ್ದ. ಈಗ ಬಿರುಗಾಳಿ ಅವನನ್ನು ಸಾವಿನ ಸಮೀಪಕ್ಕೆ ಕರೆದೊಯ್ದಿತ್ತು. ಇಡೀ ರಾತ್ರಿ ಆಂಜನೇಯನ ಭಜನೆ ಸಾಗೇ ಇತ್ತು. ಮರುದಿನ ಮೈತ್ರಿಗೆ ವೈರ್‌ಲೆಸ್ ಕಳಿಸಿ, ಮೊದಲು ಜ್ಞಾನೇಶ್ವರನನ್ನು ಅಲ್ಲಿಂದ ಕರೆದುಕೊಂಡು ಹೋಗಲು ವಿನಂತಿಸಿಕೊಂಡೆವು. ಅತ್ತ ಮೈತ್ರಿ ಕೇಂದ್ರದಲ್ಲಿ ಹವಾಮಾನ ದಾಖಲೆ ಮಾಡುತ್ತಿದ್ದವರಿಗೂ ಭಾರಿ ಕಳವಳವಾಗಿ ನಮ್ಮನ್ನು ಹೇಗೆ ರಕ್ಷಿಸಬೇಕೆಂಬ ಯೋಚನೆಯಲ್ಲಿದ್ದರು. ಈ ಬಿರುಗಾಳಿ ಎಷ್ಟು ರಾದ್ಧಾಂತ ಮಾಡಿತೆಂದರೆ ನಾವು ತಂದಿದ್ದ ಪೆಟ್ಟಿಗೆಯಿಂದ ತಿಂಡಿಯನ್ನೂ ಬಿಚ್ಚಲಾಗಲಿಲ್ಲ. ಸಾಮಾನ್ಯವಾಗಿ ಬಾಯಾರಿದಾಗ ನಮಗೆ ಅಂಥ ಸಮಸ್ಯೆ ಏನೂ ಕಾಡುವುದಿಲ್ಲ. ಕೈ ಚಾಚಿದರೆ ಮಂಜುಗಡ್ಡೆ, ಕೂತರೆ ಮಂಜುಗಡ್ಡೆ, ನಿಂತರೆ ಮಂಜುಗಡ್ಡೆ, ಅದನ್ನೆ ಸ್ಟೋವ್ ಮೇಲಿಟ್ಟು ಕರಗಿಸಿ ಧಾರಾಳವಾಗಿ ಹೊಟ್ಟೆಗೆ ಸುರಿದುಕೊಳ್ಳುತ್ತೇವೆ. ಅದು ನೂರಕ್ಕೆ ನೂರು ಪಾಲು ಪರಿಶುದ್ಧ ನೀರು. ಇದೇ ಕಾರಣಕ್ಕಾಗಿ ಜಗತ್ತಿನ ಅನೇಕ ಭಾಗಗಳಿಂದ ಪರಿಸರ ತಜ್ಞರು ಇಲ್ಲಿಗೆ ಬಂದು ಅಂಟಾರ್ಕ್‌ಟಿಕದ ಹಿಮದ ಗಡ್ಡೆಯ ಬಗ್ಗೆ ವಿಶೇಷ ಅಧ್ಯಯನ ಮಾಡುತ್ತಾರೆ. ಆ ದಿನ ಬಾಯಾರಿದರೂ ಮಂಜುಗಡ್ಡೆ ಕರಗಿಸಲೂ ಆಗಲಿಲ್ಲ, ಎದೆ ಮಾತ್ರ ಕರಗಿ ನೀರಾಗಿತ್ತು - ಜ್ಞಾನೇಶ್ವರನ ಚೀರಾಟದಿಂದಾಗಿ ಆ ಬಿರುಗಾಳಿ ನನ್ನ ಮನಸ್ಸಿನಲ್ಲಿ ನಿಜವಾದ ಬಿರುಗಾಳಿಯನ್ನೇ ಎಬ್ಬಿಸಿತ್ತು. ನಾರ್ವೆ ದೇಶದ ಆಮುಂಡಸನ್ ದಕ್ಷಿಣ ಧ್ರುವವನ್ನು ಮೆಟ್ಟಿ ನಿಂತ ಕೆಲವೇ ದಿನದಲ್ಲಿ ರಾಬರ್ಟ್ ಸ್ಕಾಟ್ ಬ್ರಿಟನ್ನಿನಿಂದ ಬಂದು ಅದೇ ಸ್ಥಳದ ಮೇಲೆ ನಿಂತು ಖ್ಯಾತಿ ತನಗೆ ದಕ್ಕಲಿಲ್ಲವೆಂದು ಖಿನ್ನವಾಗಿ ಮರಳುವಾಗ ತಂಡದ ಎಲ್ಲರೂ ಹಿಮದ ಕಡಿತಕ್ಕೆ ಬಲಿಯಾಗಿದ್ದರು, ಬಿರುಗಾಳಿ ಬೀಸಿ ಒಬ್ಬೊಬ್ಬರನ್ನೂ ಒಂದೊಂದು ಕಡೆ ಎತ್ತಿ ಹೊಯ್ದು ಅವರನ್ನು ಹೆಣವಾಗಿಸಿತ್ತು. ಆಗ ನಮಗಿರುವಂತೆ ಮೋಟಾರು ಚಾಲಿತ ಬಂಡಿಗಳಿರಲಿಲ್ಲ, ಹೆಲಿಕಾಪ್ಟರುಗಳಂತೂ ಇರಲಿಲ್ಲ, ಹಿಮದ ಗಾಡಿ, ಶ್ವಾನ ಪಡೆ, ತೋಳಬಲ ನಂಬಿ ಈ ಹಿಮದ ಸಾಮ್ರಾಜ್ಯವನ್ನು ಗೆದ್ದಿದ್ದರು. ನೋವಿನ ಪಕಳೆಗಳು ಬಿಚ್ಚಿದಂತೆ ಮನಸ್ಸು ಸ್ವಲ್ಪ ಗಲಿಬಿಲಿಯಾಗಿತ್ತು. ಒಂದು ವೇಳೆ ಮನೆಯವರಿಗೆ ನನ್ನ ಈ ಸ್ಥಿತಿ ಗೊತ್ತಾಗಿದ್ದರೆ.... ಮುಂದೆ ನಾನು ಯೋಚಿಸುವ ಸ್ಥಿತಿಯಲ್ಲಿರಲಿಲ್ಲ. ಹೇಗಿದ್ದರೂ ತಾಯ್ನಾಡಿನಿಂದ 11,000 ಕಿ.ಮೀ. ದೂರ ಬಂದಾಗಿದೆ, ಎದೆಗುಂದದೆ ಬಂದದ್ದನ್ನೆಲ್ಲ ಗತ್ಯಂತರವಿಲ್ಲದೆ ಎದುರಿಸಲೇಬೇಕಾಯಿತು.

ಅಂಟಾರ್ಕ್‌ಟಿಕದ ವಾತಾವರಣ ಎಷ್ಟು ಕ್ಷಣಿಕ, ಚಂಚಲ ಎಂದರೆ ಘಳಿಗೆ ಘಳಿಗೆಗೂ ಅದು ಬಣ್ಣ ಬದಲಾಯಿಸುತ್ತಿರುತ್ತದೆ. ನನಗೆ ಬಾಲ್ಯದ ನೆನಪು ಮರುಕಳಿಸಿತು. 62ರ ಚೀನಾ ಯುದ್ಧವಾದಾಗ ನಾನಿನ್ನೂ ಚಿಕ್ಕವನು. ರಾತ್ರಿ ಹೊತ್ತು ದೀಪವನ್ನು ಆರಿಸಿ ಇಡೀ ಊರಿಗೆ ಊರೇ ಬ್ಲಾಕ್ ಔಟ್ ಆಚರಿಸುತ್ತಿದ್ದ ಸಮಯ. ನಮಗೊ ಬಾಂಬ್ ಬಿದ್ದೇ ಬಿಟ್ಟಿತೇನೋ ಎಂಬ ಶಂಕೆ ಆಗ. ಅಂಥ ತಳಮಳ ಈ ಬಿಳಿ ಖಂಡದಲ್ಲೂ ಆಯ್ತು. ಇಲ್ಲಿ ಆದದ್ದು ಬ್ಲಾಕ್ ಔಟ್ ಅಲ್ಲ ವೈಟ್ ಔಟ್. ಇದ್ದಕ್ಕಿದ್ದಂತೆ ಇಡೀ ವಾತಾವರಣ ಹಾಲು ಬಿಳುಪಾಗಿಬಿಡುತ್ತದೆ. ಆಗ ಮುಂದೆ ಒಂದಡಿ ದೂರ ಇರುವ ವಸ್ತುವೂ ಕೂಡ ಗೋಚರಿಸುವುದಿಲ್ಲ. ಇಡೀ ಜಗತ್ತೇ ಹಾಲಿನ ಪಾತ್ರೆಯಲ್ಲಿ ಅದ್ದಿ ತೆಗೆದಂತಾಗಿಬಿಡುತ್ತದೆ. ಅಂತಹ ಸಂದರ್ಭದಲ್ಲಿ ಕೂತ ಕಡೆಯೇ ಕೂರಬೇಕು. ಹೆಜ್ಜೆ ಮುಂದಿಡಲು ಸಾಧ್ಯವೇ ಆಗದು. ಒಂದು ವೇಳೆ ಮೊಂಡು ಧೈರ್ಯ ವಹಿಸಿ ಮುಂದಿಟ್ಟರೆ ಹಿಮಗಡ್ಡೆಯ ನೂರಾರು ಮೀಟರ್ ಆಳದಲ್ಲಿ ಶಾಶ್ವತವಾಗಿ ಕಣ್ಮರೆಯಾಗಿ ಬಿಡಬಹುದು. ಬಾನಿನಲ್ಲಿ ಹಿಮದ ಸ್ಫಟಿಕಗಳು ಬೆಳಕನ್ನು ಪ್ರತಿಫಲಿಸುತ್ತವೆ ಹಾಗೆಯೇ ಖಂಡದ ಬರ್ಫಕೂಡ. ಇದು ಕ್ಷಣಿಕವಾದರೂ ಎದೆ ನಡುಗಿಸಿಬಿಡುತ್ತದೆ. ನಾವು ಕಳಿಸುವ ಸಂದೇಶಗಳನ್ನು ಬಾನು ಕೆಲವೊಮ್ಮೆ ಸೆನ್ಸಾರ್ ಮಾಡುವುದುಂಟು. ಅಯಾಣುಗೋಳದಲ್ಲಿ ಅಯಾಣುಗಳು ದಟ್ಟೈಸಿದರೆ ಅವು ರೇಡಿಯೋ ತರಂಗಗಳನ್ನು ಮರಳಿ ಭೂಮಿಯತ್ತಲೇ ಕಳುಹಿಸುತ್ತವೆ. ಒಂದು ವೇಳೆ ಅಲ್ಲಿ ಅವು ಅಸ್ತವ್ಯಸ್ತವಾಗಿಬಿಟ್ಟರೆ ನಮ್ಮ ಸಂದೇಶಗಳೆಲ್ಲ ಕಟ್ - ಕಟ್ - ಕಟ್. ಮಹಾ ಭಾರತದಲ್ಲಿನ 'ಅಶ್ವತ್ಥಾಮ ಹತ: ಕುಂಜಲ:'ದ ಕತೆಯಾಗುತ್ತದೆ. ಯಾವುದೋ

ಸಂದೇಶ, ಏನೋ ತಿಳುವಳಿಕೆ. ನಾವು ಸಂದೇಶವನ್ನು ಕಳಿಸಿದಾಗ ಸದ್ಯ ಇಂಥ ತಾಪತ್ರಯ ಆಗಲಿಲ್ಲ. ಜ್ಞಾನೇಶ್ವರನ ಚೀರಾಟದ ಹಿಂದಿನ ದಿನವೂ ಸಮೀಕ್ಷೆ ಮಾಡುತ್ತ ಬೋಳು ಬೋಳು ನೆಲದಲ್ಲಿ ಕಣ್ಣಿಗೆ ಕಾಣುವಷ್ಟು ದೂರವೂ ಹಿಮದ ಹಾಸಿಗೆ ಕಂಡು ಜಿಗುಪ್ಸೆಯಾಗಿಬಿಟ್ಟಿತು. ವಿರಮಿಸಿಕೊಳ್ಳಲು ಒಂದೆಡೆ ಕುಳಿತೆವು. ಹತ್ತಿರದಲ್ಲೇ ಕೋಡುಗಲ್ಲು, ಇಡೀ ಪ್ರದೇಶದಲ್ಲಿ ಒಂದು ಹುಳು ಹುಪ್ಪಡಿಯೂ ಇಲ್ಲ. ಇರುವೆಯಾದರೂ ಕಾಣಬಾರದೆ ಎಂದು ಮನಸ್ಸು ಹಪಹಪಿಸುತ್ತಿತ್ತು. ನಮ್ಮ ಮೊರೆ ಕೇಳಿಸಿತೋ ಏನೋ ಎಲ್ಲಿಂದಲೋ ಎರಡು ಹದ್ದು (ಸ್ಕುವಾ) ಭರ್‍ರನೆ ಹಾರಿಬಂದು ಕೋಡುಗಲ್ಲ ಮೇಲೆ ಕೂತೊಡನೆ ನಮಗೆ ಎದೆ ತುಂಬಿಬಂತು. ಅವೇ ನಮಗೆ ಕೋಗಿಲೆ, ನವಿಲು, ಗಿಳಿ ಎಲ್ಲವೂ. ಹದ್ದನ್ನೇ ನೋಡಿಲ್ಲವೇನೋ ಎಂಬಂತೆ ಬಿಟ್ಟಕಣ್ಣು ಬಿಟ್ಟು ಆ ದೃಶ್ಯವನ್ನು ಕಂತು ಕಂತುಗಳಲ್ಲಿ ಮನಸ್ಸಿನಲ್ಲಿ ತುಂಬಿಕೊಳ್ಳುತ್ತಿದ್ದೆವು. ಅದರ ಮಿಸುಕಾಟ ನಮ್ಮ ಎದೆಗೇ ಚೈತನ್ಯ ಕೊಡುತ್ತಿತ್ತು. ಅಷ್ಟರಲ್ಲೇ ರೆಕ್ಕೆ ಬಡಿಯುತ್ತ ಎದ್ದೇಬಿಟ್ಟವು, ಮತ್ತೆ ನಮ್ಮನ್ನು ಅನಾಥವಾಗಿಸುತ್ತ. ಜೀವಿಗಳನ್ನು ನೋಡಬೇಕೆಂದರೆ ಖಂಡದ ಒಳಭಾಗದಲ್ಲಂತೂ ಸಾಧ್ಯವೇ ಇಲ್ಲ. ತೀರದಲ್ಲಿ ಕ್ರಿಲ್ ಎಂಬ ಸೀಗಡಿಯೇ ಇತರ ಜೀವಗಳಿಗೂ ಆಧಾರ, ತುಪ್ಪಟದ ಸೀಲ್‌ಗಳು, ತಿಮಿಂಗಿಲ ಇವುಗಳ ಬಾಳುವೆಯೆಲ್ಲ ತೀರದಲ್ಲಿ, ಸುತ್ತಣ ದ್ವೀಪಗಳಲ್ಲಿ. ಹೆಚ್ಚೆಂದರೆ ಒಳನಾಡಿನಲ್ಲಿ ಕಲ್ಲಿನ ಮೇಲೆ ಬೆಳೆದ ಪಾಚಿಯೋ, ಶಿಲಾವಲ್ಕವೋ, ಸಸ್ಯ ಜಗತ್ತಿನ ಸಾರ್ವಭೌಮರಾಗಿ ಮೆರೆಯುತ್ತವೆ. ಹಸುರು ಕಂಡರೆ ಸಾಕು ಎಂದು ಮನ ಅಲ್ಲಿ ಹಾತೊರೆಯುತ್ತಿತ್ತು.



ಭಾರತದ ಮೊದಲ ತಂಡ ಸ್ಥಾಪಿಸಿದ 'ದಕ್ಷಿಣ ಗಂಗೋತ್ರಿ' ಸಂಶೋಧನಾ ಕೇಂದ್ರ

ಈ ನಡುವೆ ಮತ್ತೊಂದು ಘಟನೆ ನಡೆದು ಹೋಯಿತು. ತೀರದಲ್ಲಿ ಲಂಗರು ಹಾಕಿದ್ದ ನೌಕೆಯಿಂದ ಸಾಮಾನುಗಳನ್ನು ಇಳಿಸಿ, ಟ್ರೈಲರ್‌ಗಳಲ್ಲಿ ತುಂಬಿ ಸಾಗಿಸುವುದು ಅಲ್ಲಿನ ಪದ್ಧತಿ. ಹಾಗೆಯೇ ಬಿಟ್ಟರೆ ಟ್ರೈಲರ್ ಕೂಡ ಹಿಮದ ಗಡ್ಡೆಯಿಂದ ಮುಚ್ಚಿಹೋಗಿಬಿಡುತ್ತದೆ. ನಾವು ಸಾಮಾನು ಸರಂಜಾಮು ಸಾಗಿಸಿದ ಟ್ರೈಲರ್ ಕತೆಯೂ ಇದೇ ಆಯಿತು. ಸಿಮೆಂಟಿನಿಂದ ಬಂಧಿಸಿದಂತೆ ಹಿಮಗಡ್ಡೆ ಅದನ್ನು ಮುಚ್ಚಿಬಿಟ್ಟಿತು. ಜಪ್ಪಯ್ಯ ಎಂದರೂ ಅಲುಗಾಡಲಿಲ್ಲ. ಇದಕ್ಕೆ ಗಜೇಂದ್ರ ಮೋಕ್ಷ ಮಾಡಬೇಕೆಂದರೆ ಪಿಸ್ಟನ್ ಬುಲ್ಲಿ ತಂದು ಎಳೆಸಬೇಕು. ರಕ್ಷಣಾಪಡೆಯ ಸಿಬ್ಬಂದಿ ನಮಗೆ ಇದರಲ್ಲಿ ನೆರವಾಗಲು ಮುಂದಾಯಿತು. ಅಷ್ಟರಲ್ಲೇ ಚಾಲಕ ಸರ್ದಾರಜಿ ಹಿಂದು ಮುಂದು ನೋಡದೆ ಪಿಸ್ಟನ್ ಬುಲ್ಲಿಯನ್ನು ಚಾಲೂ ಮಾಡಿದ. ಅದು ಹೆಡ್ ಮೆಕ್ಯಾನಿಕ್‌ನ ಕಾಲನ್ನು ಕತ್ತರಿಸಿಯೇ ಬಿಟ್ಟಿತು. ಹತ್ತಿರದಲ್ಲೇ ಇದ್ದ ರಷ್ಯ ಕೇಂದ್ರದಿಂದ ಡಾಕ್ಟರ್ ಓಡಿಬಂದರು. ನಮ್ಮ ಡಾಕ್ಟರೂ ಸೇರಿಕೊಂಡು ಪ್ರಥಮ ಚಿಕಿತ್ಸೆ ನೀಡಿದರೂ ಆ ಶೈತ್ಯದಲ್ಲಿ ಆತನನ್ನು ಆ ಸ್ಥಿತಿಯಲ್ಲಿ ಅಲ್ಲಿ ಇಟ್ಟುಕೊಳ್ಳಲು ಸಾಧ್ಯವೇ ಇರಲಿಲ್ಲ. ಒಬ್ಬನನ್ನು ಜೊತೆಮಾಡಿ ಒಂದು ತಿಂಗಳು ಶುಶ್ರೂಷೆ ಮಾಡಲು ಏರ್ಪಾಟು ಮಾಡಿದೆವು. ಕೊನೆಗೆ ದಕ್ಷಿಣ ಆಫ್ರಿಕದ ನೌಕೆಯೊಂದರಲ್ಲಿ ಆತನನ್ನು ಮಾರಿಷಸ್ ದ್ವೀಪಕ್ಕೆ ಕಳಿಸಿಕೊಟ್ಟಿದ್ದಾಯ್ತು. ಇಂಥ ಅಪಘಾತಗಳು ಯಾವಾಗ ಬೇಕಾದರೂ ಅಲ್ಲಿ ಸಂಭವಿಸಬಹುದು. ಒಂಬತ್ತನೇ ತಂಡ ಅಲ್ಲಿಗೆ ಹೋದಾಗ ನಮ್ಮ ಸಂಸ್ಥೆಯ ಮೂರು ಮಂದಿ ಭೂವಿಜ್ಞಾನಿಗಳು ಟೆಂಟಿನಲ್ಲೇ ಕೊನೆಯುಸಿರೆಳೆದರು. ಮೈ ಕೊರೆಯುವ ಚಳಿ ತಾಳಲಾರದೆ ಡೀಸೆಲ್ ಜನರೇಟರ್ ಉರಿಸಿ ಮಲಗಿದ್ದರು. ಕಾರ್ಬನ್ ಮಾನಾಕ್ಸೈಡ್ ವಿಷ ಅನಿಲ ಟೆಂಟಿನ ಒಳಗೆಲ್ಲ ಸುತ್ತಿಕೊಂಡು ನಿದ್ರಿಸುವ ಚೀಲದಲ್ಲೇ ಆ ಮೂವರು ಚಿರನಿದ್ರೆ ಮಾಡಿದ್ದರು. ಅವರ ಕಳೇಬರವನ್ನು ಹಡಗಿನ ಶೈತ್ಯಾಗಾರದಲ್ಲಿಟ್ಟು ಮೂರು ತಿಂಗಳ ನಂತರ ಇಂಡಿಯಾಕ್ಕೆ ಮರಳಿ ತರಬೇಕಾದ ಪ್ರಸಂಗ ಉಂಟಾಗಿತ್ತು. ಈ ಘಟನೆಯ ಬಗ್ಗೆ ನಮ್ಮಪ್ಪನಿಗೆ ಗೊತ್ತಾಗಿದ್ದರೆ ಬಹುಶಃ ನಾನು ಅಂಟಾರ್ಕ್‌ಟಿಕವನ್ನು ನೋಡಲಾಗುತ್ತಿರಲಿಲ್ಲವೇನೋ.

ಅಂಟಾರ್ಕ್‌ಟಿಕಾದ ಒಂದೊಂದು ದಿನವೂ ಒಂದೊಂದು ಬಗೆಯ ಅನುಭವವನ್ನು ತಂದುಕೊಡುತ್ತದೆ. ಆದರೆ ಕೊನೆಯ ದಿನದ ಅನುಭವ ಹೇಳಿ ಉಳಿದ ಅನುಭವಗಳನ್ನು ನನ್ನ ಎದೆಯೊಳಗೇ ಅದುಮಿಡುತ್ತೇನೆ. ಬೇಕೆಂದಾಗ ಹೊರತೆಗೆದು ಮೆಲ್ಲನೆ ಸವಿಯುತ್ತೇನೆ. ಅದು ನನ್ನ ಚಿರಆಸ್ತಿ. ಆ ನೆನಪುಗಳಿಗೆ ನಾನೇ ಒಡೆಯ.

ಇಡೀ ಅಂಟಾರ್ಕ್‌ಟಿಕದಲ್ಲಿ ಅತ್ಯಂತ ಹಿಂಸೆಯ ಸಂಗತಿ ಎಂದರೆ ಎರಡು. ಸ್ನಾನ ಮಾಡಲು ಮೈ ತೆರೆದಾಗ ನೀರು ಮುತ್ತಂತಾಗಿ ಚರ್ಮವನ್ನೇ ತಿನ್ನುವ ಹಿಮಮಣಿಯಾಗುವುದು. ಎರಡನೆಯದು, ದೇಹಬಾಧೆ ತೀರಿಸಲು ಉಡುಪನ್ನು ಸರಿಸುತ್ತಲೇ ಶೈತ್ಯ ನೂರು ಬಾಣಗಳನ್ನು ಬಿಟ್ಟು ಚುಚ್ಚಿ ಚುಚ್ಚಿ ವೇದನೆ ಮಾಡುವುದು. ಅಂಟಾರ್ಕ್‌ಟಿಕ ಖಂಡವನ್ನು ಹೊಲಸು ಮಾಡಿ ಓಡಿ ಬರುವಂತಿಲ್ಲ. ಅಂತಾರಾಷ್ಟ್ರೀಯ ಕಾನೂನನ್ನು ಗೌರವಿಸಬೇಕು. ಈ ಖಂಡ ಇಡೀ ಮನುಕುಲದ ಸ್ವತ್ತು. ಯಾರೂ ಅಲ್ಲಿ ಒಡೆತನ ಸಾರುವಂತಿಲ್ಲ. ಅಷ್ಟೇಕೆ ನಾಯಿಗಳನ್ನು ಕೊಂಡೊಯ್ಯಲು ಈಗ ಅನುಮತಿ ಇಲ್ಲ. ಮಲ ವಿಸರ್ಜನೆ ಮಾಡಿದರೂ ಅಷ್ಟೇ, ಬೆಕ್ಕಿನಂತೆ ಅದನ್ನು ಮುಚ್ಚಿ ಸದ್ದಿಲ್ಲದೆ ಕಾಲ್ತೆಗೆಯುವಂತಿಲ್ಲ. ನಮ್ಮೆಲ್ಲರಿಗೂ ಕಪ್ಪು ಬಣ್ಣದ ಪ್ಲಾಸ್ಟಿಕ್ ಚೀಲ ಕೊಡಲಾಗಿತ್ತು. ನಮ್ಮ ಮಲವನ್ನು ನಾವೇ ಅದರಲ್ಲಿ ತುಂಬಿಕೊಂಡು ಜಾಗರೂಕತೆಯಿಂದ ಒಂದೆಡೆ ಗುಡ್ಡೆ ಮಾಡಿ ಸೀಮೆಎಣ್ಣೆ ಸುರಿದು ಬೆಂಕಿಹತ್ತಿಸಿ ಅದು ಪೂರ್ತಿ ದಹಿಸುವಂತೆ ನೋಡಿಕೊಳ್ಳಬೇಕು. ಅಲ್ಲಿ ಅಂತೂ ಮಲ ಹೊರುವ ಪದ್ಧತಿ ಜಾರಿಗೆ ಬಂತು. ಅವರವರ ಸ್ವಯಾರ್ಜಿತ ಆಸ್ತಿಗೆ ಅವರೇ ಹಕ್ಕುದಾರರು; ವಿಲೇವಾರಿ ಕೂಡ ಅವರ ಜವಾಬ್ದಾರಿಯೇ!

ಮತ್ತೊಂದು ತಂಡ ನಮ್ಮನ್ನು ಈ ಖಂಡದಿಂದ ಮುಕ್ತ ಮಾಡಲು ಬಂದಾಗ ಅವೇ ತೇಲುವ ಹಿಮಗಡ್ಡೆಗಳು, ಆದರೆ ಈಗ ಅವು ಬೀಭತ್ಸ ನೋಟ ಬೀರುತ್ತಿರಲಿಲ್ಲ. ಮೋಹಕ ನಗೆ ಬೀರಿದ್ದವು; ಅವುಗಳ ಅಲುಗಾಟದಲ್ಲಿ ಜೀವ ಮಿಡಿದಿತ್ತು. ನಮ್ಮ ಅರಿವಿಲ್ಲದೆಯೇ ಕೊನೆಯ ಬಾರಿಗೆ ಅವುಗಳತ್ತ ಕೈ ಬೀಸಿದೆವು.

■ **ಟಿ.ಆರ್.ಅನಂತರಾಮು,**
ಹಿರಿಯ ಭೂವಿಜ್ಞಾನಿಗಳು,
ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ಸಂಸ್ಥೆ, ಬೆಂಗಳೂರು.

ಈಗ ಎಲ್ಲೆಡೆ ಲಭಿಸುತ್ತಿದೆ !

ವಿದ್ಯಾರ್ಥಿ - ಉದ್ಯೋಗಾಕಾಂಕ್ಷಿಗಳ ವಾರಪತ್ರಿಕೆ

ದಾರಿ

ಬೆಲೆ : ಕೇವಲ ರೂ. 2

- ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತವಾದ ವಿಷಯ
- ನಾಡಿನೆಲ್ಲೆಡೆ ಲಭ್ಯವಿರುವ ಉದ್ಯೋಗಾವಕಾಶಗಳು
- ಯಾರಿಗೆ ? ಯಾವ ಕೋರ್ಸು?
- ಸಂಪೂರ್ಣ ಮಾಹಿತಿ
- ಪರಿಪೂರ್ಣ ಮಾರ್ಗದರ್ಶನ

ರೂ. 120 ಎಂ.ಓ. ಕಳಿಸಿ ಚಂದಾದಾರರಾದರೆ, ಒಂದು ವರ್ಷ ಕಾಲ 52 ಸಂಚಿಕೆಗಳು ನಿಮ್ಮ ಮನೆ ಬಾಗಿಲಿಗೆ ಅಂಚೆ ಮೂಲಕ ಬರುತ್ತವೆ.

'ದಾರಿ' ವಾರಪತ್ರಿಕೆ, ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ-7951, ಬಸವೇಶ್ವರನಗರ,
ಬೆಂಗಳೂರು - 560 079 ✆: 3307810

- Arts graduate?
- Science graduate?
- Commerce graduate?
- Management graduate?
- Post - graduate?
- Still unemployed ?
- Interested to know, how to get the job?

JOIN THE TURNING POINT PROGRAMME

Write for details :

LOTUS ACADEMY

No.27/c, 10th Main, 4th Cross, R.P.C. LAYOUT,
VIJAYANAGAR, **BANGALORE - 560 040.**

BISILA BADUKU KANNADA Monthly DECEMBER 1999 RNI No. 67406 / 97 Regd. BGW / 394

HOW TO MAKE YOUR DEPOSIT GROW FASTER

Invest in the Kamadhenu Deposit Scheme

- Minimum amount - Rs.1000. Maximum amount - no ceiling.
- Period : Minimum - 5 months; Maximum - 10 years.
- Attractive interest rates, interest compounded every quarter.

CANARA BANK
(A Govt. of India Undertaking)
Head Office : 112, J.C. Road, Bangalore-560 002
Website : http://www.canbankindia.com
E-mail: Canbank@blr.vsnl.net.in